ಎನ್.ಇ.ಪಿ. ಕನ್ನಡ ಭಾಷಾ ಪಠ್ಯ

# ವಿಜ್ಞಾನ ಸೌರಭ - III

**ಬಿ.ಎಸ್ಸಿ.**

ಮೂರನೇ ಸೆಮಿಸ್ಟರ್


ಪ್ರಧಾನ ಸಂಪಾದಕರು

ಡಾ. ಪ್ರಶಾಂತ ಜಿ. ನಾಯಕ

ಸಂಪಾದಕರು

ಡಾ. ಶಾಂತರಾಜು

ಡಾ. ಬಸವರಾಜು ಕೆ.ಬಿ.

ಪ್ರೊ. ಲಕ್ಷ್ಮೀನಾರಾಯಣ ಎಚ್.ಎನ್



ಬೆಂಗಳೂರು ನಗರ ವಿಶ್ವವಿದ್ಯಾಲಯ

BENGALURU CITY UNIVERSITY

ಆಗು ನೀ ಅನಿಕೇತನ

BE BOUNDLESS

KANNADA BHASHA PATHYA - VIJNANA SOUROBHA :
A Prescribed Text Book for B.Sc. Degree Course (Third Semester);
Chief Editor: Prof. Prashanth G. Nayak (Professor of Kannada &
Director, Kannada Bharathi, Kuvempu University, Shankaraghatta,
B.R. Project. Shimoga Dist.)
Edited By : Dr. Shantharaju, Dr. Basavaraju,
Prof. Lakshminarayana H.N
Publishd by : Bengaluru City University, BENGALURU
Pp : 184 + vii
© Bengaluru City University,
First print : 2022

ಪ್ರಧಾನ ಸಂಪಾದಕರು
**ಡಾ. ಪ್ರಶಾಂತ ಜಿ. ನಾಯಕ**

ಸಲಹಾ ಸಮಿತಿ:
**ಡಾ. ಕೆ.ವೈ. ನಾರಾಯಣಸ್ವಾಮಿ**
**ಡಾ. ಎಂ.ಎಸ್. ಆಶಾದೇವಿ**

ಸಂಯೋಜಕರು:
**ಡಾ. ಬೆಳಕೆರೆ ಲಿಂಗರಾಜಯ್ಯ**

ಬೆಲೆ: ರೂ. 00/–

ಪ್ರಕಾಶಕರು:
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಕುಲಪತಿಗಳ ಆಶಯ ನುಡಿ

ಬೆಂಗಳೂರು ನಗರ ವಿಶ್ವವಿದ್ಯಾಲಯ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅನನ್ಯತೆಯನ್ನು ಯುವಜನತೆಗೆ ಮನವರಿಕೆ ಮಾಡಿಕೊಡಲು ಸನ್ನದ್ಧವಾಗಿದೆ. ಕನ್ನಡ ಭಾಷೆಯನ್ನು ಸರ್ವಾಂಗೀಣವಾಗಿ ಆಧುನಿಕ ಬದುಕಿನ ಅಗತ್ಯಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಬೇಕಾದ ಹೊಣೆಯನ್ನು ಎಲ್ಲಾ ಉನ್ನತ ಶಿಕ್ಷಣ ಸಂಸ್ಥೆಗಳು ಹೊರಬೇಕಿದೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನದ ಗರಿಮೆ ಸಿಕ್ಕಿರುವುದು; ಕನ್ನಡ ಭಾಷೆಯ ಅಂತಸ್ಥವಾಗಿರುವ ಜ್ಞಾನಕ್ಕೆ ದೊರೆತಿರುವ ಮನ್ನಣೆಯಾಗಿದೆ. ಕನ್ನಡ ಭಾಷೆಯಲ್ಲಿ ಉಪಲಬ್ಧವಿರುವ ಶ್ರೇಷ್ಠ ಸಾಹಿತ್ಯ ಕೃತಿಗಳು, ಅಪರೂಪದ ಶಾಸನಗಳು, ಜಾನಪದ ವಿವಿಧ ವಾಙ್ಮಯಗಳು ಮತ್ತು ಶಾಸ್ತ್ರ ಗ್ರಂಥಗಳು ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸಲು ಸಹಾಯ ಮಾಡಿವೆ. ಕಳೆದ ಎರಡು ದಶಕಗಳಿಂದ ಕನ್ನಡ ಭಾಷೆಯನ್ನು ತಂತ್ರಜ್ಞಾನದ ಭಾಷೆಯಾಗಿಸುವ ಕಾರ್ಯವೂ ಯಶಸ್ವಿಯಾಗಿ ನಡೆಯುತ್ತಿದೆ. ಬದುಕಿನ ಎಲ್ಲಾ ವಲಯಗಳ ಅವಶ್ಯಕತೆಗೆ ತಕ್ಕಂತೆ ಕನ್ನಡವನ್ನು ಅಂತರಾಷ್ಟ್ರೀಯ ವ್ಯವಹಾರದ ಭಾಷೆಯಾಗಿ ಆಧುನಿಕ ವಿಜ್ಞಾನದ ಸಂಶೋಧನೆಗಳನ್ನು ನಿರ್ವಹಿಸುವ ವಿಜ್ಞಾನ ಭಾಷೆಯಾಗಿ ವಿಸ್ತರಿಸಲು ನಾವು ಬದ್ಧತೆಯಿಂದ ಕೆಲಸ ಮಾಡುವ ಅಗತ್ಯವಿದೆ. ಕುವೆಂಪು ಅವರ ಮಾತಿನಲ್ಲಿ ಹೇಳುವುದಾದರೆ 'ಕನ್ನಡ ಭಾವೋಪಯೋಗಿ ಭಾಷೆಯಾದರೆ ಮಾತ್ರ ಸಾಲದು ಅದು ಲೋಕೋಪಯೋಗಿ ಭಾಷೆಯಾಗಿ ಬಳಸುವ ಅವಶ್ಯಕತೆ ಇದೆ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳ ಜೊತೆಗೆ ಸೆಣಸುತ್ತಲೆ ಕನ್ನಡ ಭಾಷೆಯು ಕನ್ನಡಿಗರ ಆತ್ಮಸಂಗಾತ ಭಾಷೆಯಾಗಿ ಬಾಳಬೇಕಿದೆ'.

ಕರ್ನಾಟಕ ರಾಜ್ಯವು ದೇಶದಲ್ಲಿ ಹೊಸ ಶಿಕ್ಷಣ ನೀತಿಯನ್ನು ಮೊತ್ತ ಮೊದಲಿಗೆ ಜಾರಿಗೆ ತಂದಿರುವ ರಾಜ್ಯವಾಗಿದೆ. ಪ್ರಸ್ತುತ ಕರ್ನಾಟಕ ಸರ್ಕಾರವು 2020–2021ರ ವರ್ಷವನ್ನು ಕನ್ನಡ ಕಾಯಕ ವರ್ಷವೆಂದು

ಘೋಷಿಸಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಪ್ರಸರಣಕ್ಕೆ ಅಗತ್ಯವಿರುವ ಕಾರ್ಯಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಕಳೆದ ಎಪ್ಪತ್ತೈದು ವರ್ಷಗಳಿಂದಲೂ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಬದಲಾವಣೆಗಳು ನಡೆಯುತ್ತಾ ಬಂದಿದ್ದರೂ ಕಲಿಕಾ ಪ್ರಕ್ರಿಯೆ ವಿದ್ಯಾರ್ಥಿ ಸ್ನೇಹಿಯಾಗಿರಲಿಲ್ಲ ಎಂಬ ಆಪಾದನೆ ಇತ್ತು. ಈಗ ಅನುಷ್ಠಾನಗೊಳ್ಳುತ್ತಿರುವ ಹೊಸ ಶಿಕ್ಷಣ ನೀತಿಯು ಈವರೆಗೆ ಕಲಿಕೆಯಲ್ಲಿ ಇದ್ದ ಜಡತ್ವವನ್ನು ತೆಗೆದುಹಾಕಿದೆ. ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ವಿಷಯಗಳನ್ನು ವಿನ್ಯಾಸಗೊಳಿಸಿಕೊಳ್ಳುವ ಅವಕಾಶ ಮತ್ತು ಕಲಿಕಾ ಸ್ವಾತಂತ್ರ್ಯವನ್ನು ಕಲ್ಪಿಸಿದೆ. ಆಧುನಿಕ ಜ್ಞಾನವನ್ನು ಮತ್ತು ತಂತ್ರಜ್ಞಾನವನ್ನು ಪ್ರಾದೇಶಿಕ ಭಾಷೆಗಳಲ್ಲಿ ಕಲಿಸುವುದರ ಮೂಲಕ ಪ್ರಕ್ರಿಯಾತ್ಮಕವಾದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸಲು ಶಿಕ್ಷಣ ನೀತಿ ಮುಂದಾಗಿರುವುದು ಸ್ವಾಗತಾರ್ಹ.

ಈ ಹಿನ್ನೆಲೆಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ ನೀಡಿರುವ ಮಾದರಿ ಪಠ್ಯವಿನ್ಯಾಸವನ್ನು ಅನುಸರಿಸಿ ಕನ್ನಡ ಭಾಷೆಯ ಪಠ್ಯಪುಸ್ತಕಗಳನ್ನು ರೂಪಿಸಿದೆ. ಪಠ್ಯಗಳು ವಿದ್ಯಾರ್ಥಿಸ್ನೇಹಿಯಾಗಿ ಸಂವಾದ ಸ್ವರೂಪದಲ್ಲಿವೆ ಹಾಗೂ ಕನ್ನಡ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸಕ್ಕೂ ಮಾರ್ಗದರ್ಶಿಯಾಗಿವೆ. ಈ ಪಠ್ಯಗಳನ್ನು ಪ್ರೀತಿಯಿಂದ ರೂಪಿಸಿದ ಕನ್ನಡ ಅಧ್ಯಯನ ಮಂಡಳಿಯ ಸದಸ್ಯರಿಗೂ, ಎಲ್ಲಾ ಸಂಪಾದಕರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಪ್ರೊ. ಲಿಂಗರಾಜಗಾಂಧಿ**
ಕುಲಪತಿಗಳು
ಬೆಂಗಳೂರು ನಗರ ವಿಶ್ವವಿದ್ಯಾಲಯ

# ಪ್ರಧಾನ ಸಂಪಾದಕರ ಮಾತು

ಆಧುನಿಕತೆ ಎನ್ನುವ ಮಾತು ಎಲ್ಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಂತೆ ಬದಲಾವಣೆ ಎನ್ನುವುದನ್ನು ಬಹುಪಾಲು ಎಲ್ಲಾ ನೆಲೆಯಲ್ಲಿಯೂ ಅನಿವಾರ್ಯವೆನ್ನುವಂತಾಗಿಸುತ್ತಿರುವುದು ನಮ್ಮ ನಡುವಿನ ಸರಳವೂ ಸಹಜವೂ ಆದ ಅರಿವಿನಂತಿದೆ. ಸೃಜನಶೀಲತೆ ಮತ್ತು ಕ್ರಿಯಾಶೀಲತೆಗಳ ಅರ್ಥವೂ ಹೀಗೆ ಹೊಸತನ್ನು ನಿರಂತರವಾಗಿ ಕೇಂದ್ರೀಕರಿಸಿ ಕೊಂಡಿರುತ್ತದೆ. ಇದು ಕಲಿಕೆಯ ಹೊತ್ತಿಗೂ ಪರಸ್ಪರ ಕಲಿಯುವವರ ಮತ್ತು ಕಲಿಸುವವರ ನಡುವಿನ ಅನುಸಂಧಾನದ ಪ್ರಕ್ರಿಯೆಯೂ ಹೌದು. ಇದರ ಜೊತೆಗೆ ನಿರಂತರವಾದ ಎಚ್ಚರವೂ ಅತ್ಯಗತ್ಯ. ಕನ್ನಡ ಭಾಷೆ ಮತ್ತು ಸಾಹಿತ್ಯವೆನ್ನುವುದು ಹೀಗೆ ಸದಾತನ್ನನ್ನು ಸವಾಲಿಗೆ ತೆರೆದುಕೊಂಡಂತೆ ಹೊಸತನಕ್ಕೆ ನಿರಂತರವಾಗಿ ಎದುರಾಗುತ್ತಲೇ ಬಂದಿರುವುದು ಗಮನಾರ್ಹವಾದುದು.

ಹೊಸ ಶಿಕ್ಷಣ ನೀತಿ ನಮ್ಮ ಉನ್ನತ ಶಿಕ್ಷಣದ ಹಲವು ಬಗೆಯ ಬದಲಾವಣೆಗೆ ಕಾರಣವಾಗುತ್ತಿರುವ ಸಂದರ್ಭದಲ್ಲಿ ಪದವಿಯ ವಿದ್ಯಾರ್ಥಿಗಳಿಗೆ ಭಾಷೆ ಮತ್ತು ಸಾಹಿತ್ಯದ ಪಠ್ಯವನ್ನು ವಿಶಿಷ್ಟವಾಗಿ ರೂಪಿಸುವ ಜವಾಬ್ದಾರಿಯೊಂದು ಕನ್ನಡತನವನ್ನು ನಮ್ಮತನ ಎಂದುಕೊಂಡ ನಮ್ಮೆಲ್ಲರ ಮೇಲಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕ ಬಂಧುಗಳು ಮೊದಲ ದಿನದಿಂದಲೂ ಅತ್ಯಂತ ಉತ್ಸಾಹ, ಶ್ರಮ ಮತ್ತು ಬದ್ಧತೆಯಿಂದ ಕಾರ್ಯ ನಿರ್ವಹಿಸಿದ್ದಾರೆ. ಅದರ ಫಲಿತವಾಗಿ ಉತ್ತಮ ಪಠ್ಯಗಳು ವಿದ್ಯಾರ್ಥಿಗಳ ಕೈಸೇರುವಂತಾಗುತ್ತಿದೆ. ಇದಕ್ಕಾಗಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಅಧ್ಯಯನ ಮಂಡಳಿಯ ಸದಸ್ಯರಿಗೆ ಹೃದಯ ಪೂರ್ವಕ ಅಭಿನಂದನೆಗಳು. ಪಠ್ಯಗಳನ್ನು ರೂಪಿಸುವಲ್ಲಿ ಶ್ರಮ ವಹಿಸಿದ ಎಲ್ಲಾ ಪಠ್ಯಗಳ ಸಂಪಾದಕರಿಗೂ ಆತ್ಮೀಯ ಕೃತಜ್ಞತೆಗಳು. ನಿರಂತರವಾಗಿ

ಸಂಯೋಜನೆಯ ಕಾರ್ಯ ನಿರ್ವಹಿಸಿದ ಆತ್ಮೀಯರಾದ ಡಾ. ಲಿಂಗರಾಜಯ್ಯನವರ ಶ್ರಮವನ್ನು ಸ್ಮರಿಸಲೇಬೇಕು.

ಅಧ್ಯಯನ ಮಂಡಳಿಯ ಅಧ್ಯಕ್ಷನನ್ನಾಗಿ ನನಗೆ ಜವಾಬ್ದಾರಿ ನೀಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸನ್ಮಾನ್ಯ ಕುಲಪತಿಗಳಾದ ಪ್ರೊ. ಲಿಂಗರಾಜಗಾಂಧಿ ಅವರಿಗೆ ಕೃತಜ್ಞತೆಗಳು. ಪ್ರತೀ ಹಂತದಲ್ಲಿಯೂ ನಮ್ಮೊಂದಿಗಿದ್ದು ಸಹಕಾರ ನೀಡಿದ ಪ್ರೊ. ರಮೇಶ್. ಬಿ ಮಾನ್ಯ ಕುಲ ಸಚಿವರು ಪರಿಕ್ಷಾಂಗ ಇವರಿಗೆ ನಮ್ಮ ಧನ್ಯವಾದಗಳು ಮತ್ತು ಶ್ರೀಯುತ ಶ್ರೀಧರ್ ಸಿ.ಎಸ್ ಮಾನ್ಯ ಕುಲ ಸಚಿವರು ಇವರಿಗೆ ನಮ್ಮ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಡಾ. ಪ್ರಶಾಂತ ಜಿ. ನಾಯಕ**
ಪ್ರಾಧ್ಯಾಪಕರು

# ಬಿ.ಎಸ್ಸಿ. ಮೂರು ಮತ್ತು ನಾಲ್ಕನೇ ಸೆಮಿಸ್ಟರ್ ಕನ್ನಡ ಭಾಷಾ ಪಠ್ಯಕ್ರಮ
## ಮೂರನೇ ಸೆಮಿಸ್ಟರ್


**ಘಟಕ 1**

**ಆಶಯ: ಮಾನವೀಯತೆ** 001

01. ಕಪ್ಪೆ ಅರಭಟ್ಟನ ಶಾಸನ 002
(ಬಾದಾಮಿ ಶಾಸನ ಕ್ರಿ.ಶ. ಸುಮಾರು 700)

02. ದೇವರ ಹೆಣ –ಕುಂ. ವೀರಭದ್ರಪ್ಪ 003

03. ನೆಲ್ಸನ್ ಮಂಡೇಲ –ರಂಜಾನ್‌ದರ್ಗಾ 017

04. ಓದು ಪಠ್ಯ : ಅಸ್ಪೃಶ್ಯತೆ ಎಂದರೆ ವರ್ಣಭೇದದ ಮುತ್ತಾತ
–ದೇವನೂರು ಮಹದೇವ 028

**ಘಟಕ 11**

**ಆಶಯ: ಪ್ರವಾಸ** 034

01. ಗಾಂಧೀಜಿಯವರ ಯುರೋಪ್ ಕಿರು ಪ್ರವಾಸ
–ಡಿ.ಎಸ್. ನಾಗಭೂಷಣ 035

02. ಮೂಕವಾಗಿದೆ ಮಾತು –ಜಿ.ಎನ್. ಮೋಹನ್ 042

03. ಹರ್ಮಿಟೇಜ್ ಮ್ಯೂಸಿಯ –ಡಾ. ಲತಾ ಗುತ್ತಿ 048

04. ಓದು ಪಠ್ಯ: ಪಂಪಾಯಾತ್ರೆ –ವಿ. ಸೀತಾರಾಮಯ್ಯ 057

**ಘಟಕ 111**

**ಆಶಯ: ವಿಚಾರ ಕ್ರಾಂತಿ** 066

01. ಜಾತಿವಿನಾಶ –ಡಾ. ಬಿ.ಆರ್. ಅಂಬೇಡ್ಕರ್
ಕನ್ನಡಕ್ಕೆ : ರಾಹು 066

02. ವ್ಯಕ್ತಿ ಬೆಳೆದರೆ ಮಾತ್ರ –ಶಿವರಾಮ ಕಾರಾಂತ 083

03. ಹರಕೆಗಳು (ಪ್ರಬಂಧ) –ಎ.ಎನ್. ಮೂರ್ತಿರಾವ್ 091

04. ಓದು ಪಠ್ಯ: ವಾಲ್ಮೀಕಿ ತೂಕಡಿಸಿದಾಗ
–ಗೌರೀಶ ಕಾಯ್ಕಿಣಿ 100

**ಘಟಕ IV**

**ಆಶಯ: ಸಂಕೀರ್ಣ** 106


01. ಸವಾಲನ್ನು ಎದುರಿಸುವ ಛಲ

–ಜಿ.ಟಿ. ನಾರಾಯಣ ರಾವ್ 106

02. ಮಂಗಳನ ಅಂಗಳಕ್ಕೆ ಭಾರತದ ಭವ್ಯ ಪ್ರವೇಶ

–ಬಿ.ಆರ್. ಗುರುಪ್ರಸಾದ್ 126

03. ಗೆಲಿಲಿಯೋ –ಬರ್ಟೋಲ್ಟ್ ಬ್ರೆಖ್ಟ್

ಕನ್ನಡಕ್ಕೆ : ರಾಮಚಂದ್ರ ಮೂರ್ತಿ ಮತ್ತು ಜಿ.ಆರ್. ಲಕ್ಷ್ಮಣರಾವ್ 137

04. ಓದು ಪಠ್ಯ : ಆಕಾಶವಾಣಿ –ಬಸವರಾಜ ಸಾದರ 157

# ಘಟಕ – 1
# ಆಶಯ – ಮಾನವೀಯತೆ

ಮನುಷ್ಯ ಎಲ್ಲದರ ಕೇಂದ್ರವೆಂದು ಭಾವಿಸುವ ಮಾನವತಾವಾದ–ನನ್ನ ಅಭಿಪ್ರಾಯದಲ್ಲಿ. ಮನುಷ್ಯನಿಗೆ ಅಪಾರ ಗೌರವ ಕೊಡುತ್ತದೆ, ಆತನ ಬದುಕಿನ ಸಕಲ ಕ್ರಿಯೆಗಳ ಮೂಲ ಮತ್ತು ಬೆಳವಣಿಗೆಗಳನ್ನು ಅವನಲ್ಲೇ ಅಂದರೆ ಅವನು ಬದುಕುತ್ತಿರುವ ಪರಿಸರದಲ್ಲೇ ಹುಡುಕುತ್ತದೆ. ದೇವರು, ಧರ್ಮಗಳ ದಿಗಿಲು ಹುಟ್ಟಿಸದೆ ಮನುಷ್ಯನಲ್ಲಿ ಆತ್ಮವಿಶ್ವಾಸ ತುಂಬುವ ವಿಚಾರಧಾರೆ ಇದು. ಮನುಷ್ಯನ ಮುಗ್ಧ ಮನಸ್ಸಿನಲ್ಲಿ ಎಂಥ ನಂಬಿಕೆಗಳೇ ಇರಲಿ, ಅವನು ದೇವರು, ದೆವ್ವಗಳನ್ನು ನಂಬಿಕೆಯೇ ಇರಲಿ, ಚಾರಿತ್ರಿಕ ಕಾರಣಗಳಿಂದಾಗಿ ಮುಗ್ಧ ಮನುಷ್ಯನಲ್ಲಿರುವ ಮೌಢ್ಯವನ್ನು ಮನ್ನಿಸಬಹುದು. ಅದಕ್ಕಾಗಿ ಆತನನ್ನು ತೆಗಳುವುದು ಖಂಡಿತ ಸರಿಯಲ್ಲ. ಯಾಕೆಂದರೆ ಮುಗ್ಧ ಮನುಷ್ಯನ ಮನಸ್ಸು ಮತ್ತು ಮೆದುಳುಗಳಲ್ಲಿ ಬೇರೂರಿದ ಪ್ರತಿಗಾಮಿ ವಿಚಾರಗಳು ಮೂಲತಃ ಅವನವಲ್ಲ; ಸಮಾಜದ ಬೆಳವಣಿಗೆಯ ವಿವಿಧ ಹಂತಗಳ ಅಸಹಾಯಕತೆ ಮತ್ತು ಪ್ರತಿಷ್ಠಿತ ಶಕ್ತಿಗಳು ತುಂಬಿದ ವಿಚಾರಗಳು. ಎಷ್ಟೇ ಮೌಢ್ಯವಿರಲಿ, ನಮ್ಮ ಜನಸಾಮಾನ್ಯರನ್ನು ನಾವು ಗೌರವಿಸಬೇಕು. ಅವರ ಶಕ್ತಿಯಲ್ಲಿ ನಂಬಿಕೆಯಿಡಬೇಕು. ಅವರ ನೋವಿಗೆ, ದುರಂತ ಬದುಕಿಗೆ ತುಡಿಯುವ ಸಾಹಿತಿ ಜನರಲ್ಲಿ ಪೂರ್ಣ ನಂಬಿಕೆಯಿಡಬೇಕೇ ಹೊರತು ಕಾಣದ ಶಕ್ತಿಗಳಲ್ಲಲ್ಲ. ಆಗ ತುಳಿತಕ್ಕೊಳಗಾದ ಮನುಷ್ಯನ ಸ್ಥಿತಿಗೆ ಕಾರಣ, ತುಳಿಯುತ್ತಿರುವ ಇನ್ನೊಬ್ಬ 'ಮನುಷ್ಯನೆಂದೂ, ಮನುಷ್ಯ'ನ ಈ ಎರಡು ನೆಲೆಗಳ ಮೂಲ ಈ ವ್ಯವಸ್ಥೆಯಲ್ಲಿದೆಯೆಂದೂ ಅರ್ಥವಾಗುತ್ತದೆ.

**–ನಾಡೋಜ ಬರಗೂರು ರಾಮಚಂದ್ರಪ್ಪ**

# ಕಪ್ಪೆ ಅರಭಟ್ಟನ ಬಾದಾಮಿ ಶಾಸನ
# ಕ್ರಿ.ಶ. ಸುಮಾರು 700

ಕಪ್ಪೆ ಅರಭಟ್ಟನ್ ಶಿಷ್ಟಜನಪ್ರಿಯನ್
ಕಷ್ಟಜನವರ್ಜಿತನ್ ಕಲಿಯುಗವಿಪರೀತನ್ ॥

ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ ಕಲಿಯುಗವಿಪರೀತನ್
ಮಾಧವನೀತನ್ಪೆಱನಲ್ಲ ॥1॥

ಒಳ್ಳಿತ್ತ ಕೆಯ್ವೊರೊಳ್ಪೊಲ್ಲದುಮದಱನ್ತೆ
ಬಲ್ಲಿತ್ತು ಕಲಿಗೆ ವಿಪರೀತಾ ಪುರಾಕೃತ
ಮಿಲ್ಲಿ ಸನ್ದಿಕ್ಕುಮದುಬನ್ದು ॥2॥

ಕಟ್ಟಿದ ಸಿಂಘಮನ್ಕೆಟ್ಟೊಡೇನೆಮಗೆನ್ದು
ಬಿಟ್ಟವೋಲ್ಕಲಿಗೆ ವಿಪರೀತಂಗಹಿತರ್ಕ್ಕ
ಳ್ಕೆಟ್ಟಮೇರ್ಣ್ಣಸ್ತತ್ರವಿಚಾರಮ್ ॥3॥

# ದೇವರ ಹೆಣ

–ಕುಂ. ವೀರಭದ್ರಪ್ಪ

ಇದಕ್ಕೂ ಮೊದಲು ಒಂದುನ ಕೊಣ್ಣಿ ಅನ್ನ ಎಂಬ ಶಬ್ದ ಕಿವಿಗೆ ಬೀಳುತ್ತಲೆ ಹ್ಹಹ್ಹ ಅಂತ ನಕ್ಕು ಬಿಟ್ಟಿದ್ದನು. ಒಂದು ಹನಿ ಮಳೆ ಕಾಣದೆ ಇಡೀ ನೆಲ ಎಂಬೋ ನೆಲ ಕೆಟ್ಟದಾಗಿ ಹಸಿದ ಹೊಟ್ಟೆಯಂಥಾಗಿ ಉರಿ ಉರಿ ಹಾಯತೊಡಗಿತ್ತು. ಮುಳ್ಳಿನ ಗಿಡಗಳಲ್ಲಿ ಕೇವಲ ಮುಳ್ಳುಗಳಷ್ಟೇ ಹಚ್ಚಗಿದ್ದವು. ಅವನ ಜೇಬಿನಲ್ಲಿ ಒಂದು ಹಿಡಿ ಹೊಗೆಸೊಪ್ಪು ಇತ್ತು. ಅದಕ್ಕೊಂದು ಎಕ್ಕೆ ಎಲೆ ಸಿಕ್ಕರೆ ಸಾಕೆಂದು ಚಂಡಿ ಹಿಡಿದವನಂತೆ ಮುಖವನ್ನು ವಿಚಿತ್ರವಾಗಿ ಬಿಗಿದುಕೊಂಡಿದ್ದ. ಹಾಗೆ ಬಿಗಿದುಕೊಂಡೇ ಹಾಲುಲಿ ಹಳ್ಳದ ಗುಂಟ ಎರಡು ಧಮ್ಮು ನಡೆದುಬಿಟ್ಟರೆ ಸಾಕಿತ್ತು. ಒಟ್ಟಾಗಿರುವ ಬಂದಳಿಕೆ ಗಿಡಗಳ ಪಕ್ಕದಲ್ಲಿಯೇ ಎಕ್ಕಿ ಗಿಡವೊಂದಿರುವುದು. ಶಿವನ ಮೂರನೆ ಕಣ್ಣಿನಾಕಾರದ ಆ ಎಲೆಗಳು ಅದರ ತುಂಬ ಇರುವುವು. ಅವು ಬಿರು ಬಿಸಿಲನ್ನು ಅಣಕಿಸುತ್ತಿರುವ ರೀತಿಯಲ್ಲಿ ಸಣ್ಣ ಗಾಳಿಗೆ ಮಿಸುಕಾಡುತ್ತಿರುವುವು.

ಅವುಗಳ ಪೈಕಿ ಒಂದೇ ಒಂದು ಎಲೆ ಸಾಕು ಕೊಣ್ಣೆಯ ತಲೆಯೊಳಗಿನ ಮಿದಿಳುಗಳನ್ನು ಸರಿಪಡಿಸಲಿಕ್ಕೆ. ಮತ್ತು ಹೊಟ್ಟೆಯನ್ನು ಭರಭರನೆ ಊದಿಸಿ ನರನಾಡಿಗೆ ವಿಚಿತ್ರವಾದ ಸುಖ ನೀಡಲಿಕ್ಕೆ. ಆದರೆ ಏನು ಮಾಡುವುದು? ಅವನು ಮನೆ ಬಾಕಲು ದಾಟುತ್ತಲೆ ವಟವಟಗುಟ್ಟುತ್ತ ಹೆಂಡತಿ ಎದುರಾದಳು. ಇಲಿಯೊಂದನ್ನು ಸುಟ್ಟು ತಿಂದು ಮುಖದ ತುಂಬ ನಳನಳಿಸುವ ಕಳೆ ತುಂಬಿಕೊಂಡಿದ್ದ ಹಿರೆ ಮಗ ಕೊಕ್ಕ ತನ್ನ ಟೆರಿಕಾಟು ಅಂಗಿಯ ಹತ್ತಾರು ಸಂದಿಗಳಲ್ಲಿ ನಿಗೂಢವಾಗಿ ಅಡಗಿರಬಹುದಾದ ನುಸಿ ಕ್ರಿಮಿಗಳನ್ನಾಯುದರಲ್ಲಿ ಮಗ್ನನಾಗಿರುವುದು ಕಂಡಿತು. ತಿಂದ ಕೂಳು ಮೈಗೆ ಅತ್ತದಂತೆ ಒಂದೇ ಸಮ್ನೆ ಕಡೀತವೆ ಆಳಾದೋವು ಎಂದು ಅವನು ಪಂಚಮವೇದ ನಡೆಯುತ್ತಿರುವುದು ಬೇರೆ ಕೇಳಿಸಿತು. ಮತ್ತಲ್ಲಿಯೇ ಅಪಾರೀ, ತಿಮ್ಮಿ, ಕುಲ್ಡಿ ಊಟ ಮಾಡುವ ಆಟ ಆಡುತ್ತಿದ್ದುದು ಕಣ್ಣಿಗೆ ಬಿತ್ತು. ಆ ಆಟದಲ್ಲಿ ತಮ್ಮ ನವಣಕ್ಕಿ ಬಾನದ ಪಾಲ್ಟು ಮಾಡಿದ್ದನು. ಕುಲ್ಡಿ ಘಮಾಡಿಸುವ ಸಾರಿನ ಪಾಲ್ಟು ಮಾಡಿದ್ದಳು. ಅವರೆಡನ್ನು ಹಿತವಾಗಿ ಕಲೆಸಿ ಉಂಡಂತೆ, ಡೇಗಿದಂತೆ ಮತ್ತೆ ಮತ್ತೆ ನಟಿಸಿದ ಅಪಾರಿಯ ತಲೆ ಸವರಿ ಅಡುಗೆಮನೆ ಪ್ರವೇಶಿಸಿದ. ಅಲ್ಲಿ ಒಲೆಯೇ ತನ್ನ ಪರಮೆಂಟು ಗೂಡೆಂಬ

ರೀತಿಯಲ್ಲಿ ಪವಡಿಸಿದ್ದ ಕೋಶಿ (ಬೆಕ್ಕು) ಮೂಲೆಯಲ್ಲಿ ಮಲಗಿ ಬೇಟೆಯ ಕನಸು ಕಾಣುತ್ತಿದ್ದ ಹುಲಿಯನ್ನು ತದೇಕ ಚಿತ್ತದಿಂದ ನೋಡತೊಡಗಿತ್ತು. ಮತ್ತದರ ಹೊಟ್ಟೆಯಲ್ಲಿ ದೂರದಲ್ಲಿ ಇಮಾನ ಹೋಗುವಾಗ ಬರುತ್ತದಲ್ಲಾ, ಅಂಥದೊಂದು ಸವಂಡು ಬರುತ್ತಿತ್ತು. ಎಲ್ಲವನ್ನೂ ಮಿತಿಮೀರದೆ ಗಮನಿಸಿ ನೆಲುವಿನಲ್ಲಿ ಕೈ ಹಾಕಿ ನೋಡಿದ. ಅಡಕಲ ಗಡಿಗೆಗಳನ್ನು ಕೂಲಂಕುಷ ಪರಿಶೀಲಿಸಿ ಅಂಗಳಕ್ಕೆ ಬಂದು ನಿಂತ. ನೆಲ ಕಾದ ತಗಡಿನಂತಿತ್ತು. ಅವನ ಬಳಿ ಪರಂಪರಾಗತವಾಗಿ ಬಂದಿದ್ದ ಒಂದು ಜೊತೆ ಕೆರಗಳಿದ್ದವು. ಆದರೆ ಅವುಗಳ ಪೈಕಿ ಒಂದನ್ನು ಎತ್ತೊಯ್ದು ಏಳು ಮುಖದ ಮಾರೆಮ್ಮನ ಗರ್ಭಗುಡಿಯಲ್ಲಿ ಜಿಗಿದು ತಿಂದು ಮುಗಿಸಿತ್ತು ನಾಯಿ. ಗೂಡದಲ್ಲಿದ್ದ ಒಂಟಿ ಚಪ್ಪಲಿ ಗಂಡ ಸತ್ತ ರಂಡೆಯಂತಿತ್ತು. ಚಲಿಸದ ಬೆಟ್ಟದಂಥ ಮನಸ್ಸಿನಿಂದ ಅದನ್ನು ನೋಡಿ ಉದ್ದನೆಯ ಉಸಿರು ಬಿಟ್ಟನು.

ಮತ್ತು ಬೀದಿಗುಂಟನ ಗಾಜಿನ ಗೋಲಿಯಂತೆ ಉರುಳತೊಡಗಿದ. ಎಂಥೆಂಥವರೋ ಎದುರಾದಾಗ ಮಗ್ಗುಲಾದ. ಚಾವಡಿ ಕಟ್ಟೆ ಬಂತು. ಅಲ್ಲಿಯೇ ಬಸಂ ದೇವರ ಗುಡಿ ಪವುಳಿಯಲ್ಲಿ ಇನ್ನೆಂಟು ದಿನಗೊಳಗಾಗಿ ಮಳೆ ಬಾರದಿದ್ದಲ್ಲಿ ಸಾಯುವದಾಗಿ ಎರಡು ವಾರಗಳ ಹಿಂದೆಯೇ ನುಡಿದು ತತ್ಪಲವಾಗಿ ಅನ್ನ ತ್ಯಜಿಸಿ ಮರಣಕ್ಕಾಗಿ ಎದುರು ನೋಡುತ್ತ ಕಳೇಬರದಂತೆ ಕೂತಿದ್ದ ತಾತ ಇರುವುದು ನೆನಪಾಯಿತು. ಇಣುಕಿ ನೋಡಿದ, ಕಂಡಿತು. ಎಲ್ಲರಿಗಿಂತ ಮೊದಲೇ ತಾತ ಸಾಯುವುದೇ ಎಂದು ಸಂದೇಹ ಬಂದೊಡನೆ ಸಣ್ಣ ನಗು ಬಂತು. ಹಾಗೆ ಮುಗುಳು ನಗು ತುಂಬಿಕೊಂಡು ಮತ್ತೆ ಗೋಲಿಯಂತೆ ಉರುಳಿ ಉರುಳಿ ಹುಲುಲಿ ಹಳ್ಳದ ದಡ ಸೇರಿದ.

ನಡೆಯುತ್ತ ನೋಡಿದಂತೆ ಹಳ್ಳದ ತುಂಬ ನೂರಾರು ತಗ್ಗುಗಳಿದ್ದವು. ಅವುಗಳ ಪೈಕಿ ಕೆಲವು ಹಸಿ ಇದ್ದವು. ಅವುಗಳ ದಡದಲ್ಲಿ ಕಾಗೆಗಳು ಕಾ ಕಾ ಅನೆ ರಾಗಾಪಾಲನೆ ಮಾಡುತ್ತ ಎಂಥದಕ್ಕೋ ತಡಕಾಡುತ್ತಿದ್ದವು. ಅಲ್ಲೆಲ್ಲೋ ಕಾಗೆಯೊಂದರ ಕಳೇಬರವಿರಬಹುದೆಂದು ಊಹಿಸಿದ ಮತ್ತು ದಡದಿಂದ ಸ್ವಲ್ಪ ದೂರ ಸರಿದು ಹಾಗೆಯೇ ಸ್ವಲ್ಪ ಹೊತ್ತು ಉರುಳುರುಳಿ ಮೂರು ಮಾರು ದೂರವಿರುವಾಗಲೇ ಎಕ್ಕೆ ಗಿಡದ ದರ್ಶನ ಪಡೆದು ರೋಮಾಂಚಿತವಾದನು. ಒಂದೇಟಿಗೆ ಹೋಗಿ ಎಲೆಯೊಂದನಾಯ್ದು ಕೊಂಡನು. ಅದು ಆತ ಹೇಳಿದಂತೆ ಕೇಳಿತು. ಚಿಟಿಕಿ ಹೊಡೆವಷ್ಟರಲ್ಲಿ ಅದು ಚಿಲುಮೆಯಾಗಿ ರೂಪುಗೊಂಡಿತು.

ಹೊಗೆಸೊಪ್ಪನ್ನು ಅಂಗೈಯಲ್ಲಿ ಹದಮಾಡಿ ಚಿಲುಮೆಗೆ ತುಂಬಿದ ಮರುಕ್ಷಣದಲ್ಲಿಯೇ ತಾನು ಕಡ್ಡಿಪೊಟ್ಟಣ ಮರೆತು ಬಂದಿರುವುದು ನೆಪ್ಪಾಯಿತು. “ಥೂ ನನ ತೆಲಿಯೆ?” ಎಂದು ತನ್ನ ಬಗ್ಗೆ ತಾನೇ ಅಸಹ್ಯಪಟ್ಟುಕೊಂಡನು. ಎಡಗೈಯ ಎರಡು ಬೆರಳುಗಳ ನಡುವೆ ಚಿಲುಮೆ ಸಿಕ್ಕಿಸಿ ದೀಪದ ಕಡ್ಡಿಗಾಗಿ ಬಂಡಿ ಹಾದಿ ಕಡೆ ಹೆಜ್ಜೆ ಹಾಕಿದ. ಹಾದಿ ಪಕ್ಕ ಜಾತಕ ಪಕ್ಷಿಯಂತೆ ಕಾದ ನಂತರ ದೂರದಲ್ಲಿ ಬಂಡಿಯೊಂದು ಬರುವುದು ಕಂಡಿತು. ಸ್ವಾಗತ ಬಯಸುವವನಂತೆ ಎದುರಾಯ್ದು ಆ ಬಂಡಿಗೆ ಕಡೆಗೀಲಿಲ್ಲದಿರುವುದನ್ನು ಅದರ ಯಜಮಾನನಿಗೆ ನೆನಪು ಮಡಿಕೊಟ್ಟನು. ಆತ ಗಾಲಿ ಸರಿಪಡಿಸಿದ ನಂತರ ಕಡ್ಡಿ ಕೇಳಿದನು. ಬಂಡಿಯಾತ ಕಡ್ಡಿ ಪೊಟ್ಟಣವನ್ನೇ ಬೊಗಸೆಗೆ ಹಾಕಿದನು. ಠೊಣ್ಣಿಯ ಪುಣ್ಯಕ್ಕೆ ಆ ಪೊಟ್ಟಣದಲ್ಲಿ ಎರಡು ದೀಪದ ಕಡ್ಡಿಗಳಿದ್ದವು. ಆದರೆ ಅವುಗಳ ಪೈಕಿ ಒಂದಕ್ಕೆ ಮಾತ್ರ ಮದ್ದಿತ್ತು. ಅಲ್ಲೇ ಮರೆಯಲ್ಲಿ ಕೂತು ಜಾಣ ಠೊಣ್ಣಿ ತನ್ನ ಮನೆ ದೇವರನ್ನು ನೆನೆಯುತ್ತ ಚಿಲುಮೆಗೆ ಬೆಂಕಿ ಹಚ್ಚಿಕೊಂಡನು. ಒಂದು ಸುರಿಗೆ ಅವನು ಎಳೆದುಕೊಂಡ ಘಾಟು ಹೊಗೆ ಅವನ ದೇಹದ ಸಾವಿರ ಕೋಣೆಗಳ ಬಾಗಿಲು ತಟ್ಟಿತು. ಧಮ್ಮಿನ ಮೇಲೆ ಧಮ್ಮು ಎಳೆದ. ನಂತರ ತರಗೆಲೆಯಂತೆ ನಡೆಯತೊಡಗಿದ. ತನ್ನ ತಲಿಯೊಳಗೆ ಎಂಥದೋ ಬೆಳೆಯುತ್ತಿದೆ ಅಂತ ಅನ್ನಿಸ್ತು. ಅದು ಭಾರಿ ಪ್ರಾಣಿ ಇರಬೇಕೆನ್ನಿಸಿತು. ಅದರ ತಲೆ, ತಿಕ ಸ್ಪಷ್ಟವಾಗದಿದ್ದಾಗ ಮತ್ತೊಂದು ದಮ್ಮು ಎಳೆಯಬೇಕಾಯಿತು. ಆ ಕ್ಷಣದ, ಆ ಧೂಮದ ಉದ್ದೀಪತನಕ್ಕೆ ಸಿಕ್ಕು ಮೆದುಳು ಗರಿಗೆದರಿದ ಹಕ್ಕಿಯಂತಾಗುತ್ತಲೆ ಅದು ವೃಷಭ ಜಾತಿಗೆ ಸೇರಿದ್ದೆಂದು ಮತ್ತಷ್ಟು ಸ್ಪಷ್ಟವಾಯಿತು. ನೆನಪಿನ ಪದರುಗಳಲ್ಲಿ ಆಕಾರ ನಿಚ್ಚಳವಾಗಿ ರೂಪುಗೊಳ್ಳತೊಡಗುತ್ತದೆ. ಆಲಲಲೈ ಸಾರಥಿ ನಾನುದಾರೆಂದರೆ ಎಂದು ತನ್ನನ್ನು ತಾನೆ ಭಲೈ ಠೊಣ್ಣೀ ಎಂದು ಸಂಬೋಧಿಸಿಕೊಂಡನು. ಕಳೆದ ತಿಂಗಳಿಂದ ರುಗ್ಣಶಯ್ಯೆಯಲ್ಲಿ ಮಲಗಿರುವ ಗೌಡರ ಮನೆಯ ಎತ್ತೇ ಅದು, ಮೂಡಲ ಸೀಮೆಯ ಹರವಾದ ಮೈಯ ಪ್ರಾಣಿಯದು. ತನ್ನನ್ನು ಕವುಚಿಕೊಂಡಿರುವ ದಾರಿದ್ರ್ಯವನ್ನು ಹೊಡೆದೋಡಿಸಲೆಂದೇ ತನ್ನ ಮಂದೇವರಾದ ಉರುಕುಂದಿ ಈರಣ್ಣನೇ ತನ್ನೊಕ್ಕಲ ಮನೆಯ ಭಾರಿ ಎತ್ತಿಗೆ ಗುಣವಾಗದಂಥ ರೋಗ ಬರಿಸಿರುವನು. ಎಂದುಕೊಂಡು ದೇವರ ದಿಕ್ಕಿನ ಕಡೆ ಕೈ ಮುಗಿದು ದೇವರೇ ನೀನು ದೊಡ್ಡೋನು ಎಂದುಕೊಂಡನು. ಆ ಎತ್ತಿನ ದೇಹದಲ್ಲಿರಬಹುದಾದ

ಕೊಬ್ಬಿನಿಂದ ಕೂಡಿರುವಂಥ ಮಾಂಸ ರೋಗಕ್ಕೆ ಬಲಿಯಾಗದಿರಲೆಂದು ಮತ್ತೊಂದು ಮಂದೇವರಿಗೆ ಬೇಡಿಕೊಂಡನು.

ಹೊತ್ತು ಕಳೆದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಎಂಬೊಂದು ಗಾದೆಯನ್ನು ತಿಳಿದವನಾದ ಶೊಣ್ಣಿ ಓಡುವವನಂತೆ ಊರ ಕಡೆ ಮುಖ ಮಾಡಿ ನಡೆಯತೊಡಗಿದನು. ಇಷ್ಟೊತ್ತಿಗಾಗಲೇ ಎತ್ತು ಸತ್ತಿರಬಹುದೇ? ಹಾಗೆ ಸತ್ತಿದ್ದರೆ ಶಿವಪೂಜೆ ಗೌಡರು ತಮ್ಮ ಮನೆಯ ಮಾದಿಗನಾದ ತನಗಾಗಿ ಎದುರು ನೋಡುತ್ತಿರಬಹುದೆ ಎಂದಿತ್ಯಾದಿಯಾಗಿ ಯೋಚಿಸುತ್ತ ಬರುತ್ತಿದ್ದ ಅವನಿಗೆ ಕರಗಲ್ಲು ಕಂಡಿತು. ಕರಗಲ್ಲ ನೆತ್ತಿ ಮೇಲಿತ್ತು ಹುಚ್ಚೆಳ್ಳ ಎಣ್ಣೆ, ಅದನ್ನು ನಾಯಿಯೊಂದು ನೆಕ್ಕುತ್ತಿದ್ದಿತು. ಕರಗಲ್ಲು ಬೇರೆ ಅಲ್ಲ, ಪರಮೇಶ್ವರನ ನೆತ್ತಿ ಬೇರೆ ಅಲ್ಲ ಎಂದು ತಿಳಿದವನಾದ ಶೊಣ್ಣಿಗೆ ಸಿಟ್ಟು ಬಂತು ಹಚಾ ಎಂದು ಗದರಿಸಿದ. ಎಣ್ಣೆಗೆ ಹಲ್ಲತ್ತಿದ್ದ ಅದು ಕೇರ್ ಮಾಡದೇ ಗುರ್ರ್ ಅಂತು. ಐನೋರ ನಾಯಿ ತಡವೋದು ಇಷ್ಟವಿರಲಿಲ್ಲ. ಲಕ್ಷಣ ಕಳೆದುಕೊಳ್ಳೋದು ಇಷ್ಟವಿರಲಿಲ್ಲ. ಮುದುಕನ ಕಟ್ಟೆಯಲ್ಲಿ ಎತ್ತುಕೊಯ್ಯುವಾಗ ಜೊಲ್ಲು ಸುರಿಸುತ್ತ ಅದು ಬಂದಾಗ ತಾನು ತಪ್ಪದೆ ಅದರ ಕಾಲು ಮುರಿದು ಕುಂಟುತ್ತ ಹೋಗುವುದನ್ನು ನೋಡಿ ನಗಬೇಕೆಂದು ನಿಶ್ಚಯಿಸಿದನು.

ಅಲ್ಲಿಗೆ ಸುಮಾರು ನಾಕು ಮಾರು ದೂರದಲ್ಲಿದ್ದ ದನದ ದಾಗುಟು ಗೋಪಿಯ ಮನೆಯಂಗಳದಲ್ಲಿ ನಿಂತು ಕೂಗಿ ಎತ್ತಿನ ಯೋಗ ಕ್ಷೇಮವನ್ನು ಇಚಾರಿಸಿದರೆ ಹೇಗೆ ಅಂತಲೂ ಯೋಚಿಸಿದನು. ಕೇಳುವುದು ಸರಿ ಕಾಣಲಿಲ್ಲ. ತಾನು ಅವರಿವರನ್ನು ಯಾಕೆ ಕೇಳುವುದು? ಗೌಡರ ಮನೆ ಮಾದಿಗನೆಂದ ಮೇಲೆ ಮುಗಿಯಿತು. ತಾನು ಅವರಿಗೆ ಜೇಷ್ಠ ಪುತ್ರನಿದ್ದಂತೆಯೇ ಲೆಕ್ಕ. ಅದೂ ಅಲ್ಲದೆ ಸತ್ತ ಎತ್ತು ಹೊತ್ತೊಯ್ದು ಕೊಯ್ಯುವುದು, ತೊಗಲು ಮಾರಿ ತನ್ನ ಸ್ಥಿತಿ ಗತಿ ಸುಧಾರಿಸಿಕೊಳ್ಳುವುದು ತನ್ನ ಜನ್ಮ ಹಕ್ಕು ಎಂದೂ ಬಗೆದನು. ಹಾಗೆಯೇ ಸರ ಸರ ಒಂದಿಷ್ಟು ನಡೆದು ಬೇವಿನ ಮರದ ಬುಡದಡಿ ಕೆಮ್ಮುತ್ತು ಕುಂತಿದ್ದ ಅಸ್ತಮರೋಗಿ ಕಟುಗರ ದಯಾನಂದಪ್ಪನ ಮುಂದೆ ನಿಂತು "ಎಪ್ಪೋ ತೊಗಲಿನ ರೇಟು ಎಂಗೈತಿ" ಎಂದು ಕೇಳಿದನು. "ಎತ್ತಿಂದೋ ಎಮ್ಮೇದೋ" ಅಂತ ಕೇಳಿದನು ದಯಾನಂದ. "ಎತ್ತಿಂದಪ್ಪೋ" ಅಂದನು ಶೊಣ್ಣಿ. "ಹಂಗಾದ್ರೆ ತಕ್ಕಂಬಾ ಅಂದನು ಕಟುಗರಾತ. ಎಂಗೋ ತೊಗಲು ಬರೋದು ಗ್ಯಾರಂಟಿ, ಮುಂಗಡ ಯಾಕೆ ಒಂದೈದು ಇಸಗಬಾರದು ಎಂದು ಪಿಲಾನು

ಹಾಕಿದನು ಠೊಣ್ಣಿ. ಒಂದ್ಯೆದು ಆಡುವಾನ್ಸು ಕೊಡಪ್ಪೋ... ಜ್ವಾಳ ತಕ್ಕಬೇಕಿತ್ತು" ಅಂತ ಕೇಳಿಯೇ ಬಿಟ್ಟನು. ಆಗ ಕಟುಗರ ದಯಾನಂದಗೆ ಕಫದೊಂದಿಗೆ ಸಿಟ್ಟು ಬಂತು. "ಓಗು ಓಗುಲೆ, ಮೊದ್ಲು ಎಡಗೈಯಾಗ ತೊಗ್ಲಿಡು ಬಲಗೈಯಾಗ ರೊಕ್ಕ ಎಣಿಸಗ್ಯ ಅಂದುಬಿಟ್ಟನು. ಅದೂ ಸೈ ಬುಡು ಅಂತ ಠೊಣ್ಣೆ ಬೆನ್ನು ಮಾಡಿ ತನ್ನ ಒಕ್ಕಲು ಮನೆಕಡೆ ಉರುಳತೊಡಗಿದನು.

ಅಯ್ಯಪ್ಪನ ಮನೆ ದಾಟಿ ಎಡಕ್ಕೆ ಹೊರಳಿ ಉಗುಳು ನುಂಗಿದನು. ಚಿನಸೆಟ್ಟಿಯವರ ಮನೆದಾಟಿ ಬಲಕ್ಕೆ ಹೊರಳುತ್ತಲೆ ಅವನ ದೇಹವೆಂಬೋ ದೇಹ ಉದ್ವಿಗ್ನಗೊಂಡು ರೋಮಾಂಚನದ ಸುಂಟರಗಾಳಿಗೆ ಸಿಕ್ಕಿ ಹಗುರ ಪೈಕಿ ಹಗುರಾಗಿ ಆನಂದದಾಗಸದಲ್ಲಿ ತೇಲಾಡತೊಡಗಿತು. ಕಡದಮ್ಮನ ಬಚ್ಚಲ ಕಟ್ಟೆಗೆ ಅನತಿ ದೂರದಲ್ಲಿದ್ದ ಬಸಪ್ಪನ ಕಲ್ಲು ದಾಟುತ್ತಲೇ ಅಷ್ಟು ದೂರದಲ್ಲಿ ನೆಲ ಮುಗಿಲಿಗೆ ಏಕಾಗಿ ಇದ್ದ ಗೌಡರಮನೆ ಕಣ್ಣು ಕುಕ್ಕಿತು. ಸೂರ್ಯ ಪರಮಾತುಮನೆ ಆ ಮನೆಯ ಸ್ವರೂಪದಲ್ಲಿದ್ದರೂ ಇರಬಹುದೆಂಬ ಅನುಮಾನ ಮೂಡಿ ಮರೆಯಾದ ಮರುಕ್ಷಣ ಒಣಗಿದ್ದ ಬಾಯಿಯ ನೈರುತ್ಯ ದಿಕ್ಕಿನಲ್ಲಿ ಬಲವಾದ ನೀರ ಸೆಲೆ ಕಿತ್ತಿತು. ಪ್ರತಿ ಹೆಜ್ಜೆಗೂ ತುಳುಕುವ ಜೊಲ್ಲನ್ನು ಕುಡಿಯುತ್ತ ಇನ್ನೇನು ತನ್ನ ದಾರಿದ್ರ್ಯ ನಾಶವಾಯಿತೆಂದು ಬಗೆದನು. ಆ ಮನೆಯಲ್ಲಿ ತಾನು ಬಂಡಿಗಟ್ಟಲೆ ಕಟ್ಟಿಗೆ ಕಡಿದದ್ದು. ದನದ ಕೊಟ್ಟಿಗೆಯನ್ನು ನುಣ್ಣಗೆ ಬಳಿದಿಟ್ಟು ಅದರ ನೆಲದಲ್ಲಿ ತನ್ನ ಮುಖವನ್ನು ತಾನು ದಿನಂಪ್ರತಿ ನೋಡಿಕೊಳ್ಳುತ್ತಿದ್ದುದು, ತೆನಿ ಮೇಲೆ ಗುಬ್ಬಿ ಕೂತು ಮೈಲಿಗೆ ಮಾಡದ ಹಾಗೆ ಹೊಲದ ತುಂಬ ಲಕ್ಷಕಣ್ಣು ಮೂಡಿಸಿ ಕಾಯುತ್ತಿದ್ದುದು... ಈ ಪ್ರಕಾರವಾಗಿ ಒಂದಲ್ಲ.. ಎರಡಲ್ಲ... ನೂರಾರು ಸೇವೆಗಳನ್ನು ಆ ಮನೆಗಾಗಿ ಮಾಡಿರುವುದು ನೆನೆದು ಬೀಗಿದನು.

ಇಂಥಪ್ಪ ತಾನು ಆ ಮನೆಯ ಅಂಗಳದಲ್ಲಿ ಕಾಲಿರಿಸಿದ್ದೇ ಆದರೆ ಗೌಡರು ಖಂಡಿತವಾಗಿಯೂ ತನ್ನ ಬೊಗಸೆಗೆ ಗಣೇಶನನ್ನು ಎಸೆದು. ತನ್ನ ಯೋಗಕ್ಷೇಮ ವಿಚಾರಿಸಿ ಎತ್ತೊಯ್ಯಲು ಅಪ್ಪಣೆ ಕೊಡಿಸುವನೆಂದು ಯೋಚಿಸುತ್ತ ರಂಗವಲ್ಲಿಯ ರೇಖೆಗಳಿದ್ದ ಆ ಅಂಗಳದಲ್ಲಿ ನಿಂತನು.

ಪರಾವರ್ತಿತ ಪ್ರತಿಕ್ರಿಯೆಗೆ ಒಳಪಟ್ಟು ಕೈ ಕಟ್ಟಿದನು. ಸೆಳಕಿದ್ದ ಸೊಂಟನ್ನು ತುಸುವೇ ಬಗ್ಗಿಸಿದನು. ಅವನ ಕಣ್ಣುಗಳಲ್ಲಿ ಮತ್ತು ಉಗುರುಗಳಲ್ಲಿ ರಕ್ತ ಸಂಚಾರ ಕಡಿಮೆಯಾಗಿ ಬಿಳಿಚಿಕೊಂಡವು. ಅವನ ಮೈಯ ಸಮಸ್ತ ರೋಮನ ಸಂಕುಲ ಏದಿನ ಮುಳ್ಳುಗಳಂತೆ ನಿಮಿರಿದವು.

ಈ ಪ್ರಕಾರವಾದ ದೇಹಿ ಠೊಣ್ಣಿಯು ಒಳಗೆ ಇಣುಕಿ ನೋಡಿದನು. ಗೌಡರ ದೇಹ ಬಾಗಿಲಾಚೆ ಇದ್ದಿತು. ಆತನ ಸುತ್ತಮುತ್ತ ಮತ್ತೆ ಹಲವರಿರುವುದು ಕಂಡಿತು. ಅವರ ಮಾತಿನ ವಸ್ತು ಎತ್ತೇ ಆಗಿರುವುದು. ಆ ಮಾತುಗಳನ್ನು ಆಲಿಸಿ ತನ್ನ ಪುಣ್ಯಕ್ಕೆ ಎತ್ತು ಸತ್ತಿದೆ ಎಂದು ರೋಮಾಂಚನಗೊಂಡನು. ಎತ್ತಿನ ಕಳೇಬರವನ್ನು ಮುದುಕನ ಕಟ್ಟೆವರೆಗೆ ಸಾಗಿಸಲು ತಾನು ಯಾರ, ಯಾರ ಸಹಾಯ ಪಡೆಯಬಹುದೆಂದು ಅವನು ಲೆಕ್ಕ ಹಾಕುತ್ತಿರುವಷ್ಟರಲ್ಲಿ ಗೌಡರು ಹಾಗೆ ನಡೆಯುತ್ತ ಹೊರಗೆ ಬಂದೇ ಬಿಟ್ಟರು. ಬಂದವರೇ ಏನ್ಲೇ ಅಂತ ಮಾತಾಡಿಸಿಯೇ ಬಿಟ್ಟರು. ಅವರನ್ನೇ ಮಿಕಿಮಿಕಿ ನೋಡಿದ ಠೊಣ್ಣಿ "ದೇವ್ರ ಆರೋಗ್ಯ ಎಂಗೈತಿ, ಧಣಿ," ಎಂದು ಕೇಳಿಯೇಬಿಟ್ಟನು. ಅದಕ್ಕೆ ಗೌಡರು "ಇನ್ನೆಲ್ಲೈತಿ ಸಿವ್ನ ಪಾದ ಸೇರಿಬುಟ್ತು! ನಿನ್ನ ದೇವ್ರು" ಎಂದಾಡಿದ್ದು ಕೇಳಿದ ಠೊಣ್ಣಿಗೆ ಒಳಗೊಳಗೇ ನಗು ಬಂತು. ನಕ್ಕನು. ತಾನು ದೇವರನ್ನು ತರಲು ಗೌಡರ ಜೊತೆ ಎತ್ತಿನ ಪರಿಶೆಗೆ ಹೋಗಿದ್ದು, ದೇವರ ಮೈತಿಕ್ಕಿ ತಾನು ಅದರ ಆರೈಕೆ ಮಾಡುತ್ತಿದ್ದುದು, ತುಂಬ ಸೂಕ್ಷ್ಮ ಪರಾಣಿಯಾದ ದೇವರು ತನ್ನಿಂದ ಒಮ್ಮೆ ಕೂಡ ಏಟು ತಿನ್ನದಿದ್ದುದು ದೇವರಿಗೆ ರೋಗ ಬರದಂತೆ ತಾನು ಕಾಡೌಷಧ ಕಲೆಸಿ ಹಾಕುತ್ತಿದ್ದುದು ಎಲ್ಲ ನೆನಪಾಗಿ ಕಕ್ಕುಲಾತಿ ಹೆಚ್ಚಿ ಗೌಡಗೆ ಒಂದೊಂದಾಗಿ ವಿವರಿಸಿ ಹೇಳಿದನು, ಗೌಡರು ಹ್ಹಾ ಅನುವಲ್ಲರು, ಊಹ್ಹೂ ಅನುವಲ್ಲರು. ಯಾಕೋ ಅನುಮಾನ ಬಂತು ಠೊಣ್ಣಿಗೆ. ಮನಸ್ಸಿನಲ್ಲಿ ಮಾತುಗಳನ್ನು ಹೊಂದಿಸಿಕೊಂಡು ಹೀಗೆ ಕೇಳಿದನು. "ಗೋಡ್ರೆ, ದೇವ್ರ ಎಣಾ ತುಂಬಿದ ಮನ್ಯಾಗ ಬಾಳ ಒತ್ತಿರೋದು ನಂಗ್ಯಾಕೋ ಬೇಷಿ ಕಾಣುವಲ್ದು... ತಕ್ಕೊಂಡೋಗ್ಲೆ ಮಾದಿಗ ಅಂತ ಅಪ್ಣೆ ಕೊಡ್ರಿ ಧಣಿ... ಒಯ್ದು ಬುಡ್ತಿನಿ." ಗಣೇಶನನ್ನು ಬೆರಳುಗಳ ನಡುವೆ ಇಟ್ಟುಕೊಂಡಿದ್ದ ಗೌಡರು ಬುಸ್ ಅಂತ ಒಮ್ಮೆಲೆ ಹೊಗೆ ಬಿಟ್ಟು ಠೊಣ್ಣಿಯನ್ನು ನಖ ಶಿಖಾಂತ ನೋಡಿ, ನಿಂಗೆ ಕೊಡೋಕೆ ಸತ್ತಿರೋದು ಅಗಸ್ರ ಕತ್ತಿ ಅಲ್ಲಲೇ. ಮನೆಯ ಎತ್ತು. ಅದ್ನ ನಿನ್ನ ಕೈಗೊಪ್ಸಿ ನಾನ್ಯಾವ ಕರ್ಮಕ್ಕೋಗ್ಲಿ ಅಂದುಬಿಟ್ಟರು. ಇದನ್ನು ಕೇಳಿದ ಠೊಣ್ಣಿಯ ಜಂಘಾಬಲವೆ ಉಡುಗಿಬಿಟ್ಟು ಮೈ ತಣ್ಣಗಾಗಿ ಮತ್ತೆ ಬೆಚ್ಚಗಾಯಿತು ವಯೋವೃದ್ಧರೂ, ಜ್ಞಾನವೃದ್ಧರೂ ಆದ ಗೌಡರ ಬಾಯಿಯಿಂದ ಇಂಥ ಮಾತುಗಳು ಉದುರಬಹುದೆಂದು ಅವನು ಕಣಸು, ಮಣಸಿನಲ್ಲೂ ಊಹಿಸಿರಲಿಲ್ಲ. ನಿಮ್ಮಂಥೋರೆ ಇಂಥ ಮಾತಂದ್ರೆ ಎಂಗ್ರಿ ಧಣಿ... ನಾವು ಎಣಾ

ತಿಂದು ಬದುಕೋ ಮಂದಿ... ದ್ಯಾವ್ರ ಎಣಾ ಕೊಡಿಕ್ವಯ್ದು ತಿಂದು ಬದಿಕಂತೀವಿ ಎಂದು ಮನಸ್ಸಿನಿಂದ ಮಾತುಗಳನ್ನು ಕಿತ್ತಿಟ್ಟನು. ಮೊದಲೇ ಹುಲಿಯಂಥ ಎತ್ತು ಸತ್ತ ಚಿಂತೆಯಲ್ಲಿದ್ದ ಗೌಡ ಓಗ ಓಗಲೇ ಅಂತ ಗದರಿಸಿಬಿಟ್ಟರು. ಎರಡು ಹೆಜ್ಜೆ ಸರಿದು ಠೊಣ್ಣಿ "ತಿಳ್ದೋರೆ ಇಂಗಂದ್ರೆ ಮನಿ ಮಾದಿಗ್ರು... ನಾವೆತ್ಲಾಗೆ ಓಗ್ಬೇಕು ಧಣಿ. ನಿಮ್ಮೆಂಜ್ಲು ತಿನ್ನೋ ಅಕ್ಕೈತಿ ಕೇಳ್ತೀವಿ... ಓಗ್ಲಿ... ನಿಂ ಪಾದಕ್ಕೆ ಒಂದ್ಜೆತಿ ಚಮ್ಡಾ ಮಾಡ್ಕೋಡ್ತೀತಿ... ದೇವ್ರ ಎಣ ಕ್ವಡ್ರಿ" ಎಂದು ಆವೇಶದಿಂದಲೇ ಕೇಳಿಯೇಬಿಟ್ಟನು. ಇದು ಬಿಡೋ ಪೈಕಿ ಅಲ್ಲ ಅನ್ನಿಸಿ ಗೌಡ "ಓಕ್ಕಿಯೋ ಇಲ್ಲಲ್ಲೇ" ಎಂದು ಗದರಿಸಿದ ಮೇಲೆ ಜಾಗ ಖಾಲಿ ಮಾಡುವುದು ಠೊಣ್ಣಿಗೆ ಅನಿವಾರ್ಯವಾಯಿತು.

ಕಣ್ತುಂಬ ಉಕ್ಕಿ ಬಂದ ನೀರನ್ನು ತಡೆಹಿಡಿದು 'ಹಾಯ್ ಸಿವ್ನೆ" ಎಂದು ಅನಕಂತ ನಡೆದನು. ಮನೆ ಹತ್ರ ಹೋತು ಹೋತುಟ್ಲೆ ಆತನ ಹೆಡ್ತಿ ಓಡಿ ಬಂದವಳೆ, ಗೋಡ್ರು ಎತ್ತು ಸತ್ತೈತಂತ ಓಗಿದ್ದಾ ಅಂತ ಪ್ರಶ್ನಿಸಿದಳು. "ನಾವೆಲ್ಲ ಇನ್ನು ಬದ್ಕೀದೀವಲ್ಲ... ಅದ್ಕ ಅದು ಸತ್ತಿರೋದು". ಕಟ್ಟಿಗೆ ಅಂಡು ಅಂಟಿಸಿ ಕಿವಿ ಸಂದಿಲೀದ್ದ ಕೊರೆ ಗಣೇಶ ತೆಗೆದು ಹಚ್ಚಿಕೊಂಡನು. "ಕ್ಯೊಳೋ ಆಕ್ಕೈತಿ ಕ್ಯೋಳೇವಿ ಅದಕ್ಯಾಕೆ ಗೌಡ ನರ ಅರಕೋಬೇಕು" ಎಂಬುದಾಗಿ ಗುನುಗಾಡಿದನು.

ಅವನಿಗೆ ಕುಂತಲ್ಲಿ ಕುಂಡ್ರಲಾಗಲಿಲ್ಲ.

ಅವನಿಗೆ ನಿಂತಲ್ಲಿ ನಿಂದುರಲಾಗಲಿಲ್ಲ.

"ಸತ್ತಿರೋ ಎತ್ತು ಕ್ವಡಿಸ್ರೆಪ್ಯೋ... ಆ ಎತ್ತು ತಿನ್ನೋದು ನನ್ ಅಕ್ಕಯಿತ್ರೆಪೋ... ಇವತ್ತು ಅನ್ಯಾಯ ನಂಗಾಯ್ತದೆ, ಮಂದಿ ಇದೇ ನಾಳೆ ನಿಮ್ಗೂ ಆಯ್ತದೆ... ಇಂಗಾದ್ರೆ ಒಕ್ಕಲಿಗರ ವಕ್ಕಲು ಮಣ್ತಿನ್ನಬ್ಯೇಕಾಯ್ತದ್ರೆಪೋ" ಅಂತ ತಮ್ಮ ಕೇರಿಯ ಪ್ರತಿ ಹಟ್ಟಿ ಮುಂದೆ ನಿಂತು ನಿವೇದಿಸಿಕೊಂಡನು.

ಅದಕ್ಕುತ್ತರವಾಗಿ ಒಬ್ಬ "ನಾವ್ ಪಡ್ದು ಬಂದಿರೋದೆ ಅಸ್ಟು" ಅಂತಂದರೆ, ಮತ್ತೊಬ್ಬ, ಅದ್ರ ಉಸಾಬರಿ ನಮಗ್ಯಾಕೆ ಅಂತ ಜಾರಿಕೊಂಡನು. ಮಗುದೊಬ್ಬ "ಇಂಥ ಅನ್ಯಾಯಕ್ಕೆಲ್ಲ ಕೊಲ್ಪಿಗೋಗಂಗೆ ಇಲ್ಲಲ್ಲ ಠೊಣ್ಣಿ," ಎಂದು ಸಮಾಧಾನ ಪಡಿಸಿದನು.

"ಒಗ್ಗಟ್ಟಾಗಿ ಕೇಳುವ ಬರ್ರಲೆ" ಅಂದರೆ ಉಪದೇಶ ಏಳ್ತೀರಲ್ರಪೋ... ಈ ಜನುಮದಾಗೆ ನೀವ್ಯಾರೂ ಉದ್ಧಾರಗಲ್ಲ ಎಂದು ಒಂದು ಹಿಡಿ ಶಾಪ ಹಾಕಿ ವಾಪಸ್ಸಾದನು.

ಇದಾದ ಚಾವತ್ತಿಗೆ ಎತ್ತಿನ ಪೂಜಿ ನಡದೈತಿ ಎಂಬು ಸುದ್ದಿ ಬಂದ ಮೇಲಂತೂ ಅವನು ವಿಲಿವಿಲಿ ಒದ್ದಾಡಿದನು. ಹೆಡ್ತಿ ಹತ್ತಿರ ಚಿಲ್ಲರೆ ಪಲ್ಲರೆ ಉದುರುಬಡಿದು ದೇವ್ರ ಮನಿ ಲಿಂಗನ ಅಂಗಡಿ ಹೊಸ್ತಿಲು ದಾಟಿ ಕಾಡೀಬೇಡೀ "ದುಕ್ಕಮರೀ ಬೇಕ್ರಪೋ" ಅಂತ ಗೋಗರೆದು ಎಲ್ಡುದರಾಮ ಕುಡಿದು ಲೋಡಾಗಿ "ನಾನಂದ್ರೇನ್ತಿಳ್ಕಂಡೀರಲೇ" ಅಂತ ಕೇಕೇ ಹೊಡೆದು ಪಾರಾದನು. ಅಲ್ಲಿಯೇ ಇದ್ದ ಸೇಸ ನಗಾಡಿ, "ಲೇ ಶೊಣ್ಣಿ ಇಲ್ಲೇನು ತೋರಸ್ತಿ ನಿನ್ನ ಪರತಾಪ... ಆಗ್ಲೆ ಗೋಡ್ರು ಮಂತ್ಯಾಗೆ ಎತ್ತಿನ ಪೂಜಿ ನಡೆದೈತಿ... ಅಲ್ಲಿ ತೋರ್ಸು" ಎಂದು ಊದಿದನು.

ಗೌಡಾಗಿದ್ರೆ ಅವ್ನು ಮನಿಗಾಗಿದ್ದಾನು... ಬಿಟ್ಟಿನ್ನಾ ಸಿವನ್ನ ಎಂದವನೆ ತೂರಾಡುತ್ತ ಗೌಡರ ಮನಿ ಕಡೆ ನಡೆದನು.

ಅವನು ಹೋಗುವ ಹೊತ್ತಿಗೆ ಟಯರು ಬಂಡಿ ಮೇಲೆ ದೇವರನ್ನು ಮಲಗಿಸಿದ್ದರು. ಹಂಗೆ ಅದು ಎದ್ದು ಬರ್ತತೆ ಅನ್ನಂಗಿತ್ತು. ಅದಕ್ಕೂ ಪೂಜಿ ಪುನಸ್ಕಾರ, ಸಿಂಗಾರ ಮಾಡಿದ್ದರು. ಊದಬತ್ತಿ ಹೊಗೆ ನಡುವೆ ದೇವರ ಕಣ್ಣು ಮಿಟುಕಿಸಿದಂತೆ ಕಂಡುಬಂದಿತ್ತು. ರಾಮನ ಬ್ಯಾಂಡು ಸುರುವಾಗಿ ಇನ್ನೇನು ಹೊಲ್ಡಬೇಕೆನ್ನುವಷ್ಟರಲ್ಲಿ ಶೊಣ್ಣಿ... "ಏಯ್ ಗೌಡ... ಬುಟ್ ಬುಡು ಅಂದ್ರೆ ಬುಟ್ ಬುಡು... ಬದುಕಿರೋವರ್ಗೂ ನಿಮ್ದು... ಸತ್ಮ್ಯಾಕೆ ನಮ್ದು" ಎಂದು ತೂರಾಡುತ್ತ ದೇವರ ಹೆಣ ಅವುಚಿಕೊಳ್ಳಲು ಹೋದನು. ಮಾದಿಗ ಮತ್ತೆ ವಕ್ರಸಿದ್ದು ಕಂಡು ಗೌಡರಿಗೆ ಉಸರುಗಟ್ಟಿದಂತಾಗಿ ಕೆಮ್ಮು ಬಂದಿತು. ಕೆಮ್ಮಿದ ನಂತರ ಸಿಟ್ಟು ಬಂತು. ಸಿಟ್ಟು ಬಂದ ನಂತರ ಈ ಪ್ರಕಾರ ಬಂದಿತು ಮಾತು "ಎಲಾ ಇವ್ನ" ಲೇ ಸುಮ್ಕ ಓಕಿಯೋ ಇಲ್ಲೊ ಎಂದು ಎಚ್ಚರಿಕೆ ನೀಡಿದನು. ಆಗ ಶೊಣ್ಣಿ ಅದೆಂಗೆ ಓಗಲ್ಯೋ, ಇದು ನನ್ನ ಮಾನ ಮರುವಾದಿ ಪ್ರಶ್ನೆ... ಬಿಡ್ಲಿಲ್ಲಾ ಅಂದ್ರೆ... ಮತ್ತೇನನ್ನೂ ನುಡಿಯಲಿದ್ದ ಅವನನ್ನು ಗೌಡರ ಆಳುಗಳು ಅವನ ಮೇಲೆ ಮುಗಿಬಿದ್ದದ್ದೇ ಒತಬದ್ದರು. ಅವನ ವಟ್ಟೆಯಲ್ಲಿದ್ದ ಸಿವ ವಯ್ಕ್ ವಯ್ಕ್ ಅಂತ ಹೊರಗೆ ಬಂದುಬಿಟ್ಟ ಪರಿಣಾಮವಾಗಿ ತುಂಬ ವೀಕಾಗಿ ಕಂಗೊಳಿಸಿದನು. ಮತ್ತೆ ಚೇತರಿಸಿಕೊಂಡು ನೋಡ್ಕಂತೀನಿ ಅಂತ ಕಷ್ಟಪಟ್ಟು ಹೆಜ್ಜೆಗಳನ್ನು ಕಿತ್ತಿಡುತ್ತ ಅಲ್ಲಿಂದ ಸೀದ ಹಟ್ಟಿಕಡೆ ಹೆಡ್ತಿ ಕೈಯಿಂದ ಮೈಗೆ ಕಾವು ಕೊಡಿಸಿದನು.

ಅವತ್ತೆಲ್ಲ ಅವನ ಜೀವನಕ್ಕೆ ಸಮಾಧಾನವೇ ಸಿಕ್ಕಿಲ್ಲ. ರೋಷಕ್ಕೂ ಮಿಗಿಲಾಗಿ

ವಟ್ಟೆಯಲ್ಲಿ ಕಾಣಿಸಿಕೊಂಡಿತ್ತು ಹಸಿವೆ ಎಂಬ ಹಸಿವೆ. ಒಲೆಯ ಬೂದಿಯೊಳಗೆ ಅಲಾದಿಯಿಂದ ಬೆಚ್ಚಗೆ ಮಲಗಿರುವ ಬೆಕ್ಕನ್ನು ಓಡಿಸಿ ಅಲ್ಲಿಷ್ಟು ಬೆಂಕಿ ಕಾಣಿಸಿದರೆ ಮಾತ್ರ ನಾಕ್ಕಾಲ ಮನಿ ಮಂದಿ ಎಲ್ಲ ಬದುಕಿರಲು ಸಾಧ್ಯ ಅನ್ನಿಸಿಬಿಟ್ಟಿತು. ಆ ಎತ್ತು ಸಿಕ್ಕಿದ್ದರೆ ಗತಿ ಗಣಪ ಮಾಡ್ತಿದ್ದೆ ಅಂತ ಹೆಡ್ತಿ ಪ್ರಶ್ನೆ ಒಂದಕ್ಕೆ ಉತ್ತರವಾಗಿ ನುಡಿದನು. ತಲಿ ಇರುವಾಗಲೇ ಮೊಣಕಾಲ್ಗೆ ಅಂತ ಹೆಡ್ತಿ ಪ್ರಶ್ನೆ ಒಂದಕ್ಕೆ ಉತ್ತರವಾಗಿ ನುಡಿದನು. ತಲಿ ಇರುವಾಗಲೇ ಮೊಣಕಾಲ್ಗೆ ಪಟ್ಟ ಬಂತೂss ನನ್ಗೆ ಈ ಗತಿ ಬಂತಲ್ಲ ಅಂತ ಮರುಗುತ್ತ ಕೂಡ್ರಲು ಅವನ ಮನಸ್ಸು ಸುತರಾಂ ಒಪ್ಪಲಿಲ್ಲ.

ಸಂಜೆ ಮಟ ಕಟ್ಟೆ ಬದು ಹುಲಿ ತಲಿ ನೇವರಿಸುತ್ತ ಕೂತಿದ್ದವ ತುಕ್ಕಿಡಿದು ಮೂಲೆ ಹಿಡಿದಿದ್ದ ಮಚ್ಚು ತೆಗೆದು ಬೆಳ್ಳಗೆ ಮಸ್ದೂ ಮಸ್ದೂ ಅದರಲ್ಲಿ ತನ್ನ ಮುಖ ನೋಡಿಕೊಂಡ. ಯಾರಿಗೂ ಹೇಳದೆ ಕೇಳದೆ ಸಲಿಕೆ ಪುಟ್ಟ ತಕ್ಕೊಂಡು ವಾಸನೆ ಗುಂಟ ಹೆಜ್ಜೆ ಹಾಕಿದ.

ಮುಂದೆ ಮುಂದೆ ಠೊಣ್ಣಿ

ಹಿಂದೆ ಹಿಂದೆ ಹುಲಿ.

ಮಣ್ಣಿನೊಳಗಿರುವ ದೇವರ ಹೆಣ ಕೊಳೆತಿರಲಿಕ್ಕಿಲ್ಲ. ತೊಗಲು ಇಸ್ತ್ರಿ ಮಾಡಿದ ಅಂಗಿಯಂತಿರಬಹುದು. ಎಲ್ಲದಕ್ಕಿಂತ ಹೆಚ್ಚಾಗಿ ತನ್ನ ಇಚ್ಚಾಶಕ್ತಿಯೇ ಮಣ್ಣಿನೊಳಗೆ ಕೊಳೆಯುತ್ತಿದೆಯೋ ಎಂಬಂತೆ ಯೋಚಿಸುತ್ತ ಊರ ಮಗ್ಗುಲಾಗಿರುವ ಸಿಂದಗೌಡರ ಕಟ್ಟಿ ಹೊಲ ಸೇರಿದ. ಮೇಲೆ ಮೇಲೆ ನಿಂತು ಕಣ್ಣಾಡಿಸಿದ. ಎಲ್ಲೂ ನರಹುಳದ ಸುಳಿವಿರಲಿಲ್ಲ. ಅಲ್ಲಲ್ಲಿ ಕಪ್ಪಲಿನಾಟಗಳ ಊಳಿಡುವ ಸದ್ದು ಬಿಟ್ಟರೆ ಜೀರುಂಡೆಗಳ ಸದ್ದಷ್ಟೆ ಇದ್ದಿತು.

ಜೇನ್ನೊಣವೊಂದು ಹೂವರಿಸಿಕೊಂಡು ಹೋಗುವ ರೀತಿಯಲ್ಲಿ ಠೊಣ್ಣಿ ಅಡ್ಡಾಡತೊಡಗಿದ ಸ್ವಲ್ಪೇ ವ್ಯಾಳ್ಯದೊಳಗೆ ದೇವರಿರುವ ಗುದ್ದನ್ನು ಕಂಡು ಹಿಡಿದು ಬಿಟ್ಟನು. ಗುದ್ದಿನ ಮೇಲಿದ್ದ ಇಬತ್ತಿ ಉಂಡೆ, ಕಣಗಿಲೆ ಹೂವುಗಳು ಅವನ ಸಲಿಕೆ ಏಟುಗಳಿಗೆ ತತ್ತರಿಸಿಹೋದವು. ಮೈಯೊಳಗೆ ದೆವ್ವ ಹೊಕ್ಕಂಡವನಂತೆ ತೋಡೀss ದೇವರ ಹೆಣ ತಲುಪಿದನು. ದೇವರ ಹೆಣದ ಮೂಲೆ ಮೂಲೆಲೆ ಮೂಸಿ ಗೆಲುವಾದನು. ದೇವರು ಬದುಕಿರುವ ರೀತಿಯಲ್ಲಿಯೇ ಬೆಚ್ಚಗಿರುವುದು, ಸರಿ. ಅವನು ಮಿಂಚಿನಂತೆ, ಚಕಚಕ ಅಂತ ದೇವರ ಹೆಣವನ್ನು ಕೊಯ್ಯ ತೊಡಗಿದನು. ಸ್ವಲ್ಪೇ ಹೊತ್ತಿನಲ್ಲಿ ಕೊಯ್ದು ಕಣ್ಣೆ ಕಣ್ಣೆ ಮಾಂಸವನ್ನು ಪುಟ್ಟಿಗೆ

ತುಂಬಿ ಹಸಿತೊಗಲನು ಮಡಚಿ ಹೊತ್ತುಕೊಂಡನು. ಉಳಿದ ದೇವರನ್ನು ತಿನ್ನಲು ಹುಲಿಯನ ಸುಪರ್ಧಿಗೆ ಒಪ್ಪಿಸಿದನು. ನಂತರ 'ಭಲೆ ಸರ್ದಾರ' ಎಂಬ ರೀತಿಯಲ್ಲಿ ಮನೆ ಕಡೆ ಹೆಜ್ಜೆ ಹಾಕಿದನು.

ಮರುದಿನ ಕೋಳಿ ಕೂಗದಿದ್ದರೂ ಬೆಳಕು ಹರಿಯಿತು. ಮುದುಕಿ ಮಕ್ಕಳನ್ನು ಗುಂಪು ಹಾಕಿಕೊಂಡು ಮಾಂಸ ಮಾಡುವ ತಯಾರಿ ಸುರುವು ಮಾಡಿದಳು. ತೊಣ್ಣೆಯಾದರೋ ಮೈಯ ನರ ಹರಿದುಕೊಂಡು ತೊಗಲು ಹದ ಮಾಡಿ ಮುಗಿಸಿದರು. ವಿಕ್ರಮಾರ್ಕನು ಬೇತಾಳವನ್ನು ಹೊತ್ತೊಯ್ದ ಪರಿಯಂತೆ ತೊಣ್ಣಿಯ ಗೋಣಿಚೀಲದೊಳಗೆ ದೇವರ ತೊಗಲನ್ನು ಅಡಗಿಸಿ, ಊರಮ್ಮನ ಗುಡಿ ಹಿಂದೆ ಹಾಯ್ದು ಅಚ್ಚೆ ಮನೆಯೋರ ಅಂಗಳದಲ್ಲಿ ತೇಲಿ, ಬ್ಯಾಡರೋಣಿಯಲ್ಲಿ ಮುಳುಗಿ ಕಟುಗರ ದಯಾನಂದನ ಮನಿ ಮುಂದೆ ಪ್ರತ್ಯಕ್ಷನಾದನು.

ಪಳುಗಟ್ಟಿ ಮೇಲೆ ಕುರಿತು ಬೆಳಗಿನ ಬೋಣಿಗೆಯ ಕಘವನ್ನು ಕಕ್ಕುವ ಪ್ರಯತ್ನದಲ್ಲಿದ್ದ ಅವನು ತೊಣ್ಣಿಯ ದರ್ಶನಮಾತ್ರದಿಂದ ಮುಖ ಸಿಂಡರಿಸಿಕೊಂಡನು. ಅವನ ನೆತ್ತಿ ಹತ್ತಿ ಕೂತಿದ್ದ ಚೀಲ ಕಂಡವನೆ, ಅದರೊಳಗೆ ಎಂಥದೋ ಗುಟ್ಟು ಅಡಗಿದೆ ಅಂದುಕೊಂಡನು. ದಯಾನಂದ ಮಕ ತೊಳೆದುಕೊಂಡು ಇಬ್ಬತ್ತಿ ಧರಿಸುವವರೆಗೆ ತುಟಿ ಪಿಟಿಕ್ಕೆನ್ನದಿದ್ದ ತೊಣ್ಣಿ ಚೀಳದೊಳಗಿಂದ ದೇವರ ತೊಗಲಿನ ದರ್ಶನ ಮಾಡಿಸಿ 'ಏಟು ಕೊಡ್ತಿಯಪೊ' ಅಂದನು. "ನಿನ್ನೆ ಕ್ಯೋಳಿದ್ರೆ ಗಂಟಾಕೋರಂಗೆ ಮಾತಾಡ್ದೆ. ಈಗ್ನೋಡು ಎಂಗೈತಿ" ಅಂತ ಮತ್ತೆ ಗೆಲುವಾಗಿ ನುಡಿದನು.

ತೊಣ್ಣಿಯ ಮಾತುಗಳನ್ನರಗಿಸಿಕೊಂಡ ಕಟುಗರವನಿಗೆ ಮುರಿಬೇಕಲೆ ಇವನ ಮುಗ್ಗಲು ಅಂತನ್ನಿಸಿತು. 'ರೊಕ್ಕ ಇಸ್ಕಂಬತ್ತೀನಿ ರವ್ವಷ್ಟು ಇರು." ಅಂತ ಹೇಳಿದವನೆ ರುದ್ರಜ್ಜನ ಅಂಗಡಿ ಕಡೆಹೋದಂತೆ ಮಾಡಿ ಅಲ್ಲಿಂದ ಸರಕ್ಕನೆ ಗೌಡರ ಮನೆ ಕಡೆ ತಿರುಗಿದನು. ಈ ಸುದ್ದಿಯನ್ನು ಗೌಡರ ಕಿವಿಗೆ ಹಾಕಿದರೆ ಅವರ ಮುಕಳಿ ಹಿಗ್ಗಿ ಈರೇಕಾಯಿಯಾಗುತ್ತದೆ ಮತ್ತು ಐನೂರ ಸಾಲ ಕೇಳುವುದು ಎಂದು ಲೆಕ್ಕಹಾಕಿ ಬೆಳ್ಳಿರೂಪಾಯಿ ಜಡಿದಿದ್ದ ಭಾರಿ ಹೊಸ್ತಿಲು ದಾಟಿ ಗಂಟಲಲ್ಲಿ ಅಸ್ತಮ ಕೆರಳಿದ್ದ ಗೌಡರ ಎದುರು ನಿಂತನು. ಅವರ ದೃಷ್ಟಿ ಇತ್ತ ತಿರುಗುತ್ತಲೆ 'ಇಂಗಿಂಗೆ ಗೌಡ್ರೆ' ಇಂಗಿಂಗೇ ಅಂತ ತಡವರಿಸದೆ ಹೇಳಿದನು. ಮಾಲು ಸಮೇತ ಮನೆತಾವ ಇಡಿದಿಟ್ಟಿವ್ನಿ ಅಂತಲೂ ಹೇಳಿ ಗೌಡರ ಲತೆಗೆ

ತಿದಿಯೊತ್ತಿದ್ದನು. ಆ ಕ್ಷಣ ಗೌಡರ ತಲೆ ಎಂಭೋ ತಲೆ ಕುಲುಮೆಯಾಯಿತು. “ಈ ನನ್ಮಕ್ಳು ಇಲ್ಲಿವರ್ಗ್ಗೂ ಬಂದ್ರಾ ಸಿವಸಿವಾ ಇವತ್ತು ಎತ್ತಿನ ಎಣಾ ಕಿತ್ಗಂಡು ತಿಂದ್ರು. ನಾಳೆ ನಮ್ಮೆಣಾನು ಅದಂಗೆ ಬುಟ್ಟಾರು. ಸಣ್ಣಾಗಿ ಬುದ್ಧಿ ಕಲಿಸ್ದೆ ಬುಡಬಾರದೆಂದು ನಿರ್ಧರಿಸಿದ ಗೌಡರು ತೋಣ್ಣಿಯನ್ನು ಹಿಡಕೊಂಡು ಬರಲು ಮಗ ವಕೀಲ ಕೊಟ್ರಗೌಡ (ಅಂದ್ರೆ ಯಲ್ಲೆಲ್ಬಿ ಫೇಲೂ)ನ ನೇತೃತ್ವದಲ್ಲಿ ಒಬ್ಬ ಆಳನ್ನು ಕಳಿಸಿದರು.

ಇಂಥ ಖಟ್ಲೆ ಇಚಾರಿಸುವ ಛಾನ್ಸು ವಕೀಲ ಗೌಡಗೆ ಸಿಕ್ಕುವುದೆ ಅಪರೂಪ ಸಿಕ್ಕಿತೆಂದರೆ ಬಿಡುವ ಪೈಕಿ ಅಲ್ಲವ. ತಲೆತುಂಬ ಒಂದೇ ಸಮನೆ ಕಲಿತ ಇಂಡಿಯನ್ ಪೀನಲ್ ಕೋಡಿನ ಕಲಮುಗಳು, ವಿಧಿ ನಿಯಮಗಳು ಮೂಡಿ ಆ ಕ್ಷಣ ಕೋರ್ಟಿನಂತಾಗಿಬಿಟ್ಟು ‘ಏನ್ಲೇ’ ಅಂತ ಕಟುಗರ ಮನೆಯಿಂದ ನಿಂತು ತೋಣ್ಣಿಯನ್ನು ದಿಟ್ಟಿಸಿದನು. ಆಗ ತೋಣ್ಣಿಗೂ ಹಾಳುಗುಂಡಿಗೆ ಬಿದ್ದೆನಲ್ಲಾ ಅಂತ ಅನ್ನಿಸಿತು. ಆದರೆ ತಾನು ಇಸಿ ಬಳಿದ ಹುಡುಗ, ನನ್ನೇನು ಮಾಡಿಯಾನು, ಅಂತ ಅವನು ಕೇರೆ ಮಾಡದೆ ವಕೀಲಗೌಡನ ಅಲೆಚಪ್ಪಾಕೃತಿ ಮುಖ ನೋಡುತ್ತ ಹಿಂದೆಲೆ ತುರಿಸಿಕೊಂಡನು. ಹೃದಯದೊಳಗೆ ಚೂರಿಗಳನ್ನಿಟ್ಟುಕೊಂಡಂಥ ದಯಾನಂದನ ಮುಖ ನೋಡಲು ಶುರು ಮಾಡಿದಾಗಲೆ ಆಳು ವೆಂಕಟೇಸ ತೋಣ್ಣಿಯನ್ನು ಬಲವಾಗಿ ಹಿಡಿದುಕೊಂಡ. ಒಂದೇ ಸಮನೆ ಬಯ್ಯುತ್ತ ನಡೆದಿದ್ದ ವಕೀಲಗೌಡನ ಹಿಂದೆ ಗಲ್ಲುಗಂಬ ಏರಲು ಹೊರಟಿರುವ ಹುತಾತ್ಮನಂತೆ ಗಂಭೀರವಾದ ಹೆಜ್ಜೆ ಹಾಕತೊಡಗಿದನು. ಗೌಡರ ಗಚ್ಚಿನ ಮನೆ ಸಮೀಪವಾದಂತೆ ತೊಗಲಿನಾಸೆಗೆ ಕಾಗೆಗಳ ಸಣ್ಣ ಹಿಂಡು ಯಾವ ಮಾದಿಯಿಂದಲೋ ಹೆಚ್ಚಾಗಿ ಕಾss ಅಂತ ತೋಣ್ಣಿಯ ಮೇಲೆ ನೆರಳಾಡತೊಡಗಿತು. ಗಚ್ಚಿನ ಮನೆ ಅಂಗಳದಲ್ಲಿ ನಿಂತ ಮೇಲೂ, ಕಫ ಕಕ್ಕಲಾರದ ಹೇಡಿತನದಿಂದ ಸಣ್ಣಗೆ ನರಳುತ್ತ ಏಕ್‌ದಂ ಸಿಟ್ಟಿನಿಂದ ಬೆವತು ಕೆಕ್ಕರಿಸಿ ನೋಡತೊಡಗಿದ ಗೌಡರನ್ನು ಕಂಡ ಮೇಲೂ ತೋಣ್ಣಿಯ ಎದೆ ಯಾಕೋ ಬಗ್ಗಲೇ ಇಲ್ಲ. “ಎತ್ ಮುಟ್ಟೋವಸ್ತು ತಾಕತ್ತು ಐತೇನ್ಲೇ ಮೈಯಾಗ?” ಅಂತ ಗೌಡರು ಒಂದೇ ಒಂದು ಪ್ರಶ್ನೆ ಕೇಳಿದ್ದಕ್ಕೆ ತೋಣ್ಣಿ ತಡವರಿಸದೆ “ಐತಪ್ಪೋ ಐತೆ, ಅಸಗಂಡೂs ಅಸಗಂಡೂ ಏನನ್ತಿನ್ಲಿs ಏನ್ಬುಡ್ಲಿs ಅನ್ನಂಗಾತೈತಿ” ಅಂದನು. ಈ ಮಾತು ಕೇಳಿದ ಎಲ್ಲರೂ ಸಿಟ್ಟಿನಿಂದ ಕುದ್ದರು. ಅವನನ್ನು ಒದ್ದು ಮಗ್ಗಲು ಮಲಗಿಸಬೇಕೆಂಬ ಮನಸ್ಸೇನೂ ಎಲ್ಲರಿಗೂ

ಆಯಿತು. ಆದರೆ ಒದೆಯುವ ಗಂಡಸೊಬ್ಬನೂ ಅಲ್ಲಿರಲಿಲ್ಲ. ಯಾಕೆಂದರೆ ಕೊಣ್ಣಿ ಎಂಬ ಕೊಣ್ಣೆ ಉಫೆಂದರೆ ಅಷ್ಟು ದೂರ ಹಾರಿ ಹೋಗಿಬೀಳುವ ತರಗಲೆಯಂತಿದ್ದುದೇ ಇದಕ್ಕೆ ಕಾರಣವಾಗಿದ್ದಿತು.

ಅವರು ಕುಂಡರಿಸಿದ ಕಡೆ ಕೊಣ್ಣಿ 'ಅಲಕ್ ನಿರಂಜನ್' ಅಂತ ಕುಂತುಬಿಟ್ಟನು. ಗೌಡರದನ್ನು ಜುಮ್ಮೆನ್ನಿಸಿದರೆ ಏನಾಗುತ್ತದೆ ಅಂತ ಊರಿಗೆ ತೋರಿಸಲು ಅವರೆಲ್ಲ ನಿರ್ಧರಿಸಿದ್ರಿಂದ ಅವನು ಮಿಸುಕುವಂತಿರಲಿಲ್ಲ. ಗೌಡ ತನ್ನ ವಕೀಲ ಮಗನ ಜೊತೆ ಹೊಲಕ್ಕೆ ಹೋಗಿ ನಾಯಿಗಳು ಹದ್ದುಗಳು ತಮ್ಮ ಎತ್ತನ್ನು ಕುಕ್ಕಿ ಕುಕ್ಕಿ ತಿನ್ನುವ ದೃಶ್ಯವನ್ನು ನೋಡಿ ಉರಿವ ಮುಖದೊಡನೆ ಮನೆ ಮರಳಿದ್ದರು. ಕೊಣ್ಣಿಯ ಹೆಂಡರು ಮಕ್ಕಳು ದಿನ ಮುಳ್ಳುಗಳಂತೆ ರೊಯ್ಯನೆ ಬಂದು ಅಳುತ್ತ ಕುಂತರು. ಅವರೊಂದಿಗೇ ಬಂದ ಹುಲಿಗೂ, ಗೌಡರ ನಾಯಿ ಟಾಮಿಗೂ ನಡುವೆ ದ್ವಂದ್ವ ಯುದ್ಧವೇ ಶುರುವಾಯಿತು. ಈ ಯುದ್ಧದಲ್ಲಿ ಟಾಮಿ ಶರಣಾಗತವಾಗಿದ್ದೂ ಅಲ್ಲದೆ ಗೌಡರ ದೊಣ್ಣೆ ಏಟಿಗೆ ತತ್ತರಿಸಿ ಮುಕುಳದಲ್ಲಿ ಬಾಲ ಇಟ್ಟುಕೊಂಡು ಓಡಿ ಮೋಟು ಗೋಡೆ ಮೇಲಲಂಕರಿಸಿ ಆಕಾಶ ಮುರಿದುಬೀಳುವ ಹಾಗೆ ಊಳಿಡತೊಡಗಿತು. ಆದರೆ ಹುಲಿ ಮಾತ್ರ ಯಾರ ಬೆದರಿಕೆಗೂ ಸೊಪ್ಪು ಹಾಕದೆ ಅಚಲವಾಗಿ ಕೊಣ್ಣಿಯ ಕುಟುಂಬ ಸದಸ್ಯರೊಂದಿಗೇ ಉಳಿಯಿತು.

ಗೌಡರು ತಮ್ಮ ಮಕ್ಕಳೊಂದಿಗೆ ಸಮಾಲೋಚಿಸಿ ಕೊಣ್ಣಿಯನ್ನು ಪೊಲೀಸರಿಗೆ ಒಪ್ಪಿಸುವುದೆಂದು ತೀರ್ಮಾನಿಸಿ ವಕೀಲ ಮಗನನ್ನು ಪಕ್ಕದ ಪ್ಯಾಟಿಗೆ ಅಟ್ಟಿದರು. ಪೊಲೀಸರು ಈಗ ಬರಬಹುದು. ಆಗ ಬರಬಹುದೆಂದು ಎಲ್ಲರೂ ಕಾಯತೊಡಗಿದರು. ಗೌಡರ ಮೊಮ್ಮಗ ಸಂಡ್ರ ಕೊಣ್ಣಿಯನ್ನೇ ನೋಡುತ್ತ ಅವನಿಗಿಷ್ಟು ದೂರದಲ್ಲಿ ಕೂತನು. ಸ್ವಲ್ಪ ಹೊತ್ತಿನ ನಂತರ ಪೊಲೀಸರಿದ್ದ ಜೀಪು ಧೂಳೆಬ್ಬಿಸಿಕೊಂಡು ಬಂದದ್ದೆ ಗಚ್ಚಿನ ಮನೆ ಅಂಗಳದಲ್ಲಿ ಡರ್‌ಡಸಕ್ಕಂತ ನಿಂತಿತು. ಆ ಜೀಪಿನಿಂದ ಪೊಲೀಸರಿಬ್ಬರ ಜೊತೆ ಸಬ್‌ಇನ್ಸ್‌ಪೆಕ್ಟರ್ ಊರಿಗೆ ಊರೇ ಉಸಿರುಗಟ್ಟುವಂತೆ ಇಳಿದರು. ಗೌಡರು ಖಾಕಿ ಮಂದಿಯನ್ನು ಸ್ವಾಗತಿಸಿ ಕಟ್ಟೆ ಮೇಲೆ ಕುಂಡ್ರಿಸಿದರು. ಆ ಕ್ಷಣ ಅವರೆಲ್ಲರ ಕರ್ಣಪಟಲ ಹರಿವಂತೆ ಕೊಣ್ಣಿಯ ಕುಟುಂಬ ಸದಸ್ಯರು 'ಅಯ್ಯೋ'. ಅಂತ ಎದೆ ಬಡಿದುಕೊಂಡು ಅಳಲು ಪ್ರಾರಂಭಿಸಿದರು ಮತ್ತು ಅವರೆಲ್ಲರನ್ನೂ ಪೊಲೀಸರೇ ಗದರಿಸಿ ಕದಲಿಸಬೇಕಾಯಿತು.

ಅವರು ಮತ್ತು ಹುಲಿ ಅಂಗಳದ ಮೂಲೆಯಲ್ಲಿ ಲಬೋ ಲಬೋ ಬಾಯಿ ಬಡಿಯೆ, ಗೌಡರು 'ಅನಾಗರಿಕ ಮಂದಿ ಸಾರೂ, ಇವ್ರೀಗೆ ನೀವೇ ಸರಿಯಾದ ಗುರು' ಅಂತ ಅಂದದ್ದು ಸಬ್‌ಇನ್ಸ್‌ಪೆಕ್ಟರರಿಗೆ ಸಮಂಜಸವೆನ್ನಿಸಿ ಠೊಣ್ಣಿಯ ಮುಖ ನೋಡಿದ. ರಕ್ತ ಮಾಂಸವಿರದಿದ್ದರೂ ಆ ಮುಖದ ಕಣ್ಣುಗಳ ಆಳದಲ್ಲಿ ಸದಾ ಮಿನುಗುವ ಎರಡು ನಕ್ಷತ್ರಗಳನ್ನು ಕಂಡು ಇನ್ಸ್‌ಪೆಕ್ಟರ್‌ಗೆ ಸಿಟ್ಟುಬಂದು, ಆ ಸಿಟ್ಟಿನೊಂದಿಗೇ ಎದ್ದು ಗತ್ತಿನಿಂದಲೇ ಠೊಣ್ಣಿಯ ಬಳಿಗೆ ಹೋದರೂ ತನ್ನ ಖಾಕಿಯ ಕಾವು ಅವನಿಗೆ ತಾಕಿದಂತೆ ಕಾಣಲಿಲ್ಲ. ಮಾತುಮಾತಿಗೆ ತಲೆತಗ್ಗಿಸುತ್ತ ಎತ್ತುತ್ತು. ಉಗುಳು ನುಂಗಿ "ಕಳ್ಳ ಬಾಂಛೋದ್ ಇಂಥ ಕೆಲ್ಸನ ಮಾಡೋದು– ನಿಂಗೆ ಆರ್ತಿಂಗ್ಳು ಜೇಲಿಗಾಕಿ ಬುದ್ಧಿಕಲಿಸ್ತೀನಿ" ಎಂದು ಠೊಣ್ಣಿಯ ಮುಖದಲ್ಲಿ ಸ್ವೇದಬಿಂದುಗಳನ್ನು ನಿರೀಕ್ಷಿಸಿದ. ಆ ಮಾತಿಗೆ "ಠೊಣ್ಣಿ ನಿಮ್ಗೆ ಪುಣ್ಯ ಬರತ್ರೈತೀ ದ್ಯಾವ್ರೂ ಆರ್ತಿಂಗಳ್ಯಾಕೆ ಒಂದ್ವರ್ಸ ಆಕಿ ಬುಡ್ರಿ ಎಪ್ಪಾ ಕಾಲಿಗೆ ಬೀಳ್ತಿನಿ, ಬೇಕಾರೆ ಎಂದು ನುಡಿದದ್ದು ಕಂಡು ಇನ್ಸ್‌ಪೆಕ್ಟರ ಹೌಹಾರಿದ ಮತ್ತು ಗೌಡರ ಬಳಿಗೆ ಆ ಕ್ಷಣ ಹೋಗಿ 'ಇಂಥೋರ್ನೆಲ್ಲ ಜೇಲಿಗಾಕೋದ್ರಿಂದ ಏನುಪಯೋಗ ಅಂತೀನಿ" ಅಂದ. ಜೇಲಂದ್ರೆ, ಪೊಲೀಸ್ರಂದ್ರೇ ಠೊಣ್ಣಿ ಹೆದರದಿದ್ದುದು ಕಂಡ ಗೌಡರಿಗೂ ಭಯ ಆಯ್ತು. "ಹೋಗ್ಲಿ, ಇಲ್ಲೇ ಒದ್ದು ಬುದ್ಧಿ ಕಲ್ಸಿ ಓಗ್ರಿ" ಅಂತ ಅಂದರು. ಅದಕ್ಕಿದು ಇನ್ಸ್‌ಪೆಕ್ಟರ್ "ಇಂಥೋರ್ನ ಒದೀಲಿಕ್ಕೂ ನಮ್ಗೆ ಭಯ ಆಗ್ತದ್ರೀ ಗೌಡ್ರೆ. ಏನೋ ತಿಂದೀವಂತ ಒಂದು ಮಾತು ಬಯ್ಯಬಹುದಷ್ಟೆ" ಎಂದು ಹೇಳಿದ. ಉಸಿರುಬಿಟ್ಟು ಒಪ್ಪಿಕೊಂಡರು ಗೌಡರು.

ಹೊಸ ಆಸೆ, ಹೊಸ ಮಂದಹಾಸ, ಮುಡಿದ್ದಿದ್ದ ಮುಖದಲ್ಲಿ ಠೊಣ್ಣಿಯ ಬಳಿಗೆ ಹೋಗಿ ನಿಂತಾ ಇನ್ಸ್‌ಪೆಕ್ಟರ್‌ನ ಕಾಲೊಳಗೆ ನಡುಕಹುಟ್ಟಿತು. ಈ ಸಾರಿ ತಪ್ ಮಾಡಿರೋದ್ನ ಕ್ಷಮಿಸಿ ಬಿಡ್ತಿದೀನಿ. ಇನ್ನೋಂದ್ಸಾರಿ ಬಾಲ ಬಿಚ್ಚಿದೀ ಅಂದ್ರ... ಎಂದು ಹೇಳುತ್ತಿದ್ದಂತೆಯೇ ಠೊಣ್ಣಿ ಆವೇಶದಿಂದ "ಅದೆಂಗ ಬಿಟ್ ಓಗ್ತಿರೋ ನೋಡೇ ಬಿಡ್ತೀನಿ. ಈಗ ನನ್ನ ಕರ್ಕೊಂಡೋಗ್ಲಿಲ್ಲಾಂದ್ರೆ ಇದ್ಕಿಂತ ದೊಡ್ ದೊಡ್ ತಪ್ ಮಾಡ್ತೀನಿ..." ಎಂದಿತ್ಯಾದಿಯಾಗಿ ಒಂದೇ ಸಮನೆ ಮಾತಾಡತೊಡಗಿದ. ಕೂಡಲೆ ಇನ್ಸ್‌ಪೆಕ್ಟರ್ ಎದೆ ಡವ ಡವ ಬಡಕೊಳ್ಳತೊಡಗಿತು. ಆ ಕ್ಷಣ ಅಲ್ಲಿಂದ ಹೊರಟು ಬಿಡಲು ನಿರ್ಧರಿಸಿ ಜೀಪೇರಲು ಪೊಲೀಸರಿಗೆ ಅಪ್ಪಣೆ ಕೊಡಿಸಿದರು.

ಅರೆ! ಪೊಲೀಸರು ತಪ್ಪಿಸಿಕೊಂಡು ಹೋಗುತ್ತಾರೆಂದು ಠೊಣ್ಣಿ ಒಂದು ಕೈ

ನೋಡೇ ಬಿಡಬೇಕೆಂದು ನಿರ್ಧರಿಸಿ, ಒಂದೇ ಏಟಿಗೆ ಜೀಪಿನ ಬಳಿಗೆ ಜಿಗಿದನು. "ನನ್ನೂ ಜೇಲಿಗಾಕ್ರೀ.... ತಪ್ ಮಾಡಿದ್ರೂ ಯಾಕ್ರಿ ಜೇಲಿಗಾಕ್ತಿಲ್ಲ" ಎಂದು ಕೂಗುತ್ತ ಜೀಪೇರಲು ಪ್ರಯತ್ನಿಸಿದನು. ಕೂಗಿಗೆ ಕೂಗು ಸೇರುತ್ತ ಅವನ ಕುಟುಂಬದ ಇತರೇ ಸದಸ್ಯರೂ ಅವನಿಗೆ ಬೆಂಬಲ ಆಗಿನಿಂತು "ನಮ್ಮನ್ನ ಅದೆಂಗ ಬಿಟ್ ಒಗ್ತೀರಿ" ಎಂದು ಚಂಡಿ ಹಿಡಿದರು. ಹುಲಿಯೂ ಸಹ ಬೊವ್ ಬೊವ್ ಅಂತ ಪೊಲೀಸರನ್ನು ಬೆದರಿಸತೊಡಗಿತು. ಇನ್ನೂ ಜೀಪು ಚಾಲೂ ಆಗದಿದ್ದುದು ಕಂಡು ಎಸ್ಸೈ ಜೇನುಗೂಡು ತಡವಿದವನಂತೆ ಉದ್ವಿಗ್ನವಾಗಿ ಚಡಪಡಿಸುತ್ತ ಡ್ರೈವರನ ಮೇಲೆ ಹರಿಹಾಯತೊಡಗಿದನು. ಕೆಟ್ಟ ಆವೇಶಕ್ಕೆ ಸಿಕ್ಕು ಜೀಪೇರತೊಡಗಿದ್ದ ಅವರನ್ನು ಆಚೆ ತಳ್ಳುವಲ್ಲಿ ಪೊಲೀಸರು ಮತ್ತೆ ಮತ್ತೆ ಪ್ರಯತ್ನಿಸಿದರು. ಇನ್ನೇನು ಅವರು ಹತ್ತೇ ಬಿಟ್ಟರೆನ್ನುವಷ್ಟರಲ್ಲಿ ಜೀಪು ಬುರ್ರ್ ಅಂತ ಚಾಲು ಆಗಿ ಉರುಳ ತೊಡಗಿತು. ಹಂತ ಹಂತವಾಗಿ ವೇಗ ಹೆಚ್ಚಿ ಓಡತೊಡಗಿದ ಜೀಪನ್ನು ಠೊಣ್ಣಿ, ಮತ್ತವನ ಹೆಂಡತಿ, ಮಕ್ಕಳು "ನಮ್ಮನ್ನೂ ಕರ್ಕೊಂಡೋಗ್ರೋ ಗಂಡಸ್ರಾಗಿದ್ರೆ ಕರ್ಕೊಂಡೋಗ್ರೋ...." ಎಂದು ಕೂಗುತ್ತ ಸಾಧ್ಯವಾದಷ್ಟು ಹಿಂಬಾಲು ಬಿದ್ದರು, ಠೊಣ್ಣಿ ಮಾತ್ರ ಜೀಪೆಬ್ಬಿಸಿದ್ದ ದೂಳಿನಲ್ಲಿ.... ಬರ್ತೀನ್ರೋ, ಬರ್ತೀನ್ರೋ, ಅಂತ ಕೂಗುತ್ತ ಓಡಿಯೇ ಓಡಿದ. ಹುಲಿ ಸಹ ಬೊವ್ ಬೊವ್ ಅಂತು.

# ನೆಲ್ಸನ್ ಮಂಡೇಲ

**–ರಂಜಾನ್ ದರ್ಗಾ**

## ವಿಶ್ವಮಾನವ

ಗುಲಾಮಗಿರಿಯನ್ನು ರಾಜಕೀಯವಾಗಿ ಕ್ರಮಬದ್ಧಗೊಳಿಸಿರುವ ದೇಶವೆಂದರೆ ದಕ್ಷಿಣ ಆಫ್ರಿಕಾ ಒಂದೇ. ಒಂದು ಜನಾಂಗವನ್ನು ಸದಾಕಾಲ ಗುಲಾಮಗಿರಿಯಲ್ಲಿಡಲ್ಲಿಕ್ಕಾಗದು ಎನ್ನುವುದಕ್ಕೆ ಇತಿಹಾಸ ಸಾಕ್ಷಿ ಇದೆ.

ಕರಿಯರ ಹೋರಾಟಗಳ ಸಂಕೇತವಾಗಿರುವ ನೆಲ್ಸನ್ ಮಂಡೇಲಾ ಟ್ರಾನ್ಸ್‌ಕೆಯಿ ಬಂಟುಸ್ತಾನದ ಉಮ್‌ಟಾಟಾ ಜಿಲ್ಲೆಯ ಮ್‌ಬಷೆ ಗ್ರಾಮದಲ್ಲಿ 1918ನೇ ಜುಲೈ 18ರಂದು ಜನಿಸಿದರು. ಹತ್ತಿರದ ಕುನು ಗ್ರಾಮದಲ್ಲಿ ಬೆಳೆದರು. ಅವರದು ಥೆಂಬು ರಾಜಮನೆತನಕ್ಕೆ ಸೇರಿದ ಕುಟುಂಬ. ಥೆಂಬುಗಳ ನಾಯಕರಾಗಿದ್ದ ತಂದೆ ಹೆನ್ರಿ ಗಾಡ್ಲಾ ಮಂಡೇಲಾ ಅವರು ಟ್ರಾನ್ಸ್‌ಕೆಯಿ ಪ್ರದೇಶದ ಸಾಮಾನ್ಯ ಸಭೆ (ಬುಂಗಾ)ಯ ಮುಖ್ಯಸ್ಥರಾಗಿದ್ದರು. ಥೆಂಬುಗಳ ಸಾರ್ವಭೌಮ ನಾಯಕ ಜೊಂಗಿಂತಾಬಾ ಡೇವಿಡ್ ಡಲಿಂಡಿಯೆಬೊಗೆ ಮುಖ್ಯ ಸಲಹೆಗಾರರಾಗಿದ್ದರು.

ಬಹು ಪತ್ನೀಕ ಹೆನ್ರಿಗೆ ನಾಲ್ವರು ಹೆಂಡಂದಿರಿದ್ದರು. ನೆಲ್ಸನ್ ತಾಯಿಯ ಹೆಸರು ನೊಂಕಾಫಿ. ಮನೆಯಲ್ಲಿ ಕರೆಯುವ ಹೆಸರು ನೊಸಕೆನಿ. ಆಕೆ ದೃಢ ಮನಸ್ಸಿನ ಹಾಗೂ ಘನತೆ ಗೌರವಗಳಿಂದ ಕೂಡಿದ ಮಹಿಳೆ ಆಗಿದ್ದರು. ಮೊದಲ ಮಗು ನೆಲ್ಸನ್ ನಂತರ ಅವರಿಗೆ ಮೂವರು ಹೆಣ್ಣುಮಕ್ಕಳು ಹುಟ್ಟಿದರು.

ಹಿಂದೂ ಮಹಾಸಾಗರದಿಂದಾಗಿ ಪೂರ್ವ ಕರಾವಳಿ ಹೊಂದಿರುವ ಟ್ರಾನ್ಸ್‌ಕೆಯಿ ಬಂಟುಸ್ತಾನದ ಪರ್ವತ ಶ್ರೇಣಿಯ ಸುಂದರ ಕೊಳ್ಳದಲ್ಲಿ ಮ್‌ಬಷೆ ನದಿಯ ಪಕ್ಕದಲ್ಲಿ, ಸಮೃದ್ಧ ಮುಸುಕಿನ ಜೋಳದ ಪ್ರದೇಶದಲ್ಲಿ ಹಾಗೂ ಹಚ್ಚನೆ ಹಸಿರು ತುಂಬಿದ ಹುಲ್ಲುಗಾವಲಿನಲ್ಲಿ ಅವರು ಬಾಲ್ಯದ ದಿನಗಳನ್ನು ಕಳೆದರು. ನಿಸರ್ಗ ರಮ್ಯ ವಾತಾವರಣ, ತಾಯಿಯ ಆತ್ಮಾಭಿಮಾನ ಮತ್ತು ತಂದೆಯ ಶಿಸ್ತುಗಳ ಮಧ್ಯೆ ರಾಜ ಮನೆತನಕ್ಕೆ ತಕ್ಕಂಥ ಗೌರವ ಸಂಪ್ರದಾಯ ಹಾಗೂ ಹೊಣೆಗಾರಿಕೆಯೊಂದಿಗೆ ಬೆಳೆದರು. ಅಕ್ಕಂದಿರ ಜೊತೆ ದನ–ಕುರಿ ಕಾಯ್ದರು ಮತ್ತು ನೇಗಿಲು ಹೊಡೆಯುವಲ್ಲಿ ಸಹಾಯ ಮಾಡಿದರು.

ಅವರ ಗ್ರಾಮದ ವಯೋವೃದ್ಧರು ರಾತ್ರಿಯ ವೇಳೆ ಬೆಂಕಿಯ ಸುತ್ತ ಕುಳಿತು

ಬಿಳಿಯರು ಬರುವುದಕ್ಕೆ ಮುಂಚಿನ ಸುಖದ ಹಳೆಯ ದಿನಗಳ ಕುರಿತು ಮಾತನಾಡುತ್ತಿದ್ದುದನ್ನು ಆಸಕ್ತಿಯಿಂದ ಕೇಳಿದರು. ಆಗ ಅವರಲ್ಲಿ ಮೊದಲ ಬಾರಿಗೆ ರಾಜಕೀಯ ಪ್ರಜ್ಞೆ ಮೂಡಿತು. "ವಿಮೋಚನೆ ಮತ್ತು ದೇಶ ರಕ್ಷಣೆಗಾಗಿ ನಮ್ಮ ಪೂರ್ವಜರು ಮಾಡಿದ ಹೋರಾಟ ಹಾಗೂ ಆ ವೀರಗಾಥೆಯ ದಿನಗಳಲ್ಲಿ ಸೇನಾಪತಿಗಳು, ಸೈನಿಕರು ತೋರಿದ ಪರಾಕ್ರಮ ಕುರಿತು ಹಿರಿಯರು ನಮಗೆ ಹೇಳುತ್ತಲೇ ಇದ್ದರು. ಬದುಕು ನನಗೆ ಕೊಡಬಹುದಾದ ಸಂತೋಷಗಳಲ್ಲಿ ನನ್ನ ಜನರ ಸೇವೆ ಮಾಡುವ ಅವಕಾಶವೂ ಇರುವುದು. ಸ್ವಾತಂತ್ರ್ಯಕ್ಕಾಗಿ ಅವರು ನಡೆಸುವ ಹೋರಾಟಕ್ಕೆ ವಿನಮ್ರ ಕಾಣಿಕೆ ಅರ್ಪಿಸಬೇಕು ಎಂದು ನಾನು ಆಶಿಸಿದೆ. ನಂತರ ಪ್ರತಿಜ್ಞೆ ಮಾಡಿದೆ" ಎಂದು ಅವರು ತಮ್ಮ ಜೀವನ ಚರಿತ್ರೆಯ ಟಿಪ್ಪಣಿಯಲ್ಲಿ ಬರೆದಿದ್ದಾರೆ.

ಹದಿಹರೆಯದ ಮನದಲ್ಲಿ ಸಾಹಸದ ಬೀಜಗಳು ಮೊಳಕೆ ಒಡೆದವು. ಮಿಷನ್ ಸ್ಕೂಲಿಗೆ ಸೇರಿದಾಗ ಅವರಿಗೆ ಅಚ್ಚರಿ ಕಾದಿತ್ತು. ಇತಿಹಾಸ ಗ್ರಂಥಗಳಲ್ಲಿ ಬಿಳಿಯ ವೀರರು ಮಿಂಚುತ್ತಿದ್ದರು. ಕರಿಯರು ಅನಾಗರಿಕರು ಮತ್ತು ದನಗಳ್ಳರು ಎಂದು ಮೂಲೆ ಗುಂಪಾಗಿದ್ದರು.

## ಹೃದಯ ವಿದ್ರಾವಕ ಘಟನೆಗಳು

ಈಸ್ಟನ್ ಕೇಪ್‌ನ ಬುಲ್‌ಹೊಯೆಕ್ ಬಳಿ ಯಹೂದ್ಯರ ಪಂಗಡದವರು ವಾಸವಾಗಿದ್ದರು. ಆ ಪ್ರದೇಶ ಬಿಟ್ಟು ತೊಲಗಬೇಕೆಂದು ಸರ್ಕಾರ 1921ರಲ್ಲಿ ಆಜ್ಞೆ ಮಾಡಿತು. ಆ ಊರೊಟ್ಟಿನ ಜಮೀನನ್ನು ಬಿಟ್ಟು ಬೇರೆ ಕಡೆ ವಲಸೆ ಹೋಗಲು ಅವರು ಒಪ್ಪಲಿಲ್ಲ. ಆಗ ಪ್ರಧಾನಿಯಾಗಿದ್ದ ಜನರಲ್ ಸ್ಮಟ್ಸ್ ಸೈನ್ಯ ಕಳಿಸಿ ಅವರ ಮೇಲೆ ದಾಳಿ ಮಾಡಿಸಿದ ಆ ಹತ್ಯಾಕಾಂಡದಲ್ಲಿ 1963ಮಂದಿ ಪುರುಷರು, ಮಹಿಳೆಯರು ಮತ್ತು ಮಕ್ಕಳು ಸತ್ತರು.

ದಕ್ಷಿಣ ಆಫ್ರಿಕಾದ ಆಳ್ವಿಕೆಗೆ ಒಳಪಟ್ಟಿದ್ದ ನಮೀಬಿಯಾದ ಬೊಂಡೆಲ್ಸ್ ವಾಟ್ಸ್ ಪ್ರದೇಶದ ಜನರು ಸಾಕಿದ ನಾಯಿಗಳ ಮೇಲೆ 1924ರಲ್ಲಿ ಕರ ಹೇರಲಾಯಿತು. ತೀರಾ ಬಡವರಾದ ಅವರು ನಾಯಿ, ಕರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ನಿರಾಕರಿಸಿದರು. ಆಗ ಸ್ಮೂಟ್ಸ್ ಕೋಪೋದ್ರಿಕ್ತನಾದ. ವಿಮಾನಗಳ ಮೂಲಕ ಅವರ ಮೇಲೆ ದಾಳಿ ಮಾಡಿಸಿದ. ಆಗ ನೂರಾರು ಮಂದಿ ಅಮಾಯಕರು ಅಸು ನೀಗಿದರು. ಈ ಹೃದಯವಿದ್ರಾವಕ ಘಟನೆಗಳು ಯುವ ನೆಲ್ಸನ್ ಮನಸ್ಸಿನ

ಮೇಲೆ ಆಳವಾದ ಪರಿಣಾಮ ಬೀರಿದವು. ಬೋಆರ್ ಯುದ್ಧದ ಮೂಲಕ ಯಾದವೀ ಕಲಹದ ದುರಂತವನ್ನು ಅರಿತುಕೊಂಡರು. ಡಚ್ ಮತ್ತು ಆಂಗ್ಲ ಬಿಳಿಯರು ಎಷ್ಟೇ ಕಾದಾಡಿದರು, ಕರಿಯರ ವಿಚಾರ ಬಂದಾಗ ಎಲ್ಲ ಮರೆತು ಒಂದಾಗುತ್ತಾರೆ ಎಂಬುದನ್ನು ಅವರು ಮರೆಯಲಿಲ್ಲ.

1930ರಲ್ಲಿ ತಂದೆ ಹೆನ್ರಿ ನಿಧನರಾದರು. ನಂತರ ನೆಲ್ಸನ್ ಅವರ ಯೋಗಕ್ಷೇಮವನ್ನು ಸಾರ್ವಭೌಮ ನಾಯಕ ಡೆವಿಡ್ ನೋಡಿಕೊಂಡರು. ಆ ಸಾರ್ವಭೌಮ ನಾಯಕನ ಮಹಾಸ್ಥಾನ ಮ್‌ಕೆಕೆಜ್ಜಿನಿಗೆ ಬಂದಾಗ ನೆಲ್ಸನ್ 12 ವರ್ಷ. "ಹದಿನಾರನೇ ವಯಸ್ಸಿಗೆ ನಮ್ಮ ಪದ್ಧತಿಯ ಪ್ರಕಾರ ಮ್‌ಬಷೆ ನದಿ ದಂಡೆಯಲ್ಲಿರುವ ಸುನತಿ ಮಠಕ್ಕೆ ಹೋದೆ. ನನ್ನ ಅನೇಕ ಪೂರ್ವಜರಿಗೆ ಆ ಸ್ಥಾನದಲ್ಲಿ ಸುನತಿ ಆಗಿತ್ತು. ನನ್ನ ಬುಡಕಟ್ಟಿನ ದರ್ಜೆಯ ಪ್ರಕಾರ ಸದ್ಯ ನಾನು ಇಂಬಿಜೊ ಬುಡಕಟ್ಟಿನ ಲೋಕಸಭೆಯಲ್ಲಿ ಭಾಗವಹಿಸಲು ಸಿದ್ಧನಾದ ವ್ಯಕ್ತಿಯಾಗಿದ್ದೆ" ಎಂದು ಮಂಡೇಲಾ ತಿಳಿಸಿದ್ದಾರೆ. ಈ ಸಮಯದಲ್ಲಿ ಅವರು ಸಮೀಪದ ಕ್ಲಾರ್ಕೆಬರಿ ತರಬೇತಿ ಮಹಾವಿದ್ಯಾಲಯ ಸೇರಿದ್ದರು.

ರಜೆಯ ದಿನಗಳಲ್ಲಿ ನಾಯಕ ಸಾರ್ವಭೌಮ ಡೇವಿಡ್ ತನ್ನ ಬುಡಕಟ್ಟು ನ್ಯಾಯಾಲಯದಲ್ಲಿ ತೀರ್ಪು ನೀಡುವುದನ್ನು ಆಸಕ್ತಿಯಿಂದ ಗಮನಿಸುತ್ತಿದ್ದರು. ಡೇವಿಡ್ ಬೇರೆ ಅನೇಕ ಬುಡಕಟ್ಟುಗಳ ನಾಯಕರ ಹಾಗೆ ಬಿಳಿಯರ ಗುಮಾಸ್ತರಂತೆ ಇರದೆ ಸ್ವಾಭಿಮಾನಿ ಆಗಿದ್ದರು. ಜನರ ಗೌರವವನ್ನೂ ಸಂಪಾದಿಸಿದ್ದರು. ಇದನ್ನೆಲ್ಲ ನೋಡಿದ ನೆಲ್ಸನ್ ನ್ಯಾಯವಾದಿ ಆಗುವ ಕನಸು ಕಂಡರು.

ಹೆಲ್ಡ್‌ಟೌನ್ ಮೆಥೊಡಿಸ್ಟ್ ಪ್ರೌಢಶಾಲೆಯಿಂದ ಮೆಟ್ರಿಕ್ ಪಾಸಾದ ನಂತರ ಈಸ್ಟರ್ನ್ ಕೇಪ್‌ನಲ್ಲಿ ಇರುವ ಆಲಿಸೆ ಗ್ರಾಮದ ಪೋರ್ಟ್ ಹ್ಯಾರೆ ಕಾಲೇಜಿನಲ್ಲಿ ದಕ್ಷಿಣ ಆಫ್ರಿಕಾ ಅಷ್ಟೆ ಅಲ್ಲ ಪೂರ್ವ ಮತ್ತು ಮಧ್ಯ ಆಫ್ರಿಕಾದ ಅನೇಕ ಕಪ್ಪು ನಾಯಕರು ಓದಿದ್ದರಿಂದ ಅದಕ್ಕೊಂದು ವಿಶೇಷ ಮಹತ್ವವಿತ್ತು. ಕಾಲೇಜಿನಲ್ಲಿ ಒಂದು ವರ್ಷ ಹಿರಿಯರಾಗಿದ್ದ. ಸದ್ಯ ಎ.ಎನ್.ಸಿ. ಅಧ್ಯಕ್ಷರಾಗಿರುವ ಆಲಿವರ್ ಟಾಂಬೊ ಅವರ ಪರಿಚಯವಾಯಿತು. ಮುಂದೆ ಸ್ವಲ್ಪ ಸಮಯದ ನಂತರ ವಿದ್ಯಾರ್ಥಿ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಮಂಡೇಲಾ ಅವರನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಲಾಯಿತು. ಜೊಂಗಿಂತಾಬಾ ಡೇವಿಡ್ ಡಲಿಂಡಿಯೆಬೊ ಅವರ ಬಳಿಗೆ ವಾಪಸ್ ಹೋದಾಗ ನೆಲ್ಸನ್ 22 ವರ್ಷದ ಯುವಕರಾಗಿದ್ದರು.

ಅವರ ಮದುವೆ ಮಾಡಬೇಕೆಂದು ಬಯಸಿದ ಡೇವಿಡ್ ಕನ್ಯೆಯ ಆಯ್ಕೆ ಮಾಡಿದರು. ಲೊಬೊಲೊ ಕೂಡ ಕೊಟ್ಟಾಯಿತು. ಮದುವೆ ಏರ್ಪಾಟುಗಳು ನಡೆದವು. ಮದುವೆ ನಂತರ ಅವರನ್ನು ಥೆಂಬುಗಳ ನಾಯಕರನ್ನಾಗಿ ಮಾಡಲು ನಿರ್ಧರಿಸಲಾಯಿತು. "ಆತ (ಡೇವಿಡ್) ನನ್ನನ್ನು ಬಹಳ ಪ್ರೀತಿಸಿದರು. ಆದರೆ ಅವರು ಪ್ರಜಾಪ್ರಭುತ್ವವಾದಿ ಆಗಿರಲಿಲ್ಲ. ಮದುವೆ ಹೆಣ್ಣಿನ ವಿಚಾರದಲ್ಲಿ ನನ್ನ ಸಲಹೆ ಕೇಳುವುದು ಪ್ರಯೋಜನಕಾರಿ ಎಂದು ಆತ ಯೋಚಿಸಿರಲಿಲ್ಲ. ದಪ್ಪನೆಯ ಮತ್ತು ಗೌರವಸ್ಥಳವಾದ ಹುಡುಗಿಯನ್ನು ಆಯ್ಕೆ ಮಾಡಿದರು" ಎಂದು ನೆಲ್ಸನ್ ಮಂಡೇಲಾ ಹೇಳಿದ್ದಾರೆ.

ಥೆಂಬುಗಳ ನಾಯಕನಾಗುವುದು ಅವರಿಗೆ ಇನ್ನೂ ಹೆಚ್ಚಿನ ಬೇಸರ ಹುಟ್ಟಿಸುವ ವಿಚಾರವಾಗಿತ್ತು. ತುಳಿತಕ್ಕೊಳಗಾದ ಜನರನ್ನು ಎಂದೂ ಆಳಬಾರದು ಎಂದು ನಿರ್ಧರಿಸಿದ ಅವರು ಸೋದರಳಿಯ ಮ್‌ತಿರಾರಾ ಜೊತೆ ಜೊಹಾನ್ಸ್ ಬರ್ಗ್‌ಗೆ ಓಡಿ ಹೋದರು. ಅಂದಿನಿಂದ ಅವರು ಹೋರಾಟದ ಸಾಗರವನ್ನು ಈಜತೊಡಗಿದರು. ಕರಿಯರ ಕ್ಲೋಸಾ ಭಾಷೆಯಲ್ಲಿ ಅವರ ಹೆಸರು ರೋಲಿಹ್ ಲಾಹ್ಲಾ. ಬಿಳಿಯ ಶಾಲಾ ಶಿಕ್ಷಕಿಗೆ ರೋಲಿಹ್‌ಲಾಹ್ಲಾ ಎಂದು ಉಚ್ಚರಿಸಲು ಸಾಧ್ಯವಾಗದಾಗ ಅವರನ್ನು 'ನೆಲ್ಸನ್' ಎಂದು ಕರೆದಳು. ಅಂದಿನಿಂದ ಅವರು ನೆಲ್ಸನ್ ರೋಲಿಹ್‌ಲಾಹ್ಲಾ ಮಂಡೇಲಾ ಆದರು. ರೋಲಿಹ್ ಲಾಹ್ಲಾ ಎಂದರೆ ಕಷ್ಟಗಳನ್ನು ಕೆದಕುವವ!

1941ರಲ್ಲಿ ಬೃಹತ್ ಔದ್ಯೋಗಿಕ ಕೇಂದ್ರವಾದ ಜೋಹಾನ್ಸ್ ಬರ್ಗ್‌ಗೆ ಬರುವ ಹೊತ್ತಿಗೆ ಅವರು ಭರವಸೆ ಹುಟ್ಟಿಸುವ ಕ್ರೀಡಾಪಟು ಆಗಿದ್ದರು. ಬಾಕ್ಸಿಂಗ್‌ನಲ್ಲಿ ಅವರಿಗೆ ವಿಶೇಷ ಆಸಕ್ತಿ ಇತ್ತು. ರಾಜನೆತನದ ಗಾಂಭೀರ್ಯ ಮತ್ತು ಕ್ರೀಡಾಪಟುವಿನ ತೇಜಸ್ಸನ್ನು ಹೊಂದಿದ್ದ ಮಂಡೇಲಾ ಸುರಕ್ಷಿತ ಬದುಕಿನಿಂದ ಚಂಡಮಾರುತಗಳ ಬದುಕಿಗೆ ಕಾಲಿಟ್ಟರು. ಜೊಹಾನ್ಸ್ ಬರ್ಗ್‌ನ ಜನಸಾಗರದಲ್ಲಿ ಒಂದಾಗಿ ಹೋದರು.

ಭೂಮಿಯನ್ನು ಕಳಕೊಂಡ ಕರಿಯರು ಹೊಟ್ಟೆಪಾಡಿಗಾಗಿ ಗಣಿ, ಕಾರ್ಖಾನೆಗಳಲ್ಲಿ ಕಡಿಮೆ ಕೂಲಿಗೆ ದುಡಿಯುವುದು ಸಹಜವಾಗಿ ಹೋಗಿತ್ತು. ಆ ವೇಳೆಗೆ ಕರಿಯರನೇಕರು ಕಪ್ಪು ಕಾರ್ಮಿಕ ವರ್ಗವಾಗಿ ರೂಪಗೊಂಡಿದ್ದರು. ನಗರಕ್ಕೆ ಬಂದ ಮಂಡೇಲಾ ಇದೇ ತೆರನಾದ ಕೆಲಸ ಮಾಡಲು ಸಿದ್ಧರಾದರು. ಜೊಹಾನ್ಸ್‌ಬರ್ಗ್‌ನ ಕ್ರೌನ್ ಮೈನ್ಸ್‌ನಲ್ಲಿ ಗೇಟು ಕಾಯುವ ಕೆಲಸ ಮಾಡಿದರು.

ಕೆಲದಿನಗಳ ನಂತರ ಥೆಂಬುಗಳ ನಾಯಕಸಾರ್ವಭೌಮನ ಪ್ರತಿನಿಧಿ ಬಂದಾಗ ಅಲ್ಲಿಂದ ಕಾಲು ಕೀಳಬೇಕಾಯಿತು.

ಜೋಹಾನ್ಸ್‌ಬರ್ಗ್‌ನ ಹೊರವಲಯದಲ್ಲಿ ಇರುವ ಅಲೆಕ್ಸಾಂಡ್ರಾ ಉಪನಗರದಲ್ಲಿ ಕೋಣೆಯೊಂದು ಬಾಡಿಗೆಗೆ ಸಿಕ್ಕಿತು. ನಂತರ ವಾಲ್ಟೇರ್ ಸಿಸುಲು ಅವರ ಭೇಟಿಯಾಯಿತು. ಕರಿಯರ ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಸುಲು ಚಿಕ್ಕ ಎಸ್ಟೇಟ್ ಏಜೆನ್ಸಿ ನಡೆಸುತ್ತಿದ್ದರು. ನೆಲ್ಸನ್ ಆ ಏಜೆನ್ಸಿಯಲ್ಲಿ ಏಜೆಂಟ್ ಆಗಿ ಒಂದು ವರ್ಷದವರೆಗೆ ಕೆಲಸ ಮಾಡಿದರು. ಆಗ ತಿಂಗಳಿಗೆ ಎರಡು ಪೌಂಡ್ ಮತ್ತು ಸ್ವಲ್ಪ ಕಮಿಷನ್ ಬರುತ್ತಿತ್ತು. ಅವರ ಬದುಕಿನ ಅತ್ಯಂತ ಕಠಿಣ ಸಮಯ ಅದಾಗಿತ್ತು. 1942ರಲ್ಲಿ ಅಂಚೆ ಮೂಲಕ ಬಿ.ಎ. ಪದವಿ ಪಡೆದರು. ಅದಕ್ಕಾಗಿ ಸಿಸುಲು ಆರ್ಥಿಕ ಸಹಾಯ ಮಾಡಿದರು. ಸಿಸುಲು ಸಹಾಯದಿಂದ ಇದೇ ವರ್ಷ ಜೊಹಾನ್ಸ್‌ಬರ್ಗ್‌ನಲ್ಲಿನ ವಿಟ್‌ಕಿನ್, ಸಿಡೆಲ್ಸ್ಕಿ ಮತ್ತು ಈಡೆಲ್‌ಮನ್ ವ್ಯವಹಾರ ಪ್ರತಿನಿಧಿಗಳ ಸಂಸ್ಥೆ ಸೇರಿದರು. ಇದರಿಂದಾಗಿ ವಿಟ್‌ವಾಟರ್ಸ್‌ರ್ಯಾಂಡ್ ವಿಶ್ವವಿದ್ಯಾಲಯದ ಕಾನೂನು ವಿದ್ಯಾರ್ಥಿ ಆಗಲೂ ಸಾಧ್ಯವಾಯಿತು. ನಂತರ ಅವರು ಜೊಹಾನ್ಸ್‌ಬರ್ಗ್‌ನ ಉಪನಗರವಾದ ಆರ್ಲ್ಯಾಂಡೊ (ಪಶ್ಚಿಮ)ದಲ್ಲಿ ವಾಸವಾಗಿದ್ದ ಸಿಸುಲು ಜೊತೆ ಇರತೊಡಗಿದರು. ಈ ವ್ಯವಹಾರ ಸಂಸ್ಥೆಯಲ್ಲಿ ತಾವು ಪಡೆದ ಅನುಭವಗಳಲ್ಲಿ ಎರಡು ದಾಖಲಾತಿಗೆ ಯೋಗ್ಯವಾಗಿವೆ ಎಂದು ನೆಲ್ಸನ್ ತಿಳಿಸಿದ್ದಾರೆ.

## ಹೊಸ ಬಟ್ಟಲು – ಹಳೆ ಮನಸ್ಸು

“ಮೊದಲ ದಿನ ಕಚೇರಿಗೆ ಹೋದಾಗ ಬಿಳಿಯ ಹಿರಿಯ ಟೈಪಿಸ್ಟ್ ಹೇಳಿದಳು ‘ನೆಲ್ಸನ್ ಇಲ್ಲಿ ವರ್ಣದ ಅಡತಡೆ ಇಲ್ಲ. ಚಹದ ಹುಡುಗ ಚಹಾ ತಂದಾಗ ತಟ್ಟೆಯಿಂದ ನಿಮ್ಮದನ್ನು ತೆಗೆದುಕೊಳ್ಳಿ ನಿಮಗೆ ಮತ್ತು ಗೌರ್ ರಡೆಬೆ (ಇನ್ನೊಬ್ಬ ಕರಿಯ ನೌಕರ)ಗಾಗಿ ನಾವು ಹೊಸ ಬಟ್ಟಲುಗಳನ್ನು ತಂದಿದ್ದೇವೆ. ನೀವು ಅವುಗಳನ್ನು ಬಳಸಿ. ನಿಮ್ಮ ಬಟ್ಟಲುಗಳ ವಿಚಾರದಲ್ಲಿ ಗೌರ್‌ಗೆ ಹೇಳಿ. ಆತನ ಬಗ್ಗೆ ಎಚ್ಚರದಿಂದಿರಿ. ನೆಲ್ಸನ್ ಆತ ಕೆಟ್ಟ ಪ್ರಭಾವ ಬೀರುವಂಥವನಾಗಿದ್ದಾನೆ.’ ನಾನು ಗೌರ್‌ಗೆ ಸಕಾಲದಲ್ಲಿ, ಹೇಳಿದೆ. ‘ನಾನು ನಿಮಗೆ ತೋರಿಸುವೆ ನಾನು ಹೇಳಿದ ಹಾಗೆ ಮಾಡಿ’ ಎಂದು ಆತ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಚಹಾ ಬಂದಾಗ ಗೌರ್ ಹೊಸ ಬಟ್ಟಲುಗಳನ್ನು

ಬಹಿಷ್ಕರಿಸಿದರು. ಹಳೆಯದರಲ್ಲಿನ ಒಂದು ಬಟ್ಟಲನ್ನು ಎತ್ತಿಕೊಂಡರು. ಅವರ ಜೊತೆಗಾಗಲಿ ಹಿರಿಯ ಟೈಪಿಸ್ಟ್ ಜೊತೆಗಾಗಲಿ ಜಗಳ ಮಾಡುವ ಇಚ್ಛೆ ನನಗಿರಲಿಲ್ಲ. ಆದ್ದರಿಂದ ತಿಂಗಳುಗಟ್ಟಲೆ ನಾನು ಚಹಾ ಕುಡಿಯಲಿಲ್ಲ.

ಕೆಲ ತಿಂಗಳುಗಳ ನಂತರ ಹೊಸ ಟೈಪಿಸ್ಟ್ ಬಂದಳು. ಆಕೆ ಕೂಡ ಬಿಳಿಯಳು. ಮಾಡಲು ಏನೂ ಕೆಲಸವಿಲ್ಲದಾಗ ನನಗೆ ಕೆಲಸ ಕೇಳುವ ಅಭ್ಯಾಸ ಆಕೆಗಿತ್ತು. ಒಂದು ದಿನ ನಾನು ಆಕೆಗೆ ಹೇಳಿ ಬರೆಯಿಸುವ ವೇಳೆ ಒಬ್ಬ ಬಿಳಿಯ ಗಿರಾಕಿ ಒಳಗೆ ಬಂದ. ಆಕೆ ಗೋಚರಿಸುವಂತೆ ಪೇಚಾಡಿಕೊಂಡಳು. ನಾನು ಆಕೆಗೆ ಕೆಲಸ ಕೊಡುವ ವ್ಯಕ್ತಿ ಅಲ್ಲ ಎಂಬುದನ್ನು ಪ್ರದರ್ಶಿಸುವುದಕ್ಕಾಗಿ ತನ್ನ ಪರ್ಸ್‌ನಿಂದ ಆರು ಪೆನಿ ತೆಗೆದು "ನೆಲ್ಸನ್ ದಯವಿಟ್ಟು ಅಂಗಡಿಗೆ ಹೋಗಿ ಶಾಂಪೂ ತೆಗೆದುಕೊಂಡು ಬನ್ನಿ ಎಂದಳು" ಎಂದು ನೆಲ್ಸನ್ ಮಂಡೇಲಾ ತಮ್ಮ ಟಿಪ್ಪಣಿಯಲ್ಲಿ ಬರೆದಿದ್ದಾರೆ. ಅಲ್ಲಿ ಇಂಥ ಅಪಮಾನಗಳು ಎಂಥ ಕರಿಯರಿಗೂ ತಪ್ಪಿದ್ದಲ್ಲ.

ನೆಲ್ಸನ್ 1944ರಲ್ಲಿ ಕಾನೂನು ವಿದ್ಯಾರ್ಥಿಯಾಗಿದ್ದಾಗಲೇ ವಾಲ್ಟೇರ್ ಸಿಸುಲು ಅವರ ಸೋದರ ಸಂಬಂಧಿ ಎವೆಲಿನ್ ನ್‌ಟೊಕೊಮಸೆ (ಪ್ರೆಟ)ಯನ್ನು ಮದುವೆಯಾದರು. ಆಕೆ ಜೊಹಾನ್ಸ್‌ಬರ್ಗ್‌ನ ಡೀಪ್‌ಮೈನ್ ಆಸ್ಪತ್ರೆಯಲ್ಲಿ ನರ್ಸ್ ಆಗಿದ್ದರು. ಮದುವೆ ನಂತರ ಅವರು ಆರ್ಲ್ಯಾಂಡೊದಲ್ಲಿ ಸಿಸುಲು ಅವರ ಮನೆ ಸಮೀಪ ಮನೆ ಮಾಡಿದರು. ಸಿಸುಲು ಪತ್ನಿ ಅಲ್ಬರ್ಟನಾ ಕೂಡ ನರ್ಸ್ ಆಗಿದ್ದರು. ನೆಲ್ಸನ್ ಶಿಕ್ಷಣಕ್ಕೆ ಎವೆಲಿನ್ ತುಂಬ ಸಹಾಯ ಮಾಡಿದಳು. ಆಕೆ ಮೃದು ಸ್ವಭಾವದ ಚೆಲುವೆಯಾಗಿದ್ದಳು. ಜೊಹಾನ್ಸ್‌ಬರ್ಗ್‌ನಿಂದ ಹತ್ತು ಮೈಲಿ ದೂರವಿರುವ ಆ ಉಪನಗರಕ್ಕೆ ಈಗ ಸೊವೆಟೊ ಎಂದು ಕರೆಯುತ್ತಾರೆ. ಇದೇ ವೇಳೆಗೆ ಸೇಂಟ್ ಪೀಟರ್ಸ್ ಶಾಲೆಯಲ್ಲಿ ವಿಜ್ಞಾನದ ಶಿಕ್ಷಕರಾಗಲು ಆಲಿವರ್ ಟಾಂಬೊ ಜೊಹಾನ್ಸ್‌ಬರ್ಗ್‌ಗೆ ಬಂದರು. ಟಾಂಬೊ ಕೂಡ ಟ್ರಾನ್ಸ್‌ಕೆಯಿ ಪ್ರದೇಶದಿಂದ ಬಂದವರು. ಥೆಂಬುಲ್ಯಾಂಡ್‌ನ ಈಶಾನ್ಯದಲ್ಲಿರುವ ಪೊಂಡೊಲ್ಯಾಂಡ್‌ನ ಬಿಜಾನಾದವರು.

## ಕಪ್ಪು ಪ್ರಜ್ಞೆ

ಜನ್ಮ ಭೂಮಿಯ ನಿಸರ್ಗ ಸೌಂದರ್ಯ, ರಾಜಮನೆತನದ ಸಂಪ್ರದಾಯಗಳಿಂದ ಕೂಡಿದ ಬಾಲ್ಯ, ಪೂರ್ವಜರ ಸಾಹಸ, ತಾಯಿಯ

ಗಾಂಭೀರ್ಯ, ತಂದೆಯ ಶಿಸ್ತು , ನಾಯಕ ಸಾರ್ವಭೌಮನ ಆತ್ಮಾಭಿಮಾನ, ದೈನಂದಿನ ಅಪಮಾನ ಹಾಗೂ ದಬ್ಬಾಳಿಕೆಗೆ ಒಳಗಾದ ಕರಿಯರ ಚಿಂತಾಜನಕವಾದ ಆರ್ಥಿಕ ಮತ್ತು ಸಾಮಾಜಿಕ ಬದುಕಿನಿಂದಾಗಿ ನೆಲ್ಸನ್ ಮಂಡೇಲಾ ಕ್ಸೋಸಾ ಬುಡಕಟ್ಟು ಪ್ರಜ್ಞೆಯಿಂದ ಕಪ್ಪು ಪ್ರಜ್ಞೆಯ ಪ್ರತಿಪಾದಕರಾಗಿ ಬೆಳೆದುನಿಂತಿದ್ದಾರೆ. ಎಲ್ಲ ಜನಾಂಗಗಳು ತಮ್ಮ ತಮ್ಮ ಬುಡಕಟ್ಟು ಪ್ರಜ್ಞೆಯಿಂದ ಹೊರಬಂದು ಒಟ್ಟಾರೆ ಕಪ್ಪುಪ್ರಜ್ಞೆಯೊಂದಿಗೆ ಬಿಳಿಯರ ವಿರುದ್ಧ ಹೋರಾಡುವುದು ಅನಿವಾರ್ಯ ಎಂಬ ನಿರ್ಧಾರಕ್ಕೆ ಬಂದರು. ತಾನೊಬ್ಬ ಥೆಂಬು ರಾಜಮನೆತನದ ವ್ಯಕ್ತಿ ಎಂದು ಭಾವಿಸುವುದಕ್ಕಿಂತಲೂ ಆಫ್ರಿಕನ್ ರಾಷ್ಟ್ರೀಯವಾದಿ ಎಂದು ಗುರುತಿಸಿಕೊಳ್ಳುವುದು ಅವರಿಗೆ ಪ್ರಿಯವಾಯಿತು. ಹೀಗಾಗಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅವರನ್ನು ಸಹಜವಾಗಿ ಆಕರ್ಷಿಸಿತು. ವಾಲ್ಟೇರ್ ಸಿಸುಲು ಈಗಾಗಲೇ ಎ.ಎನ್.ಸಿ. ಸದಸ್ಯರಾಗಿದ್ದರು. ಸದಸ್ಯರಾಗಲು ಮಂಡೇಲಾ ಮತ್ತು ಟಾಂಬೊ ಅವರಿಗೆ ಪ್ರೋತ್ಸಾಹಿಸಿದರು.

## ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್

ಆಫ್ರಿಕಾನರ್‌ಗಳ ನ್ಯಾಷನಲ್ ಪಾರ್ಟಿ ಸ್ಥಾಪನೆಯಾಗುವುದಕ್ಕೆ ಎರಡು ವರ್ಷ ಮುಂಚೆ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ (1918ನೇ ಜನವರಿ 8ರಂದು) ಸ್ಥಾಪನೆಯಾಯಿತು. ಪ್ರಾರಂಭದಲ್ಲಿ ಸೌತ್ ಆಫ್ರಿಕನ್ ನೇಟಿವ್ ನ್ಯಾಷನಲ್ ಕಾಂಗ್ರೆಸ್ ಎಂದು ಹೆಸರಿಡಲಾಗಿತ್ತು. 1912ನೇ ಜನವರಿ 8ರಿಂದ 12ರವರೆಗೆ ಬ್ಲೊಯೆಮ್‌ಫೋಂಟೀನ್‌ನಲ್ಲಿ ಸಮ್ಮೇಳನ ನಡೆಯಿತು.

ಆಕ್ಸ್‌ಫರ್ಡ್, ಕೊಲಂಬಿಯಾ ವಿಶ್ವವಿದ್ಯಾನಿಲಯ ಮತ್ತು ಇನ್ಸ್‌ಕೋರ್ಟ್‌ನಲ್ಲಿ ಅಧ್ಯಯನ ಮಾಡಿ ಮರಳಿದ ಜುಲು ವಕೀಲ ಪ್ರಿಕ್ಸ್‌ಲೆ ಕಾ ಇಸಾಕಾ ಸೆಮೆ ಈ ಪಕ್ಷದ ಸ್ಥಾಪನೆಗೆ ತುಂಬ ಪ್ರಯತ್ನಪಟ್ಟರು. ದಕ್ಷಿಣ ಆಫ್ರಿಕಾದ ಎಲ್ಲ ಬುಡಕಟ್ಟುಗಳ ಕಪ್ಪು ಜನರನ್ನು ಒಂದುಗೂಡಿಸುವುದೇ ಈ ಪಕ್ಷದ ಸ್ಥಾಪನೆಯ ಮುಖ್ಯ ಉದ್ದೇಶವಾಗಿತ್ತು. ಬುಡಕಟ್ಟುಗಳ ನಾಯಕರು. ಬಂಟುಸ್ತಾನ್‌ಗಳ ಮಂತ್ರಿಗಳು, ಶಿಕ್ಷಕರು, ಪತ್ರಕರ್ತರು ಮತ್ತು ವಕೀಲರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಮೆರಿಕದಲ್ಲಿ ತರಬೇತಿ ಪಡೆದ ಶಿಕ್ಷಣತಜ್ಞ ರೆವರೆಂಡ್ ಜಾನ್ ಡುಬೆ (ಜುಲು ಬುಡಕಟ್ಟು) ಅವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಸೆಮೆ ಖಚಾಂಚಿಯಾಗಿ ಆಯ್ಕೆ ಆದರು.

ಪತ್ರಕರ್ತ ಮತ್ತು ಕಾದಂಬರಿಕಾರ ಸೋಲ್ ಟಿ. ಪ್ಲಾಟ್ಜೆ ಪ್ರಧಾನ ಕಾರ್ಯದರ್ಶಿಯಾದರು. ಮ್‌ಫೆಕಿಂಗ್ ಬಸುತೊಲ್ಯಾಂಡ್, ಪ್ರಿಟೋರಿಯಾ, ಜೊಹಾನ್ಸ್ ಬರ್ಗ್, ನತಾಲ್, ಬ್ಲೋಯೊಂಫೊಂಟೀನ್ ಮತ್ತು ಕೇಪ್‌ಟೌನ್‌ಗಳಿಂದ ಉಪಾಧ್ಯಕ್ಷರನ್ನು ನೇಮಿಸಲಾಯಿತು.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಿಂದಾಗಿ ಬಿಳಿಯರ ವಿರುದ್ಧದ ಸಂಘಟಿತ ಹೋರಾಟಕ್ಕೆ ಹೊಸ ರೂಪ ಬಂದಿತು. ಕರಿಯರು ಈ ಹಿಂದೆ ಅನುಭವಿಸಿದ್ದ ಸೋಲು ಮತ್ತು ಅನಿವಾರ್ಯತೆಗಳ ಮಧ್ಯದಿಂದ ಈ ರಾಜಕೀಯ ಸಂಘಟನೆ ಉದ್ಭವಿಸಿತು.

1910ರಲ್ಲಿ ಯೂನಿಯನ್ ಆಫ್ ಸೌತ್ ಆಫ್ರಿಕಾ ಅಸ್ತಿತ್ವಕ್ಕೆ ಬಂದು ಸಂಪೂರ್ಣ ಬಿಳಿಯರ ಸಂಪತ್ತು ರಚನೆಯಾದಾಗ ಸುಲಿಗೆಯ ಹೊಸ ತಂತ್ರಗಳಿಗೆ ಚಾಲನೆ ಸಿಕ್ಕಿತು. ಕರಿಯರಿಗೆ ಹೊಸ ರಾಜಕೀಯ ಪ್ರಜ್ಞೆ ಮೂಡತೊಡಗಿತು. ಅದರ ಮೂರ್ತ ಸ್ವರೂಪವೇ ಎ.ಎನ್.ಸಿ. ಆಗಿದೆ.

ಕ್ಸೋಸಾ ಭಾಷೆಯ ಕಿ ಎನೋಚ್ ಸೊಂಟೊಂಗಾ ಬರೆದ ಪ್ರಾರ್ಥನಾಗೀತೆಯನ್ನು ಸಭೆಯ ಪ್ರಾರಂಭದಲ್ಲಿ ಹಾಡಲಾಯಿತು. ನ್‌ಕೋಸಿ ಸಿಕೆಲೆಲ್ ಇ ಆಫ್ರಿಕಾ (ದೇವರೇ ಆಫ್ರಿಕಾದ ಮೇಲೆ ಕರುಣೆ ತೋರು) ಎಂಬುದು ಆ ಹಾಡಿನ ಮೊದಲ ಸಾಲು. ಆ ಪ್ರಾರ್ಥನಾ ಗೀತೆ ನಂತರ ಎ.ಎನ್.ಸಿ.ಯ ರಾಷ್ಟ್ರಗೀತೆಯಾಯಿತು. 1925ರಲ್ಲಿ ಕಪ್ಪು, ಹಸಿರು ಮತ್ತು ಚಿನ್ನದ ಬಣ್ಣಗಳ ಧ್ವಜ ಪಡೆಯಿತು. ಈ ಬಣ್ಣಗಳು ಅನುಕ್ರಮವಾಗಿ ಜನ, ಭೂಮಿ ಮತ್ತು ಸಂಪನ್ಮೂಲಗಳ ಪ್ರತೀಕ ಆಗಿವೆ.

1913ರಲ್ಲಿ ದಕ್ಷಿಣ ಆಫ್ರಿಕಾ ಸರ್ಕಾರ ನೇಟಿವ್‌ಲ್ಯಾಂಡ್ ಕಾಯ್ದೆ ಮೂಲಕ ಕರಿಯರ ಜಮೀನನ್ನು ಸ್ವಾಧೀನಪಡೆಸಿಕೊಂಡಿತು. ಆಗ ಕರಿಯರಿಗೆ ಉಳಿದದ್ದು ಕೇವಲ ಶೇ. 12.7ರಷ್ಟು ಭೂಮಿ. ಈ ಕಾಯ್ದೆ ಮಸೂದೆ ರೂಪದಲ್ಲಿ ಇದ್ದಾಗ ಕರಿಯರಿಗೆ ಭೂಮಿಯಲ್ಲಿ ಯೋಗ್ಯಪಾಲು ದೊರೆಯುವುದೆಂಬ ಭ್ರಮೆ ಇತ್ತು. ಈ ಕುರಿತು ಎ.ಎನ್.ಸಿ.ಯ ನಾಯಕರಲ್ಲಿ ಭಿನ್ನಾಭಿಪ್ರಾಯ ಮೂಡಿತು. ಡುಬೆ ಕೂಡ ಈ ಮಸೂದೆಯನ್ನು ಬೆಂಬಲಿಸಿದರು. ಆದರೆ ಪ್ಲಾಟ್ಜೆ ವಿರೋಧಿಸಿದರು. ಡುಬೆ ಅಧ್ಯಕ್ಷ ಸ್ಥಾನ ಕಳೆದುಕೊಂಡರು. ಎಸ್. ಮೆಕ್‌ಗಥೊ ಅಧ್ಯಕ್ಷರಾಗಿ ಆಯ್ಕೆ ಆದರು.

ಎ.ಎನ್.ಸಿ.ಯ ಅಹಿಂಸಾ ಮಾರ್ಗದಿಂದಾಗಿ ಬಿಳಿಯರ ಸರ್ಕಾರ ಹೆಚ್ಚು

ಕ್ರೂರಿ ಆಗುತ್ತ ಸಾಗಿತು. ಜನತೆಯ ಹೋರಾಟಗಳನ್ನು ಹಿಂಸೆಯಿಂದ ಸದೆಬಡೆಯಿತು. ಹೀಗಾಗಿ 30ರ ದಶಕದಲ್ಲಿ ಎ.ಎನ್.ಸಿ. ನಿಷ್ಕ್ರಿಯವಾಯಿತು. ಆಗ ಜೇಮ್ಸ್ ಕಲಾಟಾ ತಮ್ಮ ಅನಾರೋಗ್ಯ ಹಾಗೂ ಬಡತನವನ್ನು ಲೆಕ್ಕಿಸದೆ ಸಂಘಟನೆಯನ್ನು ಚುರುಕುಗೊಳಿಸಲು ಶ್ರಮಿಸಿದರು. ಅವರನ್ನು ಎ.ಎನ್.ಸಿ. ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಯಿತು.

ಜೊಹಾನ್ಸ್‌ಬರ್ಗ್‌ನ ಡಾ. ಎ.ಬಿ. ಕ್ಸುಮಾ ಡಿಸೆಂಬರ್ 1940ರಲ್ಲಿ ಎ.ಎನ್.ಸಿ. ಅಧ್ಯಕ್ಷರಾದರು. ಫೋರ್ಟ್ ಹ್ಯಾರೆಯಲ್ಲಿ ಸಾಮಾಜಿಕ ಮಾನವ ಶಾಸ್ತ್ರದ ಉಪನ್ಯಾಸಕ ಜೆಡ್.ಕೆ. ಮಥ್ಯೂವ್ಸ್ ಈ ಸಂದರ್ಭದಲ್ಲಿ ಎ.ಬಿ. ಕ್ಸುಮಾ ಅವರಿಗೆ ಹೆಚ್ಚು ಸಹಕಾರಿ ಆಗಿದ್ದರು.

ಅಧಿಕ ಲಾಭ ಬರುವ ಮತ್ತು ಕಡಿಮೆ ದರದಲ್ಲಿ ಕೂಲಿ ಸಿಗುವ ದಕ್ಷಿಣ ಆಫ್ರಿಕಾ ಬಹುರಾಷ್ಟ್ರೀಯ ಕಂಪೆನಿಗಳ ಸುಲಿಗೆಯ ಕೇಂದ್ರವಾಗಿ ಬೆಳೆಯತೊಡಗಿತು. ಅವುಗಳಿಗೆ ಪ್ರತಿಯಾಗಿ ಕಾರ್ಮಿಕ ಸಂಘಟನೆಗಳೂ ಬೆಳೆಯತೊಡಗಿದವು. 1942ರಲ್ಲಿ ಮುಷ್ಕರಗಳ ಮೇಲೆ ನಿಷೇಧ ಹೇರಲಾಯಿತು. ಆದರೆ ಮುಷ್ಕರಗಳನ್ನು ತಡೆಯಲಿಕ್ಕಾಗಲಿಲ್ಲ.

1942ರಲ್ಲಿ ವೇಳೆ ಎ.ಎನ್.ಸಿ. ಬಹಳ ನಿಷ್ಕ್ರಿಯವಾಯಿತು. ಡೆಮಾಕ್ರಟಿಕ್ ಪಾರ್ಟಿಯ ಸ್ಥಾಪನೆಗಾಗಿ ಅನೇಕರು ಎ.ಎನ್.ಸಿ. ಬಿಟ್ಟರು. ವಾಲ್ಟೇರ್ ಸಿಸುಲು, ಆಲಿವರ್ ಟಾಂಬೊ ಮತ್ತು ನೆಲ್ಸನ್ ಮಂಡೇಲಾ ಅವರಿಗೆ ಇದು ಸರಿ ಬೀಳಲಿಲ್ಲ. ಎ.ಎನ್.ಸಿ. ಬಲಪಡಿಸಲು ನಿರ್ಧರಿಸಿದರು. ಮಂಡೇಲಾ ಮತ್ತು ಗೆಳೆಯರು ಕೂಡಿ 1944ರಲ್ಲಿ ಎ.ಎನ್.ಸಿ. ಯೂತ್‌ಲೀಗ್ ಪ್ರಾರಂಭಿಸಿದರು. ಆ ಮೂಲಕ ಎ.ಎನ್.ಸಿ.ಯನ್ನು ಚುರುಕುಗೊಳಿಸತೊಡಗಿದರು. ಇವರ ಪ್ರಯತ್ನ ಫಲ ನೀಡಿತು. ಡಾ. ಕ್ಸುಮಾ ಅವರು ಜೊಹಾನ್ಸ್‌ಬರ್ಗ್‌ನಲ್ಲಿನ ತಮ್ಮ ಎಡಬಿಡದ ವೈದ್ಯಕೀಯ ವೃತ್ತಿಯ ಮಧ್ಯೆ ಕೂಡ ಬಹಳಷ್ಟು ಪ್ರವಾಸ ಮಾಡಿ ಎ.ಎನ್.ಸಿ. ಬೆಳೆಯಲು ಯತ್ನಿಸಿದರು.

1944ನೇ ಏಪ್ರಿಲ್‌ನಲ್ಲಿ ಆಂಟೋನ್ ಮುಜಿವಖೆ ಲೆಂಬೆಡೆ ಯೂತ್‌ಲೀಗ್ ಅಧ್ಯಕ್ಷರಾಗಿ ಆಯ್ಕೆ ಆದರು. ಆಲಿವರ್ ಟಾಂಬೊ ಕಾರ್ಯದರ್ಶಿಯಾದರು. ಎ.ಪಿ.ಮ್‌ದಾ ಸಿದ್ಧಪಡಿಸಿದ ಮೂಲನೀತಿಗೆ ಮಂಡೇಲಾ ಅಂತಿಮ ರೂಪ ಕೊಟ್ಟರು. ಶಕ್ತಿಶಾಲಿಯಾದ ವಿಮೋಚನಾ ಹೋರಾಟಗಳಿಗಾಗಿ ಯೂತ್‌ಲೀಗ್ ಬೆಳೆಸಲು ಆಶಿಸಿದರು.

ಲೆಂಬೆಡೆ ಜುಲು ಕೃಷಿ ಕಾರ್ಮಿಕರ ಮಗ. ಅವರ ತಂದೆ ತಾಯಿ ಕಡು ಬಡವರಾಗಿದ್ದರು. ಅವರಿಗೆ ಉಡಲು ಬಟ್ಟೆ ಕೂಡ ಇರಲಿಲ್ಲ. ಗೋಣಿಚೀಲದಿಂದ 'ಉಡುಪು' ತಯಾರಿಸಿ ಧರಿಸುತ್ತಿದ್ದರು. ಹೇಗಾದರೂ ಮಾಡಿ ಮಗನಿಗೆ ಕಲಿಸಬೇಕೆಂಬ ಆಸೆ ಅವರಿಗಿತ್ತು. ಲೆಂಬೆಡೆ ಮೊದಲು ಶಿಕ್ಷಕರಾಗಿದ್ದರು. ನಂತರ ವಕೀಲರಾದರು. ಎ.ಪಿ.ಮ್‌ದಾ ಕೂಡ ಮೊದಲು ಶಿಕ್ಷಕರಾಗಿದ್ದರು. ನಂತರ ವಕೀಲರಾದರು. ಈ ಗೆಳೆಯರಿಂದಾಗಿ ಆಫ್ರಿಕಾದ ವಿಮೋಚನಾ ಹೋರಾಟ ಹೊಸ ತಿರುವು ಪಡೆಯಿತು.

ಆಫ್ರಿಕನ್ ನ್ಯಾಷನಲ್ .... ಅನ್ನು ಆಧುನಿಕಗೊಳಿಸುವಲ್ಲಿ ಮಂಡೇಲಾ ಪಾತ್ರ ಹಿರಿದಾಗಿದೆ. ಸಂಘಟನೆಯಲ್ಲಿ ಅವರು ಅನೇಕ ಸುಧಾರಣೆಗಳನ್ನು ತಂದರು. ರಾಷ್ಟ್ರೀಯ ಚಳವಳಿಗೆ ಕ್ರಾಂತಿಯ ತಂತ್ರಗಳನ್ನು ಅಳವಡಿಸಿದರು. ವರ್ಣಭೇದ ನೀತಿಯ ಸರ್ಕಾರದ ವಿರುದ್ಧ ಒಂದುಗೂಡಿ ಹೋರಾಡಬೇಕಾದರೆ ಎಲ್ಲ ಕರಿಯರ ಬುಡಕಟ್ಟುಗಳ ಮಧ್ಯೆ ಸಮಾನತೆ ಸಾಧಿಸಬೇಕು. ವಿವಿಧ ಜನಾಂಗಗಳ ಸಂಸ್ಕೃತಿ ಮತ್ತು ಭಾಷೆಗಳ ಮಧ್ಯೆ ಸಂಪರ್ಕ ಉಂಟಾಗಬೇಕು. ವಿವಿಧ ರಾಷ್ಟ್ರೀಯತೆಗಳ ಬದಲು ಸಮಗ್ರ ರಾಷ್ಟ್ರೀಯ ಪ್ರಜ್ಞೆ ಮೂಡಿ ಬರಬೇಕು ಎಂಬ ನಿಲುವನ್ನು ಅವರು ಹೊಂದಿದರು. ಅಷ್ಟೇ ಅಲ್ಲ ಕಾರ್ಮಿಕರು, ರೈತರು, ಮಹಿಳೆಯರು ಮತ್ತು ಯುವಕರನ್ನು ಹೋರಾಟದ ಮುಂಚೂಣಿಯಲ್ಲಿ ತಂದರು. ಕರಿಯರು, ಭಾರತೀಯ ಮೂಲ ನಿವಾಸಿಗಳು ಮತ್ತು ಕಮ್ಯೂನಿಸ್ಟರಲ್ಲದೆ ಹೋರಾಟಗಾರರನ್ನು ಒಂದುಗೂಡಿಸಿದರು. ಕರಿಯರು ಜನಾಂಗವಾದಿಗಳಾಗದಂತೆ ನೋಡಿಕೊಂಡು ವರ್ಣಭೇದ ನೀತಿಯನ್ನು ಒಕ್ಕೊರಲಿನಿಂದ ವಿರೋಧಿಸುವಲ್ಲಿ ಸಫಲರಾದರು. ಅವರ ಈ ಎಲ್ಲ ಆಲೋಚನೆಗಳು 1955ನೇ ಜೂನ್ 26ರಂದು ಅಂಗೀಕರಿಸಿದ 'ಸ್ವಾತಂತ್ರ್ಯ ಘೋಷಣೆ'ಯ ತಿರುಳಾಗಿದೆ. ಮಂಡೇಲಾರ ವಿಚಾರಗಳು ಜನಸಮುದಾಯದ ಬಯಕೆಗಳಲ್ಲಿ ಬೇರು ಬಿಟ್ಟಿದ್ದರಿಂದಲೇ ಇದೆಲ್ಲ ಸಾಧ್ಯವಾಯಿತು.

ಕರಿಯರು ನೇಟಿವ್‌ಲ್ಯಾಂಡ್ ಕಾಯ್ದೆಯಿಂದಾಗಿ ಕಳಕೊಂಡ ಭೂಮಿಯನ್ನು ಎಲ್ಲ ಜನಾಂಗಗಳ ಜನಸಂಖ್ಯೆಯ ಆಧಾರದ ಮೇಲೆ ಪುನರ್ವಿಂಗಡನೆ ಮಾಡಬೇಕು. ಕರಿಯರಿಗೆ ಮತ ಚಲಾಯಿಸುವ ಹಕ್ಕು ಬರಬೇಕು. ಮಕ್ಕಳಿಗೆ ಯೋಗ್ಯ ಶಿಕ್ಷಣ ದೊರೆಯುವಂತಾಗಬೇಕು. ಒಟ್ಟಾರೆ ವರ್ಣಭೇದ ನೀತಿ ಅಳಿಯಬೇಕು ಎನ್ನುವುದೇ ಅವರ ಗುರಿಯಾಗಿತ್ತು.

ಐರೋಪ್ಯ ಮತ್ತು ಇತರ ದೇಶಗಳ ಸಂಸ್ಕೃತಿಗಳ ಶ್ರೇಷ್ಠ ಅಂಶಗಳು ಆಫ್ರಿಕಾ ಸಂಸ್ಕೃತಿಯನ್ನು ಸೇರಬೇಕು. ಮಾನವನ ಏಳ್ಗೆ ಮತ್ತು ಘನತೆ ಹೆಚ್ಚಿಸುವುದಕ್ಕಾಗಿ ಆಫ್ರಿಕಾ ತನ್ನ ಕಾಣಿಕೆ ಸಲ್ಲಿಸುವಂಥ ವಾತಾವರಣ ನಿರ್ಮಾಣವಾಗಬೇಕು ಎಂಬುದೇ ಯೂತ್‌ಲೀಗ್‌ನ ಗೆಳೆಯರೆಲ್ಲರ ಆಶಯವಾಗಿತ್ತು.

ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಸೋತದ್ದಕ್ಕೆ ಎ.ಎನ್.ಸಿ. ಹರ್ಷ ವ್ಯಕ್ತಪಡಿಸಿ ವಿವಿಧ ಸಂಘಟನೆಗಳ ಸಹಕಾರದೊಂದಿಗೆ 1945ರ ಮೇ ತಿಂಗಳಲ್ಲಿ ಮೆರವಣಿಗೆ ಹೊರಡಿಸಿತು. ಆ ಮೆರವಣಿಗೆಯಲ್ಲಿ 20 ಸಾವಿರಕ್ಕೂ ಹೆಚ್ಚು ಕರಿಯರಿದ್ದರು. ಜೊಹಾನ್ಸ್‌ಬರ್ಗ್‌ನಲ್ಲಿ ಇಂಥ ಮೆರವಣಿಗೆ ಹಿಂದೆಂದೂ ನಡೆದಿರಲಿಲ್ಲ. ಕಾರ್ಮಿಕ ವರ್ಗದಲ್ಲಿನ ಏಕತೆಯು ಇದರ ಮೂಲ ಶಕ್ತಿಯಾಗಿತ್ತು. ಏತನ್ಮಧ್ಯೆ ಡಾ. ಕ್ಸುಮಾ ಅವರು ಕಮ್ಯೂನಿಸ್ಟ್ ಪಾರ್ಟಿ ಮತ್ತು ಸೌತ್ ಆಫ್ರಿಕನ್ ಇಂಡಿಯನ್ ಕಾಂಗ್ರೆಸ್ ನಾಯಕರ ಜೊತೆಗೂಡಿ ಸಂಯುಕ್ತರಂಗ ಸ್ಥಾಪಿಸಿದರು. ಪಾಸ್ ಕಾಯ್ದೆ ವಿರುದ್ಧ ಹೋರಾಡುವುದು ಈ ಸಂಯುಕ್ತರಂಗದ ಉದ್ದೇಶವಾಗಿತ್ತು.

1946ರ ಘೆಟ್ಟೊ ಮಸೂದೆ ಭಾರತೀಯರನ್ನು ಕೂಡ ಕೆಲ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸುವ ಉದ್ದೇಶ ಹೊಂದಿತ್ತು. ಡರ್ಬಾನ್‌ನಲ್ಲಿನ ಭಾರತೀಯರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಜೊಹಾನ್ಸ್‌ಬರ್ಗ್‌ನಲ್ಲಿ ಇದರ ವಿರುದ್ಧ ಸಂಘಟನಾತ್ಮಕ ಕೆಲಸಗಳು ನಡೆದವು. ಕಾನೂನು ಶಿಕ್ಷಣದಲ್ಲಿ ನೆಲ್ಸನ್‌ಮಂಡೇಲಾ ಅವರ ಸಹಪಾಠಿಗಳಾಗಿದ್ದ ಇಸ್ಮಾಯಿಲ್ ಮೀರ್ ಮತ್ತು ಜಿ.ಎನ್. ಸಿಂಗ್ ಅವರು ಘೆಟ್ಟೊ ಮಸೂದೆ ವಿರುದ್ಧ ಭಾರತೀಯರು ನಡೆಸಿದ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದರು. ಟ್ರಾನ್ಸ್‌ವಾಲ್ ಮತ್ತು ನತಾಲ್‌ನಲ್ಲಿನ ಇಂಡಿಯನ್ ಕಾಂಗ್ರೆಸ್ ಘಟಕಗಳು ಪ್ರಾರಂಭಿಸಿದ ಸತ್ಯಾಗ್ರಹದ ಮುಂಚೂಣಿಯಲ್ಲಿದ್ದರು.

ನೆಲ್ಸನ್ ಮಂಡೇಲಾ ಅವರು ಕೆಲಕಾಲ ಇಸ್ಮಾಯಿಲ್ ಮೀರ್ ಅವರ ಫ್ಲಾಟ್‌ನಲ್ಲಿ ವಾಸವಾಗಿದ್ದರು. ಭಾರತೀಯರ ಬಗ್ಗೆ ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಅವರ ಹೋರಾಟಗಳ ಬಗ್ಗೆ ಮೀರ್ ಅವರಿಂದ ತಿಳಿದುಕೊಳ್ಳಲು ನೆಲ್ಸನ್ ಉತ್ಸುಕರಾಗಿದ್ದರು.

## ಓದು ಪತ್ಯ

# 'ಅಸ್ಪೃಶ್ಯತೆ' ಅಂದರೆ ವರ್ಣಭೇದದ ಮುತ್ತಾತ

**–ದೇವನೂರು ಮಹಾದೇವ**

ಮೊದಲಿಗೆ, ದಕ್ಷಿಣ ಆಫ್ರಿಕಾ ಸರ್ಕಾರದ ಪ್ರತ್ಯೇಕತಾ ಅಪಾರ್ಥೈಡ್ (ವರ್ಣಭೇದ) ಕಾನೂನುಗಳು ಕೊನೆಗೊಳ್ಳುವಂತಾಗಲು ಸತತವಾಗಿ ಪ್ರಯತ್ನಿಸಿದ ವಿಶ್ವಸಂಸ್ಥೆಯನ್ನೂ ಈ ಪ್ರಯತ್ನದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಭಾರತವನ್ನೂ ಕೃತಜ್ಞತೆಯಿಂದ ನೆನೆಯುವೆ. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ಕಾನೂನುಗಳು ಕೊನೆಯಾದುದರಿಂದ ಪ್ರತ್ಯೇಕತೆ ತಾರತಮ್ಯಗಳನ್ನು ಕಾನೂನುಗೊಳಿಸಿ, ಕುಬ್ಜರಾಗಿದ್ದ ಅಲ್ಲಿನ ಬಿಳಿಯರ ಘನತೆ ಹೆಚ್ಚಿದಂತಾಯ್ತು ಹಾಗೂ ಸಮಾನತೆಯ ಕಡೆಗೆ ಒಂದು ಹೆಜ್ಜೆ ಇಟ್ಟಂತಾಯ್ತು.

ಈಗ ಜನಾಂಗೀಯವಾದ, ಜನಾಂಗೀಯ ಭೇದಕ್ಕೆ ಸಂಬಂಧಿಸಿದ ವಿಶ್ವಸಂಸ್ಥೆಯ ಮೂರನೆಯ ವಿಶ್ವ ಸಮ್ಮೇಳನವು ಆಫ್ರೀಕಾದ ಡರ್ಬಾನ್‌ನಲ್ಲಿ ನಡೆಯಲಿದೆ. 'ಇರುವುದೊಂದೇ ಜನಾಂಗ–ಮಾನವ ಜನಾಂಗ' ಎಂಬುದು ಸಮ್ಮೇಳನದ ಗ್ರಹಿಕೆಯಾಗಿದೆ. ಈ ಮೂರನೆಯ ಸಮ್ಮೇಳನವು 'ಜನಾಂಗ' ಎಂಬ ಪದವನ್ನು ಜನಪ್ರಿಯ ಮಾನವ ಶಾಸ್ತ್ರಜ್ಞರ ಶಾರೀರಿಕ ಲಕ್ಷಣದ ಸಂಕುಚಿತಾರ್ಥದಲ್ಲಿ ಬಳಸದೆ ವಿಶಾಲವಾದ ಅರ್ಥದಲ್ಲಿ ಗ್ರಹಿಸಿದೆ. ಮಾನವ ಜನಾಂಗದೊಳಗಿನ ಸಾಂಸ್ಥಿಕ ತಾರತಮ್ಯ ನಿವಾರಣೆಯ ಕಡೆಗೆ ಹೆಚ್ಚು ಗಮನ ಕೊಡಲಾಗಿದೆ. ಜೊತೆಗೆ ಈ ಸಮ್ಮೇಳನದ ಚರ್ಚೆಯ ವ್ಯಾಪ್ತಿಯಲ್ಲಿ Descent (ಹುಟ್ಟಿನಿಂದಲೇ ತಾರತಮ್ಯ) ಸೇರ್ಪಡೆಯಾಗಿದೆ.

ಭಾರತದಲ್ಲಿ ಚಾತುರ್ವರ್ಣ ವ್ಯವಸ್ಥೆ ಇದ್ದಾಗಲೂ ಆ ವ್ಯವಸ್ಥೆಯಿಂದ ಆಚೆ ನೂಕಲ್ಪಟ್ಟು ವರ್ಣಬಾಹ್ಯರಾದವರು, ಜಾತಿ ಪದ್ಧತಿಯಿಂದಲೂ ಆಚೆ ನೂಕಲ್ಪಟ್ಟು ಜಾತಿಹೀನ outcaste ಆದವರು, ಬಹಿಷ್ಕೃತರು ಅಸ್ಪೃಶ್ಯರು. ಆದ್ದರಿಂದ ಹುಟ್ಟು ಕಾರಣವಾಗಿ ಸಾಮಾಜಿಕ ವ್ಯವಸ್ಥೆಯಿಂದಲೇ ಹೊರಹಾಕಲ್ಪಟ್ಟು 'ಹೀನವೃತ್ತಿ'ಯ ಕಾರಣದಿಂದಲೂ ಪ್ರತ್ಯೇಕತೆ ಭೇದ ನಿರ್ಬಂಧಗಳಿಗೆ ಒಳಗಾಗಿರುವ ಭಾರತದ ಅಸ್ಪೃಶ್ಯ ಸಮುದಾಯದ ಸಮಸ್ಯೆಯೂ ವಿಶ್ವಸಂಸ್ಥೆಯ ಸಮ್ಮೇಳನದಲ್ಲಿ ಚರ್ಚಿತವಾಗಬೇಕಾಗುತ್ತದೆ. ಆದರೆ ಇದಕ್ಕೆ ಭಾರತ ಸರ್ಕಾರ ಒಪ್ಪುತ್ತಿಲ್ಲ. ಆಫ್ರಿಕಾದ ವರ್ಣಭೇದವನ್ನು

ವಿಶ್ವಸಂಸ್ಥೆಯಲ್ಲಿ ಚರ್ಚಿಸಲು ಒಪ್ಪುವ ಭಾರತ ಸರ್ಕಾರ ಅದೇ ತನ್ನೊಳಗಿನ ಅಸ್ಪೃಶ್ಯತೆಯನ್ನು ಚರ್ಚಿಸಲು ಒಪ್ಪುತ್ತಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಬಣ್ಣ ಮತ್ತು ವಸಾಹತುಶಾಹಿ ಕಾರಣಕ್ಕಾಗಿ ಉಂಟಾದ ತಾರತಮ್ಯವಾದ ವರ್ಣಭೇದವನ್ನೂ ಹಾಗೂ ಭಾರತದಲ್ಲಿ ಜಾತಿಪದ್ಧತಿ ಕಾರಣಕ್ಕಾಗಿ ಉಂಟಾದ ತಾರತಮ್ಯವಾದ ಅಸ್ಪೃಶ್ಯತೆಯನ್ನೂ ಹೋಲಿಸಿ ನೋಡಿಯಾದರೂ ಸರ್ಕಾರ ಕಣ್ಣುತೆರೆಯಲಿ.

1948ರಿಂದ 1990ರವರೆಗೆ ದಕ್ಷಿಣ ಆಫ್ರಿಕಾದ ಬಿಳಿಯರ ಸರ್ಕಾರವು ಅಲ್ಲಿನ ಕರಿಯರನ್ನು ನಿಷೇಧ, ಭೇದ, ನಿಬಂಧ, ಪ್ರತ್ಯೇಕತೆಗೆ ಒಳಪಡಿಸಲು ರಚಿಸಿದ ಕೆಲವು ಕಾನೂನು ಕಟ್ಟಳೆಗಳು ಹೀಗಿವೆ: 1. ಕರಿಯರ ವಾಸಸ್ಥಾನ, ಶಾಲೆಗಳಿಗೆ ಪ್ರತ್ಯೇಕ ಸ್ಥಳ ನಿಗದಿ ಕಾನೂನು. 2. ಬಿಳಿ ಕರಿಯರ ನಡುವೆ ಮದುವೆ ಸಂಬಂಧ ನಿಷೇಧ ಕಾನೂನು, 3. ಹೊಟೇಲ್ ಕ್ಲಬ್ ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಕರಿಯರ ಪ್ರವೇಶ ನಿಷೇಧ ಕಾನೂನು, 4. ಕರಿಯ ವ್ಯಕ್ತಿ ಪಾಸ್ ಹೊಂದಿರಬೇಕೆಂಬ ನಿಯಮ. 5. ಭಾರತದ ಅಸ್ಪೃಶ್ಯರ ಒಳಪಂಗಡಗಳ ವಿಂಗಡಣೆಯಂತೆಯೇ ಕರಿಯರನ್ನು ಮೂರು ಗುಂಪಾಗಿ ಪ್ರತ್ಯೇಕಿಸುವ ಕಾನೂನು 6. ಸಾರ್ವಜನಿಕ ರಾಜಕೀಯ ಹಕ್ಕು ನಿರಾಕರಣೆ... ಇತ್ಯಾದಿ.

ಭಾರತದ ಚರಿತ್ರೆಯಲ್ಲಿ ಹೆಚ್ಚೂ ಕಮ್ಮಿ ಇಂಥವೇ ಕಾನೂನು ಕಟ್ಟಳೆಗಳು ಇರಲಿಲ್ಲವೇ? ವರ್ಣಭೇದ ಕಾನೂನಿನಲ್ಲಿ ಕರಿಯರಿಗೆ ಪ್ರತ್ಯೇಕ ಶಾಲೆ ಶಿಕ್ಷಣವಾದರೂ ಇತ್ತು. ಭಾರತದಲ್ಲಿ ಅಸ್ಪೃಶ್ಯರು ಶೂದ್ರರು ಶಿಕ್ಷಣ ಪಡೆಯುವುದೂ ಶಿಕ್ಷಾರ್ಹ ಅಪರಾಧವಾಗಿತ್ತು. ಆಗ ಆಡಳಿತ ನಿರ್ವಹಣೆ ಎಂದರೆ ಚಾತುರ್ವರ್ಣ ಜಾತಿಪದ್ಧತಿಯ ತಾರತಮ್ಯಗಳು ಚಾಚೂ ತಪ್ಪದೆ ನಡೆಯುವಂತೆ ನೋಡಿಕೊಳ್ಳುವುದೇ ಆಗಿತ್ತು. ಆದರೆ ದಕ್ಷಿಣ ಆಫ್ರಿಕಾದ ವರ್ಣಭೇದವು ಹಸಿಯಾದ ಗಾಯ, ಇತ್ತೀಚಿನದು. ಅಲ್ಲಿಂದ ತೊಟ್ಟಿಕ್ಕುತ್ತಿರುವ ರಕ್ತ ನಮಗೆ ಕಾಣಿಸುತ್ತಿದೆ. ವರ್ಣಭೇದದ ತಾರತಮ್ಯ ಕಾನೂನುಗಳನ್ನು ಪ್ರತಿಭಟಿಸಿದ್ದಕ್ಕೆ ಸಾವಿರಾರು ಜನ ಕರಿಯರ ಹತ್ಯೆಯಾಯ್ತು. ಹತ್ತಾರು ಸಾವಿರ ಜನರು ಜೈಲಲ್ಲಿ ಕೊಳೆಯುವಂತಾಯ್ತು. ಪ್ರತಿಭಟನೆ ತೀವ್ರಗೊಂಡಾಗ ಒಟ್ಟಿಗೆ ಹತ್ತಾರು ಜನ ಕರಿಯರು ಸೇರುವುದೂ ಅಪರಾಧ ಎನ್ನುವ ಮಟ್ಟಕ್ಕೆ ಹೋಯ್ತು. ಕಾನೂನೇ ಅಪರಾಧಿಯಾದಾಗ ಏನೆಲ್ಲಾ ಅವಾಂತರ ಆಗಬಹುದೋ ಅವೆಲ್ಲಾ ಆಯ್ತು.

ಈ ಭೀಕರತೆಯನ್ನು ನೆನೆಸಿಕೊಂಡಾಗಲೆಲ್ಲಾ ನನಗೆ ಪುರಾತನ ಭಾರತದಲ್ಲಿ

ಚಾತುರ್ವರ್ಣ ಜಾತಿಪದ್ಧತಿಯಿಂದ ಒಂದು ಜನಸಮುದಾಯವನ್ನು ಆಚೆಗೆ ನೂಕಿ, ಎಸೆದು, ಅಸ್ಪೃಶ್ಯತೆಗೆ ಒಪ್ಪಿಸಿ ಒಗ್ಗಿಸಲು ನಡೆದಿರಬಹುದಾದ ಬಲಾತ್ಕಾರ, ಕ್ರೌರ್ಯ ಹಿಂಸೆ ಹತ್ಯೆಗಳೇ ದಕ್ಷಿಣ ಆಫ್ರಿಕಾದಲ್ಲಿ ವರ್ತಮಾನದಲ್ಲಿ ವರ್ಣಭೇದದ ರೂಪದಲ್ಲಿ ಪುನರಾವರ್ತನೆ ಆದಂತೆ ಕಾಣುತ್ತದೆ.

ಆನೆ ಹಿಡಿಯುವ ಖೆಡ್ಡಾ ನಿಮಗೆ ತಿಳಿದಿರಬಹುದು. ಕಾಡಲ್ಲಿ ದೊಡ್ಡ ಹಳ್ಳ ಮಾಡಿ. ಕಡ್ಡಿ ಸೊಪ್ಪು ಸದೆಯಲ್ಲಿ ಹಳ್ಳದ ಮೇಲ್ಭಾಗವನ್ನು ಛಾವಣಿಯಂತೆ ಮಾಡಿ ಹಳ್ಳ ಕಾಣದಂತೆ ಮಾಡುತ್ತಾರೆ. ನಂತರ ಗದ್ದಲ ಮಾಡಿ ಆ ಹಳ್ಳದತ್ತ ಆನೆ ಓಡಾಡುವಂತೆ ಮಾಡುತ್ತಾರೆ. ಹಳ್ಳದತ್ತ ಹೋದ ಆನೆ, ಹಳ್ಳ ಎಂದು ಅರಿಯದೆ ಹಳ್ಳಕ್ಕೆ ಬೀಳುತ್ತದೆ. ಬಿದ್ದ ಆನೆಗೆ ಸರಪಳಿ ಕಟ್ಟಿ ಬಂಧಿಸುತ್ತಾರೆ. ಬಂಧಿಸಿದ ಆನೆಯನ್ನು ಮೇಲೆತ್ತಿ, ಹೊಡೆದು ಬಡಿದು ಹಿಂಸಿಸಿ ಪಳಗಿಸುತ್ತಾರೆ. ಪಳಗಿದ ಆನೆ ತನ್ನ ಸಹಜ ಸ್ವಭಾವ ಮರೆತು ಪಳಗಿಸಿದವನ ನಮ್ರ ಸೇವಕನಾಗುತ್ತದೆ. ಸೇವಕತನವೇ ಅದರ ಸ್ವಭಾವವಾಗುತ್ತದೆ. ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆಯನ್ನು ಹಳ್ಳಕ್ಕೆ ಬೀಳಿಸಲಾಯ್ತು. ಬಂಧಿಸಿಯೂ ಆಯ್ತು. ಹೊಡೆದು, ಬಡಿದು ಹಿಂಸಿಸಿ ಪಳಗಿಸಲು ಪ್ರಯತ್ನವನ್ನೂ ಮಾಡಲಾಯ್ತು. ಆದರೆ ದಕ್ಷಿಣ ಆಫ್ರಿಕಾದ ಕರಿಯರೆಂಬ ಆನೆ, ಪಳಗಲಿಲ್ಲ. ಪಳಗದಿದ್ದಕ್ಕೆ ಹೆಚ್ಚಿನ ಹಿಂಸೆ, ಕೊಲೆ ಸುಲಿಗೆ ದೌರ್ಜನ್ಯ ಎದುರಿಸಬೇಕಾಯ್ತು. ಆದರೆ ಭಾರತದ ಅಸ್ಪೃಶ್ಯರೆಂಬ ಆನೆ ಪಳಗಿಬಿಟ್ಟಿದೆ. ಇದು ಪುರಾತನ ಕಾಲದಲ್ಲೇ ಪಳಗಿಸಲ್ಪಟ್ಟ ಕಾರಣ, ಆ ಕ್ರೌರ್ಯ ನಮಗೆ ಕಾಣುತ್ತಿಲ್ಲ. ಜೊತೆಗೆ ಪಳಗಿಸಿದವನಿಗೂ ಈಗ ತಾನು ಪಳಗಿಸಿದವನು ಎಂಬ ನೆನಪಿಲ್ಲ. ಪಳಗಿಸಲ್ಪಟ್ಟವನಿಗೂ ತಾನು ಪಳಗಿಸಲ್ಪಟ್ಟವನು ಎಂಬ ನೆನಪಿಲ್ಲ. ತಾರತಮ್ಯವು ಸಮಾಜದಲ್ಲಿ ಆಂತರಿಕವಾಗಿ ವ್ಯಾಪಿಸಿ ಸ್ವಭಾವವಾಗಿ ಸಹಜ ಪದ್ಧತಿಯಾಗಿಬಿಟ್ಟಿದೆ.

ಯಾವುದು ಹೆಚ್ಚು ದಾರುಣವಾದುದು? ಇದನ್ನು ಹೇಗೆ ವಿವರಿಸೋಣ? ಪ್ರಾಥಮಿಕ ಹಂತದ ಅಸ್ಪೃಶ್ಯತೆಯನ್ನು ವರ್ಣಭೇದ ಎಂದೋ ಅಥವಾ ವರ್ಣಭೇದದ ಮುತ್ತಾತ ಅಸ್ಪೃಶ್ಯತೆ ಎಂದೊ? ಒಟ್ಟಿನಲ್ಲಿ ವರ್ಣಭೇದದಂತಹ ಪ್ರತ್ಯೇಕತೆ, ನಿರ್ಬಂಧ, ನಿಷಿದ್ಧ ಭೇದಗಳು ಸಾವಿರಾರು ವರ್ಷ ಬದುಕುಳಿದು ಧರ್ಮ, ಶಾಸ್ತ್ರ, ದೇವರುಗಳನ್ನೂ ಬಳಸಿಕೊಂಡು ಆಚರಣೆಯಾಗಿಬಿಟ್ಟರೆ ಅದೇ ಅಸ್ಪೃಶ್ಯತೆಯಾಗಿಬಿಡಬಹುದೇನೋ.

ಈ ಎರಡರ ನಡುವೆ ಭಿನ್ನತೆಯನ್ನು ಹೇಳಲೇಬೇಕೆಂದರೆ ಒಂದು ಭಿನ್ನತೆ

ಎದ್ದು ಕಾಣುತ್ತದೆ. ವರ್ಣಭೇದದಲ್ಲಿ ಬಿಳಿಯ ಮತ್ತು ಕರಿಯರ ನಡುವಿನ ದೈಹಿಕ ಬಣ್ಣದಿಂದಾಗಿ ನೋಡಿದಾಕ್ಷಣ ಬಲಿಪಶುವನ್ನು ಗುರುತಿಸಬಹುದಿತ್ತು. ಆದರೆ ಅಸ್ಪೃಶ್ಯತೆಯಲ್ಲಿ ಎಲ್ಲರೂ ದೈಹಿಕವಾಗಿ ಒಂದೇ ರೀತಿ ಇದ್ದುದರಿಂದ ಬಲಿಪಶುವನ್ನು ಗುರುತಿಸಲು ಕಷ್ಟಪಡಬೇಕಾಗುತ್ತಿತ್ತು. ಅದಕ್ಕಾಗಿ ಬಲಿಪಶು ಅಸ್ಪೃಶ್ಯರನ್ನು ಗುರುತಿಸಲು, ಭಾರತದಲ್ಲಿ ಹುಟ್ಟಿಕೊಂಡ ಕಟ್ಟುಪಾಡುಗಳು ತಾರತಮ್ಯದ ಎಲ್ಲೆಯನ್ನೇ ವಿಸ್ತರಿಸಿಬಿಟ್ಟಿದೆ! ಅಸ್ಪೃಶ್ಯನ ಹೆಸರು, ವೇಷ, ಭಾಷೆ, ನಡೆ, ಆಹಾರ, ಇವುಗಳಿಂದಲೇ ಬಲಿಪಶುವನ್ನು ಗುರುತಿಸುವ ಲಕ್ಷಣಶಾಸ್ತ್ರ ಭಾರತದಲ್ಲಿ ಹುಟ್ಟಿಬಿಟ್ಟಿತು. ಒಂದು ಉದಾಹರಣೆ ಕೊಡುವೆ –1936ನೆಯ ನವೆಂಬರ್ 4ರ 'ಮುಂಬೈ ಸಮಾಚಾರ್' ಪತ್ರಿಕೆಯ ವರದಿ ಹೀಗಿದೆ: 'ಮಲಬಾರಿನ ಉಟ್ಟಂಪಾಲ ಎಂಬಲ್ಲಿ 17 ವರ್ಷ ವಯಸ್ಸಿನ ಶಿವರಾಮನ್ ಎಂಬ ಅಸ್ಪೃಶ್ಯ ಎಜವ ಜಾತಿಯವನು ಉಪ್ಪು ಕೊಳ್ಳಲು ಸವರ್ಣೀಯನೊಬ್ಬನ ಅಂಗಡಿಗೆ ಹೋಗಿ ಮಲಯಾಳಂ ಭಾಷೆಯಲ್ಲಿ 'ಉಪ್ಪು'ಬೇಕೆಂದು ಕೇಳಿದ. ಮಲಬಾರಿನ ಸಂಪ್ರದಾಯದಂತೆ ಸವರ್ಣೀಯ ಹಿಂದೂಗಳು ಮಾತ್ರ ಉಪ್ಪಿಗೆ 'ಉಪ್ಪು' ಎಂಬ ಪದ ಬಳಸಬಹುದು. ಅಸ್ಪೃಶ್ಯನಾಗಿ ಅವನು 'ಪುಲಿಚಾತನ್' ಎಂಬ ಪದ ಬಳಸಬೇಕಿತ್ತು. ಇದಕ್ಕೆ ಮೇಲ್ಜಾತಿಯ ಅಂಗಡಿಯವನು ಕೋಪಗೊಂಡು ಶಿವರಾಮನ್‌ನನ್ನು ಚೆನ್ನಾಗಿ ಥಳಿಸಿದನೆಂದೂ ಮತ್ತು ಅದರಿಂದ ಆತ ಮರಣ ಹೊಂದಿದನೆಂದೂ' ವರದಿಯಾಗಿದೆ. ಇಂಥವು ಸಾವಿರಾರು.

ಈಗ ಹಳೆಯದೆಲ್ಲಾ ಯಾಕೆ ಎಂಬ ಪ್ರಶ್ನೆ ಏಳುತ್ತದೆ. ದಕ್ಷಿಣ ಆಫ್ರಿಕಾವು 1990ರಲ್ಲಿ ವರ್ಣಭೇದ ಕಾನೂನು ಹಿಂತೆಗೆದುಕೊಂಡಾಕ್ಷಣ ತಾರತಮ್ಯವು ತನ್ನಷ್ಟಕ್ಕೆ ತಾನೇ ಇಲ್ಲವಾಯಿತು ಎಂದು ಹೇಳಲಾಗದು. ಆ ತಾರತಮ್ಯದ ಕಾನೂನುಗಳು ಉಂಟು ಮಾಡಿದ ತಾರತಮ್ಯದ ಅವಾಂತರಗಳು ಸಮಾಜದಲ್ಲಿ ಮುಂದುವರಿಯುತ್ತಿರುತ್ತವೆ. ಜನರು ಸಾಮಾನ್ಯವಾಗಿ ಕಾನೂನಿಗಿಂತಲೂ ಸಂಪ್ರದಾಯ ರೂಢಿಗಳನ್ನೇ ಪರಿಣಾಮಕಾರಿಯಾಗಿ ಆಚರಿಸುತ್ತಾರೆ. ಭಾರತದಲ್ಲಿ ಈ ಪ್ರವೃತ್ತಿ ಭೀಕರವಾಗಿದೆ. ಉದಾಹರಣೆಗೆ ಭಾರತದ ಅಸ್ಪೃಶ್ಯರು ತಲೆಯ ಮೇಲೆ ಮಲಹೊರುವ ಪದ್ಧತಿಯ ನಿಷೇಧ ಕಾನೂನು ಇದ್ದರೂ ಇಂದಿಗೂ ಜನಜೀವನದಲ್ಲಿ ಆಚರಣೆಯಲ್ಲಿ ಇಲ್ಲವೇ? ಈ ಕಾರಣಕ್ಕೆ ಅವರು ಪ್ರತ್ಯೇಕಗೊಂಡಿಲ್ಲವೇ? ಹೀಗಿದ್ದೂ ಯಾಕೆ ಸರ್ಕಾರ ವಿಶ್ವ ಸಂಸ್ಥೆಯಲ್ಲಿ

ಅಸ್ಪೃಶ್ಯತೆಯ ಸಮಸ್ಯೆಯನ್ನು ಚರ್ಚಿಸಲು ಹಿಂದೇಟು ಹಾಕುತ್ತಿದೆ?

ಜೊತೆಗೆ ದಕ್ಷಿಣ ಆಫ್ರಿಕಾದಲ್ಲಿ ಕಷ್ಟನಷ್ಟ ಅನುಭವಿಸಿದ ಕರಿಯರಿಗೆ ದಾಖಲಾತಿಗಳು ಇರುವುದರಿಂದ ಅದಕ್ಕೆ ಅಲ್ಲಿ ಪರಿಹಾರ ಕೇಳುವ ಸಾಧ್ಯತೆ ಹುಟ್ಟಿಕೊಳ್ಳಬಾರದು. ಆದರೆ ಭಾರತದಲ್ಲಿ ಅಸ್ಪೃಶ್ಯರ ಆಸ್ತಿಪಾಸ್ತಿ ನಷ್ಟದ ದಾಖಲಾತಿಯ ಮಾತಿರಲಿ. ಅದರ ನೆನಪುಗಳೂ ಇಲ್ಲವಾದುದರಿಂದ ಪರಿಹಾರದ ಸಮಸ್ಯೆ ಇಲ್ಲಿ ಬರಲಾರದು. ಆದರೂ ಅಸ್ಪೃಶ್ಯತೆಯ ಸಮಸ್ಯೆಯನ್ನು ಬಗೆಹರಿಸಲು ಭಾರತಕ್ಕೆ ಹೆಚ್ಚು ಸವಾಲುಗಳಿವೆ ಎಂದು ಅನ್ನಿಸುತ್ತದೆ. ಯಾಕೆಂದರೆ ಅಂತಃಸಾಕ್ಷಿಯನ್ನು ಸಾಯಿಸಿ ತಾರತಮ್ಯವನ್ನು ಸುಪ್ತ ಮನಸ್ಸಿಗಿಳಿಸಲು ದೇವರು.ಧರ್ಮ, ಶಾಸ್ತ್ರಗಳನ್ನೂ ದುರುಪಯೋಗಪಡಿಸಿಕೊಂಡ ಪಾಪವು ಭಾರತದ ನೆಲದಲ್ಲಿ ನಡೆದಿದೆ. ಇಲ್ಲಿ ಧರ್ಮವೂ ಅಪರಾಧಿ. ರೋಮನ್ ಕಾನೂನು ಮನುಷ್ಯನನ್ನು ಗುಲಾಮನನ್ನಾಗಿಸಿದರೆ, ರೋಮನ್ ಧರ್ಮ ಅದನ್ನು ಒಪ್ಪುವುದಿಲ್ಲ. ಆದರೆ ಭಾರತದಲ್ಲಿ ಧರ್ಮಗಳೇ ಮುಂದಾಗಿ ನಿಂತು ತಾರತಮ್ಯದ ಕಾನೂನು ಮಾಡಿಸಿದ ಇತಿಹಾಸವಿದೆ. ಹಾಗಾಗಿ ಇಲ್ಲಿ 'ಮಾದಿಗ ಸತ್ತ, ಮೈಲಿಗೆ ಕಮ್ಮಿಯಾಯಿತು' ಎಂಬಂಥ ಗಾದೆಗಳು ಹುಟ್ಟಿವೆ. ಇಂಥ ಮನಃಸ್ಥಿತಿಯೇ ಭಾರತದಲ್ಲಿ ವರ್ಣ ವರ್ಣಗಳ ನಡುವೆ ಮದುವೆಯಾದಾಗಲೂ ಈ ಕೂಡುವಿಕೆ ಕೂಡ ಭಾರತವನ್ನು ಐಕ್ಯದ ಕಡೆಗೆ ನಡೆಯದಂತೆ ಮಾಡಿತು. ಬ್ರಾಹ್ಮಣ ಹೆಣ್ಣು ಶೂದ್ರ ಗಂಡಿಗೆ ಹುಟ್ಟಿದ ಸಂತಾನವನ್ನು ಅಸ್ಪೃಶ್ಯನನ್ನಾಗಿಸಿ ಸಮಾಜ ಆಚೆಗೆ ಎಸೆದುಬಿಟ್ಟಿತು. ಮತ್ತಷ್ಟು ಪ್ರತ್ಯೇಕತೆಯನ್ನು ಉಂಟು ಮಾಡಿತು.

ಹೋಲಿಕೆಗೆ ನೋಡಿ–ಅಮೆರಿಕಾದಲ್ಲಿ ಕರಿಯರ ಶಿಕ್ಷಣಕ್ಕೆಂದು ಬಿಳಿಯರು ಉಯಿಲು ಬರೆದು ಹಣ ಮುಡಿಪಿಟ್ಟ ಉದಾಹರಣೆಗಳಿವೆ. 1931ರಲ್ಲಿ ಪ್ರಕಟವಾಗಿರುವ ನೀಗ್ರೋ ಇಯರ್‌ಬುಕ್‌ನಲ್ಲಿ ಈ ವಿವರಗಳಿವೆ. 15 ಲಕ್ಷ ಡಾಲರ್ ನೀಡುವ ಹಾರ್ಕ್ನೆಸ್, 1,60,000 ಡಾಲರ್ ನೀಡಿರುವ ಟ್ಯಾಟನ್ ಮುಂತಾಗಿ ನೀಗ್ರೋ ಶಿಕ್ಷಣಕ್ಕೆ ಉಯಿಲು ಬರೆದವರು ಸುಮಾರು ಜನ ಬಿಳಿಯರು ಸಿಗುತ್ತಾರೆ. ಇದಲ್ಲದೆ ಚರ್ಚ್ ಸ್ವಯಂ ತಾನೇ ಕರಿಯರ ಶಿಕ್ಷಣಕ್ಕೆ ಮುಂದಾಗುತ್ತದೆ. 1865ರಿಂದ 1930ರ ತನಕ ಕರಿಯರ ಶಿಕ್ಷಣ ಅಭಿವೃದ್ಧಿಗಾಗಿ ಧಾರ್ಮಿಕ ಮತ್ತು ಮಾನವತಾವಾದಿ ಸಂಸ್ಥೆಗಳು ಖರ್ಚು ಮಾಡಿದ ಒಟ್ಟು ಹಣ 13.5 ಕೋಟಿ ಡಾಲರ್‌ಗಳೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ 8.5 ಕೋಟಿಯಷ್ಟು ಡಾಲರ್‌ಗಳು ಬಿಳಿಯರ ವಂತಿಗೆಯಿಂದ ಬಂದದ್ದಾಗಿದೆ. ಭಾರತದಲ್ಲಿ ಇದನ್ನು

ನೆನೆಸಿಕೊಳ್ಳಲೂ ಸಾಧ್ಯವಿಲ್ಲ. ಡಾ. ಅಂಬೇಡ್ಕರ್‌ರವರು 1932ರಲ್ಲಿ ಹರಿಜನ ಸೇವಕ ಸಂಘದ ಠಕ್ಕರ್‌ಬಾಪಾ ಅವರಿಗೆ ಬರೆದ ಪತ್ರದಲ್ಲಿ 'ಸವರ್ಣೀಯ ಹಿಂದೂಗಳು ಅಸ್ಪೃಶ್ಯರನ್ನು (ಕರಿಯರಂತೆ) ಸೇವಕರನ್ನಾಗಿಯಾದರೂ ಮಾಡಿಕೊಂಡು ಮನೆಯೊಳಕ್ಕೆ ಬಿಟ್ಟುಕೊಳ್ಳುವಂತಾಗಲೂ ಪ್ರೇರಣೆ ನೀಡಿರಿ' ಎಂದು ವಿನಂತಿಸುತ್ತಾರೆ. ಈ ವಿನಂತಿ ಯಾತನಾಮಯವಾಗಿ ಕಂಡರೂ ಭಾರತದ ಕಠೋರವಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಇದೂ ಪ್ರಗತಿಯ ಕಡೆಗೆ ಇಟ್ಟ ಒಂದು ಹೆಜ್ಜೆಯಾಗುತ್ತದೆ. ಹಳ್ಳಿಗಾಡಿನಲ್ಲಿ ಸವರ್ಣೀಯರ ಮನೆಗೆ ಅಸ್ಪೃಶ್ಯರ ಪ್ರವೇಶ ಇಂದಿಗೂ ಕನಸಿನ ಮಾತು. ಭಾರತದ ಮುಕ್ಕಾಲು ಭಾಗವಾಗುವ ಹಳ್ಳಿಗಾಡಿನಲ್ಲಿ ಸಮಾಜದಿಂದ ಹೊರಕ್ಕೆ ಎಸೆಯಲ್ಪಟ್ಟ ಅಸ್ಪೃಶ್ಯರ ನಿರ್ಬಂಧ, ನಿಷೇಧ, ಪ್ರತ್ಯೇಕತಾ ಭೇದಗಳು ಇನ್ನೂ ಜೀವಂತವಾಗಿವೆ. ಅಸ್ಪೃಶ್ಯ ಜನಾಂಗವು ಸಮಾನತೆ ಮತ್ತು ಘನತೆಯ ಕಡೆ ಹೆಜ್ಜೆ ಇಟ್ಟಾಗಲೆಲ್ಲಾ ಅಸಹನೆ ಉಂಟಾಗಿ ಹಿಂಸೆ, ಕೊಲೆ, ಲೂಟಿ ಸ್ಫೋಟಿಸುತ್ತದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಭಾರತಮಾತೆ ತನ್ನ ಒಡಲಲ್ಲಿ ಅಸ್ಪೃಶ್ಯತೆಯನ್ನಿಟ್ಟುಕೊಂಡು ಮೈಲಿಗೆಯಾಗಿದ್ದಾಳೆ. ಎಷ್ಟು ಬೇಗ ಶುದ್ಧಿಯಾದರೆ ಅಷ್ಟು ಬೇಗೆ ಒಳ್ಳೆಯದು. ಇದಾಗಲೂ ಭಾರತ ಸರ್ಕಾರ ತನ್ನ ಜಾಣಕುರುಡು ಕೈಬಿಡಬೇಕಾಗಿದೆ. ವಿಶ್ವಸಂಸ್ಥೆಯಲ್ಲಿ ನಡೆಯುವ "ಹುಟ್ಟಿನಿಂದಲೆ ತಾರತಮ್ಯ" (Descent) ಚರ್ಚೆಯಲ್ಲಿ, ಹುಟ್ಟಿನಿಂದಲೆ ತಾರತಮ್ಯವಾದ ಅಸ್ಪೃಶ್ಯತೆಯನ್ನು ಚರ್ಚೆಗಿಟ್ಟು ಭಾರತ ಸರ್ಕಾರ ಮುಖಾಮುಖಿಯಾಗಬೇಕಾಗಿದೆ.

ಕೊನೆಯದಾಗಿ ಡಾ. ಅಂಬೇಡ್ಕರ್ ಮತ್ತು ಗಾಂಧೀಜಿ ಈ ಒಂದು ವಿಚಾರದಲ್ಲಿ ಒಂದೇ ಅಭಿಪ್ರಾಯವನ್ನು ಹೊಂದಿದ್ದರು. 'ಅಸ್ಪೃಶ್ಯತೆಯ ಸಮಸ್ಯೆ ಅಸ್ಪೃಶ್ಯರ ಸಮಸ್ಯೆ ಅಲ್ಲ' ಎಂದು ಇಬ್ಬರೂ ಭಾವಿಸಿದ್ದರು. ಅಂದರೆ, ಅಸ್ಪೃಶ್ಯರು ಜಾತಿಪದ್ಧತಿಗೆ ಬಲಿಪಶುಗಳು. ಹಾಗಾಗಿ ಸಮಸ್ಯೆ ಇರುವುದು ಅಸ್ಪೃಶ್ಯತೆಯನ್ನು ಆಚರಣೆ ಮಾಡುವವರಲ್ಲ. ಅಂದರೆ, ಯಾರು ಆಚರಣೆ ಮಾಡುತ್ತಾರೋ ಅದು ಅವರ ಸಮಸ್ಯೆ. ಆದರೆ ಇಂದು ಭಾರತದ ಅಂತಃಸಾಕ್ಷಿಯಾದ ಭಾರತದ ಪ್ರಜ್ಞಾವಂತರು, ಲೇಖಕರು, ಕಲಾವಿದರು, ಪತ್ರಕರ್ತರು, ನ್ಯಾಯವಂತರು 'ಅಸ್ಪೃಸ್ಯತೆ ದಲಿತರ ಸಮಸ್ಯೆ' ಎಂದುಕೊಂಡು ಸುಮ್ಮನಿದ್ದಾರೆ. ಇದು ನನ್ನ ಖಿನ್ನತೆಗೆ ಕಾರಣವಾಗಿದೆ.

**–ಎದೆಗೆ ಬಿದ್ದ ಅಕ್ಷರ, ಅಭಿನವ ಪ್ರಕಾಶನ**

# ಘಟಕ – 2
# ಆಶಯ – ಪ್ರವಾಸ

ಅಲೆಮಾರಿ ಜೀವನ ಮನುಷ್ಯನಿಗೆ ಪ್ರಾಣಿಸಂಸ್ಕಾರದ ಪಳೆಯುಳಿಕೆ, ಪೂರ್ವ ವಾಸನೆ ಎಂದು ತೋರುತ್ತದೆ. ದೇಹಕ್ಕೆ ನಿರ್ಬಂಧವಿದ್ದಾಗಲೂ ಮನಸ್ಸಾದರೂ ಅಲೆಮಾರಿಯಾಗುತ್ತದೆ. ದೇಶ, ಜನನೋಡುವ ಕುತೂಹಲ ಪ್ರವಾಸಕ್ಕೆ ಕಾರಣ. ಮನುಷ್ಯನ ಆತ್ಮದಲ್ಲಿಯೇ ಯಾತ್ರೆಯ ಅವಶ್ಯಕತೆಗೆ ಆಧಾರವಿರಬಹುದು ಎನ್ನುತ್ತಾರೆ ಕುವೆಂಪು. "ಮನುಷ್ಯ ಮತ್ತು ನಿಸರ್ಗ ಸಂಬಂಧ ನಾಗರಿಕತೆಯಿಂದ ಬಿರುಕುಬಿಟ್ಟಿದೆ. ಕಂದಕ ಏರ್ಪಟ್ಟಿದೆ. ತೀರ್ಥಯಾತ್ರೆ ನೆಪದಿಂದ ಸ್ವಲ್ಪಕಾಲ ಸಂಬಂಧ ಸ್ಥಾಪನೆ ಪ್ರಯತ್ನವೆ" ಎಂದು ಜಿ.ಎಸ್. ಶಿವರುದ್ರಪ್ಪ ಪ್ರಶ್ನಿಸುತ್ತಾರೆ. "ನನ್ನ ಮಟ್ಟಿಗೆ, ಎಲ್ಲಿಗೋ ಹೋಗಲು ನಾನು ಪ್ರವಾಸ ಮಾಡುವುದಿಲ್ಲ. ಹೋಗುವ ತುಡಿತಕ್ಕಾಗಿ, ನನ್ನದು ಪ್ರವಾಸಕ್ಕಾಗಿ ಪ್ರವಾಸ, ದಿ ಗ್ರೇಟ್ ಆಫೇರ್ ಈಸ್ ಟು ಮೂವ್" ಎನ್ನುತ್ತಾನೆ. ಆರ್.ಎಲ್. ಸ್ವೀವನ್‌ಸನ್ ಜಾರ್ಜ್‌ಮೂರ್ ಎಂಬಾತ "ಮನುಷ್ಯ ತನಗೆ ಬೇಕಾದದ್ದನ್ನು ಹುಡುಕುತ್ತ ಪ್ರಪಂಚವೆಲ್ಲಾ ಸುತ್ತುತ್ತಾನೆ. ಮನೆಗೆ ಹಿಂದಿರುಗಿ ಅದನ್ನು ಕಾಣುತ್ತಾನೆ" ಎಂದರೆ, ವಾಲ್ಟರ್ ಮರ್ಡಾಕ್ "ವಸ್ತು ಸಂಗತಿ–ನೋಟ–ನೋಡಲು ಪ್ರವಾಸ ಮಾಡಿದರೆ, ಹಿಂದಿರುಗಿದಾಗ ಗೆಳೆಯರಿಗೆ ತಲೆ ಕೊರೆಯುತ್ತೀರಿ; ಜನ ನೋಡಲು ಪ್ರವಾಸ ಮಾಡಿದರೆ ಹಿಂದಿರುಗಿದಾಗ ಪ್ರಪಂಚ ಜೀವನಾನುಭವ ತರುತ್ತೀರಿ" ಎಂದಿರುವುದು ಪ್ರವಾಸ ಕಥನದ ಅಂತರ್ಯವನ್ನು ತಿಳಿಸುತ್ತದೆ. ಕೋಶ ಓದುವುದಕ್ಕಿಂತ ದೇಶ ನೋಡುವುದು ಮೇಲು ಎಂಬ ಗಾದೆಯೂ ನೆನಪಾಗುತ್ತದೆ. ಆದ್ದರಿಂದ ಪ್ರವಾಸ ಕಥನ ಎರಡು ಸಂಸ್ಕೃತಿಗಳ ಮುಖಾಮುಖಿಯಾದಾಗಿನ ಅನುಭವ ನಿರೂಪಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿರುವ ಪ್ರವಾಸ ದೃಷ್ಟಿಯ ಹಾಗೂ ಪ್ರವಾಸ ಕಥನದ ಉದ್ದೇಶ, ವೈವಿಧ್ಯವನ್ನೂ ಗಮನಿಸಬೇಕಾಗುತ್ತದೆ.

ಪ್ರವಾಸ ಸಾಹಿತ್ಯ – ಜಿ.ಕೆ. ಮಧ್ಯಸ್ಥ

# ಗಾಂಧೀಜಿಯವರ ಯುರೋಪ್ ಕಿರು ಪ್ರವಾಸ

**–ಡಿ.ಎಸ್. ನಾಗಭೂಷಣ**

ಗಾಂಧೀಜಿಯವರ ಭಾಷಣದ ನಂತರದಲ್ಲೇ ತಾವು ಭಾರತಕ್ಕೆ ಹಿಂದಿರುಗಿದೊಡನೆ ತಮ್ಮ ಬಂಧನ ಖಚಿತ ಎಂಬ ಸುದ್ದಿ ಅವರಿಗೆ ಅಧಿಕೃತ ವಲಯಗಳಿಂದಲೇ ಮುಟ್ಟಿತು. ಈ ಸುದ್ದಿಯನ್ನು ಮಹದೇವ ದೇಸಾಯಿಯವರು ವಲ್ಲಭಭಾಯಿ ಪಟೇಲರಿಗೆ ತಂತಿ ಮೂಲಕ ತಿಳಿಸಿದರು. ಪಟೇಲರು ನಾಯಕರ ಬಂಧನಗಳ ಸರಮಾಲೆಯನ್ನು ಊಹಿಸಿ ಅದಕ್ಕೆ ತಕ್ಕಂತೆ ಕಾಂಗ್ರೆಸನ್ನು ಮುನ್ನಡೆಸುವ ಎರಡನೆ ಸಾಲಿನ ಮೂರನೇ ಸಾಲಿನ ನಾಯಕರ ಪಟ್ಟಿಯೊಂದನ್ನು ಸಿದ್ಧಪಡಿಸಿದರು. ಗಾಂಧಿಯವರಿಗೆ ಈ ಲಂಡನ್ ಭೇಟಿಯ ಸಂದರ್ಭದಲ್ಲಿ ಅಮೆರಿಕಾ ಸೇರಿದಂತೆ ಹಲವು ದೇಶಗಳಿಂದ ಆಹ್ವಾನ ಬಂದಿತ್ತು. ಆದರೆ ಅವರು ಭಾರತಕ್ಕೆ ಹಿಂದಿರುಗುವ ತುರ್ತಿನಲ್ಲಿದ್ದರು. ಹಾಗಾಗಿ ಸಂಬಂಧಪಟ್ಟವರೆಲ್ಲರಿಗೂ 'ನನಗೆ ಭಾರತದಲ್ಲಿ ತುರ್ತು ಕರ್ತವ್ಯಗಳಿವೆ. ಇನ್ನೊಮ್ಮೆ ನೋಡೋಣ' ಎಂಬ ತಂತಿ ಕಳಿಸಿ ಒಂದು ವಾರದ ಕಿರುಪ್ರವಾಸಕ್ಕಾಗಿ ಪ್ಯಾರಿಸ್‌ಗೆ ಹೊರಟರು. ಜೊತೆಗೆ ತಮ್ಮ ಪರಿವಾರದೊಂದಿಗೆ ಈವರೆಗೆ ತಮಗೆ ಲಂಡನ್‌ನಲ್ಲಿ 'ರಕ್ಷಣೆ ನೀಡಿದ್ದ ಪೋಲಿಸ್ ತಂಡದ ಸಾರ್ಜೆಂಟ್‌ಗಳಾದ ಎವಾನ್ಸ್ ಮತ್ತು ರೋಜರ್ಸ್ ಎಂಬ ಇಬ್ಬರು ಪೊಲೀಸರನ್ನೂ, ಅವರ ಮೇಲಾಧಿಕಾರಿಗಳ ಅನುಮತಿಯೊಂದಿಗೆ ಕರೆದೊಯ್ದರು. ಈ ಇಬ್ಬರೂ ನನ್ನ ಕುಟುಂಬದ ಸದಸ್ಯರೇ ಆಗಿಬಿಟ್ಟು ಇನ್ನೂ ಸ್ವಲ್ಪಕಾಲ ಅವರೊಂದಿಗೆ ಇರಬೇಕೆನ್ನಿಸಿದೆ' ಎಂಬುದು ಅವರು ಇದಕ್ಕೆ ನೀಡಿದ ಕಾರಣ. ಸರ್ಕಾರ ಈ ಇಬ್ಬರು ಪೊಲೀಸರಿಗೆ, ಗಾಂಧಿಯವರನ್ನು ಭಾರತಕ್ಕೆ ಹಡಗು ಹತ್ತಿಸಿ ಲಂಡನ್‌ಗೆ ವಾಪಸ್ಸಾಗುವವರೆಗೂ ಸಂಬಳ ಸಹಿತ ರಜೆ ನೀಡಿತ್ತು.

ಪ್ಯಾರಿಸ್‌ನಲ್ಲಿ ಒಂದು ದಿವಸ ತಂಗಿ, ಅಲ್ಲಿನ ಜನರ ಅಪೇಕ್ಷೆಯ ಮೇರೆಗೆ ನರ್ತನ ಶಾಲೆಯೊಂದರಲ್ಲಿ 'ಶಾಂತಿ ಮತ್ತು ಅಹಿಂಸೆ'ಯ ಬಗ್ಗೆ ಭಾಷಣ ಮಾಡಿ ಸ್ವಿಟ್ಜರ್‌ಲ್ಯಾಂಡ್‌ಗೆ ಪಯಣಿಸಿದರು. ಫ್ರೆಂಚ್ ಲೇಖಕ ರೊಮೈನ್ ರೊಲ್ಯಾಂಡ್‌ರ ಬಹುಕಾಲದ ಆಹ್ವಾನಕ್ಕೆ ಓಗೊಡುವುದು ಈ ಪಯಣದ ಉದ್ದೇಶವಾಗಿತ್ತು. ಅಲ್ಲಿಂದ ಅವರು ರೋಂ ನಗರಕ್ಕೆ ತೆರಳಿ ಇಟಲಿಯ ಸರ್ವಾಧಿಕಾರಿ ಮುಸೋಲೊನಿಯನ್ನು ಭೇಟಿ ಮಾಡಿ ಭಾರತಕ್ಕೆ ಹಿಂದಿರುಗುವುದು ಅವರ ಪೂರ್ವನಿಯೋಜಿತ ಕಾರ್ಯಕ್ರಮವಾಗಿತ್ತು.

## ರೊಮೈನ್ ರೊಲ್ಯಾಂಡ್‌ರೊಂದಿಗೆ ಭೇಟಿ

ಈ ಮೊದಲೇ ದಾಖಲಿಸಿರುವಂತೆ, ರೊಮೈನ್ ರೊಲ್ಯಾಂಡ್ ನೊಬೆಲ್ ಪ್ರಶಸ್ತಿ ಪುರಸ್ಕೃತ ಲೇಖಕರಾಗಿದ್ದರು. ಮೀರಾಬೆನ್‌ರನ್ನು ಗಾಂಧಿ ಬಳಿ ತಂದ ಗಾಂಧಿ ಕುರಿತ ಪುಸ್ತಕದ ಕರ್ತೃವೂ ಆಗಿದ್ದರು. ಗಾಂಧಿಯವರ ಮಹಾ ಅಭಿಮಾನಿಯಾಗಿದ್ದ ಈ ಲೇಖಕ, ಗಾಂಧಿ–ಟಾಲ್‌ಸ್ಟಾಯ್–ಟ್ಯಾಗೋರ್‌ರನ್ನು ಹೋಲಿಕೆ ಮಾಡಿ, ಅವರಲ್ಲಿನ ಮಾನವ ಸತ್ವದ ಬಗ್ಗೆ ಕೆಲವು ಅದ್ಭುತ ಮಾತುಗಳನ್ನಾಡಿದ್ದಾನೆ. ದ. ಆಫ್ರಿಕಾದಲ್ಲಿ ಕಂಡಂತೆ, ಬಾರ್ಡೋಲಿಯಲ್ಲಿ ಕಂಡಂತೆ, ಗಾಂಧಿ ಸಾಮಾನ್ಯ ಮನುಷ್ಯರನ್ನೂ ಅತಿ ಮಾನವರ ಮಟ್ಟಕ್ಕೆ ಏರಿಸಬಲ್ಲ ಮಾಂತ್ರಿಕ ಶಕ್ತಿ ಹೊಂದಿದ್ದರು. ಇದರ ಹಿಂದೆ ಇದ್ದುದು ಪ್ರತಿ ಮನುಷ್ಯನಲ್ಲೂ ಮಾನವತ್ವದ ಸೆಲೆ ಇದ್ದೇ ಇರುವುದು ಎಂಬ ಅವರ ನಂಬಿಕೆ. ಟ್ಯಾಗೋರ್‌ಗೆ ಹಿಂಸೆಯ ಬಗ್ಗೆ ಭಯವಿತ್ತು. ಹಾಗಾಗಿಯೇ ಅವರು ವಿದೇಶೀ ವಸ್ತ್ರದಹನವನ್ನು ಕಟುವಾಗಿ ವಿರೋಧಿಸಿದರು. ಆದರೆ ಗಾಂಧಿ, ಅಹಿಂಸೆಯಲ್ಲೇ ಹಿಂಸೆಯನ್ನು ಸೇರಿಸಿ ಅದನ್ನು ಗೆದ್ದಿದ್ದರು. ಟಾಲ್‌ಸ್ಟಾಯ ಉದ್ವಿಗ್ನತೆಯ ಮನುಷ್ಯ. ಹಾಗಾಗಿಯೇ ಆತ ತನ್ನ ಹೆಂಡತಿಯಿಂದ ಓಡಿ ಹೋದ. ಆದರೆ ಗಾಂಧಿ ಹಾಗೆ ಯಾರಿಂದಲೂ ದೂರ ಓಡಲಿಲ್ಲ. ಗಾಂಧಿಯ ಹೋರಾಟದಲ್ಲಿ ಧಾರ್ಮಿಕ ಪ್ರಶಾಂತಿ ಇದೆ. ಆದರೆ ಟಾಲ್‌ಸ್ಟಾಯ್‌ನ ಪ್ರತಿ ನಡೆಯಲ್ಲೂ ಗಲಭೆ ಇದೆ. ಅವನದು ಗರ್ವಕ್ಕೆ ಪ್ರತಿಗರ್ವ, ವೈರಕ್ಕೆ ಪ್ರತಿವೈರ. ಅವನ ಅಹಿಂಸೆಯೂ ಹಿಂಸಾತ್ಮಕವಾದದ್ದು. ಇದು ರೊಲ್ಯಾಂಡ್‌ರ ವ್ಯಾಖ್ಯಾನ.

ಡಿಸೆಂಬರ್ ಐದರಂದು ಗಾಂಧಿ ಲೆಮಾನ್ ಸರೋವರದ ತೀರದ ವಿಲೆನುವಾಗೆ ಬಂದಾಗ ರೊಲ್ಯಾಂಡ್‌ರನ್ನು, ಗಾಂಧಿಯವರನ್ನು ಕಾಣಬಯಸಿದ ನೂರಾರು ಜನರ ಬೇಡಿಕೆಗಳು ಸುಸ್ತು ಮಾಡಿದ್ದವು. ಊರಿನ ಗೌಳಿಗರು ಗಾಂಧಿ ಅಲ್ಲಿರುವವರೆಗೂ ಹಾಲು ಮತ್ತು ಅದರ ಎಲ್ಲ ಉತ್ಪನ್ನಗಳನ್ನು ಪೂರೈಸಬಯಸಿದ್ದರು. ಸಂಗೀತ ವೃಂದದವರು ಗಾಂಧಿ ಮಲಗುವ ವೇಳೆ ಲಘು ವಾದ್ಯಗೋಷ್ಠಿಯಲ್ಲಿ ಪ್ರೇಮಗೀತೆಗಳನ್ನು ನುಡಿಸಬಯಸಿದ್ದರು. ಪತ್ರಕರ್ತರು ಸಂದರ್ಶನಗಳನ್ನು ಬಯಸಿದ್ದರು. ಇಟಲಿಯ ಓರ್ವ ಮಹಿಳೆ ಮುಂದಿನ ರಾಷ್ಟ್ರೀಯ ಲಾಟರಿ ಯಾವ ಸಂಖ್ಯೆಗೆ ಎಂದು ಗಾಂಧಿಯವರನ್ನು ಕೇಳಿ ತಿಳಿಸಲು ಪತ್ರಬರೆದಿದ್ದಳು!

## ರೊಲ್ಯಾಂಡರೊಂದಿಗೆ ಸಂವಾದ

ಗಾಂಧಿ ಸ್ವಿಟ್ಜರ್‌ಲೆಂಡ್‌ನಲ್ಲಿದ್ದ ಐದು ದಿವಸವೂ, ಅವರು ರಾಜಕಾರಣ, ಕಲೆ, ಸಾಹಿತ್ಯ ಸಂಗೀತಗಳ ಬಗ್ಗೆ ರೊಲ್ಯಾಂಡ್‌ರ ಜೊತೆ ಮಾತನಾಡಿದರು. ಯೂರೋಪ್‌ನಲ್ಲಿ ಉಗ್ರಗೊಳ್ಳುತ್ತಿದ್ದ ರಾಷ್ಟ್ರೀಯತೆ ಮತ್ತು ಅದು ಸೃಷ್ಟಿಸತೊಡಗಿದ್ದ ಯುದ್ಧಗಳು, ಬ್ರಿಟನ್‌ನ ಶೋಷಕ ವಸಾಹತುಶಾಹಿ, ಇಟಲಿಯಲ್ಲಿ ತಲೆಯೆತ್ತಿದ್ದ ಫ್ಯಾಸಿಸಂ, ಸತ್ಯ ಮತ್ತು ಸೌಂದರ್ಯ, ಸಂಗೀತ ಮತ್ತು ಆಧ್ಯಾತ್ಮಿಕತೆ ಇತ್ಯಾದಿ ಅವರ ಮಾತುಕತೆಯ ವಸ್ತುಗಳಾಗಿದ್ದವು. ಈ ಮಾತುಕತೆಯಲ್ಲಿ ಗಾಂಧಿಯ ಮುಖ್ಯ ಮಾತು ಇದಾಗಿತ್ತು. 'ಚರಿತ್ರೆಯಿಂದ ಕಲಿಯಲು ಏನೂ ಇಲ್ಲ. ನಾನು ವರ್ತಮಾನದ ಸಾಕ್ಷ್ಯ. ನನ್ನ ವೈಯಕ್ತಿಕ ಅನುಭವವನ್ನು ಆಧರಿಸಿ ಚಿಂತಿಸುವವನು. ಇದು ಕೆಲವೊಮ್ಮೆ ನನ್ನನ್ನು ದಾರಿ ತಪ್ಪಿಸಬಹುದೇನೋ. ಆದರೆ ಆಗೆಲ್ಲ ಅಹಿಂಸೆ ಕುರಿತ ನನ್ನ ನಂಬಿಕೆ ನನ್ನ ಕೈಹಿಡಿಯುತ್ತದೆ ಎಂಬ ವಿಶ್ವಾಸ ನನಗಿದೆ.' ರೊಲ್ಯಾಂಡ್, ಗಾಂಧಿ ಮುಸೊಲೊನಿಯನ್ನು ನೋಡಲು ಹೋಗುತ್ತಿರುವುದನ್ನು ಇಷ್ಟಪಡಲಿಲ್ಲ. ಈ ಭೇಟಿ ಮುಸೊಲೊನಿಯ ಜಾಗತಿಕ ವಿಶ್ವಾಸಾರ್ಹತೆಯನ್ನು ಹೆಚ್ಚಿಸುತ್ತದೆ ಎಂಬುದು ಅವರ ಅಭಿಪ್ರಾಯ. ಆದರೆ ಗಾಂಧಿ. ಮುಸೊಲೊನಿ ರೈತರು ಮತ್ತು ಕಸುಬುದಾರರ ಬಾಳನ್ನು ಹಸನು ಮಾಡಿರುವ ವರದಿ ತಮ್ಮನ್ನು ಆಕರ್ಷಿಸಿದೆ ಎಂದರು. 'ಆದರೂ ಹುಷಾರು!' ಎಂಬುದು ರೊಲ್ಯಾಂಡರ ಎಚ್ಚರಿಕೆ!

## ಸತ್ಯ–ಶಿವ–ಸೌಂದರ್ಯ

ಸ್ವಿಟ್ಜರ್‌ಲೆಂಡ್‌ನ ರಮಣೀಯ ಪ್ರಕೃತಿ ಸೌಂದರ್ಯ. ವಿಶೇಷವಾಗಿ ಅಲ್ಲಿನ ಹಳ್ಳಿಗಳ ಪ್ರಶಾಂತಿ, ಗಾಂಧಿಯನ್ನು ತಮಗೆ ಈವರೆಗೆ ತಾಕಿರದ ಸೌಂದರ್ಯದ ಹೊಸ ಆಯಾಮವನ್ನು ಪರಿಚಯಿಸಿದೆ ಎನಿಸಿತು. ಅವರು ತಮ್ಮೊಡನಿದ್ದ ಸಂದರ್ಶಕನಿಗೆ ಹೇಳಿದರು:

'ಜಗತ್ತು, ದೇವರು ಸತ್ಯ, ಪ್ರೇಮ ಎಂದು ಈವರೆಗೆ ಹೇಳಿಕೊಂಡು ಬರುತ್ತಿದೆ. ಆದರೆ ಈಗ ನನಗೆ ಸತ್ಯವೇ ದೇವರು ಮತ್ತು ಪ್ರೇಮ' ಎನಿಸುತ್ತಿದೆ.

ಆಗ ಸಂದರ್ಶಕ ಕೇಳಿದ: 'ನಿಮ್ಮ ಪ್ರಕಾರ ಸತ್ಯವೆಂದರೇನು?'

'ಇದು ಉತ್ತರಿಸಲು ಬಹುಕಷ್ಟದ ಪ್ರಶ್ನೆ,' ಗಾಂಧಿ ಹೇಳಿದರು.

'ನಿಮ್ಮ ಅಂತರಂಗದ ದನಿ ಅದು'

'ಆದರೆ ಅಂತರಂಗದಲ್ಲಿ ಅನೇಕ ದನಿಗಳು ಕೇಳಿಬಂದರೆ?' ಸಂದರ್ಶಕನ ಪ್ರಶ್ನೆ.

ಗಾಂಧಿ ಯೋಚಿಸಿ ಹೇಳಿದರು: 'ಇಲ್ಲಿಯೇ ಅಹಿಂಸೆಯ ಪ್ರಶ್ನೆ ಬರುವುದು. ಅಹಿಂಸೆಯ ಜೊತೆಯಲ್ಲಿರುವುದೇ ಸತ್ಯ.'

ಸತ್ಯ ಮತ್ತು ದೇವರ ಪ್ರಶ್ನೆ ಗಾಂಧಿ ಮತ್ತು ರೋಲ್ಯಾಂಡ್‌ರ ಮಾತುಕತೆಯಲ್ಲಿ ವ್ಯಾಪಕ ಚರ್ಚೆಗೆ ಈಡಾಯಿತು. 'ಸತ್ಯವೇ ದೇವರು ಎಂಬ ನಿಮ್ಮ ಸೂತ್ರದಲ್ಲಿನ ದೇವರಲ್ಲಿ ನನಗೊಂದು ಕೊರತೆ ಕಾಣುತ್ತದೆ. ದೇವರ ಭಾವನೆ ಆನಂದವನ್ನೂ ಉಂಟು ಮಾಡಬೇಕಲ್ಲವೇ?' ಗಾಂಧಿ, 'ಇದು ಕಲೆಗಾಗಿ ಕಲೆ ಎಂಬ ನಂಬಿಕೆಯಿಂದ ಮೂಡಿರುವ ಮಾತು. ಆದರೆ ಆ ನಂಬಿಕೆಯನ್ನು ನಾನು ಒಪ್ಪಲಾರೆ. ಸತ್ಯವನ್ನು ಬಿಂಬಿಸದ ಕಲೆ ನನ್ನ ಪ್ರಕಾರ ಕಲೆಯೇ ಅಲ್ಲ. ಸತ್ಯವನ್ನು ಬಿಂಬಿಸದ ಸೌಂದರ್ಯ ಅಸತ್ಯವಾದ್ದರಿಂದ ಅದನ್ನು ಆನಂದಿಸುವುದು ಹೇಗೆ? ಕಲೆ ಸತ್ಯವನ್ನು ಬಿಂಬಿಸುವುದಾದರೆ, ಅಲ್ಲಿ ಆನಂದವೂ ಇರುತ್ತದೆ. ಸತ್ಯ ಅಂದರೆ ಈಗ ಇರುವುದನ್ನು ಹೇಳುವುದಲ್ಲ. ನಿತ್ಯ ಇರಬಲ್ಲದ್ದನ್ನು ಹೇಳುವುದು' ಇದು ಗಾಂಧಿಯ ಉತ್ತರವಾಗಿತ್ತು.

ಮಾರ್ಕ್ಸ್‌ವಾದದ ಬಗ್ಗೆ ಒಲವು ಬೆಳೆಸಿಕೊಂಡಿದ್ದ ರೊಲ್ಯಾಂಡ್, ಪ್ಯಾರಿಸ್‌ನ ಪ್ರೊಲೆಟೇರಿಯನ್ ರೆವಲ್ಯೂಷನ್ ಎಂಬ ಪತ್ರಿಕೆ ಕೇಳಿದ್ದ ಪ್ರಶ್ನೆಯೊಂದನ್ನು ಗಾಂಧಿಯವರ ಮುಂದಿರಿಸಿದಾಗ ಗಾಂಧಿ, 'ಕಾರ್ಮಿಕರು ಸರಿಯಾಗಿ ಸಂಘಟಿತರಾದರೆ ಉದ್ಯೋಗದಾತನ ವರ್ತನೆಯನ್ನು ನಿಯಂತ್ರಿಸಬಹುದು' ಎಂದು ಹೇಳಿದರು. 'ಆದರೆ ಬಂಡವಾಳಶಾಹಿ, ಕಾರ್ಮಿಕರಲ್ಲಿ ಒಡಕು ಉಂಟು ಮಾಡಿದಾಗ, ಅವರು ಸರ್ವಾಧಿಕಾರ ಸ್ಥಾಪನೆಯ ಮೂಲಕ ತಮ್ಮ ಅನ್ಯಾಯಗಳನ್ನು ಸರಿಪಡಿಸಿಕೊಳ್ಳಬಹುದಲ್ಲವೇ?' ಎಂದು ರೊಲ್ಯಾಂಡ್ ಮರುಪ್ರಶ್ನೆ ಹಾಕಿದಾಗ ಮಾತುಕತೆಯನ್ನು ಮುಂದುವರೆಸಲು ಆಸಕ್ತಿ ತೋರದ ಗಾಂಧಿ 'ಅದು ಸರಿಯಾದ ಮಾರ್ಗವಲ್ಲ' ಎಂದಷ್ಟೇ ಹೇಳಿ ಸುಮ್ಮನಾದರು.

ರೊಲ್ಯಾಂಡ್ ಮಾತು ಮುಂದುವರೆಸಿ ಕೇಳಿದರು: 'ದೇವರು ಎಂದರೆ ಚೈತನ್ಯವೋ ಅಥವಾ ಅದಕ್ಕೆ ಒಂದು ವ್ಯಕ್ತಿತ್ವ ಇದೆಯೋ, ನಿಮ್ಮ ಪ್ರಕಾರ?' ಗಾಂಧಿ ಉತ್ತರ: 'ಉಹುಂ.' ದೇವರಿಗೆ ವ್ಯಕ್ತಿತ್ವ ಇಲ್ಲ. ಅದೊಂದು ನಿತ್ಯ ತತ್ವ. ಹಾಗೆಂದೇ ನಾನು ಸತ್ಯವೇ ದೇವರು ಎನ್ನುವುದು ನಾಸ್ತಿಕರು ಕೂಡ ಸತ್ಯವನ್ನು ನಿರಾಕರಿಸುವುದಿಲ್ಲ.'

## ಬಿಥೋವನ್ ಸಂಗೀತ ಆಲಿಸಿದ ಗಾಂಧಿ

ಡಿಸೆಂಬರ್ 11ರಂದು ರೊಲ್ಯಾಂಡ್ ಭೇಟಿಯ ಕೊನೆಯ ದಿನ ಸಂಜೆ, ಗಾಂಧಿ. ರೊಲ್ಯಾಂಡರನ್ನು ಬಿಥೋವನ್ ಸಂಗೀತ ಕೇಳಿಸಲು ಕೋರಿದರು. ರೊಲ್ಯಾಂಡ್ ಗಾಂಧಿಯವರ ವ್ಯಕ್ತಿತ್ವಕ್ಕೆ ಸಮರಸವಾಗುವ ಐದನೇ ಸಿಂಫೋನಿಯ ಒಂದೆರಡು ಧಾರೆಗಳನ್ನು ಆಯ್ದು ತಮ್ಮ ಗ್ರಾಮಾಫೋನ್‌ನಲ್ಲಿ ಹಾಕಿದರು. ಮೊದಲನೆಯದು ಮನುಷ್ಯ ತನ್ನ ವಿಧಿಯೊಡನೆ ಸೆಣೆಸುವ, ಅದರೊಂದಿಗೆ ಸಮರಸವಾಗಿ ಬೆರೆತು ಸೋದರತೆಯ ಮೌಲ್ಯವನ್ನು ನಿರೂಪಿಸಿದರೆ, ಎರಡನೆಯದು ಪ್ರಶಾಂತವಾಗಿ ಹರಿಯುವ ನದಿಯ ಶಾಂತಿ –ಸಾವಧಾನಗಳ ಮಧುರ ಧಾರೆ. ಗಾಂಧಿ ಎರಡನ್ನೂ ಶಾಂತಿಯಿಂದ ಕೇಳಿ ಮೆಚ್ಚಿದರು.

ರೊಲ್ಯಾಂಡ್ ಮಾರನೆಯ ದಿನ ತಮ್ಮ ಅಸ್ವಸ್ಥತೆಯನ್ನು ಲೆಕ್ಕಿಸದೆ ಗಾಂಧಿ ಪರಿವಾರವನ್ನು ಬೀಳ್ಕೊಡಲು ಸ್ವತಃ ತಾವೇ ರೈಲ್ವೇ ನಿಲ್ದಾಣಕ್ಕೆ ಬಂದು ಗಾಂಧಿ ಪರಿವಾರವನ್ನು ರೋಂಗೆ ಬೀಳ್ಕೊಟ್ಟರು. ಅದರ ನೆನಪನ್ನು ಅವರು ಹೀಗೆ ದಾಖಲಿಸಿದ್ದಾರೆ: 'ತಮ್ಮ ಕೊಕ್ಕರೆಯಂತಹ ಕಾಲುಗಳನ್ನು ಪಟಪಟನೆ ಮುಂದಕ್ಕೆ ಹಾಕುತ್ತಾ ರೈಲು ಡಬ್ಬಿಯ ಮೆಟ್ಟಿಲುಗಳನ್ನೇರುವ ಮುನ್ನ ಗಾಂಧಿ ನನ್ನನ್ನು ಗಾಢವಾಗಿ ಆಲಂಗಿಸಿಕೊಂಡರು. ಯಾವುದೋ ಅನಿರ್ವಚನೀಯ ಬಾಂಧವ್ಯದ ತಂತು ನಮ್ಮನ್ನು ಬೆಸದಿದ್ದ ಅನುಭವ ನನಗಾಯಿತು. ಕೊನೆಯ ಬಾರಿಗೆ ಅವರ ಬೋಳುತಲೆ ನನ್ನ ಭುಜದ ಮೇಲೆ ಒರಗಿತು. ನನ್ನ ಕೆನ್ನೆಗಳಿಗೆ ಅದರ ಸ್ಪರ್ಶವಾಗಿ ನನ್ನಲ್ಲಿ ರೋಮಾಂಚನವನ್ನುಂಟು ಮಾಡಿತು. ಮೀರಾಳತ್ತ ಕೈಬೀಸಿ 'ಹೋಗಿ ಬನ್ನಿ' ಎಂದು ವಿದಾಯ ಹೇಳಿದೆ. ರೈಲುಗಾಡಿ ಕಣ್ಮರೆಯಾಗುವವರೆಗೂ ನಾನು ನಿಂತಲ್ಲೇ ನಿಂತಿದ್ದೆ. ಮನೆಗೆ ಬಂದಾಗ ಹೃದಯ ಭಾರವಾಗಿತ್ತು.

## ಇಟಲಿಯಲ್ಲಿ ಮುಸೋಲೋನಿ ಭೇಟಿಯ ವಿಚಿತ್ರ ಅನುಭವ!

ಇಟಲಿಯ ಸರ್ಕಾರ ಗಾಂಧಿ ಪರಿವಾರದ ವಾಸ್ತವ್ಯಕ್ಕೆ ಎಲ್ಲ ಸಿದ್ಧತೆ ಮಾಡಿದ್ದರೂ ಗಾಂಧಿ ಅದನ್ನು ನಿರಾಕರಿಸಿ ರೊಲ್ಯಾಂಡ್‌ರ ಮಿತ್ರರೊಬ್ಬರ ಮನೆಯಲ್ಲಿ ಬಿಡಾರ ಹೂಡಿದರು. ಅವರು ಮುಸೊಲೊನಿಯನ್ನು ಕಂಡು ಬಂದದ್ದೇ ಒಂದು ವಿಶಿಷ್ಟ ಅನುಭವವಾಗಿತ್ತು. ಅವನ ಭವ್ಯ ನಿವಾಸದ ಮಹಾದ್ವಾರದಲ್ಲಿ ಸಶಸ್ತ್ರ ಸೈನಿಕರಿಂದ ಗೌರವ ವಂದನೆ ಸ್ವೀಕರಿಸಿದ ಗಾಂಧಿ, ಕತ್ತಿ ಚೂರಿ–ಈಟಿ ಬಂದೂಕು ಇತ್ಯಾದಿ ವೈವಿಧ್ಯಮಯ ಶಸ್ತ್ರಾಸ್ತ್ರಗಳಿಂದ

ತುಂಬಿಕೊಂಡಿದ್ದ ಗೋಡೆಗಳ ನಡುವಣ ಒಂದು ಬಹು ದೀರ್ಘ ಓಣಿಯಲ್ಲಿ ನಡೆದುಹೋದ ನಂತರ ಎಲ್ಲ ದಿಕ್ಕುಗಳಲ್ಲೂ ನಡೆದಾಡುತ್ತಿದ್ದ ಶಸ್ತ್ರಸಜ್ಜಿತ ಭಟರ ನಡುವೆ, ಬೆಕ್ಕಿನ ಕಣ್ಣಿನ ಶಸ್ತ್ರರಹಿತ ಮುಸೊಲೊನಿ ಕಂಡ. ಇಬ್ಬರ ನಡುವೆ ಇಪ್ಪತ್ತು ನಿಮಿಷದ ಈ ಭೇಟಿಯಲ್ಲಿ ಏನು ಮಾತುಕತೆಯಾಯಿತೋ ಎಲ್ಲೂ ದಾಖಲಾಗಿಲ್ಲ ಈ ಭೇಟಿಯ ಬಗ್ಗೆ ಗಾಂಧಿ ಬರೆದಿರುವುದು, ಮುಸೊಲೊನಿಯನ್ನು ಕಾಣಲು ಹೋದಾಗ ಕಂಡ 'ಭಯ ಹುಟ್ಟಿಸುವಂತಹ' ದೃಶ್ಯಗಳನ್ನಷ್ಟೇ! ಆದರೆ ಅವರಿಗೆ ಮುಸೊಲೊನಿಯ ಆಡಳಿತದ ಬಗ್ಗೆ ಒಳ್ಳೆಯ ಅಭಿಪ್ರಾಯವೇ ಇದ್ದಂತಿದೆ. ಅವರು ರೊಲ್ಯಾಂಡ್‌ಗೆ ಬರೆದ ಒಂದು ಪತ್ರದಲ್ಲಿ, 'ಮುಸೊಲೊನಿಯದು ಕಬ್ಬಿಣದ ಕೈ ನಿಜ. ಆದರೆ ಪಶ್ಚಿಮದ ಸಮಾಜವೇ ಹಿಂಸೆಯ ಮೇಲೆ ನಿಂತಿದೆಯಲ್ಲವೇ? ಆತ ಬಂಡವಾಳ ಮತ್ತು ಕಾರ್ಮಿಕ ಶಕ್ತಿಯ ನಡುವೆ ಒಂದು ಸಮನ್ವಯ ಏರ್ಪಡಿಸಿ ದುಡಿಯುವ ಜನಸಮುದಾಯಕ್ಕೆ ಒಳ್ಳೆಯದನ್ನೇ ಮಾಡಿದ್ದಾನೆನಿಸುತ್ತದೆ. ಇಟಲಿಯ ಜನ ಕೂಡ ಆತನನ್ನು ಮೆಚ್ಚಿದ್ದಾರೆ ಎಂದು ಕಾಣುತ್ತದೆ' ಎಂದಿದ್ದಾರೆ. ರೊಲ್ಯಾಂಡ್ ಮುಸೊಲೊನಿಯ ಬಗ್ಗೆ ಗಾಂಧಿಯವರ ಬಳಿ 'ಆದರೂ ಹುಷಾರ್!' ಎಂದಿದ್ದುದು ವ್ಯರ್ಥವಾಗಿತ್ತು.

## ಶಿಲುಬೆಯ ಮುಂದೆ ಅತ್ತ ಗಾಂಧಿ

ಗಾಂಧಿ, ವ್ಯಾಟಿಕನ್‌ನ ಪೋಪ್‌ರ ಸಂದರ್ಶನ ಕೇಳಿದ್ದರೂ ಪೋಪ್ ಅದಕ್ಕೆ ಒಪ್ಪಿರಲಿಲ್ಲ. ಗಾಂಧಿ ಬ್ರಿಟಿಷ್ ಪ್ರಭುತ್ವವನ್ನು ವಿರೋಧಿಸುತ್ತಿದ್ದುದೇ ಅದಕ್ಕೆ ಕಾರಣವಿರಬಹುದು. ಆದರೆ ಗಾಂಧಿ ವ್ಯಾಟಿಕನ್‌ನ ವಸ್ತುಸಂಗ್ರಹಾಲಯದ ವರ್ಣಚಿತ್ರಗಳ ವೈಭವವನ್ನು ಕಂಡು ಬೆರಗಾದರು. ಸಿಸ್ಟೈನ್ ಚರ್ಚ್‌ನಲ್ಲಿ ಶಿಲುಬೆಯೇರಿದ ಕ್ರಿಸ್ತನ ಶಿಲ್ಪವನ್ನು ಕಂಡು ಒಂದೆರಡು ಕ್ಷಣ ಮೂಕವಾಗಿ ನಿಂತಾದ ಅವರಿಗೆ ಕಣ್ಣೀರು ತಡೆಯಲಾಗಲಿಲ್ಲ. ಅವರು ಅಂದು ಸಂಜೆ ಒಂದು ರಗ್ಬಿ ಪಂದ್ಯವನ್ನೂ, ಯುವದಳವೊಂದರ ಶಿಸ್ತುಬದ್ಧ ಪಥಸಂಚಲನವನ್ನೂ ನೋಡಿದರು. ಕ್ರೀಡಾಂಗಣಕ್ಕೆ ಹೋದಾಗ ಅವರನ್ನು ಕುಶಾಲು ತೋಪು ಸಿಡಿಸುವ ಮೂಲಕ ಸ್ವಾಗತಿಸಲಾಯಿತು! ಗಾಂಧಿ ಈ ಬಗ್ಗೆ ಆಶ್ರಮವಾಸಿಗಳಿಗೆ ಬರೆದ ಪತ್ರದಲ್ಲಿ. 'ರೋಂ ಒಂದನ್ನೇ ನೋಡಲು ಮೂರು ತಿಂಗಳು ಬೇಕಾದೀತು. ನನ್ನ ಒಂದೆರಡು ದಿನಗಳ ಭೇಟಿಯ ಬಗ್ಗೆ ಏನಾದರೂ ಬರೆಯುವುದೇ ವ್ಯರ್ಥ' ಎಂದು ತಿಳಿಸಿದ್ದಾರೆ.

## ಟಾಲ್‌ಸ್ಟಾಯ್ ಮಗಳ ಭೇಟಿ–ಯುರೋಪ್‌ಗೆ ವಿದಾಯ

ಗಾಂಧಿ ರೋಂ ನಗರವನ್ನು ಬಿಡುವ ಮುನ್ನ, ಅಲ್ಲಿ ವಾಸವಾಗಿದ್ದ ಟಾಲ್‌ಸ್ಟಾಯ್‌ರ ಹಿರಿಯ ಮಗಳ ಮನೆಗೆ ಭೇಟಿ ನೀಡಿದರು. ಅವರ ಮನೆಯ ಹಜಾರದಲ್ಲಿ ಕೂತು ಅವರು ನೂಲುತ್ತಿದ್ದಾಗ ಇಟಲಿಯ ರಾಜಕುಮಾರಿ ಸೇವಕಿಯೊಬ್ಬಳೊಂದಿಗೆ ಬಂದು, ತನ್ನ ತಂದೆಯ ಉಡುಗೊರೆಯೆಂದು ಒಂದು ಪುಟ್ಟಿ ಅಂಜೂರದ ಹಣ್ಣುಗಳನ್ನು ಕೊಟ್ಟು ಹೋದಳು.

ಡಿಸೆಂಬರ್ 14ಕ್ಕೆ ಗಾಂಧಿ ಪರಿವಾರದ ಯುರೋಪ್ ಪ್ರವಾಸ ಮುಕ್ತಾಯವಾಯಿತು. ಪರಿವಾರವನ್ನು ಸ್ಕಾಟ್‌ಲೆಂಡ್ ಯಾರ್ಡ್‌ನ ಇಬ್ಬರು ಸಾರ್ಜೆಂಟ್‌ಗಳು ಬ್ರಿಂಡಿಸಿಯಲ್ಲಿ ಬಂದರಿನಿಂದ ಮುಂಬೈಗೆ ಹೊರಟಿದ್ದ ಎಸ್.ಎಸ್. ಪಿಲ್ಸಾನಾ ಎಂಬ ಹಡಗಿನಲ್ಲಿ ನೆಲೆಗೊಳಿಸಿ ಬೀಳ್ಕೊಟ್ಟರು. 14 ದಿನಗಳ ನಂತರ ಆ ಹಡಗು ಬಾಂಬೆ ಬಂದವರನ್ನು ತಲುಪಿತು.

ಬಾಂಬೆ ತಲುಪಿದ ನಂತರ ಗಾಂಧಿ ಮಾಡಿದ ಮೊದಲ ಕೆಲಸಗಳಲ್ಲಿ ಒಂದೆಂದರೆ, ಸ್ಕಾಟ್‌ಲೆಂಡ್ ಯಾರ್ಡ್‌ನ ಇಬ್ಬರು ಸಾರ್ಜೆಂಟ್‌ಗಳಿಗೆ ಒಂದೊಂದು ಕೈಗಡಿಯಾರ ಕೊಂಡು ಅದರ ಮೇಲೆ 'ಪ್ರೀತಿಯಿಂದ ಎಂದು ಕೆತ್ತಿಸಿ ಕಳಿಸಿಕೊಟ್ಟಿದ್ದು.

**– ಗಾಂಧಿ ಕಥನ**

ಪ್ರಕಾಶನ : ಎಂ. ಮುನಿಸ್ವಾಮಿ ಅಂಡ್ ಸನ್ಸ್.

# ಮೂಕವಾಗಿದೆ ಮಾತು

**–ಜಿ.ಎನ್. ಮೋಹನ್**

ಫಿಫ್ತ್ ಅವಿನ್ಯೂ–

ಕ್ಯೂಬಾದ ನನ್ನ ಮನೆಯಿಂದ ಕೆರೆಬಿಯನ್ ಕಡಲ ತೀರಕ್ಕೆ ಹೆಜ್ಜೆ ಹಾಕುವಾಗ ಅಚಾನಕ್ಕಾಗಿ ಕಂಡ ರಸ್ತೆ. ದಶಕಗಳ ಕಾಲ ಕ್ಯೂಬಾದಲ್ಲಿ ಸಂತಸದ ಹೊನಲು ಹರಿಯಲು ಕಾರಣವಾದ ಈ ರಸ್ತೆ ಈಗ ಗತಕಾಲಕ್ಕೆ ಮೌನಸಾಕ್ಷಿ. ಫಿಫ್ತ್ ಅವಿನ್ಯೂನಲ್ಲಿ ಎತ್ತರಕ್ಕೆ ನಿಂತಿದ್ದ ಕಟ್ಟಡವನ್ನು ನೋಡಿದಾಗ ಡಾ. ಗುಸ್ತೋ ಹೇಳಿದ್ದು ತಲೆಯಲ್ಲಿ ಗುಂಯೆನ್ನತೊಡಗಿತು.

ಬೆಂಕಿಪೊಟ್ಟಣಕ್ಕೆ ಅಡುಗೆ ಎಣ್ಣೆಗೆ, ಬನ್‌ಗೆ, ಮಕ್ಕಳ ಹಾಲಿಗಾಗಿ ದಿನಗಟ್ಟಲೆ ರೇಷನ್ ಅಂಗಡಿ ಸುತ್ತಬೇಕಾಗಿರುವ ಕ್ಯೂಬಾದ ಜನರ ನಿಟ್ಟುಸಿರಿಗೆ ಗುಸ್ತೋ ಮಾತಾಗಿದ್ದರು. 'ಜೀವನ ಈಗ ತುಂಬಾ ಕಷ್ಟವಾಗಿದೆ. ಈ ಹಿಂದೆ ಹೀಗಿರಲಿಲ್ಲ. ರಜೆ ಬಂದರೆ ಸಾಕು ಹೊರಗೆ ಹೋಗಿ ಊಟ ಮಾಡಿ ಮೋಜು ಮಾಡುತ್ತಿದ್ದೆವು. ಸೋವಿಯತ್ ದೇಶ ಪತನವಾದದ್ದೇ ಜೀವನ ಈಗ ತುಂಬಾ ಕಷ್ಟವಾಗಿದೆ.'

ಒಂದು ಕಾಲಕ್ಕೆ ಸೋವಿಯತ್ ರಾಯಭಾರಿ ಕಚೇರಿಯಾಗಿದ್ದ ಈ ಕಟ್ಟಡ ಈಗ ರಷ್ಯಾ ರಾಯಭಾರಿ ಕಚೇರಿಯಾಗಿ ಅದೇ ಫಿಫ್ತ್ ಅವಿನ್ಯೂನಲ್ಲಿ ಇದೆ. ಒಂದು ಕಾಲಕ್ಕೆ ಕ್ಯೂಬಾದಲ್ಲಿ ಹಾಡುಗಳು ಹೊಮ್ಮಲು ಕಾರಣವಾದ. ಕ್ಯೂಬನ್ನರು ಸಾಮ್ರಾಜ್ಯಶಾಹಿಯನ್ನು ಎದುರಿಸಲು ಸಾಕಷ್ಟು ನೈತಿಕ ಸ್ಥೈರ್ಯ ನೀಡಿದ್ದ ಸೋವಿಯತ್ ದೇಶ ಈಗ ಮೌನವನ್ನು ಹೊದ್ದುನಿಂತಿದೆ.

ಕ್ಯೂಬಾದಲ್ಲಿ ಹೊಸ ಸೂರ್ಯ ತನ್ನ ಬರವನ್ನು ಘೋಷಿಸುವಾಗ ಕ್ಯೂಬಾದ ಜೊತೆ ನಿಂತ ಎಲ್ಲರಿಗೂ ಅದು ಬೆಳಕನ್ನು ಹಂಚುತ್ತದೆ ಎಂದಿದ್ದರು ಫಿಡೆಲ್ ಕ್ಯಾಸ್ಟ್ರೋ, ಸೋವಿಯತ್ ದೇಶ ಕ್ಯೂಬಾಗೆ ಹೀಗೆ ಅಪತ್ಕಾಲಕ್ಕಾದ ನೆಂಟ. 1960ರಲ್ಲಿ ಸೋವಿಯತ್ ಒಕ್ಕೂಟದ ಪ್ರಥಮ ಉಪಮಂತ್ರಿ ಅನಸ್ತಾಸ್ ಮಿಕೋಯನ್ ಕ್ಯೂಬಾಕ್ಕೆ ಕಾಲಿಟ್ಟರು. ಅಂದಿನಿಂದ ಸೋವಿಯತ್ ದೇಶದ ಪತನವಾಗುವವರೆಗೆ ಕ್ಯೂಬಾ–ಸೋವಿಯತ್ ಸಂಬಂಧ ಬಲವಾಗಿ ಬೆಳೆದುನಿಂತಿತು. ಜಗತ್ತಿನ ಮತ್ತೊಂದು ಭಾಗ ಕಮ್ಯೂನಿಸಂನ್ನು ಅಪ್ಪಿಕೊಂಡಿತು.

ಕ್ರಾಂತಿಯ ನಂತರ ಕ್ಯೂಬಾ ಸರ್ಕಾರ, ಬದುಕು ಎಂದರೇನು ಎಂಬುದೇ ಅರಿಯದ ತನ್ನ ದೇಶದ ಜನರಿಗೆ ಬದುಕು ನೀಡುವ ದೃಢ ಸಂಕಲ್ಪ ಮಾಡಿತು.

ಪ್ರತಿಯೊಬ್ಬರ ಹಕ್ಕನ್ನು ಗೌರವಿಸಿ ಅವರು ದೇಶದ ಅಮೂಲ್ಯ ಆಸ್ತಿಯಾಗುವ ಕನಸು ಕಂಡಿತು. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಕೃಷಿಭೂಮಿಯ ಹಂಚಿಕೆ. ಪ್ಲಾಟ್ ಒಪ್ಪಂದದ ಮೂಲಕ ಹಿಂಬಾಗಲಿನಿಂದ ಪ್ರವೇಶಿಸಿದ ಅಮೆರಿಕದ ಕಣ್ಣು ಕೆಂಪಗಾಯಿತು. ಕ್ಯೂಬಾದ ತುಂಬಾ ಹರಡಿಕೊಂಡಿದ್ದ ಅಮೆರಿಕದ ಬಹುರಾಷ್ಟ್ರೀಯ ಕಂಪೆನಿಗಳ ಎದುರಿಗೆ ಬದಲಾವಣೆಯ ಗಾಳಿ ಬೀಸಲು ಆರಂಭಿಸಿತು. ಕ್ಯೂಬಾವನ್ನು ತನ್ನ ಹಿತ್ತಲ ತೋಟ ಎಂದೇ ಭಾವಿಸಿದ್ದ ಅಮೆರಿಕದ ಸರ್ಕಾರಕ್ಕೆ ತನ್ನ ತೋಟದಲ್ಲಿ ಮತ್ತಾರೋ ನುಗ್ಗಿದ ಹಾಗಾಯಿತು. ಕೃಷಿ ಭೂಮಿ ಪಡೆದ ಪ್ರತಿಯೊಬ್ಬನೂ ತನಗೆ ಬೇಕಾದ್ದು ಬೆಳೆದರೆ, ಹವಾನಾದಲ್ಲಿರುವ ಅಮೆರಿಕ ಯಜಮಾನರ ಮುಂದೆ ತಲೆ ಎತ್ತುವಂತಾದರೆ ಎಂಬ ಭಯ ಆರಂಭವಾಯಿತು. ಕೃಷಿ ಭೂಮಿ ಹಂಚುವುದನ್ನು ನಿಲ್ಲಿಸಲು ಕ್ಯಾಸ್ಟ್ರೋಗೆ ತಾಕೀತು ಮಾಡಿತು. ಆದರೆ ಬದಲಾವಣೆಯ ಗಾಳಿ ಬೀಸುವುದು ನಿಲ್ಲಲಿಲ್ಲ. ಅಮೆರಿಕ ಸೆಣಸಾಟಕ್ಕೆ ಸಜ್ಜಾಯಿತು. ಸಕ್ಕರೆಯನ್ನು ಅಸ್ತ್ರವಾಗಿ ಬಳಸಿತು.

1959ರ ಅಕ್ಟೋಬರ್‌ನಲ್ಲಿ ಮೊತ್ತಮೊದಲ ಬಾರಿಗೆ ಕ್ಯೂಬಾ ಅಮೆರಿಕನ್ನರ ಒಡೆತನಕ್ಕೆ ಸೇರಿದ ಎರಡು ಆಕಳ ಜಮೀನನ್ನು ರಾಷ್ಟ್ರೀಕರಿಸಿತು. ಓರಿಯಂಟ್ ಪ್ರಾಂತ್ಯದತ್ತ ನಡೆದ ಕ್ಯಾಸ್ಟ್ರೋ ಅಮೆರಿಕದ ಬಹುರಾಷ್ಟ್ರೀಯ ಕಂಪನಿಪಿಂಗರೀ ರ್‍ಯಾಂಚ್‌ನ 56 ಸಾವಿರ ಎಕರೆ ಹಾಗೂ ಕಮಾಗ್ವೆಯ ಎಲ್ ಇಂಡಿಯೋ ರ್‍ಯಾಂಚ್‌ನ 21 ಸಾವಿರ ಎಕರೆ ಭೂಮಿಯನ್ನು ರಾಷ್ಟ್ರೀಕರಿಸಿದರು. ಹವಾನಾದಲ್ಲಿ ಹೆನೆಕ್ವಿನ್ ಫೈಬರ್ ಪ್ಲಾಂಟೇಶನ್‌ನ್ನು ಮುಟ್ಟಗೋಲು ಹಾಕಿಕೊಂಡರು. ಜನರಿಗಾಗಿ ಭೂಮಿ ಹಂಚುವ ಕ್ಯೂಬಾದ ಒಂದೊಂದೇ ಹೆಜ್ಜೆ ಅಮೆರಿಕದ ಎದೆಯಲ್ಲಿ ಭೀತಿ ಹುಟ್ಟುಹಾಕಿತು. ಕ್ಯೂಬಾದಿಂದ ಕೊಳ್ಳುತ್ತಿದ್ದ ಸಕ್ಕರೆಯ ಪ್ರಮಾಣವನ್ನು ಕಡಿಮೆ ಮಾಡಿ ಎಂದು ಆದೇಶಿಸಿತು.

'ಜಗತ್ತಿನ ಸಕ್ಕರೆಯ ಬಟ್ಟಲು' ಎಂದು ಹೆಸರಾದ, ತನ್ನ ಕಾಲ ಮೇಲೆ ನಿಲ್ಲಲು ಕಬ್ಬಿನ ಗದ್ದೆಗಳನ್ನು ಬಲವಾಗಿ ನಂಬಿದ್ದ ಕ್ಯೂಬಾ ಅಮೆರಿಕ ಬೀಸಿದ ದಂಡದಿಂದ ತತ್ತರಿಸಿತು. ಕ್ಯೂಬಾದಿಂದ ಸಕ್ಕರೆ ತರಿಸಿಕೊಳ್ಳುವುದನ್ನು ನಿಲ್ಲಿಸಿದ ಅಮೆರಿಕ ಲ್ಯಾಟಿನ್ ಅಮೆರಿಕದ ಇತರೆ ದೇಶಗಳಿಂದ ಸಕ್ಕರೆ ತನ್ನೆಡೆಗೆ ಬರುವಂತೆ ನೋಡಿಕೊಂಡಿತು. ಇದೇ ಸಮಯಕ್ಕೆ ಸರಿಯಾಗಿ ಕ್ಯೂಬಾದಲ್ಲಿ ಸಕ್ಕರೆ ಉತ್ಪಾದನೆಯೂ ಅನಿರೀಕ್ಷಿತವಾಗಿ ಹೆಚ್ಚಾಯಿತು. ದೇಶದ ತುಂಬಾ ಸಕ್ಕರೆಯ ಹೊಳೆ. ಆದರೆ ಕೊಳ್ಳುವವರಿಲ್ಲ. ಕ್ಯೂಬಾ ಕವಲು ದಾರಿಯಲ್ಲಿ ನಿಂತಿತು.

ಈ ಸಮಯಕ್ಕೆ ಸರಿಯಾಗಿ ಅಮೆರಿಕ ಮತ್ತು ಮೆಕ್ಸಿಕೋದಲ್ಲಿ ಸೋವಿಯತ್ ದೇಶದ ಕೈಗಾರಿಕಾ ಪ್ರದರ್ಶನ ಮುಗಿಸಿ ಮಿಕೋಯಾನ್ ಕ್ಯೂಬಾಗೆ ಕಾಲಿಟ್ಟರು. ಮಾರಾಟ ಪ್ರದರ್ಶನ ಅಚಾನಕ್ಕಾಗಿ ಕ್ಯೂಬಾಗೆ ಹೊಸ ದಾರಿಯನ್ನು ತೋರಿಸಿತು. ಕ್ಯೂಬಾದಲ್ಲಿ ಸಕ್ಕರೆಯ ಹೊಳೆ ಹರಿದ ಅದೇ ಕಾಲಕ್ಕೆ ಸೋವಿಯತ್ ಬರದಿಂದ ತತ್ತರಿಸಿತ್ತು. ಕ್ಯೂಬಾ ಹಾಗೂ ಸೋವಿಯತ್ ದೇಶದ ನಡುವೆ ಸಕ್ಕರೆಯ ಒಪ್ಪಂದವಾಯಿತು. ಸೋವಿಯತ್ ದೇಶ ತಾನು ಪಡೆದ ಸಕ್ಕರೆಗೆ ಪ್ರತಿಯಾಗಿ ಶೇ. 80 ಭಾಗ ಸರಕಿನ ಮೂಲಕ ಶೇ. 20ನ್ನು ಡಾಲರ್ ಮೂಲಕ ಹಣ ಪಾವತಿ ಮಾಡುವ ಒಪ್ಪಂದ ಮಾಡಿಕೊಂಡಿತು.

ಸೋವಿಯತ್ ಹಾಗೂ ಕ್ಯೂಬಾ ನಡುವೆ ಸಕ್ಕರೆ ಒಪ್ಪಂದ ಆಗಿದ್ದೇ ತಡ ಹವಾನಾದಲ್ಲಿ ಬಾಂಬ್‌ಗಳು ಸ್ಫೋಟಗೊಂಡವು. ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನು ಹೊತ್ತ ವಿಮಾನಗಳು ಹವಾನಾದ ಮೇಲೆ ಹಾರಿಬಂದವು. ಅಮೆರಿಕ ಹಾಗೂ ಕ್ಯೂಬಾದ ನಡುವಿನ ಸಂಬಂಧಗಳನ್ನು ಸುಧಾರಿಸಲು ಮಧ್ಯವರ್ತಿಯಾಗಿ ಬಂದ ಮೆಕ್ಸಿಕೋವನ್ನು ಅಮೆರಿಕ ತಳ್ಳಿಹಾಕಿತು.

ಕ್ಯಾಸ್ಟ್ರೋ ಕ್ರಾಂತಿಯ ನಂತರ ಜನರಿಗಾಗಿ ಕೈಗೊಳ್ಳುತ್ತಿದ್ದ ಒಂದೊಂದು ಕ್ರಮ ಅಮೆರಿಕದ ಮೂಗಿಗೆ, ತನ್ನ ಬುಡದಲ್ಲಿಯೇ ಒಮ್ಮೆ ಚಿವುಟಿದರೆ ಸಾಕು ಇಲ್ಲವಾಗಬಹುದಾದ ದೇಶವೊಂದು ಹೊಸ ಸಿದ್ಧಾಂತದತ್ತ ಹೊರಳುತ್ತಿದೆ ಎಂಬ ವಾಸನೆ ಬಡಿಯಿತು. ಈ ಸಮಯಕ್ಕೆ ಸರಿಯಾಗಿ ಸೋವಿಯತ್‌ನೊಡನೆ ಆದ ಒಪ್ಪಂದವನ್ನು ಅಮೆರಿಕ ತನ್ನ ಮೂಗಿನ ನೇರಕ್ಕೆ ಬಳಸಿಕೊಂಡಿತು. ಹೊಸ ಖಂಡದಲ್ಲಿ ಕಮ್ಯುನಿಸಂನ್ನು ಹರಡಲು ಪ್ರಯತ್ನಿಸಲಾಗುತ್ತಿದೆ ಎಂದು ಜಗತ್ತಿಗೆ ಚೀರಿ ಹೇಳಿತು. ಆದರೆ ಕ್ಯೂಬಾದ ಕ್ಯಾಸ್ಟ್ರೋ ಸರ್ಕಾರ ಸಕ್ಕರೆ ರಫ್ತಿನ ಒಪ್ಪಂದ ಮಾಡಿಕೊಳ್ಳುವುದಕ್ಕೆ ಮುನ್ನ ಅಮೆರಿಕದ ಕೈಗೊಂಬೆಯಾಗಿದ್ದ ಬ್ಯಾಟಿಸ್ಟಾ ಸರ್ಕಾರ ಸಹಾ ಸೋವಿಯತ್ ದೇಶಕ್ಕೆ ಸಕ್ಕರೆ ಕಳಿಸುತ್ತಿತ್ತು ಎಂಬ ಸಂಗತಿಯನ್ನು ಮುಚ್ಚಿಹಾಕಿತು.

ಜಗತ್ತಿನ ಪಶ್ಚಿಮದ ಭಾಗಕ್ಕೆ ಕಮ್ಯುನಿಸಂ ಹಾಗೂ ಅದರ ಜೊತೆಗಿನ ಎಲ್ಲಾ ಕರಾಳತೆಯನ್ನು ತರಲು ಕ್ಯೂಬಾ ಯತ್ನಿಸುತ್ತಿದೆ. ಕ್ಯೂಬಾದ ಮೂಲಕ ಈ ಭಾಗಕ್ಕೆ ನುಗ್ಗಲು ಕಮ್ಯುನಿಸ್ಟ್ ರಾಷ್ಟ್ರಗಳು ಪ್ರಯತ್ನಿಸುತ್ತಿವೆ ಎಂದೂ ಆರೋಪಿಸಲಾಯಿತು. ಅಮೆರಿಕದ ಅಧ್ಯಕ್ಷ ಐಸನ್ ಓವರ್ ಫಿಡಲ್ ಕ್ಯಾಸ್ಟ್ರೋ ಸರ್ಕಾರದ ವಿರುದ್ಧ ಆರ್ಥಿಕ ಯುದ್ಧ ಆರಂಭಿಸಿದರು. ಕ್ಯೂಬಾದಿಂದ ಬರುತ್ತಿದ್ದ

7 ಲಕ್ಷ ಟನ್‌ಗಳ ಅಮದಿಗೆ ಕೊನೆ ಹಾಡಿದರು. ಸಕ್ಕರೆ ಎಂಬುದು ಕೇವಲ ಮಾರುವ ಹಾಗೂ ಕೊಳ್ಳುವ ಸರಕಲ್ಲ. ಅದು ಎರಡು ದೇಶಗಳ ನಡುವಿನ ರಾಯಭಾರಿ ಎಂದು ಪತ್ರಿಕೆಗಳು ಬರೆದವು.

ರಾಯಭಾರ ಕೊನೆಗೊಂಡಿತ್ತು. ಫಿಡೆಲ್ ಕ್ಯಾಸ್ಟ್ರೋ ಸಹಾ ಬಂದದ್ದನ್ನು ಎದುರಿಸಲು ಸಜ್ಜಾದರು. ಅಮೆರಿಕ ಸರ್ಕಾರ ನಿಲ್ಲಿಸಿದ ಒಂದು ಟನ್ ಸಕ್ಕರೆಗೆ ಪ್ರತಿಯಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ರಾಷ್ಟ್ರೀಕರಿಸುವುದಾಗಿ ಘೋಷಿಸಿದರು. ಸಕ್ಕರೆ ಕಾರ್ಖಾನೆಗಳು ಕ್ಯೂಬಾದ ತೆಕ್ಕೆಗೆ ಬಂದವು. ಅಮೆರಿಕ ನಿಲ್ಲಿಸಿದ 7 ಲಕ್ಷ ಟನ್ ಸಕ್ಕರೆ ಆಮದಿಗೆ ಪ್ರತಿಯಾಗಿ ಸೋವಿಯತ್ ದೇಶ ಈ ಸಕ್ಕರೆ ಕೊಳ್ಳಲು ಮುಂದೆ ಬಂತು. ಇದರೊಂದಿಗೆ ಚೀನಾ ಸಹ ಮೊತ್ತಮೊದಲ ಬಾರಿಗೆ ಸಕ್ಕರೆ ಕೊಳ್ಳಲು ಮುಂದಾಯಿತು. ಸೋವಿಯತ್ ದೇಶ ಮತ್ತು ಚೀನಾದೊಡನೆ ಏರ್ಪಟ್ಟ ವ್ಯಾಪಾರ ಸಂಬಂಧದಿಂದಾಗಿ ಕ್ಯೂಬಾದ ನಾಯಕರು ಮೇಲಿಂದ ಮೇಲೆ ಆ ದೇಶಗಳಿಗೆ ಭೇಟಿ ನೀಡಿದಾಗ ಹೊಸ ಸತ್ಯಗಳು ಗೋಚರಿಸಲು ಆರಂಭಿಸಿದವು. ಇದುವರೆಗೂ ಅಮೆರಿಕ ಈ ದೇಶಗಳ ಬಗ್ಗೆ ನೀಡುವುದಕ್ಕಿಂತ ಭಿನ್ನವಾದ ಚಿತ್ರ ದೊರೆಯಿತು.

ಅಮೆರಿಕ ಸಿಐಎಯನ್ನು ಕ್ಯಾಸ್ಟ್ರೋ ಸರ್ಕಾರ ಉರುಳಿಸಲು 'ಛೂ' ಬಿಟ್ಟಿತು. ಇದು ಕ್ಯೂಬಾವನ್ನು ಸೋವಿಯತ್ ದೇಶಕ್ಕೆ ಇನ್ನಷ್ಟು ಹತ್ತಿರ ತಂದಿತು. ಕ್ಯೂಬಾದ ಮಗ್ಗುಲಲ್ಲಿಯೇ ಅಮೆರಿಕದ ನೌಕಾನೆಲೆ ಇದ್ದದ್ದರಿಂದ, ಅಮೆರಿಕದ ಕಂಪನಿಗಳನ್ನು ರಾಷ್ಟ್ರೀಕರಿಸಿದ್ದರಿಂದ ಸದಾ ಕ್ಯೂಬಾ ಅಮೆರಿಕದ ದಾಳಿಯನ್ನು ನಿರೀಕ್ಷಿಸುತ್ತಲೇ ಇತ್ತು. ಹವಾನಾದ ಕೈಗಾರಿಕೆಗಳು ಬಾಂಬ್ ದಾಳಿಗೆ ಗುರಿಯಾಗ ತೊಡಗಿದವು. ಮತ್ತೆ ಕ್ಯೂಬಾ ಸೋವಿಯತ್ ದೇಶದ ಕಡೆ ನೋಡಿತು. ಶಸ್ತ್ರಾಸ್ತ್ರಗಳು ಸೋವಿಯತ್‌ನಿಂದ ಕ್ಯೂಬಾಗೆ ಪ್ರಯಾಣ ನಡೆಸಿದವು. ಇದೇ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ಪದವಿಗೆ ಚುನಾವಣೆ ಘೋಷಣೆಯಾಯಿತು. ಈ ಚುನಾವಣೆಯಲ್ಲಿ ಕ್ಯೂಬಾವೇ ಪಕ್ಷಗಳ ನಡುವಣ ದಾಳಿ ಪ್ರತಿದಾಳಿಯ ವಿಷಯವಾಯಿತು. ಅಮೆರಿಕಾಗೆ ಕೇವಲ 90 ಕಿ.ಮೀ. ದೂರದಲ್ಲಿ ಕಮ್ಯೂನಿಸ್ಟ್ ಹಾವಳಿ: ಲ್ಯಾಟಿನ್ ಅಮೆರಿಕಾದ ದೇಶಗಳಿಗೆ ಕ್ರಾಂತಿಯನ್ನು ರಫ್ತು ಮಾಡಲು ಸೋವಿಯತ್ ದೇಶ ಕ್ಯೂಬಾವನ್ನು ಅಂಗಡಿಯನ್ನಾಗಿ ಮಾಡಿಕೊಂಡಿದೆ ಎಂಬ ಟೀಕೆಗಳು ಎದುರಾದವು. ಯಾವುದೇ ಸರ್ಕಾರ ಬರಲಿ ಕ್ಯೂಬಾದ ಜನರನ್ನು ಈ ಕಮ್ಯುನಿಸಂನಿಂದ ಕಾಪಾಡಬೇಕು ಎಂಬ ನಿರ್ಧಾರಕ್ಕಂತೂ ಬಂದರು.

ಕ್ಯೂಬಾ–ಸೋವಿಯತ್ ದೇಶ ಇನ್ನೂ ನಿಕಟವಾದವು.

ಅಮೆರಿಕ ಆಮದು–ರಫ್ತು ಎರಡಕ್ಕೂ ಕೊನೆ ಹಾಡಿದ್ದರಿಂದಾಗಿ ಕ್ಯೂಬಾ ಉಸಿರಾಡುವುದೇ ಕಷ್ಟವಾಯಿತು. ನಾಲ್ಕು ದಶಕಕ್ಕೂ ಹೆಚ್ಚು ಕಾಲ ಕ್ಯೂಬಾದಲ್ಲಿ ಮೆರೆದಿದ್ದ ಅಮೆರಿಕ ಕ್ಯೂಬಾದ ನೆಲದ ತುಂಬಾ ಹರಡಿದ್ದು ತನ್ನ ಕಂಪೆನಿಯ ಸರಕುಗಳನ್ನೇ. ಈಗ ಸಂಬಂಧ ಹದಗೆಟ್ಟ ನಂತರ ಕ್ಯೂಬಾಗೆ ದಿನನಿತ್ಯದ ಜೀವನಕ್ಕೆ ಬೇಕಾಗಿದ್ದ ತೈಲವೇ ಇಲ್ಲವಾಯಿತು, ಓಡುತ್ತಿದ್ದ ಬಸ್‌ಗಳು ಗದ್ದೆಗಳಲ್ಲಿ ಟಿಲ್ಲರ್‌ಗಳು, ಕೃಷಿಗೆ ಬೇಕಾಗಿದ್ದ ಟ್ರಾಕ್ಟರ್‌ಗಳು, ಕಾರ್ಖಾನೆಗೆ ಬೇಕಾಗಿದ್ದ ಸ್ಪೇರ್‌ಪಾರ್ಟ್‌ಗಳು ಸಿಗದೆ ಕ್ಯೂಬಾ ಕುದಿಯುವ ಎಣ್ಣೆಯಲ್ಲಿ ಬಿದ್ದಂತಾಯಿತು.

ಮತ್ತೆ ಸೋವಿಯತ್ ದೇಶ ತನ್ನ ಕೈಚಾಚಿತು. ಸಕ್ಕರೆ ಕೊಳ್ಳುವುದರಿಂದ ಆರಂಭವಾದ ಸ್ನೇಹ ಕೊನೆಗೆ ದೇಶ ರಕ್ಷಿಸುವವರೆಗೆ ಬೆಳೆಯಿತು. ಅಮೆರಿಕದ ಆರ್ಥಿಕ ದಿಗ್ಬಂಧನದ ಕುಣಿಕೆ ಇನ್ನೂ ಬಲವಾಯಿತು. ಟೊರಿಸೆಲ್ಲಿ ಕಾನೂನು, ಹೆಲ್ಮ್ಸ್ – ಬರ್ಟನ್ ಕಾಯಿದೆಗಳು ಕ್ಯೂಬಾದ ಮೇಲೆ ಸವಾರಿ ಆರಂಭಿಸಿದವು.

ಸೋವಿಯತ್ ದೇಶದೊಂದಿಗಿನ ಸಂಬಂಧ ಬಿಟ್ಟುಬಿಡಿ, ಆರ್ಥಿಕ ದಿಗ್ಬಂಧನ ತೆಗೆದುಬಿಡುತ್ತೇವೆ ಎಂದಿತು ಅಮೆರಿಕ. 'ನಮ್ಮದು ಸಿದ್ಧಾಂತವನ್ನು ಮಾರುವ ಪಕ್ಷವಲ್ಲ' ಎಂದು ಫಿಡಲ್ ಕ್ಯಾಸ್ಟ್ರೋ ಉತ್ತರಿಸಿದರು. ಕುಣಿಕೆ ಇನ್ನೂ ಬಿಗಿಯಾಯಿತು.

ದಿಢೀರ್ ಸೋವಿಯತ್ ಪತನ ಕ್ಯೂಬಾವನ್ನು ಇನ್ನಿಲ್ಲದಂತೆ ಅಲುಗಾಡಿಸಿದೆ. ರಾತ್ರಿ ಕಳೆದು ಬೆಳಗಾಗುವುದರೊಳಗೆ ಕ್ಯೂಬಾ ಬಡತನದತ್ತ ತಳ್ಳಲ್ಪಟ್ಟಿದೆ. ಕ್ಯೂಬಾದ ವಿರುದ್ಧ ಅಮೆರಿಕದ ಬಂದೂಕುಗಳು ಘರ್ಜಿಸುತ್ತಿವೆ.

ಸೋವಿಯತ್ ಹಾಗೂ ಅನೇಕ ಸಮಾಜವಾದಿ ರಾಷ್ಟ್ರಗಳು ಕುಸಿದರೂ ಸಹಾ ಚೀನಾ, ವಿಯೆಟ್ನಾಂನಂತಹ ರಾಷ್ಟ್ರಗಳು ಇವೆ. ಕ್ಯೂಬಾ ಒಂದೇ ಸಮಾಜವಾದಿ ರಾಷ್ಟ್ರವಲ್ಲ. ಆದರೆ ಸಾಮ್ರಾಜ್ಯಶಾಹಿ ನಮ್ಮನ್ನು ಮಾತ್ರ ಗುರಿಮಾಡಿಕೊಂಡಿವೆ ಎನ್ನುತ್ತಾರೆ ಕ್ಯಾಸ್ಟ್ರೋ.

'ಸೋವಿಯತ್ ದೇಶದ ಪತನ ಆ ದೇಶಕ್ಕೆ ಮಾತ್ರ ಆದ ನಷ್ಟವಿಲ್ಲ. ಇಡೀ ಜಗತ್ತಿಗೆ ಅದರಲ್ಲಿಯೂ ಮೂರನೇ ಜಗತ್ತಿನ ದೇಶಗಳಿಗೆ ಆದ ದೊಡ್ಡ ನಷ್ಟ ಗೊರ್ಬಚೇವ್ ಅವರು ಉದ್ದೇಶಪೂರ್ವಕವಾಗಿ ಸೋವಿಯತ್ ದೇಶವನ್ನು ನಾಶಮಾಡಲಿಲ್ಲ. ಸಮಾಜವಾದವನ್ನು ಇನ್ನೂ ಬಲಗೊಳಿಸುವ ನಿಟ್ಟಿನಲ್ಲಿಯೇ ಅವರು ನಡೆದಿದ್ದರು. ಆದರೆ ಅವರು ತುಂಬಾ ಆತುರದಲ್ಲಿ ಇದನ್ನು

ಮಾಡುತ್ತಿದ್ದಾರೆ ಎನಿಸಿತ್ತು. ಗೊರ್ಬಚೇವ್ ಒಂದು ಏಟಿಗೆ ಹಲವು ಸಮಸ್ಯೆಗಳನ್ನು ಬಗೆಹರಿಸಲು ಹೊರಟರು. ಸೋವಿಯತ್‌ನಲ್ಲಿ ಸಮಾಜವಾದವನ್ನು ಇನ್ನೂ ಉತ್ತಮಗೊಳಿಸುವ ನಿಟ್ಟಿನಲ್ಲಿ ಆದ್ಯತೆಗಳನ್ನು ಗುರುತಿಸಿಕೊಳ್ಳಬೇಕಾಗಿತ್ತು.'

'ಸೋವಿಯತ್ ದೇಶದ ಪತನಕ್ಕೆ ಗೋರ್ಬಚೇವ್ ಮಾತ್ರವಲ್ಲ, ಇತರ ಸೋವಿಯತ್ ನಾಯಕರು. ಪಕ್ಷದ ನಾಯಕತ್ವ ಮತ್ತು ಸರ್ಕಾರ ಎಲ್ಲರೂ ಕಾರಣರು. ಇಲ್ಲಿ ನಾನು ಯಾರೊಬ್ಬರ ಹೊಣೆಯಲ್ಲಿ ಎತ್ತಿ ತೋರಿಸುತ್ತಿಲ್ಲ. ಒಟ್ಟಾರೆ ಇದು ಸಾಮೂಹಿಕ ಹೊಣೆಗಾರಿಕೆಯಿಂದ ಆದದ್ದು.'

'ಸೋವಿಯತ್ ದೇಶ ಮೊದಲು ತನ್ನನ್ನು ದುರ್ಬಲ ಮಾಡಿಕೊಂಡಿರದಿದ್ದರೆ ಸಾಮ್ರಾಜ್ಯಶಾಹಿಗೆ ಅದನ್ನು ನಾಶಮಾಡಲು ಸಾಧ್ಯವಿರುತ್ತಿರಲಿಲ್ಲ. ಅಲ್ಲಿ ಸಮಾಜವಾದ ಸಹಜ ಸಾವನ್ನಪ್ಪಲಿಲ್ಲ. ಬದಲಿಗೆ ಅದನ್ನು ಹತ್ಯೆ ಮಾಡಲಾಯಿತು' ಎನ್ನುತ್ತಾರೆ ಕ್ಯಾಸ್ಟ್ರೋ.

ಸೋವಿಯತ್ ದೇಶ ಇಲ್ಲದೆ ಕ್ಯೂಬಾ ಇನ್ನಷ್ಟು ಕಷ್ಟಗಳ ಮಧ್ಯೆ ಈಜುತ್ತಿದೆ. ತನ್ನ ಜನರಿಗೆ ಕಷ್ಟಗಳನ್ನು ವಿವರಿಸಿ ಅದನ್ನು ಎಲ್ಲರೂ ಸೇರಿ ಗೆಲ್ಲುವ ವಿಶ್ವಾಸ ತುಂಬಿದೆ. 'ಕ್ಯೂಬಾದಲ್ಲಿ ಕೊನೆಯ ಕ್ರಾಂತಿಕಾರಿ, ಕೊನೆಯ ಕಮ್ಯುನಿಸ್ಟ್ ಇರುವವರೆಗೂ ಅದು ಸಾಮ್ರಾಜ್ಯಶಾಹಿಯತ್ತ ಮರಳುವುದಿಲ್ಲ' ಎಂಬುದನ್ನು ಗಟ್ಟಿದನಿಯಲ್ಲಿ ಜಗತ್ತಿಗೆ ತಿಳಿಸಿ ಹೇಳಿದೆ.

ಈ ಕಾರಣಕ್ಕಾಗಿಯೇ ಕ್ಯೂಬಾ ಸಂಕಷ್ಟಗಳ ಮಧ್ಯೆಯೂ ಜಗತ್ತಿನ ಹಲವು ದೇಶಗಳ ಸಹಾಯಹಸ್ತವನ್ನು ಹಿಡಿದು ಮುಂದೆ ಮುಂದೆ ಸಾಗುತ್ತಿದೆ.

'ಸೋವಿಯತ್ ಪತನವಾದ ನಂತರ ಅಮೆರಿಕದ ಪತ್ರಿಕೆಗಳು ಕ್ಯೂಬಾ ಕ್ರಾಂತಿಯ ಕೊನೆಯ ಗಂಟೆಗಳು, ಫಿಡೆಲ್ ಕ್ಯಾಸ್ಟ್ರೋನ ಕೊನೆಯ ನಿಮಿಷಗಳು, ಕ್ಯೂಬಾ ಸಮಾಜವಾದದ ಕೊನೆ ಎಂದು ಭವಿಷ್ಯ ನುಡಿದವು. ಆದರೆ ಇಷ್ಟು ವರ್ಷಗಳ ನಂತರ ಗಂಟೆ ನಿಮಿಷವನ್ನು ಲೆಕ್ಕ ಹಾಕುವವರು ಸಿಗುತ್ತಿಲ್ಲ' ಎನ್ನುತ್ತಾರೆ ಕ್ಯಾಸ್ಟ್ರೋ.

**– ನನ್ನೊಳಗಿನ ಹಾಡು ಕ್ಯೂಬಾ**
**ಬಹುರೂಪಿ**

# ಹೆರ್ಮಿಟೇಜ್ ಮ್ಯೂಸಿಯಂ

**–ಡಾ. ಲತಾ ಗುತ್ತಿ**

ಜಗತ್ಪ್ರಸಿದ್ಧ ಮ್ಯೂಸಿಯಂಗಳಲ್ಲಿ ಇಲ್ಲಿಯ 'ಹೆರ್ಮಿಟೇಜ್ ಮ್ಯೂಸಿಯಂ' ಕೂಡಾ ಒಂದು ಮೊದಲು ಇದು ಝಾರ್ ಚಕ್ರವರ್ತಿಗಳ ವೈಭವೋಪೇತ ಅರಮನೆಯಾಗಿತ್ತು. ನೇವಾ ನದಿಯ ದಂಡೆಯ ಮೇಲಿರುವ ಈ ಅರಮನೆ ರಾಜರ ಚಳಿಗಾಲದ ಅರಮನೆ ಎಂದೇ ಪ್ರಸಿದ್ಧಿ ಪಡೆದಿತ್ತು. ಅಂದು ಅವರು ಮೆರೆದ ಸಂದರ್ಭಗಳು. ಕ್ರೂರವಾಗಿ ಜನರನ್ನು ಬಳಸಿಕೊಂಡ ಸಂದರ್ಭಗಳು, ಕ್ರಾಂತಿ ಸಂದರ್ಭದಲ್ಲಿ ಪಟ್ಟ ಬಿಟ್ಟು ಇಳಿದು ಜನಸಾಮಾನ್ಯರಾದದ್ದು, ಈ ಮ್ಯೂಸಿಯಂ ಮುಂದೆ ನಿಂತು ಕಣ್ಮುಂದೆ ತಂದುಕೊಂಡರೆ 'ಮಾಡಿದ್ದುಣ್ಣೋ ಮಾರಾಯಾ' ನಾಣ್ಣುಡಿ ನೆನಪಾಯಿತು.

ಮಳೆ ಒಂದೇ ಸಮನೆ ಸುರಿಯುತ್ತಿತ್ತು. ತಣ್ಣಗೆ ಚಳಿಯೂ ಕೊರೆಯುತ್ತಿತ್ತು. ಆದರೂ ಜನರು ಕ್ಯೂದಲ್ಲಿ ನಿಂತು ಮುಂದೇ ಮುಂದೆ ಸರಿಯುತ್ತಲೇ ಇದ್ದರು. ಟಿಕೆಟ್ ಕೌಂಟರಿನಲ್ಲಿ ನಾವು ಎರಡು ಸಾವಿರ ರೂಬಲ್ಸ್ ಕೊಟ್ಟು ಎರಡು ಟಿಕೆಟ್‌ಕೊಂಡು ಮ್ಯೂಸಿಯಂ ಒಳಗಡೆ ಪ್ರವೇಶಿಸಬೇಕಾದರೆ 1 ಗಂಟೆಗಿಂತಲೂ ಹೆಚ್ಚು ಸಮಯ ಕಳೆಯಬೇಕಾಯಿತು.

ಪ್ರವೇಶದ್ವಾರ ದಾಟಿ ಒಳಗೆ ಬಂದರೆ ದೊಡ್ಡ ದೊಡ್ಡ 4 ಸೌಧಗಳು ಒಂದಕ್ಕೊಂದು ಹೊಂದಿಕೊಂಡು ನಿಂತಂತಿದೆ. ಅಂದಂದಿನ ರಾಜರು ತಮ್ಮ ಐಶಾರಾಮಿಗೆ ಹೇಗೆ ಬೇಕೋ ಹಾಗೇ ಅರಮನೆಗಳು ಕಟ್ಟಿಸಿಕೊಂಡಿದ್ದರು. ನಂತರ ವಸ್ತು ಸಂಗ್ರಹಾಲಯ ಮಾಡುವ ಸಂದರ್ಭದಲ್ಲಿ ಅವುಗಳನ್ನೆಲ್ಲಾ ಒಳಗಡೆಯಿಂದ ಹೊರಗಡೆಯಿಂದ ಜೋಡಿಸಿ ಅಂದ ಹೆಚ್ಚಿಸಲಾಗಿದೆ.

ಅರಮನೆ ಅಂದರೆ ಅರಮನೆ ಹೇಳಿ ಕೇಳಿ ಝಾರ್ ಚಕ್ರವರ್ತಿಗಳ ಅರಮನೆ, ಬೆರಗು ಪಟ್ಟುಕೊಳ್ಳುತ್ತಲೇ ಒಳಗೆ ಹೆಜ್ಜೆ ಇಟ್ಟೆವು. ಈ ಹಿಂದೆ ಫ್ರಾನ್ಸ್‌ಗೆ ಹೋದಾಗ ಅಲ್ಲಿಯ ಚಕ್ರವರ್ತಿ ಲೂಯಿಯ ಅರಮನೆಗಳು–ಮ್ಯೂಸಿಯಂಗಳು ನೋಡಿ ದಿಗ್ಭ್ರಾಂತಳಾಗಿದ್ದೆ. ಅಲ್ಲಿಯೂ ಫ್ರೆಂಚ್ ಕ್ರಾಂತಿಯಾಗಿ ಲೂಯಿ ದೊರೆಯನ್ನ ಅವನ ಕುಟುಂಬದವರನ್ನು ಕತ್ತುಕೊಯ್ದು (ಗೆಲೇಟಿನ್) ಕೊಲೆ ಮಾಡಿ ದೇಶವನ್ನು ವಶಪಡಿಸಿಕೊಂಡಿದ್ದು ದೊಡ್ಡ ಇತಿಹಾಸವೇ ಇದೆ. ನನ್ನ 'ಯೂರೋನಾಡಿನಲ್ಲಿ ಪ್ರವಾಸ ಕಥನದಲ್ಲಿ (1993) ಸ್ವಲ್ಪ ಪರಿಚಯಿಸಿದ್ದೇನೆ.

ಇಂಗ್ಲೆಂಡಿನ ಅರಮನೆ– ಅವರ ಮ್ಯೂಸಿಯಂಗಳನ್ನೂ ನೋಡಿ ಆಶ್ಚರ್ಯಪಟ್ಟಿದ್ದೆ. ಏನೀದೇನಿದು ಇವರ ವೈಭವ–ಜೊತೆಗೆ ಅನೇಕ ದೇಶಗಳನ್ನು ಸದೆಬಡಿದು ಸಂಗ್ರಹಿಸಿದ ಅಮೂಲ್ಯ ವಸ್ತು ಸಂಗ್ರಹಗಳೆಂದು ಇಲ್ಲಿಯೂ ಅಂತಹದ್ದೇ ಒಂದು ಕಥೆ ಇದೆ ಎಂದು ಗೊತ್ತಿದ್ದೇ ನೋಡಲನುವಾದೆವು.

ಪ್ಯಾಲೇಸ್ ಸ್ಕ್ವೇರ್‌ನಲ್ಲಿರುವ ಚಕ್ರವರ್ತಿಗಳ ಚಳಿಗಾಲದ ಅರಮನೆಯಾದ ಇದು ಜಗತ್ಪ್ರಸಿದ್ಧ ಮ್ಯೂಸಿಯಂ ಆಗಿ ಜಗತ್ತಿನಾದ್ಯಂತ ಇರುವ ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿದೆ. ಇಲ್ಲಿ ನೂರಾರು ಕೋಣೆಗಳಿವೆ. ನೀವು ಅಲ್ಲಿ ಏನು ನೋಡಬೇಕೆನ್ನುವುದು ನಿಮಗೆ ಬಿಟ್ಟಿದ್ದು ಎಂದು ಡೆನಿಸ್ ಹೇಳಿದನು.

ಮ್ಯೂಸಿಯಂ ಅಂದರೆ ಮ್ಯೂಸಿಯಂ ಎಲ್ಲವೂ ಅಪರೂಪದ ವಸ್ತುಗಳು ನೋಡಲೇಬೇಕಲ್ಲವೆ ಅಂದೆವು.

ನೀವು ಹೇಳುವುದೇನೋ ಸರಿ ನಿಮ್ಮ ನಿಮ್ಮ ಆಸಕ್ತಿ, ಕೆಲಸ ಹವ್ಯಾಸ, ಸಮಯ ಅಂತ ಏನೇನೋ ಇರುತ್ತವೆಯಲ್ಲ ಅದಕ್ಕೆ ಹೇಳಿದೆ. ಅಂದರೆ ಚಿತ್ರಕಲಾಕಾರರಿದ್ದರೆ ಚಿತ್ರ ಬಣ್ಣಗಳ ಸಂಯೋಜನೆ, ಬಡಿಗ ಇದ್ದರೆ ಮರದ ಕೆತ್ತನೆ ಕುಸುರಿ ಕೆಲಸ, ಕಲ್ಲುಕುಟಿಗ ಇದ್ದರೆ ವಿವಿಧ ಕಲ್ಲುಗಳು ಅವುಗಳಲ್ಲಿ ಕೊರೆದ ಅಳವಡಿಸಿದ ಕಲೆ, ವಜ್ರ ಚಿನ್ನದ ವ್ಯಾಪಾರಿಗಳಿದ್ದರೆ ರಾಜರಾಣಿಯರ ಕಿರೀಟ ಅಥವಾ ಒಟ್ಟಾರೆಯಾದ ಆಭರಣಗಳ ವಿನ್ಯಾಸ, ಟೈಲರ್ ಇದ್ದರೆ ರಾಜ ವೈಭೋಗದ ವಸ್ತ್ರಗಳು, ಕಿಟಕಿ, ಕರ್ಟನ್‌ಗಳ ವಿನ್ಯಾಸಗಳು, ಗಾರ್ಡನರ್ ಇದ್ದರೆ ಇಲ್ಲಿ ಕಟ್ಟಡದ ಮೇಲಿನ ಟೇರೇಸ್‌ನಲ್ಲಿ ಮಣ್ಣು ತುಂಬಿದ ನೆಲದಲ್ಲಿ ವಿವಿಧ ತಳಿಗಳ ಹೂವು ಗಿಡ ಮರ ಬಳ್ಳಿಗಳೂ ಇವೆ.... ಹೀಗೆ ಉದ್ದನೆಯ ಪಟ್ಟಿಕೊಡತೊಡಗಿದ.

ಹಾಗಾದರೆ ಸಾಹಿತಿಗಳಿದ್ದರೆ ಇಲ್ಲೇನು ನೋಡುವುದಿದೆ ಎಂದೆ.

ಡೆನಿಸ್ ಹಣೆತುಂಬ ಗಂಟು ಹಾಕಿಕೊಂಡು ಹುಬ್ಬು ಮೇಲೇರಿಸಿ ಯೋಚಿಸತೊಡಗಿದ. ಆದರೂ ಅವನು ಜಾಣನೆನ್ನಬೇಕು. ಒಟ್ಟಾರೆಯಾಗಿ ಇದನ್ನೆಲ್ಲ ನೋಡಿದ ಮೇಲೆ ಅಲ್ಲವೆ ಸಾಹಿತಿಗಳು ತಮ್ಮ ಬರವಣಿಗೆಗೆ ಬಳಸಿಕೊಳ್ಳುವುದು ಅಂದ. ಅದಿರಲಿ, ನಮ್ಮ ದೇಶದಲ್ಲಿ ಮಹಾನ್ ಸಾಹಿತಿಗಳಿದ್ದಾರೆ, ಇದ್ದರು. ಅವರ ಪುಸ್ತಕಗಳ ಬೃಹತ್ ಗ್ರಂಥಾಲಯವೂ ಇದೆ. ಪುಷ್ಕಿನ್, ಟಾಲ್‌ಸ್ಟಾಲ್, ದೊಸ್ಟೋವಸ್ಕಿ ಅವರ ಹೆಸರಿನ ಗ್ರಂಥಾಲಯಗಳನ್ನು ಸಾಹಿತಿಗಳಿದ್ದವರು ನೋಡಬಹುದು ಎಂದು ಹೇಳುತ್ತ ಅದಾವುದೋ

ಕೋಣೆಯ ನಂಬರ್ ಹೇಳಿದ (ನಂತರ ಅದನ್ನು ಮರೆತೆವು). ಸಂಜೆಯವರೆಗೂ ನಿಮಗೇನು ಬೇಕೋ ಅದನ್ನು ನೋಡಿಕೊಂಡು ಬನ್ನಿ ಎಂದು ಹೇಳಿ ನಮ್ಮನ್ನು ಪ್ರವೇಶದ್ವಾರದಿಂದ ಒಳಗಡೆ ಕಳಿಸಿ ಹೊರಟು ಹೋದನು.

ಹೊರನೋಟದಲ್ಲಿ ಬಿಳಿಕಲ್ಲಿನ ಕಟ್ಟಡ ಒಳಗೆ ಹೆಜ್ಜೆ ಇಡುತ್ತಿದ್ದಂತೆ ಇಟಾಲಿಯನ್ ಮಾರ್ಬಲ್ ಮತ್ತು ಗ್ರಾನೈಟ್ ಕಲ್ಲುಗಳಿಂದ ಹೊಂದಿಸಿಲಾದ ನೆಲ. ಶುಭ್ರವಾದ ದೊಡ್ಡ ದೊಡ್ಡ ಕೊಠಡಿಗಳು ಕಿಟಕಿಗಳು ಬೆಲೆಬಾಳುವ ಕರ್ಟನ್‌ಗಳು ನೆಲಹಾಸುಗೆಗಳು, ಗೋಡೆಗಳ ಮೇಲೆ ಚಿತ್ರಕಲೆಗಳ ಆಕರ್ಷಣೆ, ಬಂಗಾರಲೇಪಿತ ಸೋಫಾ ಟೇಬಲ್‌ಗಳು ಹೀಗೆ ಏನೆಲ್ಲಾ ಏನೆಲ್ಲಾ ಏನೆಲ್ಲಾ....

ರಷ್ಯಾ ಸಾಮ್ರಾಜ್ಯದ ಚಕ್ರವರ್ತಿ ಎಂದು ಘೋಷಿಸಿಕೊಂಡಿದ್ದ ಪೀಟರ್ (1703ರಲ್ಲಿ) ತನ್ನ ಈ ಅರಮನೆಯ ಒಂದು ಭಾಗದಲ್ಲಿ ಬೆಲೆ ಬಾಳುವ ವಸ್ತುಗಳ ಸಂಗ್ರಹಕ್ಕೆ ತೊಡಗುತ್ತಾನೆ. ನಂತರ ಮಗಳು ಎಲಿಜಬೆತ್ ನಂತರ ಕ್ಯಾಥರೀನ್1– ನಂತರ ಎರಡನೆಯ ಕ್ಯಾಥರೀನ್ ಇದರ ವಿಸ್ತರಣೆಯಲ್ಲಿ ತೊಡಗಿಕೊಂಡಿದ್ದಾರೆ. 1764ರಲ್ಲಿ ಎರಡನೆಯ ಕ್ಯಾಥರೀನ್ ತನ್ನ ಯುರೋಪ ಪ್ರವಾಸದಲ್ಲಿದ್ದಾಗ ಅಲ್ಲಿಯ ಹೆಸರಾಂತ ಚಿತ್ರ ಕಲೆಗಳಿಗೆ ಆಕರ್ಷಿತಳಾಗಿ 225 ಚಿತ್ರಗಳನ್ನು (paintings) ಕೊಂಡು ಕೊಂಡಾಗ ಅದನ್ನು ಹೊಂದಿಸಲು ಈ ವಸ್ತು ಸಂಗ್ರಹಾಲಯ ಇನ್ನೂ ವಿಸ್ತರಿಸಲಾಯಿತು.

ರಾಜ–ರಾಣಿಯರಿಗೇನು ಹಣದ ಕೊರತೆಯೆ? ಸುಂದರವಾಗಿ ಕಂಡದ್ದೆಲ್ಲ ತಮಗೇ ಬೇಕೆನ್ನುವ ಆಸೆ ಸಹಜ. ಬೇರೆ ಬೇರೆ ದೇಶಗಳ ಕೆಲವು ಮ್ಯೂಸಿಯಂಗಳನ್ನೇ ಇಡಿಯಾಗಿಕೊಂಡು ಇಲ್ಲಿ ಸೇರಿಸಿಕೊಂಡಿದ್ದಾರೆ. ಈವರೆಗೆ ಸುಮಾರು 30 ಲಕ್ಷ ವಸ್ತುಗಳ ಸಂಗ್ರಹವಿದೆಯಂತೆ. (ಏನು ಬೇಕಾದರೂ ನೋಡಿಕೊಳ್ಳಲಿ ಎಂದು ಬಹುಶಃ ಡೆನಿಸ್ ನಮ್ಮನ್ನು ಒಳಗೆ ಕಳಿಸಿ ಹೋದನೆನಿಸಿತು) 5 ಲಕ್ಷ ವರ್ಷಗಳ ಹಿಂದಿನ ಮಣ್ಣು, ಕಲ್ಲು, ಜೀವಿಗಳ ಪಳಿಯುಳಿಕೆಗಳ ಸಂಗ್ರಹಗಳಿಂದ ಹಿಡಿದು ಇಂದಿನವರೆಗಿನ ವಸ್ತುಗಳ ಸಂಗ್ರಹಗಳು ಅದ್ಭುತ.

ಇಲ್ಲಿ ಬಹುತೇಕ ಎಲ್ಲ ದೇಶಗಳ ಅಪರೂಪದ ಅಷ್ಟೇ ಮಹತ್ವದ ವಸ್ತುಗಳನ್ನು ನೋಡಬಹುದು. ಗ್ರೀಕ್ ರೋಮ್, ಇಂಡಿಯಾ, ಚೈನಾ ಯುರೋಪಿನ ಅನೇಕ ಭಾಗಗಳ ಸಂಸ್ಕೃತಿ ಕಲೆಗಳನ್ನು ಬಿಂಬಿಸುವ ಒಂದೊಂದು ವಿಭಾಗಗಳಿವೆ.

ಇಟಾಲಿಯನ್ ಮಾರ್ಬಲ್‌ಗಳಲ್ಲಿ ಸೂಕ್ಷ್ಮವಾಗಿ ಕೆತ್ತಿದ ವಿಗ್ರಹಗಳನ್ನು

ನೋಡುವುದೇ ಒಂದು ಖುಷಿ. ಭೂಮಂಡಲವನ್ನೇ ಹೊತ್ತ ಬಲಿಷ್ಠ ಅಟ್ಲಾಂಟಸ್, ವೀನಸ್, ಗ್ರೀಕಿನ ಡಯಾನಾ ದೇವತೆಗಳು, ರೋಮಿನ ಯೇಸು ಮತ್ತು ತಾಯಿ ಇಂತಹ ಅನೇಕ ವಿಗ್ರಹಗಳು ಇಲ್ಲಿವೆ. ಸಂದರ್ಭಕ್ಕನುಗುಣವಾಗಿ ಹಾವಭಾವನೆಗಳು ಎಷ್ಟೊಂದು ನಯವಾಗಿ ಈ ಕಲ್ಲುಗಳಲ್ಲಿ ಕೆತ್ತಿದ್ದಾರೆಂದರೆ ಅತೀ ನೈಜವಾಗಿ ನಮ್ಮ ಮುಂದೆ ನಿಂತಂತೆಯೇ ಇದ್ದಾರೆನಿಸುತ್ತದೆ. ಕಂಚಿನ ವಿಗ್ರಹಗಳ ಸಂಗ್ರಹವೂ ಸಾಕಷ್ಟು ಸಾಕಷ್ಟು.

ನನಗೆ ಪ್ರಿಯವಾದ ವರ್ಣಚಿತ್ರಗಳ ಗ್ಯಾಲರಿಗೆ ಬಂದಾಗ ನಿಜಕ್ಕೂ ಕಲಾಕಾರರ ಕೈಚಳಕಕ್ಕೆ ಅಬ್ಬಬ್ಬಾ ಎನ್ನದೆ ಇರಲಾಗಲಿಲ್ಲ. ಅಷ್ಟೊಂದು ಮನ ಸೆಳೆಯುತ್ತವೆ. ಮೈಕಲ್ ಎಂಜಿಲೊ, ಲಿಯೋನಾರ್ಡೋ ಡಾ. ವಿಂಚಿ, ರೆಂಬ್ರಾಂಟ್, ರ್‍ಯಾಫಲ್, ವ್ಯಾನ್‌ಗಾಗ್, ಪೀಟರ್ ಪಾಲ್ ರೂಬೆನ್ಸ್, ಫ್ಯಾಬ್ಲೊ ಪಿಕಾಸೋ, ಎಡ್ಗರ್ ಡಿಗಾಸ್, ಮುಂತಾದವರ ವರ್ಣ ಚಿತ್ರಗಳು, ಎಲ್ಲವೂ ಒಂದಕ್ಕಿಂತ ಒಂದು ವಿಶೇಷ. ಚಿತ್ರಗಳ ಬಣ್ಣದ ಹೊಂದಾಣಿಕೆ, ಹಿನ್ನೆಲೆಯಾಗಿ ಭೂಮಿ ಆಕಾಶದ ಸಹಜತೆ ಮೆರಗು ಕೊಟ್ಟಿವೆ.

ಹಾಗೆಯೇ ನೋಡುತ್ತಾ ನೋಡುತ್ತಾ ಮುಂದೆ ನಡೆಯುತ್ತಿದ್ದಂತೆ ಅದೊಂದು ಚಿತ್ರ ನನ್ನನ್ನು ತಡೆದು ನಿಲ್ಲಿಸಿಬಿಟ್ಟಿತು. ಅದು ಜಾರ್ಜಿಯನ್ ಬಿಡಿಸಿದ 'ಜ್ಯೂಡಿತ್' ಚಿತ್ರಣ. 15ನೆಯ ಶತಮಾನದ್ದೆಂದು ಅಡಿಟಿಪ್ಪಣಿಯಲ್ಲಿದೆ. ಜ್ಯೂಡಿ (ದೇವತೆ ಎಂದುಕೊಳ್ಳೋಣ) ಎನ್ನುವ ಪ್ರಾಯದ ಹುಡುಗಿಯೊಬ್ಬಳು ತನ್ನ ಕೈಯಲ್ಲಿ ಕತ್ತಿ ಹಿಡಿದು ಅದೇ ಕತ್ತುಕೊಯ್ದು ದುಷ್ಟನ ತಲೆಯ ಮೇಲೆ ಕಾಲಿಟ್ಟು ನಿಂತಿದ್ದಾಳೆ. ಬಹುಶಃ ಆತ ಅತ್ಯಾಚಾರಿ ಇರಬೇಕು. ಅವಳು ತೊಟ್ಟಬಟ್ಟೆ ಹರಿದಿದೆ. ರಕ್ತ ಸಿಕ್ತವಾಗಿದೆ. ದುಷ್ಟನನ್ನು ಚಚ್ಚಿಕೊಂದು ಹುಲ್ಲು ಪೊದೆಗಳಲ್ಲಿ ಎಸೆದು ಮೆಟ್ಟಿ ನಿಂತೆ ಎನ್ನುವ ನಿರಾಳ ಭಾವ ಅವಳ ಮುಖದಲ್ಲಿ ಎದ್ದು ಕಾಣುತ್ತಿದೆ. ಹಿಂದಿನ ದೃಶ್ಯ ಕಲ್ಲಿನ ಕಟ್ಟೆ–ಅದರಾಚೆ ಮರ, ದೂರದಲ್ಲಿ ಸಮುದ್ರದಲೆಗಳು–ಅದರಾಚೆ ಸಮುದ್ರ ಆಕಾಶ ಒಂದಾಗಿದೆ. ಎಷ್ಟೊಂದು ಅರ್ಥಪೂರ್ಣ. ನಮ್ಮ ಕಾಳಿ ದುರ್ಗೆಯರು ನೆನಪಾದರು. ರಾಕ್ಷಸ ಮನುಷ್ಯರನ್ನು ಕೊಂದು ರುಂಡಮಾಲಿನಿಯರಾಗಿ ಉಗ್ರ ಸ್ವರೂಪದ ಕಣ್ಣು – ನಾಲಿಗೆ ಚಾಚಿ ಹಣೆ ತುಂಬ ಕುಂಕುಮ ಅರಿಷಿಣ ಹಾಕಿಕೊಂಡು ಹುಲಿಯೊ ಸಿಂಹದ ಮೇಲೆಯೊ ವಿಜಯೋತ್ಸವ ಆಚರಿಸುತ್ತ ಹೊರಟದೇವತೆಯರು. ಇವೆಲ್ಲ ಚಿತ್ರಗಳನ್ನು ಮನಸ್ಸಿನ ಪಟಲದ ಮೇಲಿಟ್ಟುಕೊಂಡು ನೋಡಿದೆ. ಎರಡೂ

ಅವರವರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಸಮಾನ ಅರ್ಥವನ್ನೇ ಕೊಟ್ಟವು. ಅಂತರಾಳದಲ್ಲಿರುವ ಹೆಣ್ಣಿನ ತುಮುಲ –ತಲ್ಲಣಗಳು ರೌದ್ರಾವತಾರ ತಾಳಿ ಸ್ಫೋಟಿಸುವ ಕ್ಷಣ ಇದೆಯಲ್ಲ ಅದು ಅದು ಯಾವ್ಯಾವ ಹಂತಕ್ಕೆ ಒಯ್ಯುತ್ತದೆ ಎನ್ನುವುದು ಹೇಳಲಾಗದು.

ಆರ್ಟ್ ಗ್ಯಾಲರಿಗಳಲ್ಲಿ ಅಲ್ಲಲ್ಲಿ ಒಳ್ಳೊಳ್ಳೆಯ ಸೋಫಾಗಳಿವೆ. ಕಲಾಪ್ರಿಯರು ಅಥವಾ ಅಧ್ಯಯನಕಾರರು ಕುಳಿತು ಬೇರೆ ಬೇರೆ ದೃಷ್ಟಿಕೋನದಿಂದ ನೋಡಿ ಅಧ್ಯಯನ ಮಾಡುತ್ತಿರುತ್ತಾರೆ. ನಾವು ಆಗಲೇ 3 ಗಂಟೆ ಸುತ್ತಿದ್ದೆವು. ಚಾಕ್ಲೆಟ್ ಬಾಯಿಗೆ ಹಾಕಿಕೊಂಡು 10 ನಿಮಿಷ ಸೋಫಾದಲ್ಲಿ ಕುಳಿತು ನಾವು ವಿಶ್ರಾಂತಿ ಪಡೆದೆವು.

ಒಂದು ಕೊಠಡಿಯ 3–4 ಶಾಖೆಗಳಲ್ಲಿಯಂತೂ ಕ್ರಿಸ್ತನ ಜನನದಿಂದ ಕೊನೆಗೆ ಶಿಲುಬೆಗೇರುವ – ಇಳಿಸುವವರೆಗಿನ ಚಿತ್ರಗಳು ಹೇಳತೀರದಷ್ಟು ರಾಮಾಯಣ–ಮಹಾಭಾರತದ ಮಹಾಕಾವ್ಯಗಳಂತೆ ಇಲ್ಲಿ ಕ್ರಿಸ್ತನ ಕಥನದ ಚಿತ್ರ ಕಾವ್ಯ ಉತ್ಕೃಷ್ಟಮಟ್ಟವಾದದ್ದು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಮತ್ತೊಂದು ಅತೀ ದೊಡ್ಡ ಕೊಠಡಿ. ಅಲ್ಲಿ ಅತಿಯಾದ ಉದ್ದನೆಯ ಸಾಲು. ಏನೆಂದು ನಾವೂ ದೂರದಿಂದಲೇ ನೋಡಿದೆವು. ಎತ್ತರೆತ್ತರದ ಧಡೂತಿ ರಷ್ಯನ್ ಸೆಕ್ಯೂರಿಟಿಯವರು ಸುತ್ತಾಡುತ್ತಿದ್ದರು. ಅಲ್ಲಿಯ ಬೋರ್ಡ್ ಓದಲು ಅಥವಾ ಭಾಷೆಯದೇ ತೊಂದರೆ, ಆದರೂ ಅಲ್ಲಿ ಏನಿದೆಯೆಂದು ಕಂಡು ಹಿಡಿಯಲು ಸ್ವಲ್ಪ ಸಮಯ ತೆಗೆದುಕೊಂಡಿತಾದರೂ ನಾವು ಒಳಗೆ ಹೋಗಲಿಲ್ಲ. ಇಲ್ಲಿ ಝಾರ್ ಅರಸರು ರಾಣಿಯರು ಬಳಸುತ್ತಿದ್ದ ವಜ್ರ ವೈಢೂರ್ಯಗಳನ್ನೊಳಗೊಂಡ ವಿಧವಿಧವಾದ ಆಭರಣಗಳ ಸಂಗ್ರಹಾಲಯವೆಂದು, ಅಲ್ಲಿ ಯಾರನ್ನೂ ಬಿಡುವುದಿಲ್ಲ. ಹೊರಗಿನಿಂದ ಕಂಡಷ್ಟೇ ನೋಡಬಹುದಷ್ಟೇ. ನಾವು ಸಾಲು ಹಚ್ಚಲಿಲ್ಲ. ಈ ಹಿಂದೆ ಇಂಗ್ಲೆಂಡ್ ಫ್ರಾನ್ಸ್‌ದಲ್ಲಿದ್ದಾಗ ಇಂಥದೊಂದೆರಡು ಮೂರು ಮ್ಯೂಸಿಯಂಗಳನ್ನು ನೋಡಿದ್ದೆವು. ನಮ್ಮ ಕೊಹಿನೂರು ವಜ್ರದ ಕಿರೀಟ ಮುಂತಾದವುಗಳನ್ನು ಅತೀ ಹತ್ತಿರದಿಂದ ನೋಡಿಯಾಗಿತ್ತು.

ಈಗ ದೊಡ್ಡ ದೊಡ್ಡ ಹೆಜ್ಜೆ ಹಾಕುತ್ತ ಕಣ್ಣಿಗೆ ಬಿದ್ದಷ್ಟು ವಸ್ತುಗಳನ್ನು ನೋಡುತ್ತ ದಾಟತೊಡಗಿದೆವು. 30 ಲಕ್ಷ ವಸ್ತುಗಳನ್ನು ಹೇಗೆ ನೋಡುವುದು ಎಷ್ಟು ಸಮಯ ಕಳೆದರೂ ಮುಗಿಯಲಾರದ ಸಂಗ್ರಹ ಎಂದುಕೊಂಡು ನಡೆದೆವು. ನಾವು ಎಲ್ಲೆಲ್ಲಿ ಹೇಗೆ ನಡೆದು ಬಂದೆವೋ ಏನೂ ಗೊತ್ತಾಗಲಿಲ್ಲ. ಆದರೆ ಮರತೇ ಹೋಗಿದ್ದ

ಗ್ರಂಥಾಲಯ ಕಣ್ಣಿಗೆ ಬಿತ್ತು. ಏನು ಮಾಡುವದೆಂದು ಗ್ರಂಥಾಲಯದ್ದೂ ಒಂದು ಸಂಭ್ರಮ ನೋಡದೇ ಬರುವುದೇ ಎಂದವರೆ ಒಳಗೆ ಹೊಕ್ಕೆವು.

ಒಳಗಡೆ ಪುಸ್ತಕ ಸಂಗ್ರಹಗಳ ದೊಡ್ಡ ಭಂಡಾರ. ಇಲ್ಲಿಯೂ ರಷ್ಯಾ ಇತಿಹಾಸದ ದೊಡ್ಡ ವಿಭಾಗವೇ ಇದೆ. (ಕಲ್ಕತ್ತಾದ ಬೃಹತ್ ಗ್ರಂಥಾಲಯದ ನೆನಪಿಗೆ ಬಂತು) ಹಾಗೆಯೇ ಬೇರೆ ಬೇರೆ ದೇಶಗಳ ಪುಸ್ತಕ–ಪತ್ರಿಕೆ–ಸಂಶೋಧನಾ ವಿಭಾಗಗಳೆಂದು ವಿಂಗಡಿಸಿದ ಕೊಠಡಿಗಳಿದ್ದು ಆಸಕ್ತರು ಗಂಭೀರವಾಗಿ ಓದುತ್ತಿದ್ದರು. ಸಂಶೋಧಕರಿರಬಹುದು ಏನೇನೋ ಹುಡುಕಾಟದಲ್ಲಿದ್ದರು ನಾವೂ ಹೀಗೇ ಒಂದು ಸುತ್ತು ಕಣ್ಣಾಡಿಸಿ ಮುಂದೆ ನಡೆದವು.

4 ಗಂಟೆಗಳ ನಮ್ಮ ಸುತ್ತಾಟದಲ್ಲಿ ಈ ಸಂಗ್ರಹಾಲಯದಲ್ಲಿ ನೋಡುವುದೆಷ್ಟೋ ಬಾಕಿ ಉಳಿದೇ ಹೋಯಿತು. ಸಮಯ ಓಡುತ್ತಿದ್ದಂತೆ ನಾವು ಓಡಲೇಬೇಕಲ್ಲವೇ.

ಮ್ಯೂಸಿಯಂದಿಂದ ಹೊರಗೆ ಬಂದಾಗ ಇನ್ನೂ ಮಳೆ ಜೋರಾಗಿ ಸುರಿಯುತ್ತಲೇ ಇತ್ತು. ಸಮಯ 4–30 ಮೋಡ ಮಳೆಯಿಂದ ಸಂಜೆಯಾದಂತಹ ವಾತಾವರಣ. ನಮಗೆ ಇಲ್ಲಿಂದ ಹೇಗೆ ನಮ್ಮ ಬ್ರಿಸ್ಟಾಲ್ ಹೋಟೆಲ್ ತಲುಪುವುದೆಂದು ಸಮಸ್ಯೆ ಎದುರಾಯಿತು. ಇದು ಮತ್ತೆ ಭಾಷೆಯ ಸಮಸ್ಯೆ ಮೇಲಾಗಿ ಈ ಮ್ಯೂಸಿಯಂನ ಹೊರಗಿನ ವಿಶಾಲವಾದ ಅಂಗಳದಲ್ಲಿ ಯಾವ ಟ್ಯಾಕ್ಸಿಗಳೂ ಕಾಣಿಸಲಿಲ್ಲ. ಪ್ರಯತ್ನಪಟ್ಟು ಕೇಳಿದ್ದಕ್ಕೆ ಟ್ಯಾಕ್ಸಿ, ಬಸ್ಸು ಬೇಕೆಂದರೆ ಸ್ವಲ್ಪ ದೂರ ನಡೆದು ಹೋಗಬೇಕೆಂದರು. ಓಲಾ, ಉಬರ್ ಟ್ಯಾಕ್ಸಿ ಸಂಪರ್ಕಿಸಿದರೂ ಅರ್ಥವಾಗದ ಮಾತುಗಳು. ನಡೆದಾದರೂ ಹೊರಗಡೆ ಹೋಗೋಣವೆಂದರೆ ಮಳೆಯ ರಭಸ ಹೇಳತೀರದು. ನಮ್ಮ ಬೆಚ್ಚಗಿನ ಉಡುಪು ಈ ಚಳಿಯ ಮಳೆಯ ಕೊರೆತಕ್ಕೆ ಸಾಕಾಗಲಿಲ್ಲ. ಕೊಡೆ ಬೇರೆ ಇಲ್ಲ. ಡೆನಿಸ್‌ನಿಗೆ ಫೋನ್ ಮಾಡಿದರೆ, ಚಿಂತಿಸಬೇಡಿ ಹೋಟೆಲ್ ವಿಳಾಸ ಇರುವ ಕಾರ್ಡ್ ತೋರಿಸಿ, ರಷ್ಯನ್ ಭಾಷೆಯಲ್ಲೂ ಇದೆ ಎಂದನು.

ಬೆಳಿಗ್ಗೆ 9 ಗಂಟೆಗೆ ತಿಂಡಿ ತಿಂದವರು ಇಲ್ಲಿಯವರೆಗೆ ಸುತ್ತಿ ಸುತ್ತಿ ಹಸಿವೆ ಕೂಡಾ ಆಗಿತ್ತು. ಸ್ವಲ್ಪ ಆ ಕಡೆ ಈ ಕಡೆ ಸುತ್ತಾಡುತ್ತಿದ್ದಂತೆ ಒಂದೆಡೆಗೆ 3–4 ಸಾರೋಟಿನಂತ ರಿಕ್ಷಾಗಳು ಕಂಡವು. ಅವರನ್ನು ವಿಚಾರಿಸಿದರೆ ಓಲಾಕ್ಕಿಂತ 4 ಪಟ್ಟು ಹೆಚ್ಚಿನ ಹಣ ಕೇಳುತ್ತಿದ್ದರು. ಬಹುಶಃ ಪ್ರವಾಸಿಗರಿಗೆ. ಅಂದಿನ ರಾಜ ರಾಣಿಯರು ಕುಳಿತು ಹೋಗುವ ಸಾರೋಟಿನ ಪರಿಚಯ ಮಾಡಿಕೊಡುತ್ತಿದ್ದರು.

ಫೋಟೋ, ವಿಡಿಯೋ, ತೆಗೆಸಿಕೊಳ್ಳಲು ಅಂಗಳದಲ್ಲಿಯೇ ನಿಂತಿರುತ್ತೇವೆ ಎಂದರು ಡ್ರೈವರ್‌ಗಳು. ಬೇಕಿದ್ದರೆ ನಗರ ಪ್ರದಕ್ಷಿಣೆಗೆ ಇದರಲ್ಲೂ ಮಾಡಬಹುದೆಂದರು. ನಮಗೂ ಸಮಯದ ಕೊರತೆ ಹಣ ಹೊಂದಿಸಿಕೊಂಡು ಸಾರೋಟು ಏರಿದೆವು. ನಮ್ಮ ಡ್ರೈವರ್ ವಾನ್ಯಾಗೆ ಅಡ್ರೆಸ್ಸ್ ಕೊಟ್ಟೆವಷ್ಟೇ. ಅವನೇನು ಹೇಳುತ್ತಿದ್ದನೋ ಏನೋ! ಬೆಚ್ಚನೆಯ ಉಣ್ಣೆಯ ಹೊದಿಕೆಗಳನ್ನು ತೆಗೆದುಕೊಟ್ಟ. ಮಳೆಹನಿಗಳು ಒಳಗೆ ಬರಬಾರದೆಂದು ತೆಳುವಾದ ನಾಜೂಕಿನ ಪ್ಲಾಸ್ಟಿಕ್ ಬಾಗಿಲು ಹಾಕಿದ. ಒಳಗೆ ಐಶಾರಾಮಿಯಾಗಿ ಕೂಡುವ ವ್ಯವಸ್ಥೆ ಇತ್ತು.

ನಮ್ಮ ರಾಯಲ್ ಸಾರೋಟು ಮುಖ್ಯ ರಸ್ತೆಗೆ ಬಂದು ಹೊರಟಿತು. ಜಗತ್ಪ್ರಸಿದ್ಧ ವಾಹನಗಳು ಅಗಲವಾದ ರಸ್ತೆಗಳ ಮೇಲೆ ಓಡಾಡುತ್ತಿದ್ದರೆ ನಮ್ಮ ಬಚ್ಚಾ ಸಾರೋಟು ರಸ್ತೆಯ ಅಂಚಿನಿಂದ ಓಡತೊಡಗಿತು. ಈಗೆರಡು ದಿನಗಳಿಂದ ಸುತ್ತಾಡಿದ ಪ್ರಸಿದ್ಧ ನೇವಾಸ್ಕಿ ಪ್ರಾಸ್ಪೆಕ್ಟ್ ರಸ್ತೆಯಿಂದ ದಾಟುತ್ತಿದ್ದೆವು. ಅಲ್ಲಲ್ಲಿ ಕೊಡೆ ಹಿಡಿದುಕೊಂಡು ಗುಂಪು ಗುಂಪಾಗಿ ನಿಂತಿದ್ದ ಪ್ರವಾಸಿಗರು ನಮ್ಮ ಸಾರೋಟನ್ನೇ ನೋಡುತ್ತಿದ್ದಾರೆನಿಸುತ್ತಿತ್ತು. ನಮ್ಮ ಡ್ರೈವರ್ ಎತ್ತರದ ವಾನ್ಯಾ ಬೆಚ್ಚನೆಯ ತುಪ್ಪಳದ ಕೋಟು ಹಾಕಿಕೊಂಡು ತಲೆಗೆ ಪೇಟಾ ತರಹ ವುಲನ್ ಟವಲ್ ಸುತ್ತಿಕೊಂಡು ಗಂಭೀರವಾಗಿ ವಾಹನ ಚಲಾಯಿಸುತ್ತಿದ್ದ.

ಗುತ್ತಿಯವರು ಆಗಾಗ ಅವನಿಗೆ ಏನೇನೋ ಕೇಳುತ್ತಿದ್ದರು. ಆದರೆ ಅವನದು ಒಂದೇ ಮಾತು 'ಹೋಟೆಲ್ ಬ್ರಿಸ್ಟಾಲ್, ರಾಸ್ತಾನ್ಯಾ ಯುಲಿತ್ಸಾ' ಎಂದು ತಲೆ ಅಲ್ಲಾಡಿಸುತ್ತಿದ್ದ. ನಿಮಗೆ ಈ ವಿಳಾಸದ ಹೋಟೆಲ್‌ಗೆ ತಲುಪಿಸುತ್ತೇನೆ ಚಿಂತಿಸಬೇಡಿ ಎನ್ನುವಂತಿತ್ತು ಅವನ ಮಾತು. ನೇವಾಸ್ಕಿ ರಸ್ತೆಯ ಮೇಲೆ ಸಾರೋಟಿನಲ್ಲಿ ಸುತ್ತಾಡುವವರು ಯಾರೂ ಕಾಣಿಸಲಿಲ್ಲ. ನಮ್ಮದೊಂದೇ ಗಾಡಿ. ರಾಷ್ಟ್ರ ನಾಯಕರು ಓಡಾಡುವ ಅತೀ ಪ್ರಮುಖ ರಸ್ತೆ. ಇಲ್ಲಿ ಯಾವತ್ತೂ high alert security ಇರುತ್ತದೆ. ಸಿ.ಸಿ. ಕ್ಯಾಮರಾಗಳಿರುತ್ತವೆ ಎಂದು ಮೊದಲನೆಯ ದಿನವೇ ಡೆನಿಸ್ ರಸ್ತೆಯ ಪರಿಚಯಿಸಿದ್ದು ನೆನಪಿಸಿಕೊಂಡೆವು. ನಾವು ಯಾಕಾದರೂ ಈ ಸಾರೋಟು ಹತ್ತಿದೆವೋ ಅನಿಸಿತು ಆ ಕ್ಷಣ. ಅಂತೂ ಇಂತು ವಾನ್ಯ ವೇಗವಾಗಿ ಸಾರೋಟು ಓಡಿಸಿ ಬ್ರಿಸ್ಟಾಲ್ ಮುಂದೆ ಬಂದು ನಿಲ್ಲಿಸಿದಾಗ ಸುಸ್ತಾಗಿದ್ದ ನಾವು ನೆಮ್ಮದಿಯ ಉಸಿರುಬಿಟ್ಟು ಇಳಿದೆವು.

ಹೋಟೆಲ್ ಒಳಗಡೆ ಕೌಂಟರ್‌ದಲ್ಲಿ ಬೀಗ ತೆಗೆದುಕೊಳ್ಳಲು ಹೋದಾಗ ಸ್ವಾಗತಕಾರಿಣಿಯ ಜೊತೆ ನಮಗಾದ ಸಾರೋಟ ಅನುಭವ ಮಾತನಾಡುವಾಗ

ಇಷ್ಟೊಂದು ಹಣ ಯಾಕೆ ಕೊಟ್ಟಿರಿ ಡ್ರೈವರಿನಿಗೆ, ಮೋಸ ಹೋಗಿದ್ದಿರಿ ಎಂದಳು. ಇಲ್ಲಿಯೂ ಹೀಗೆಲ್ಲಾ ನಡೆಯುತ್ತದೆಯೋ ಎಂದಾಗ 'ಹೌದು ಪ್ರವಾಸಿಗರಿಗೆ ಮೋಸ ಮಾಡುವವರು ಎಲ್ಲ ಕಡೆಗೂ ಇರುತ್ತಾರೆ. ನೀವು ಇನ್ನು ಮುಂದೆ ಹುಷಾರಾಗಿರಿ' ಎಂದು ಹೇಳಿದಾಗ ಆಶ್ಚರ್ಯವಾಯಿತು.

ಆದರೆ ಪೀಟರ್‌ಬರ್ಗ್‌ದ ನೇವಾಸ್ಕಿ ರಸ್ತೆಯ ಮೇಲೆ ನಮ್ಮ ಸಾರೋಟ ಪ್ರಯಾಣದಲ್ಲಿ ನಾವು Royal look ದ ಮಜಾ ತೆಗೆದುಕೊಂಡದ್ದು, ಮನಸ್ಸಿನಲ್ಲಿ ಎಂದೆಂದೂ ಮರೆಯಲಾರದಂತಹ ಅನುಭವವಾಗಿ ಉಳಿಯಿತು.

ಸುಸಂಸ್ಕೃತ ದೇಶವೆನಿಸಿಕೊಂಡಿರುವ ರಷ್ಯಾದಲ್ಲಿಯೂ ಹೇಗೆ ಮೋಸ ಹೋಗುತ್ತೀರಿ ಎನ್ನುವ ಚರ್ಚೆ ನಮ್ಮಲ್ಲಿ ನಡೆದಿತ್ತು.

ರಷ್ಯಾದಲ್ಲಿ ಬೇಸಿಗೆಯ ವಿಶೇಷವೆಂದರೆ ಜೂನ್‌ದಿಂದ ಆಗಸ್ಟ್ ಕೊನೆಯವರೆಗೆ ಸುದೀರ್ಘ ಹಗಲು ಇರುತ್ತದೆ. ಶ್ವೇತರಾತ್ರಿ ಸೂರ್ಯ 9ರ ಸುಮಾರಿಗೆ ಮುಳುಗಿದರೂ ರಾತ್ರಿ 11 ಗಂಟೆಯವರೆಗೆ ಬೆಳಕಿರುತ್ತದೆ. ಬೆಳಗ್ಗೆ 4 ಗಂಟೆಗೆ ಎದ್ದು ನೋಡಿದರೆ ಸ್ಪಷ್ಟವಾದ ಬೆಳಗು. ಆಗಸ್ಟ್‌ದಲ್ಲಿ ನಾವಿಲ್ಲಿದ್ದುದರಿಂದ ನಮಗೆ ಈ ಅನುಭವ ವಿಚಿತ್ರವೆನಿಸಿತು. ರಾತ್ರಿ 11–12ರ ಸಮಯವಾದರೂ ಜನರು ಊರೆಲ್ಲ ಸುತ್ತಾಡುತ್ತಿರುತ್ತಾರೆ. ಹೊಟೇಲ್‌ಗಳು, ಕಾಫಿಹೌಸ್, ಮ್ಯೂಸಿಕ್ ಡಾನ್ಸ್ ಎಲ್ಲೆಲ್ಲೂ ಬೋಟಿನಲ್ಲಿ ಕೇಕೆ ಕೇಳಿಸುತ್ತದೆ. ನದಿ ಕಾಲುವೆಗಳು ಮೇಲೆ ಪೀಟರ್‌ಪಾಲ್ ಅರಮನೆಗಳ ಮೇಲೆ ಬಾಲ್ಟಿಕ್ ಸಮುದ್ರ ದ್ವೀಪಗಳಲ್ಲಿ ಈ ಮಧ್ಯರಾತ್ರಿಯ ಬೆಳಕು ನೋಡುವುದೆಂದರೆ ಯಾವುದೋ ಇಂಗ್ಲಿಷ್ ಪತ್ತೇದಾರಿ ಸಿನೇಮಾದ ಚಿತ್ರಣಗಳು ನೆನಪಿಗೆ ಬಂದವು. ಏನೇ ಆಗಲಿ ಈ ಚಂದಗಾರಿಕೆಯನ್ನು ಬೈನಾಕ್ಯುಲರ್‌ದಿಂದ ದೂರ ದೂರದವರೆಗೆ ನಡುರಾತ್ರಿಯ ಬೆಳಕಿನ ಪೀಟರ್ಸ್‌ಬರ್ಗ್ ನೋಡಿದೆವು. ನೆನಪಿನಲ್ಲಿ ಉಳಿಯುವಂಥದು.

ರಷ್ಯಾದಲ್ಲಿ ಇತ್ತೀಚೆಗೆ ನಡೆದ ಫಿಫಾ ವಿಶ್ವಕಪ್ ಸಂದರ್ಭದಲ್ಲಿ ಮಾಫಿಯಾ ಕಳ್ಳರ ವ್ಯವಸ್ಥಿತ ಜಾಲ ಹೇಗೆ ಕೆಲಸ ಮಾಡಿತ್ತೆಂದು ನನ್ನ ಸಿಂಧಿ ಪ್ರವಾಸಿ ಸ್ನೇಹಿತರು ಹೇಳುತ್ತಿದ್ದರು. ಇಲ್ಲಿ ಪೊಲೀಸರಿಗಿಂತ ಮಾಫಿಯಾಗಳು, ಕಳ್ಳರು ಹೇಗೆ ನಗರವನ್ನು ನಿಯಂತ್ರಿಸುತ್ತಾರೆ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಗಮನಿಸಬಹುದು.

–ವಿದೇಶಿ ಪ್ರವಾಸಿಗರನ್ನು ಹಾಡು ಹಗಲೇ ದರೋಡೆ ಮಾಡುವುದು.

–ಮಾರುಕಟ್ಟೆ ಮಳಿಗೆಗಳ ಮೇಲೆ ದಾಳಿಮಾಡಿ ಹಫ್ತಾ ವಸೂಲಿ ಮಾಡುವುದು.

–ದೊಡ್ಡ ದೊಡ್ಡ ಉದ್ಯೋಗ ವಹಿವಾಟುಗಳನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸುವುದು.

–ರಷ್ಯಾದ ಸುತ್ತಮುತ್ತಲಿನ (ಒಕ್ಕೂಟದಿಂದ ಹೋರಹೋದ) ದೇಶಗಳಿಂದ ಕೆಲಸಕ್ಕೆ ಬಂದ ಕಾರ್ಮಿಕರನ್ನು ಶೋಷಿಸುವುದು– ಇತ್ಯಾದಿ.

ನಮ್ಮ ದೇಶದಲ್ಲೂ ಇಂಥದ್ದಿದೆ. ಇನ್ನೂ ದೊಡ್ಡ ಮಟ್ಟದ್ದು. (ವಿದೇಶಿ ಮಹಿಳೆಯರನ್ನು ಬಳಸಿ ಸಾಯಿಸುವವರೆಗೂ ಛೇ ಛೇ)

ಪ್ರವಾಸಿ ಏಜೆನ್ಸಿಗಳಲ್ಲಿ ಟಿಕೆಟ್ ಪಡೆಯುವಾಗ ಪ್ರವಾಸಿಗರು ದರೋಡೆಗೊಳಗಾಗದೆ ಹೇಗೆ ಬರುವುದು ಎನ್ನುವ ಮಾರ್ಗದರ್ಶಿ ಪುಸ್ತಕಗಳಿರುತ್ತವೆ. ಅವನ್ನು ಪ್ರವಾಸಿಗಳು ಎಲ್ಲೇ ಯಾವ ದೇಶಕ್ಕೆ ಹೋಗುತ್ತಿದ್ದರೂ ಓದಬೇಕು.

ನಮ್ಮ ಪ್ರವಾಸಿ ಗುಂಪಿನ ಪಂಜಾಬಿ ಹುಡುಗರು ರಾತ್ರಿ ಹಡಗು ಬಂದರದ ಚೆಂದಗಾರಿಕೆ (ಬ್ರಿಡ್ಜ್ ಮೇಲೇರಿ ಇಳಿಯುವಿಕೆ) ನೋಡಲು ಹೋಗಿ ಹಣ ಕಳೆದುಕೊಂಡು ಬಂದು ಗೋಳಾಡುತ್ತಿದ್ದರು. ಸುದೈವಕ್ಕೆ ಪಾಸ್‌ಪೋರ್ಟ್ ಇನ್ನಿತರ ಮಹತ್ವದ ಕಾಗದ ಪತ್ರಗಳು ಒಬ್ಬನ ಹತ್ತಿರವೇ ಇದ್ದವಂತೆ. ಹಡಗು ಬಂದರಿನಲ್ಲಿ ಕುಡಿದು ಮೋಜು ಮಜ ಮಾಡಿ ತಡರಾತ್ರಿ ಕೋಣೆಗೆ ಬಂದ ಇವರು ಟೇಬಲ್ ಮೇಲಿನ ಹೂದಾಣಿ ಕೈತಪ್ಪಿ ಕೆಳಗೆ ಬಿದ್ದು ಒಡೆದುಹೋಯ್ತೆಂದರು. ಅದಕ್ಕೆ ಹಣ ಕೊಡಲೇಬೇಕಾಗುತ್ತದೆ ಎಂದು ಸ್ವಾಗತ ಕಾರಣಿ ಹೇಳಿದಾಗ ಇನ್ನೂ ಸುಸ್ತಾಗಿ ಹೋದರು.

ಪ್ರವಾಸಿಗರು ವಿದೇಶಗಳಲ್ಲಿ ಬಹಳ ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ಇರಬೇಕಾದುದು, ವ್ಯವಹರಿಸಬೇಕಾದುದು ಅತೀ ಅವಶ್ಯ.

**–ರಷ್ಯ ಎಂದರೆ ರಷ್ಯ,**
**ಸಪ್ನ ಬುಕ್‌ಹೌಸ್**

## ಓದು ಪಠ್ಯ

# ಪಂಪಾಯಾತ್ರೆ

–ವಿ. ಸೀತಾರಾಮಯ್ಯ

ಹಂಪೆ ಪುಣ್ಯಕ್ಷೇತ್ರ; ಇಂಥಾ ಪುಣ್ಯಸ್ಥಳದಲ್ಲಿ ಇಷ್ಟು ಚೇಳು ಮೊಂಡರ ಕಪ್ಪೆಗಳು ಏಕಿವೆಯೊ ಆ ಪಂಪಾಪತಿಗೇ ಗೊತ್ತು. ಮೊಳದುದ್ದ ಮೊಂಡರ ಕಪ್ಪೆ. ಗೇಣುದ್ದ ಚೇಳುಗಳೆ? ಈ ಜನರಿಗೆ ಭಯವೇ ಇಲ್ಲವೇನೋ? ಅವರಿಗಂತೂ ಅದೂ ಸಾಮಾನ್ಯವಾಗಿ ಹೋಗಿದೆ. ಹೊಸದಾಗಿ ಅಲ್ಲಿಗೆ ಆ ದಿನ ತಾನೆ ಹೋಗಿದ್ದ ನಮಗೆ ಮೈಯೆಲ್ಲ ಬೈರಿಗೆ ಹಿಡಿದಂತೆ ಆಗಿತ್ತು. ಏಕಪ್ಪ ಇಲ್ಲಿಗೆ ಬಂದೆವು? ಕಾಮಲಾಪುರದ ಬಂಗಲೆಯಲ್ಲಿ ಇಳಿದು ಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಅನಿಷ್ಟವೇನಾದರೂ ಸಂಭವಿಸಿದರೆ ಗತಿಯೇನು? ಇವನನ್ನು ಬೇರೆ ಜೊತೆಯಲ್ಲಿ ಕರೆದುಕೊಂಡು ಬಂದೆವಲ್ಲ ಎಂದು ನನ್ನ ಜೊತೆಯವರು ಪಶ್ಚಾತ್ತಾಪ ಪಡುವುದಕ್ಕೆ ಆರಂಭಿಸಿದ್ದರು. ಅಲ್ಲಿದ್ದವರು, 'ಭಯವಿಲ್ಲ ಸ್ವಾಮಿ; ಒಂದೇ ಮನಸ್ಸಿನಲ್ಲಿ ಮಲಗಿಕೊಳ್ಳಿ; ಪಂಪಪ್ಪನ್ನ ನಂಬಿ ನಿದ್ದೆ ಹೋಗಿ; ಅವು ಏನು ಮಾಡುತಾವೆ?' ಎಂದರು. ನಮಗೆ ಧೈರ್ಯವಿಲ್ಲ. ಜೀವದಲ್ಲಿ ಜೀವವಿಲ್ಲ. ಇಳಿದುಕೊಂಡಿದ್ದ ಚಿಕ್ಕ ಮನೆಯಿಂದ ಹಾಸುಗೆ ಬಟ್ಟೆಗಳನ್ನೆಲ್ಲ ಹೊರಗೆ ತೆಗೆದುಹಾಕಿ, ಬಟ್ಟೆ ಬಟ್ಟೆಯನ್ನೂ ಕೋಟುಗಳ ಜೇಬುಗಳನ್ನೂ ರುಮಾಲುಗಳ ಸಂದಿಪದರಗಳನ್ನೂ ಮುಡಿಪೆಟ್ಟಿಗೆ ಪಾರಾಯಣ ಪುಸ್ತಕಗಳ ಚೀಲವನ್ನೂ ಒದೊಂದನ್ನಾಗಿ ಕೊಡವಿ, ಒದರಿ, ಚೇಳು ಹಾವುಗಳಾವುವೂ ಇಲ್ಲವೆಂದು ನಿಶ್ಚಯ ಮಾಡಿಕೊಂಡು, ಎಲ್ಲವನ್ನೂ ಹೊತ್ತುಕೊಂಡು ದೇವಸ್ಥಾನದ ಒಳಮಂಟಪಕ್ಕೆ ತೆಗೆದುಕೊಂಡು ಹೋಗಿ, ದೊಡ್ಡದೊಂದು ದೀಪದ ಬೆಳಕಿನಲ್ಲಿ ಒಬ್ಬರು ಕಾವಲು ಕುಳಿತೆವು. ಎದೆಯಲ್ಲಿ ಪುಕಪುಕ ಭಯ. ದೀಪವಿದೆ; ಪಂಪಾವತಿಯ ಅತಿ ನಿಕಟ ಸಾನ್ನಿಧ್ಯದಲ್ಲಿದ್ದೇವೆ; ಅವನು ನಡೆಸಿದಂತಾಗಲಿ ಎಂದು ಸಮಾಧಾನವನ್ನೂ ಧೈರ್ಯವನ್ನೂ ಹೇಳಿಕೊಂಡು ಮಲಗಬಾರದೆ? ಉಹೂಂ, ಬಾಯಿ ಧೈರ್ಯ ಹೇಳುತ್ತಿದ್ದರೂ– ಮನಸ್ಸು ಕೇಳಬೇಕಲ್ಲ. ಎಲ್ಲರೂ ಊಟ ಮಾಡಿ ಹಾಸುಗೆಗಳನ್ನು ಒಬ್ಬರ ಪಕ್ಕದಲ್ಲಿ ಒಬ್ಬರು ಒತ್ತಾಗಿ ಹಾಸಿ ಮಲಗಿಕೊಂಡೆವು. ನಡುನಡುವೆ ಹೆಚ್ಚಾಗಿ ಜಾಗ ಬಿಡಕೂಡದೆಂದು ಕರಾರು ನಡೆಯಿತು. ಒಪ್ಪಂದದ ಮೇರೆಗೆ ಒತ್ತೊತ್ತಾಗಿ ಮಲಗಿದೆವು. ನಮ್ಮ ಐವರ ತಲೆ

ಭಾಗಗಳಿಗೆ ನಡುವೆ ದೀಪವೊಂದು ಉರಿಯುತ್ತಿತ್ತು. ಪಂಪಾಪತಿ ವಿರೂಪಾಕ್ಷೇಶ್ವರನ ದಿವ್ಯ ಸನ್ನಿಧಿಯಲ್ಲಿ ಕೂಡ ಅಷ್ಟು ಪ್ರಕಾಶಮಾನವಾದ 'ಅಖಂಡ' ದೀಪವಿತ್ತೋ ಇಲ್ಲವೋ ತಿಳಿಯದು. ಮೊದಲೆ ಎಚ್ಚರದಿಂದ ಇರಬೇಕೆಂದೂ ಅಕಸ್ಮಾತ್ ಅನಿಷ್ಟ ಸಂಭವಿಸಿದರೆ ಏನು ಮಾಡಬೇಕೆಂದೂ ನಾವಂತೂ ಷರತ್ತುಗಳನ್ನು ಮಾಡಿಕೊಂಡೇ ಇದ್ದೆವಲ್ಲ. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಕದಲು ಮೆದಲದೆ, ಮುತ್ತಿ ಬರುವ ವಿಷಪ್ರಾಣಿಗಳ ಯೋಚನೆಯನ್ನು ಮನಸ್ಸಿನಿಂದ ಸರ್ವ ಪ್ರಯತ್ನದಿಂದಲೂ ದೂರ ಮಾಡುತ್ತ, ಸುಮಾರು ಕಾಲುಗಂಟೆಯ ಕಾಲ ಹಾಗೆಯೇ ಕಳೆದೆವು. ತಟ್ಟನೆ ಮೂರ್ತಿಗಳು ಅಂಬಿನಂತೆ ಮೇಲಕ್ಕೆಗರಿ ನಿಂತು ಷರಟು ಪಂಚೆಗಳನ್ನು ಕೊಡವಿಕೊಂಡರು. ಹಾಸುಗೆ ಬಟ್ಟೆಗಳನ್ನು ಕಾಲಿನಿಂದ ಒದ್ದು, ಚೆಲ್ಲಾಡಿ, ನಮ್ಮ ಕಡೆ ಬಂದು ಎಲ್ಲರನ್ನೂ ಎಬ್ಬಿಸಿಬಿಟ್ಟರು. 'ಏಶ್ರೀ, ಏನೋ ಮೇಲೆ ಬಿತ್ತು; ಹರಿದುಹೋಯಿತು; ಮೈಯೆಲ್ಲ ತಣ್ಣಗಾದಂತಾಯಿತು' ಎಂದರು. ಅಧಿಕಾರಿಯ ಜೋಡಿನ ಸಪ್ಪಳವನ್ನು ಕೇಳಿ ತೂಕಡಿಸುವ ಗುಮಾಸ್ತರು ಬೆಚ್ಚಿಬಿದ್ದು ಏಳುವಂತೆ ಎಲ್ಲರೂ ಎದ್ದು, ಬಟ್ಟೆಗಳಿಂದ ದೂರ ಸರಿದು ನಿಂತೆವು. ದೀಪವನ್ನು ಮೇಲೆತ್ತಿ ಒಬ್ಬರು ಹಿಡಿದುಕೊಂಡರು. ನಾವು ಮೂವರು ಸುಮ್ಮನೆ ಕಕ್ಕಾಬಿಕ್ಕಿಯಾಗಿ ನೋಡುತ್ತ ಕಿಂಕರ್ತವ್ಯಮೂಢರಾಗಿ ನಿಂತೆವು; ನನ್ನ ಮೈಗೂದಲು ನಿಮಿರಿನಿಂತವು; ಯಜಮಾನರು ಹತ್ತಿರವಿದ್ದ ಒಂದು ಗೊಜ್ಜುಗೋಲನ್ನು ಹಿಡಿದುಕೊಂಡು ಬಂದರು. ಅದೇನೊ ಎಲ್ಲಿ ಹೋಯಿತೊ ಎಂದು ನಾಲ್ಕು ಕಡೆ ಹುಡುಕುವುದಕ್ಕೆ ಮೊದಲಾಯಿತು. ಯಾರಿಗೂ ಹಾಸುಗೆಗಳ ಹತ್ತಿರ ಹೋಗಿ ಅವನ್ನು ಮುಟ್ಟುವುದಕ್ಕೆ ಮಾತ್ರ ಧೈರ್ಯ ಇಲ್ಲ. ಯಜಮಾನರೇ ಮುಂದೆ ಬಂದರು. 'ಬೇಡಿ ಸಾರ್, ಸ್ವಲ್ಪ ತಾಳಿ, ಏನೊ–ಹೇಗೊ' ಎಂದು ನಾವು ನಾಲ್ವರೂ ಹೇಳಲು ಅವರು ಹಿಂದೆ ಸರಿದು ನಿಲ್ಲಬೇಕಾಯಿತು. ನಮ್ಮ ಈ ದುಃಸ್ಥಿತಿಯ ಹುಚ್ಚು ಸಂಭ್ರಮವನ್ನು ದೂರದಿಂದ ನೋಡಿದ ಬೈರಾಗಿ ಚೆನ್ನಯ್ಯನು ಅಲ್ಲಿಗೆ ಬಂದು ಎಲ್ಲವನ್ನೂ ಹುಡುಕಿದನು. ಎಲ್ಲಿಯೂ ಯಾವುದೂ ಕಾಣಲಿಲ್ಲ. ಹಾಸುಗೆಗಳನ್ನೆಲ್ಲ ಪುನಃ ಕೊಡವಲು, ಕತ್ತಲೆಯಲ್ಲಿ ಜಾಗ್ರತೆ ಜಾಗ್ರತೆಯಾಗಿ ನನ್ನ ಕಡೆಗೇ ಹರಿದು ಕಪ್ಪಗೆ ಬರುತ್ತಿರುವ ಪ್ರಾಣಿಯೊಂದು ಕಾಣಿಸಿತು. ಚೆನ್ನಯ್ಯನು ನೋಡಿದನು. ಚೇಳೂ ಅಲ್ಲ, ಹಾವೂ ಅಲ್ಲ; 'ಏನು ಸ್ವಾಮಿ, ನಿಮಗೇಕೆ ಇಷ್ಟು ಗಾಬರಿ? ಜೇಡರ ಹುಳ ಬಂದರೆ ಹೀಗೆ ಹುಚ್ಚು ಕುಣಿತ ಶುರು ಮಾಡಿದ್ದೀರಲ್ಲ'

ಎಂದು ಚಪ್ಪಾಳೆ ಹೊಡೆದುಕೊಂಡು ಮೊಳಕಾಲು ಬಡಿದುಕೊಂಡು ನಗುವುದಕ್ಕೆ ಪ್ರಾರಂಭಿಸಿದರು. ಬೇರೊಂದು ಸಮಯದಲ್ಲಿ ಯಾರಾದರೂ ಈ ರೀತಿ ಮಾತನಾಡಿದ್ದರೆ ಅವರಿಗೆ ಗ್ರಹಚಾರ ಬಿಡಿಸುತ್ತಿದ್ದೆವು. ಇತರರಿಗೆ ಗ್ರಹಚಾರ ಬಿಡಿಸುವ ವಿಷಯದಲ್ಲಿ ನಮ್ಮಲ್ಲಿ ಯಾರಿಗೆ ಯಾರೂ ಕಡಿಮೆಯಾದವರಲ್ಲ. ಬಂದ ಕೋಪವನ್ನು ನುಂಗಿಕೊಂಡು ಅವನ ಜೊತೆಯಲ್ಲಿ–ವೀರಾಳುಗಳು– ನಾವೂ ನಗುತ್ತ ನಿಂತೆವು. ರಾಯರು ಇದ್ದವರು. 'ಮೂರ್ತಿ, ಒಳ್ಳೆಯ ಕೆಲಸ ಕೊಟ್ರಿ ಕಾಣ್ರಿ; ಎಂಥ ದಿಗಲು ಹಚ್ಚಿಬಿಟ್ಟಿರಿ' ಎಂದರು. ಮೂರ್ತಿಗಳು 'ನಾನೇನು ಸಾರ್ ಮಾಡಲಿ; ಏನೋ ಮೇಲೆ ಬಿತ್ತು; ಎಷ್ಟೋ ಹೊತ್ತು ನೋಡೋಣ ಎಂದು ಸುಮ್ಮನೆ ಇದ್ದೆ; ಮುಲ ಮುಲ ಎಂದು ಮೈಮೇಲೆ ಹರಿಯಿತು. ಆಮೇಲೆ ಇದೇನು ಬಂತಪ್ಪ ಗ್ರಹಚಾರ ಇಲ್ಲಿ ಮಲಗಿದ್ದರೂ ಎಂದುಕೊಂಡವನು ಎದ್ದು ಬಿಟ್ಟೆ. ಜೇಡರ ಹುಳು ಆಗೋ ಹೊತ್ತಿಗೆ ಸರಿಹೋಯಿತು! ಇನ್ನೇನಾದರೂ ಆಗಿದ್ದಿದ್ದರೆ? ಈ ಹುಳು ತಾನೆ ನೋಡಿ ಸಾರ್, ಅಷ್ಟು ದೊಡ್ಡದನ್ನು ಎಲ್ಲಿಯೂ ನೋಡಿಲ್ಲ ನಾನು' ಎಂದರು.

ಯಜಮಾನರು 'ಎಲ್ಲರೂ ಸರಿಯೆ ಬಿಡಿ, ಅಸಹಾಯಶೂರರು. ನಮಗೆಲ್ಲ ಇಷ್ಟು ಧೈರ್ಯ ಇರುವ ಹೊತ್ತಿಗೇ ನಮ್ಮ ದೇಶೋದ್ಧಾರಕಾರ್ಯ ಈ ಗತಿಗೆ ಬಂದದ್ದು' ಇತ್ಯಾದಿಯಾಗಿ ಒಂದು ದೊಡ್ಡ ಉಪನ್ಯಾಸವನ್ನು ಕೊಟ್ಟರು. ಇಷ್ಟಾದ ಮೇಲೂ ನಮ್ಮ ಕಷ್ಟ ನಿವಾರಣೆಯಾಗಲಿಲ್ಲ; ನಮ್ಮ ಪಿರಿಕಿತನ ದೂರವಾಗಲಿಲ್ಲ.

'ಹಾಸುಗೆ ಗೀಸುಗೆ ಹಾಗೇ ಇರಲಿ, ಸಾರ್; ನೀವು ಯಾರೂ ಏನು ಬೇಕಾದರೂ ಮಾಡಿಕೊಳ್ಳಿ. ನಾನಂತೂ ಮಲಗಿಕೊಳ್ಳುವುದಿಲ್ಲ' ಎಂದು ವೆಂಕಟೇಶಯ್ಯನವರು ಹೇಳಿದರು.

ಯಜ–ಇನ್ನೇನು ಮಾಡುತ್ತೀರಿ, ಆದರೆ?

ವೆಂ–ಹೀಗೇ ಕೂತುಕೊಂಡೊ ನಿಂತುಕೊಂಡೊ ರಾತ್ರಿ ದಬ್ಬುತ್ತೇನೆ.

ರಾಯರು–ನನಗೂ ಹಾಗೇ ತೋರುತ್ತೆ. ಸಾರ್; ದೇವರು ಗೀವರು ಎಲ್ಲ ಸಾಕು. ಚೇಳಿನ ಕೊಂಡಿಯ ದರುಶನದಿಂದಲೇ ಮುಕ್ತಿ ಬಂದಿತು. ಬೆಳಗಾಗುತ್ತಲೂ ಇಲ್ಲಿಂದ ಹೊರಟು, ಊರಿಗೆ ಹೋಗಿ ಸೇರಿಕೊಳ್ಳೋಣ; ಇಲ್ಲಿರುವುದಕ್ಕೆ ನನ್ನ ಕೈಲಿ ಸುತರಾಂ ಆಗುವುದಿಲ್ಲ. ಮಧ್ಯಾಹ್ನ ನೋಡಿದ್ದೇ ಸಾಕು. ಈಗಲೇ ಮೂಟೆ ಕಟ್ಟಿ ಹೊರಡು ಅಂದರೂ ನಾನು ಸಿದ್ಧ.

ಆಗ ಸುಮಾರು ನಮ್ಮಲ್ಲಿ ಎಲ್ಲರಿಗೂ, ವಿಶೇಷವಾಗಿ ಐವರಲ್ಲಿ ಮೂವರಿಗೆ,

ಅದೇ ಭಾವನೆ–ಒಳಗೆ ಮನಸ್ಸಿನಲ್ಲಿ; ಆದರೆ 'ಇಷ್ಟು ದೂರ ಬಂದು ಪಂಪಾ ಸರೋವರ, ವಿಟ್ಠಲಸ್ವಾಮಿ ಗುಡಿ, ಇವನ್ನು ನೋಡಿಕೊಂಡು ಹೋಗದಿದ್ದರೆ ಏನಪ್ಪ' ಎಂದು ಮುಂತಾಗಿ ಮಾತು ಬೆಳೆಯಲು, 'ಬೆಳಗಾಗಲಿ; ಯಾವುದೊಂದೂ ತೀರ್ಮಾನ ಮಾಡೋಣ, ಈಗ ಸಮಯ ಚೆನ್ನಾಗಿಲ್ಲ' ಎಂದು ಎಲ್ಲರೂ ಮನಸ್ಸು ಬಿಗಿಹಿಡಿದು ಪುನಃ ಹಾಗೂ ಹೀಗೂ ಧೈರ್ಯ ಮಾಡಿ ಮಲಗಿಕೊಂಡೆವು. ಭಯದ ತೀವ್ರತೆ ಕಡಿಮೆಯಾಗಿ, ಅದು ಮರೆತು ಹೋಗುವಂತೆ ಏನೇನೋ ಬೇರೆ ಪ್ರಸ್ತಾಪಗಳನ್ನೆತ್ತಿ ಮಾತನಾಡುತ್ತ ಒಬ್ಬೊಬ್ಬರಾಗಿ ನಿದ್ರಾವಶರಾದೆವು. ನಾನು ಕೋಳಾಲಮ್ಮನಿಗೆ ಹರಸಿಕೊಂಡು ನಿರ್ಭಯದಿಂದ ನಿದ್ದೆ ಮಾಡಿದೆ. ಮಧ್ಯಾಹ್ನದ ಸುತ್ತುವಿಕೆಯಿಂದ ಆಯಾಸವಾಗಿದ್ದುದರಿಂದ ಎಲ್ಲರಿಗೂ ಚೆನ್ನಾಗಿಯೇ ನಿದ್ದೆ ಹತ್ತಿತ್ತೆಂದು ಹೇಳಬೇಕು. ಪಂಪಾಪತಿಯ ಅನುಗ್ರಹ; ಯಾರಿಗೂ ವಿಷದ ಬಾಲ ಕುಟುಕಲಿಲ್ಲ!

ಬೆಳಗ್ಗೆ ಏಳುವ ಹೊತ್ತಿಗೆ ಏಳು ಗಂಟೆ ಮೇಲಾಗಿತ್ತು. ರಾತ್ರಿಯೆಲ್ಲ ಬಲವಾಗಿ ಮಳೆ ಬಂದಿದ್ದುದರ ಪ್ರಜ್ಞೆಯೇ ನಮ್ಮಲ್ಲಿ ಯಾರಿಗೂ ಇಲ್ಲ. ಎದ್ದವರು ಸ್ನಾನಾದಿಗಳನ್ನು ತೀರಿಸಿಕೊಂಡು ಬರೋಣವೆಂದು ನದಿಯ ಕಡೆ ಹೋಗಿ ನೋಡಿದರೆ ನದಿ ಐದಾರು ಅಡಿಗಳಷ್ಟು ಮೇಲೆ ಬಂದಿತ್ತು. ಪ್ರವಾಹ ಇನ್ನೂ ಹೆಚ್ಚುತ್ತಲೇ, ನದಿಯ ದಡ ಇನ್ನೂ ಕುಸಿದುಬೀಳುತ್ತಲೇ ಇತ್ತು. ಪ್ರವಾಹದ ಜೋರು ಜಾಸ್ತಿಯಾಗಿದ್ದುದರಿಂದ ಯಾರೂ ಅಲ್ಲಿ ಸ್ನಾನ ಮಾಡದೆ, ದೇವಸ್ಥಾನದ ಒಳಗಣ ಬಾವಿಯಲ್ಲಿಯೇ ಸ್ನಾನಾಚಮನಗಳನ್ನು ತೀರಿಸಿಕೊಂಡೆವು. ಆ ನೀರು ಎಷ್ಟು ಸೊಗಸಾಗಿ ಎಷ್ಟು ಪವಿತ್ರವಾಗಿ ಇತ್ತೋ! ನಮಗೆ ನೀರು ಸೇದುವ ಕಷ್ಟ ತಪ್ಪಲೆಂದು ನಾಲ್ಕು ಐದು ಆಳುದ್ದ ಆಳದ ಬಾವಿ ನಮ್ಮ ಕೈಗೆ ಎಟಕುವಂತೆ ಮೇಲೆ ಬಂದಿತ್ತು. ಹಂಡೆಯಿಂದ ನೀರು ತುಂಬಿಕೊಂಡು ಸ್ನಾನ ಮಾಡುವಂತೆ ನೀರನ್ನು ತುಂಬಿಕೊಂಡು ಸ್ನಾನ ಮಾಡಿದೆವು. ನಮ್ಮ ವಿಷಯದಲ್ಲಿ ನಿರ್ಜೀವ ವಸ್ತುಗಳಿಗೂ ಅಷ್ಟು ಮಮತೆ, ಕರುಣೆ!

ಯಜಮಾನರು ಬಹುನಿಷ್ಠರು; ಅವರಿಗೆ ಕಾಫೀ ಟೀಗಳ ಅಭ್ಯಾಸವಿಲ್ಲ. ನಾನು ಬಹಳ ಕಷ್ಟಪಟ್ಟು ಉರಿಯುವ ಬಿಸಿಲಿನಲ್ಲಿ ಅಂಗಡಿಗೆ ಓಡಿ ಹೋಗಿ ಹೊಸಪೇಟೆಯಿಂದ ಒಂದು ಪೌಂಡು ಪುಡಿಯನ್ನು ತಂದಿದ್ದೆ. ಹಿಂದಿನ ದಿನದ ಅವಸರದಲ್ಲಿ ಕಾಫೀ ಮಾಡಿ ಕುಡಿದು ಹೋಗುವುದಕ್ಕೆ ಆಗಿರಲಿಲ್ಲ. ಅದರ ದುಷ್ಫಲಗಳು ಎಷ್ಟು ಮಹತ್ತರವಾದುವೆಂಬುದು ಯಜಮಾನರಿಗೆ ಆ ಮಧ್ಯಾಹ್ನ

ತಿಳಿದುಬಂದಿತ್ತು. ಬಿಸಿಲು ಬಾಯಾರಿಕೆಗಳಿಂದ ದಣಿದು ಕಂಗೆಟ್ಟು, ಎಳೆಯ ಅಶ್ವತ್ಥಪತ್ರಗಳಂತೆ ಬಾಡಿ, ಹಜಾರ ರಾಮಸ್ವಾಮಿ ದೇವಸ್ಥಾನದ ಹೊರ ಹಜಾರದಲ್ಲಿ ತಂಪಾಗಿ ಮಲಗಿ ಮೂರು ಗಂಟೆಗಳ ಕಾಲ ನಿದ್ರೆ ಮಾಡಿದ್ದುದು ಅವನ ನೆನಪಿನಲ್ಲಿದ್ದಿತು. 'ನಿಮಗೆ ಬೇಕಾದಷ್ಟು ಕಾಫೀ ಮಾಡಿ ಕುಡಿಯಿರಪ್ಪ. ಆಮೇಲೆ ಮುಖಗಳನ್ನು ಪಿಟೀಲು ಕಮಾನುಗಳಂತೆ ಉದ್ದ ಎಳೆಯ ಜೋಲು ಹಾಕಬೇಡಿ' ಎಂದು ಅವರು ಹೇಳಿದರು. ವಸಂತ ಕುಸುಮಗಳ ಹಾಗೆ ನಮ್ಮ ಮುಖ ಕುಸುಮಗಳು ಅರಳಿ ಹಿಗ್ಗಿದವು..... ಹಂಪೆಯ ಕಾಫಿ ಎಷ್ಟು ರುಚಿಯಾಗಿತ್ತೋ! ದೇವತೆಗಳು ಕುಡಿವ ಅಮೃತ ಅತಿ ಮಧುರವಾದುದೆಂದು ಹೇಳುತ್ತಾರೆ. ಅವರಾರಾದರೂ ಹಂಪೆಗೆ ನಾವಿರುವಲ್ಲಿಗೆ ಇಳಿದು ಬಂದಿದ್ದು ನಾವು ಕುಡಿದ ಕಾಫಿಯಲ್ಲಿ ಒಂದು 'ಆರ್ಧ ಕಪ್' ಕುಡಿದಿದ್ದರೆ, ಅವರು ಅಮೃತಪಾತ್ರೆಗಳನ್ನು ಅಧೋಲೋಕದ ಅತಲಜಲದೊಳಕ್ಕೆ ಬಿಸಾಡಿ ಕಾಫಿಯ ಅಭ್ಯಾಸವನ್ನು ಖಂಡಿತವಾಗಿ ಮಾಡಿಕೊಳ್ಳುತ್ತಿದ್ದರೆಂದು ನಾನು ಶಪಥ ಮಾಡಿ ಹೇಳಬಲ್ಲೆ.

ಹಂಪೆಯ ಯಾತ್ರೆಯಲ್ಲಿ ದಾರಿಯುದ್ದಕ್ಕೂ ಯಜಮಾನರೇ ನಮಗೆ ಅನ್ನದಾತರು. ಪರಸ್ಥಳಗಳಲ್ಲಿ ಅವರು ಇತರರ ಕೈಯಲ್ಲಿ ಊಟ ಮಾಡುವವರಲ್ಲ. ಅಡಿಗೆಗೆ ಬೇಕಾದ ಸಮಸ್ತ ಸಂಭಾರದ ಸಾಮಾನುಗಳನ್ನು ಉಪ್ಪು ಉಪ್ಪಿನಕಾಯಿ ಊಟದೆಲೆ ಚೆಕ್ಕೆ ಸೌದೆ ಮೊದಲುಗೊಂಡು ಎಲ್ಲವನ್ನೂ ತಂದಿದ್ದರು. ಇಲ್ಲದ 'ಕಾಷ್ಠ ವ್ಯಸನ'ಗಳನ್ನು ಇವರು ಏಕೆ ಇಟ್ಟುಕೊಳ್ಳುವರೊ! ಎಲ್ಲಿ ಹೋದರೂ ಈ ಹಾಳು ಸಂಸಾರ ಹೊತ್ತುಕೊಂಡು ಹೋಗುತ್ತಾರಲ್ಲ; ಹೋಗುವ ಕಡೆ ಹೇಗೋ ಹಾಗೆ ಸುಲಭವಾಗಿ ತಿಂಡಿತೀರ್ಥಗಳಿಗೆ ಸರಿ ನೋಡಿಕೊಂಡು ಹೋಗಬಾರದೆ? ಎಂದು ಅಂದುಕೊಳ್ಳುತ್ತಿದ್ದೆವು. ನಾವು ಈಗಿನ ಕಾಲದವರು. ಹೇಗೆ ಬೇಕೆಂದರೆ ಹಾಗೆ ಹೊಂದಿಕೊಂಡು ಹೋಗಲು ಬಲ್ಲವರು; ನಮಗೆ ವ್ರತವಿಲ್ಲ, ನಿಷ್ಠೆಯಿಲ್ಲ, ಆಚಾರವಿಲ್ಲ; – ಊಟ ಉಪಚಾರಗಳಲ್ಲಿ ಯಗ್ಗಿಲ್ಲ. ಹೋಟೆಲುಗಳಿರುವ ಕಡೆ ಹೋಗಿ ಊಟ ಮಾಡುವೆವು. ತಿಂಡಿಗಿಂಡಿ – ಅವು ಹೇಗಾದರೂ ಇರಲಿ ಮಾಡುವವರು ಬ್ರಾಹ್ಮಣರಾಗಿದ್ದರೆ ಸರಿ– ಹೋಗಿ ತಿಂದು ಬಿಡುವೆವು. ಆನಂದಭವನಗಳಲ್ಲಿ ತಿನ್ನುವ ನಮಗೆ ಎಲ್ಲಾದರೇನು? ಬೊಂಬಾಯಾದರೂ ಸರಿ ಇಂಗ್ಲೆಂಡಾದರೂ ಆಯಿತು– ಎಲ್ಲಾದರೂ ಯೋಚನೆ ಇಲ್ಲ. ಅವರಿಗೆ ಹಾಗಲ್ಲ. ಆದರೆ ಹಂಪೆಯಲ್ಲಿ ಹೋಟೆಲನ್ನೆಲ್ಲಿಂದ

ತರಬೇಕು? ಯಜಮಾನರಂಥವರು ಕೃಪೆತೋರಿ ಅನ್ನ ಮಾಡಿ ಹಾಕದಿದ್ದರೆ ನಮಗೆ ಎಡಮಗ್ಗುಲೆ! ನಾವು ಮಾಡಿಕೊಂಡು ತಿನ್ನುವ ಸಂಭವವುಂಟೆ? ನಮ್ಮಲ್ಲಿ ಎಲ್ಲರೂ ಧೀರರೇ–ಎಲ್ಲರೂ ಪಾಕಶಾಸ್ತ್ರ ಪ್ರವೀಣರೇಯೆ. ಆದರೆ ಮೈ ಬಗ್ಗಿಸಿ ಅಡಿಗೆ ಮಾಡುವುದಕ್ಕೆ ಕೂಡುವುದು ಯಾರ ಕೈಯಲ್ಲೂ ಆಗುತ್ತಿರಲಿಲ್ಲ. ನಾವು ನಾವೇ ಆಗಿದ್ದರೆ ಅಲ್ಲೇ ವಾಸವಾಗಿದ್ದ ಮುದುಕಿಯೊಬ್ಬರಿಗೆ ಹೇಳಿ, ಬೇಕಾದ ಸಾಮಾನುಗಳನ್ನು ತಂದು ಹಾಕಿ ಅಡಿಗೆ ಮಾಡಿಸಿ ತಿಂದು ಮುಗಿಸುತ್ತಿದ್ದೆವು. ವಿಚಾರಿಸಿದುದರಲ್ಲಿ ನನಗೆ ಅವರು ನಾಲ್ಕೈದು ತಲೆ ಹಿಂದಿನ ಸಂಬಂಧವೆಂದೂ ತಿಳಿಯಿತು. ಈಗಿನ ಕಾಲದವರು ಧೀಮರು; ನಮಗೆ ಯಾವ ವಿಧವಾದ ಗಾಸಿ, ನಿರ್ಬಂಧ, ಸಹಿಸವು, ನಾವು ಸುಖಪಡಬೇಕೆನ್ನುವ ರೀತಿ ಬೇರೆ; ವಿಧ ಬೇರೆ; ಪೂರ್ವಕಾಲದ ಹಿರಿಯರ ರೀತಿ ನಡೆವಳಿಗಳೇ ಬೇರೆ.

ಆ ದಿನ ವಿದ್ಯಾರಣ್ಯರಿಗೆ ಅಭಿಷೇಕ ಮಾಡುವುದೆಂದು ನಿರ್ಣಯಿಸಿ ಎಲ್ಲರೂ ನದಿಯಲ್ಲಿ ಸ್ನಾನ ಮಾಡಿಕೊಂಡು ನೇಮದಿಂದ ಅಭಿಷೇಕ, ಪೂಜೆ ಆರಾಧನೆ ನಡೆಯಿತು. ರಾಯರು ಬರೆದ 'ವಿದ್ಯಾರಣ್ಯ ಸ್ತೋತ್ರ'ವನ್ನು ಓದಿ ಯತಿಗಳಿಗೆ ಒಪ್ಪಿಸಿಯಾಯಿತು. ದೇವರ ನೈವೇದ್ಯಕ್ಕೆ ಅಲ್ಲಿ ಸಿಕ್ಕಿದ ಬಾಳೆ, ತೆಂಗು ಇಟ್ಟರು. ಯಜಮಾನರು ಹೆಸರುಬೇಳೆ ಪಾಯಸ ಮಾಡಿದ್ದರು. ಆಗ ಅದರ ಬಟವಾಡೆ ಸಂದಾಯವಾಗುವ ಹಾಗಿರಲಿಲ್ಲವಾದುದರಿಂದ ತೆಂಗಿನ ಕರಟ ಜಜ್ಜಿ ಕೊಬ್ಬರಿಯನ್ನು ಹಂಚಿದರು; ಎರಡೆರಡು ಬಾಳೆಹಣ್ಣು, ಅಷ್ಟು ಕೊಬ್ಬರಿ ನೈವೇದ್ಯಕ್ಕಿದ್ದ ಒಣದ್ರಾಕ್ಷಿ ಕಲ್ಲುಸಕ್ಕರೆ ಈ ನಾಲುವರು ಚಿಲ್ಲರೆ ದೇವರಿಗೆ ಅರ್ಪಿತವಾದುವು.

ಆಮೇಲೆ ಯಜಮಾನರು ಊಟಕ್ಕೆ ಬಡಿಸಿದರು; ವಿದ್ಯಾರಣ್ಯರ ಪೂಜೆಯಲ್ಲವೆ? ತೊವ್ವೆ, ಪಲ್ಯ, ಉಪ್ಪಿನಕಾಯಿ, ಸಾರು ಎಲ್ಲ ಆಯಿತು. ಪಾಯಸ ಗಂ ಎಂದಿತ್ತು. ಹುರಿದ ಹೆಸರು ಬೇಳೆಯದು. ಒಣಕೊಬ್ಬರಿ, ಏಲಕ್ಕಿ, ಕೇಸರಿ ಹಾಕಿದ್ದರು. ಯಜಮಾನರ ಅಚ್ಚುಕಟ್ಟುತನ ಅವರ ಕೈಗೆ ಸಂದದ್ದು. ಬಹುರುಚಿಯಾಗಿತ್ತು. ರಾಯರಿಗೆ ಸಂತೋಷ ತಡೆಯಲಾಗಲಿಲ್ಲ. 'ಪಾಯಸ ಕ್ಲಾಸ್ ಪಾಯಸ ಸಾರ್; ನೀವು ನಮ್ಮೊಡನೆ ಕುಳಿತಿದ್ದರೆ ನಿಮಗೆ ಈ ರುಚಿ ಗೊತ್ತಾಗುತ್ತಿತ್ತು. ಇದಕ್ಕೆ ಏನು ಕೊಟ್ಟೇವು ಸಾರ್ ನಿಮಗೆ?' ಎಂದರು.

ಯಜ – ನೆಮ್ಮದಿಯಾಗಿ ಕೂತು ಊಟ ಮಾಡಿ. ಸಾಕಷ್ಟು ಮಾಡಿದ್ದೇನೆ. ಸಂಕೋಚಬೇಡ' ಎಂದರು.

ರಾ– ನಿಮಗೆ ನಮ್ಮಂಥ ಮಕ್ಕಳು ಇನ್ನೂ ಆರು ಮಂದಿ ಆಗಲಿ ಎಂದು ಹರಸುವುದು ಅಧಿಕ ಪ್ರಸಂಗ; ಹಾರೈಸುತ್ತೇನೆ. ಇಂಥ ಉಪಕಾರವನ್ನು ಮಾಡುತ್ತ ನಿಮ್ಮ ವಂಶವನ್ನು ಬೆಳಗಲಿ.

ಯಜ – ಆರೂ ಆಗಬಹುದು; ಹತ್ತೂ ಆಗಬಹುದು. ವಯಸ್ಸು ನನ್ನನ್ನು ಹುಡುಗನಾಗಿಸುತ್ತದೆಯೋ, ಆದರೆ ನೋಡಿ. ನಿಮ್ಮಂಥವರು ಬೇಡ; ನೀವು ನಾನು ಹೇಳಿದ ಮಾತು ಕೇಳುವವರಲ್ಲ. ಇಂಥವರನ್ನು ನಡೆಸುವ ಕಷ್ಟ ನನಗೆ ಬಾರದಿರಲಿ; ನಿಮ್ಮಂಥ ಯೋಗ್ಯತೆಯವರಾದರೆ ಚಿಂತೆಯಿಲ್ಲ.

ರಾಯರಿಗೆ ಆ ಮಾತು ಸತ್ಯವೆನ್ನಿಸಿತಾಗಿ ಬೇರೇನೂ ನುಡಿಯಲು ಆಗದೆ 'ಏನೋ ಸಾರ್, ನನ್ನ ತೃಪ್ತಿಯನ್ನು ನಿವೇದಿಸಬೇಕೆಂದು ಮಾತ್ರ ತೋರಿತು. ತಾಳಿಕೊಳ್ಳುವುದಕ್ಕಾಗದೆ ಹೇಳಿದೆ. ಅನ್ಯಾಯ ಮನ್ನಿಸಿರಿ' ಎಂದರು.

ಯಜ – ಮನ್ನಿಸದೆ ಮತ್ತೇನು ಮಾಡಲಿ?

ಇದು ಅಖೈರು ಮಾತು.

ಅದು ಹಾಗಿರಲಿ. ಯಜಮಾನರೇನೊ ಶುಚಿಯಾಗಿ, ರುಚಿಯಾಗಿ ಎಲ್ಲರಿಗೂ ಅಡಿಗೆ ಮಾಡಿ ಹಾಕುತ್ತಿದ್ದರು. ನಮಗೆ ಬೇಸರವೆಂದು ತೋರಿದರೆ ಮಿಕ್ಕ ಎಲ್ಲ ಕೆಲಸಗಳನ್ನೂ ತಾವೇ ಮಾಡುವರು. ಆದರೆ ಎಲ್ಲ ಕೆಲಸಗಳನ್ನೂ ಅವರಿಂದಲೇ ಮಾಡಿಸುವುದು ಧರ್ಮವೆ? ಮರ್ಯಾದೆಯೆ? ಎಂದು ಕೊಂಡವರು ಚಿಲ್ಲರೆ ಕೆಲಸಗಳೊಂದೊಂದನ್ನು ನಾವು ಒಬ್ಬೊಬ್ಬರು ಮಾಡುತ್ತಿದ್ದೆವು. ಕಸ ಗುಡಿಸುವುದು. ನೆಲ ಸಾರಿಸುವುದು, ಹುಳಿ ಹಚ್ಚಿ ದಿನಕ್ಕೆ ಎಂಟು ಸಲ ಪಾತ್ರೆ ತೊಳೆಯುವುದು, ಬೂದಿ ಇಟ್ಟಿಗೆ ಪುಡಿಗಳಿಂದ ಮುಸುರೆ ತಿಕ್ಕುವುದು. ಇಂಥ ಕೆಲಸಗಳು ಮಾಡಿದಷ್ಟೂ ಇರುತ್ತಲೇ ಇರುತ್ತಿದ್ದವಾದುದರಿಂದ ಒಬ್ಬರಲ್ಲದಿದ್ದರೆ ಒಬ್ಬರು ಇವುಗಳಲ್ಲಿ ಇರುತ್ತಲೇ ಇದ್ದೆವು. ಏನು ಕೆಲಸಗಳಪ್ಪ ಇವು. ಎಂದು ಗುಡಿಸುತ್ತ ಗುಡಿಸುತ್ತ ಸೊಂಟದ ಮೇಲೆ ಕೈಯಿಟ್ಟುಕೊಂಡು ಒಬ್ಬರ ಮುಖವನ್ನೊಬ್ಬರು ನಿಸ್ತೇಜರಾಗಿ ನೋಡುತ್ತ, ಅರ್ಧ ಆರಿಹೋಗುವಂತಿರುವ ದೀಪದಂತೆ ನಗುತ್ತ, ಭಗವಂತನ ವಿಚಿತ್ರ ಸೃಷ್ಟಿಯಲ್ಲಿನ ಆ ದಿನಚರಿಯ ಕರ್ಮಗಳನ್ನು ಕುರಿತು ಚಿಂತಿಸುತ್ತಲೂ ವಿಧಿ ತಮ್ಮನ್ನು ಆ ಸ್ಥಿತಿಗೆ ತಂದುದಕ್ಕೆ ತಮ್ಮನ್ನೂ ವಿಧಿಯನ್ನೂ ಒಟ್ಟಿಗೆ ದೂಷಿಸಿಕೊಳ್ಳುತ್ತಲೂ ಇರುವುದನ್ನು ನೋಡಿದರೆ ಯಾರೂ ಕಣ್ಣೀರು ಹಾಕುತ್ತಿದ್ದರು. ಆದರೆ ಮಾಡುವುದೇನು? ಪ್ರಾಪಂಚಿಕ ಜೀವನದಲ್ಲಿ ಈ ತೆರದ ಕರ್ಮಗಳೇ ಹೆಚ್ಚು. ಅದೂ ಅಲ್ಲದೆ

ನಮಗೋಸ್ಕರವಾಗಿ ಅಷ್ಟು ದುಡಿಯುತ್ತಿರುವ ಅರುವತ್ತು ವರುಷ ವಯಸ್ಸಿನ ಸಾತ್ವಿಕ ಯಜಮಾನರಿಗೆ ಅಸಮಾಧಾನವಾಗದಿದ್ದರೆ ಸಾಕು ಎಂಬುದೊಂದು ಆಶಯ. ಹಂಪೆಯಲ್ಲಿ ಇತರ ಕಡೆ ಊಟ ಉಪಚಾರ ಅಪಾಯಕರವೆಂದೂ ಕೇಳಿದ್ದೆವು. ಆ ಭಯದಿಂದ ನಮ್ಮ ಕರ್ತವ್ಯನಿಷ್ಠೆ ಬಲವತ್ತರವಾಗುತ್ತಿತ್ತು. ಮನೆಗಳಲ್ಲಿ ಹೆಣ್ಣು ಮಕ್ಕಳು ಬದುಕುವ ಸಮಸ್ತ ಕಾಲವೂ ಇದರಲ್ಲಿಯೇ ಉಳಿಯಬೇಕು ಎಂಬೆಣಿಕೆ ನಮಗೆ ಅವರಲ್ಲಿ ಗೌರವವುಂಟು ಮಾಡಿತು. ಒಂದೊಂದು ಸಲ ಮಾತ್ರ ಆ ಕೆಲಸಗಳನ್ನು ಮುಗಿಸಿಕೊಂಡು ಹೊರಗೆ ಬಂದರೆ ಪ್ರತಿಯೊಬ್ಬರೂ ಹಣೆಹಣೆ ಬಡಿದುಕೊಳ್ಳುತ್ತ ವಿಕಟವಾಗಿ ನಗುತ್ತಿದ್ದುದನ್ನು ನೆನೆದುಕೊಂಡರೆ ಈಗಲೂ ಅಳು ಬರುವಂತಾಗುತ್ತದೆ. ಅವಶ್ಯಮನುಭೋಕ್ತವ್ಯಂ ಕೃತ್ಯಂ ಕರ್ಮ ಶುಭಾಶುಭಂ.

ಕಾಫೀಗೆ ಅನುಕೂಲ ಮಾಡಿಕೊಟ್ಟು ಯಜಮಾನರು ನಮ್ಮನ್ನು ಸುಪ್ರಸನ್ನರನ್ನಾಗಿ ಮಾಡಿದ್ದುದರಿಂದ ಆ ದಿನ ಪಂಪಾ ಸರೋವರವನ್ನು ನೋಡಿ ಬಂದು ಸಾಯಂಕಾಲ ಬಂಗಲೆಗೆ ಹೋಗುವುದೆಂದು ನಿಷ್ಕರ್ಷೆಯಾಯಿತು. 'ಅದೆಷ್ಟು ದೂರವಿದೆಯೋ? ಅಲ್ಲಿಂದ ಹಿಂದಿರುಗಿ ಬರುವುದಕ್ಕೆ ಎಷ್ಟು ಹೊತ್ತು ಹಿಡಿಯುವುದೋ? ಆಮೇಲೆ ಎಲ್ಲಿ ಅಡಿಗೆ? ತುಂಬಾ ಅನನುಕೂಲವಾಗುವುದು' ಎಂದು ಯೋಚಿಸಿದವರು ಅಡಿಗೆ ಮಾಡಿಟ್ಟೇ ಹೊರಡುವುದೆಂದು ನಿರ್ಧಾರವಾಯಿತು. ಇವೆಲ್ಲ ಮುಗಿಯುವ ಹೊತ್ತಿಗೆ ಹನ್ನೊಂದು ಗಂಟೆ ಬೇಸಗೆಯ ಬಿಸಿಲು; ಅದರಲ್ಲಿಯೂ ಹಂಪೆಯಲ್ಲಿ, ಆ ಮಟಮಟ ಮಧ್ಯಾಹ್ನದಲ್ಲಿ ಹೊರಡುವುದಕ್ಕೆ ಮುಂಚೆಯೇ ಮುಸುರೆಯ ಪಾತ್ರೆಗಳನ್ನು ತೊಳೆದು ಸಾಯಂಕಾಲ ಬಂಗಲೆಗೆ ಹೊರಡುವುದಕ್ಕೆ ಎಲ್ಲವನ್ನೂ ಅಣಿಮಾಡಿಟ್ಟು ಹೋಗಬೇಕೆಂದು ಯಜಮಾನರು ಸ್ವಲ್ಪ ಒತ್ತಿಯೇ ಹೇಳಿದರು. ಬೇರೆ ಏನು ಕೆಲಸವನ್ನಾದರೂ ಮಾಡಬಹುದು ನೋಡಿ: ಎಷ್ಟಾದರೂ ತಿನ್ನಬಹುದು, ನಿದ್ದೆ ಹೋಗಬಹುದು, ಬಟ್ಟೆ ಒಗೆಯಬಹುದು, ಸೌದೆ ಸೀಳಬಹುದು; ನಮಗೆ ಬೇಕಿಲ್ಲದಾಗಲೂ ಊಟ ಮಾಡಿದ ಕೂಡಲೆಯೂ ಯಾರಾದರೂ ಕೆಲಸ ಹೇಳಿದರೆ ಮೈ ಕಿಡಿಕಿಡಿಯಾಗುವುದು. ಮುಸುರೆ ಪಾತ್ರೆಗಳಿಗೆ ಏನು ಮದುವೆ, ಏನು ಮಡಿ– ಹೇಳಿ. ಆಮೇಲೆ ತೊಳೆದುಕೊಂಡರೆ ಆಗುವುದಿಲ್ಲವೆ? ಯಾರಿಗಾದರೂ ಹೇಳಿ ಆ ಕೆಲಸ ಮಾಡಿಸಿದರೆ ಆಗದೆ?... ನೀವೂ ನಾವೂ ಆದರೆ ಆಗತ್ತೆ. ಯಜಮಾನರಿಗೆ ಹಾಗಲ್ಲ. ಕ್ರಮವಾಗಿ ಒಂದು

ಕೆಲಸವನ್ನು ಮಾಡಿ–ಅದು ಎಷ್ಟು ಅಲ್ಪವಾದುದಾಗಿರಲಿ ಅದನ್ನು ಆಗಲೇ ಪೂರೈಸಬೇಕೆಂಬುದು ಅವರ ಜೀವನದ ತತ್ವ. ಭಗವಂತನ ಅನುಗ್ರಹದಿಂದ ಈವರೆಗೂ ಅವರಿಗೆ ಹಾಗೆಯೇ ನಡೆದು ಬಂದಿದೆ. ವಿಶೇಷ ಹೇಳಲೇನು? ಆ ಕೆಲಸವನ್ನು ಮಾಡಿ ಮುಗಿಸಲು ಅಂಗಳದ ಕಾಲುವೆಗೆ ಹೋದೆವು. ಅವರೂ ನಮ್ಮೆಲ್ಲರ ಅಸಮಾಧಾನಗಳನ್ನು ಕಂಡಿದ್ದರು. ಆಗ ಒಂದು ಚಮತ್ಕಾರವನ್ನು ಮಾಡಿ ನಮ್ಮನ್ನು ಒಲಿಸಿಕೊಂಡರು. ಲಂಚಸ್ವಾಮಿ, ಲಂಚ. ಅಲ್ಲದೆ ಮತ್ತೇನು? ಸ್ಟೌವ್ ಹತ್ತಿಸಿದವರು ಒಂದು ಕೊಳಗೆ ನೀರು ಮರಳಿಸಿ 'ಮೂರ್ತಿ, ಇಲ್ಲಿ ಬಾರಯ್ಯ ಸ್ವಲ್ಪ' ಎಂದರು. ಮೂರ್ತಿ ಒಳಗೆ ಹೋಗಲು 'ಆ ಪುಡಿ ಇನ್ನಷ್ಟು ಇದೆಯೇನೊ ಹಾಕಿ ಮುಗಿಸಿಬಿಡು; ಆ ಅನಿಷ್ಟವನ್ನು ಇನ್ನೆಲ್ಲಿ ಹಿಂದಕ್ಕೆ ಹೊತ್ತುಕೊಂಡು ಹೋಗುವುದು' ಎಂದರು. ಬಾವಿಯ ಹತ್ತಿರವಿದ್ದ ನನಗೆ ಕಿವಿ ನೆಟ್ಟಗಾಯಿತು. ನಾವು ಪಾತ್ರೆಗಳನ್ನು ಸಂಭ್ರಮದಿಂದ ಒಳಕ್ಕೆ ಎತ್ತಿಕೊಂಡು ಹೋದೆವು. ಆ ಒಳಗಾಗಿ ಕಾಫಿ ಸಿದ್ಧವಾಗಿತ್ತು. ಮೂವರೂ ನೋಡಿದೆವು. ಉದ್ದಕ್ಕೆ ಹೋಗಿ ಯಜಮಾನರಿಗೆ ನಮಸ್ಕಾರ ಮಾಡೋಣವೇ ಎಂಬಷ್ಟು ಭಕ್ತಿ ಬಂದು ಅವರಲ್ಲಿಯೂ ದೇವರಲ್ಲಿಯೂ ನಮ್ಮ ನಂಬಿಕೆ ಬಲವಾಗಿ ಹುರಿಗೊಂಡಿತು. ಆದರೆ ನಮ್ಮ ಕಿರುಚಾಪಲ್ಯಗಳನ್ನು ದೊಡ್ಡವರಿಗೆ ನಾಚಿಕೆಯಿಲ್ಲದೆ, ಹಾಗೆ – ಅಂಥ ಸಮಯದಲ್ಲಿ ತೋರಿಸುವುದು ಸರಿಯಲ್ಲವೆಂದು ತಿಳಿದು 'ಏಳಿ ಸಾರ್, ಹೊರಡೋಣ, ಇನ್ನು ಹೊತ್ತಾಗುತ್ತೆ, ಇವತ್ತು ಇಪ್ಪತ್ತು ಮೈಲಿ ಆದರೂ ನಡೆಯುವಷ್ಟು ಶಕ್ತಿ ಬಂದುಬಿಟ್ಟಿದೆ' ಎಂದರು ವೆಂಕಟೇಶಯ್ಯನವರು. ಉಳಿದವರು ಒಬ್ಬರ ಮುಖವನ್ನೊಬ್ಬರು ನೋಡಿ 'ಭೇಷ್' ಎಂದು ತಮತಮಗೂ ಯಜಮಾನರಿಗೂ ಕಣ್ಣು ಸಂಜ್ಞೆಯಿಂದಲೇ ಧನ್ಯವಾದಗಳನ್ನು ಸಮರ್ಪಿಸುವಂತೆ ಮನೋಭಾವವನ್ನು ಮುಖವನ್ನು ವ್ಯಕ್ತಗೊಳಿಸಿದೆವು.

**–ಚಿಂತನ ಚಿತ್ತಾರ ಪ್ರಕಾಶನ**

# ಘಟಕ – 3
# ಆಶಯ – ವಿಚಾರ ಕ್ರಾಂತಿ

ಅಂತು ಮನು ತಾನು ಹೇಳಿರಲಾರನಯ್ಯಯೋ!
ಹೇಳಿದ್ದರವನೂ ಶಾಸ್ತ್ರದೊಳೆ ಸುತ್ತಿ,
ಸ್ವರ್ಗಹೋಗಲಿ, ಮತ್ತೆ ನರಕ ಬಂದರು ಬರಲಿ,
ಎದೆಯ ಧೈರ್ಯವ ಮಾಡಿ ಬಿಸುಡಾಚೆಗಿತ್ತಿ!

ಸ್ವರ್ಗ ಹೋಗುವುದಿಲ್ಲ, ನರಕ ಬರುವುದು ಇಲ್ಲ;
ಸ್ವರ್ಗ ನರಕಗಳೇನು ಶಾಸ್ತ್ರಸ್ಥವಲ್ಲ.
ಎದೆಯದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯು ಬೇರಿಲ್ಲ!
ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?

**–ಕುವೆಂಪು**

## ಜಾತಿ ವಿನಾಶ

**–ಡಾ. ಬಿ.ಆರ್. ಅಂಬೇಡ್ಕರ್**
**ಕನ್ನಡಕ್ಕೆ : ರಾಹು**

ಈ ಕಾಲದಲ್ಲೂ ಜಾತಿವ್ಯವಸ್ಥೆಯನ್ನು ಸಮರ್ಥಿಸುವ ಜನರಿರುವುದು ಅತ್ಯಂತ ವಿಷಾದನೀಯ ಸಂಗತಿ. ತಮ್ಮ ನಿಲುವಿಗೆ ಅವರು ಕೊಡುವ ಸಮರ್ಥನೆಗಳು ಅನೇಕ. ಜಾತಿವ್ಯವಸ್ಥೆಯೆಂಬುದು ಭಾರತೀಯ ಸಮಾಜಕ್ಕೇ ವಿಶಿಷ್ಟವಾಗಿರುವ ಶ್ರಮವಿಭಜನೆಯ ಪದ್ಧತಿಯೆಂದೂ, ಶ್ರಮವಿಭಜನೆಯು ಯಾವುದೇ ಮುಂದುವರೆದ ನಾಗರೀಕ ಸಮಾಜದ ಅವಶ್ಯಕ ಲಕ್ಷಣವಾಗಿರುವುದರಿಂದ ನಮ್ಮ ಜಾತಿವ್ಯವಸ್ಥೆ ಒಂದು ದುಷ್ಟ ಪದ್ಧತಿಯಲ್ಲ ಎಂದೂ ಕೆಲವರು

ವಾದಿಸುವುದುಂಟು. ಈ ವಾದದ ದಾರಿಯಲ್ಲಿ ಎದುರಾಗುವ ಮೊದಲನೆಯ ಅಭಾಸವೆಂದರೆ ಇಲ್ಲಿ ಜಾತಿವ್ಯವಸ್ಥೆಯು ಕೇವಲ ಶ್ರಮ ವಿಭಜನೆಯಾಗಿರದೆ, ಅದು ವಾಸ್ತವವಾಗಿ ಶ್ರಮಜೀವಿಗಳ ವಿಭಜನೆಯೂ ಆಗಿದೆ. ನಾಗರೀಕ ಸಮಾಜಕ್ಕೆ ಶ್ರಮವಿಭಜನೆ ಅತ್ಯಂತ ಅವಶ್ಯಕವೆಂಬುದು ವಾದಾತೀತ. ಆದರೆ ಈ ಶ್ರಮ ವಿಭಜನೆಯ ಪ್ರಕ್ರಿಯೆಯಲ್ಲಿ ಶ್ರಮಿಕರು ಪರಸ್ಪರ ಸೇರದಂತೆ. ಸಂಸರ್ಗ ಸಾಧಿಸದಂತೆ ಅವರನ್ನು ಛಿನ್ನವಿಚ್ಛಿನ್ನವಾಗಿ ಒಡೆದು ಪರಸ್ಪರರಿಂದ ಪ್ರತ್ಯೇಕಿಸುವುದನ್ನು ನಾವು ಇನ್ಯಾವ ನಾಗರೀಕ ಸಮಾಜದಲ್ಲಿಯೂ ಕಾಣಲಾರೆವು. ಜಾತಿವ್ಯವಸ್ಥೆ ಎಂಬುದು ಕೇವಲ ಶ್ರಮವಿಭಜನೆಯಲ್ಲ. ಅದು ಶ್ರಮಿಕರ ವಿಭಜನೆಯೂ ಹೌದು. ಜೊತೆಗೆ ಹೀಗೆ ವಿಭಜನೆಗೊಂಡ ಶ್ರಮಿಕರನ್ನು ಒಂದು ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಂಸ್ಥಾಪಿಸುವ ವಿಶಿಷ್ಟ ಕ್ರಮವೂ ಆಗಿದೆ. ಅಂದರೆ ಒಂದು ವರ್ಗವನ್ನು ಅತ್ಯಂತ ಮೇಲ್‌ಸ್ತರದಲ್ಲಿ ಸ್ಥಾಪಿಸಿ ಅದರ ಕೆಳಗೆ ಕ್ರಮವಾಗಿ ಇತರ ವರ್ಗಗಳನ್ನು ನಿಯೋಜಿಸುವುದು ಹೀಗೆ ಶ್ರೇಣೀಕೃತಗೊಂಡ, ಉಚ್ಚ ನೀಚ ಎಂದು ವರ್ಗೀಕರಣಗೊಂಡ ಸಾಮಾಜಿಕ ವಿಭಜನೆ ಅಂದರೆ, ಶ್ರಮಿಕರ ವಿಭಜನೆ ಪ್ರಪಂಚದ ಬೇರೆ ಯಾವ ದೇಶದಲ್ಲೂ ಇಲ್ಲ. ಮೇಲಾಗಿ ನಾವಿಲ್ಲಿ ಗಮನಿಸಲೇಬೇಕಾದ ಇನ್ನೊಂದು ಸಂಗತಿಯಿದೆ. ಈ ಶ್ರಮ ಮತ್ತು ಶ್ರಮಿಕರ ವಿಭಜನೆ ನಿಸರ್ಗ ಸಹಜವಾದುದ್ದಲ್ಲ. ಅಂದರೆ ಸಮಾಜದಲ್ಲಿಯ ವ್ಯಕ್ತಿಗಳ ಸಾಮರ್ಥ್ಯ, ಪ್ರತಿಭೆ ಮತ್ತು ಯೋಗ್ಯತೆಯನ್ನು ಅದು ಪರಿಗಣಸುವುದೇ ಇಲ್ಲ. ಯಾವುದೇ ಒಬ್ಬ ವ್ಯಕ್ತಿ ತನ್ನ ಯೋಗ್ಯತೆಗೆ ಸೂಕ್ತವಾದ ಕಾರ್ಯವನ್ನು ಆಯ್ಕೆ ಮಾಡಿಕೊಂಡು ತನ್ನ ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಅವಕಾಶ ಪಡೆದರೆ ಮಾತ್ರ ಸಮಾಜದಲ್ಲಿ ಕಾರ್ಯದಕ್ಷತೆ ಸಾಧ್ಯವಾಗುತ್ತದೆ; ಆ ಸಮಾಜ ಉತ್ತರೋತ್ತರವಾಗಿ ಅಭಿವೃದ್ಧಿ ಸಾಧಿಸುತ್ತದೆ. ಆದರೆ ಜಾತಿವ್ಯವಸ್ಥೆಯಲ್ಲಿ ಈ ಮಾತಿಗೆ ಕಿಂಚಿತ್ ಅವಕಾಶವಿಲ್ಲವೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಹಾಗಾಗಿಯೇ ವ್ಯಕ್ತಿಯ ರುಚಿ–ಅಭಿರುಚಿ, ಶಕ್ತಿ–ಸಾಮರ್ಥ್ಯಗಳನ್ನು ಪರಿಗಣಿಸುವ ಬದಲಾಗಿ ಆ ವ್ಯಕ್ತಿಯ ತಂದೆ–ತಾಯಿಗಳ ಸಾಮಾಜಿಕ ಶ್ರೇಣಿ, ಸ್ಥಾನ–ಮಾನಗಳಿಗೆ ಅನುಗುಣವಾಗಿಯೇ ಅವನಿಗೆ ಇಂಥಿಂಥ ಕಾರ್ಯದ ಜವಾಬ್ದಾರಿಯೆಂದು ವಹಿಸಿಕೊಡಲಾಗುತ್ತದೆ. ಜಾತಿವ್ಯವಸ್ಥೆಯಿಂದ ಉದ್ಭವಿಸಿರುವ ಈ ಶ್ರಮಿಕರ ಮತ್ತು ವೃತ್ತಿಯ ವಿಭಜನೆಯು ಅತ್ಯಂತ ವಿನಾಶಕಾರಿಯಾಗಿದೆ. ಒಂದು ಸಾಮಾಜಿಕ ಕಂಟಕವಾಗಿದೆ. ವೃತ್ತಿ, ಉದ್ಯೋಗವೆಂಬುದು ಸಾಮಾಜಿಕವಾಗಿ ಸ್ಥಗಿತಗೊಂಡ

ಸಂಗತಿಯಲ್ಲ. ಅದು ಸದಾ ಚಲನಶೀಲವಾದದ್ದು. ಅದರಲ್ಲಿ ನಿರಂತರ ಬದಲಾವಣೆಗಳು ಕಾಣಿಸಿಕೊಳ್ಳುತ್ತಲೇ ಇರುತ್ತವೆ. ಈ ಬದಲಾವಣೆಗಳು ಪ್ರಜ್ಞಾಪೂರ್ವಕವಾಗಿರಬಹುದು ಅಥವಾ ಕೆಲವೊಮ್ಮೆ ಆಕಸ್ಮಿಕವಾಗಿಯೂ ಕಾಣಿಸಿಕೊಳ್ಳಬಹುದು. ಹೀಗೆ ವೃತ್ತಿ ಉದ್ಯೋಗಗಳ ಸ್ವರೂಪದಲ್ಲಿಯೇ ಬದಲಾವಣೆಗಳು ಕಾಣಿಸಿಕೊಳ್ಳುತ್ತಿರುವಾಗ ಯಾವುದೇ ಒಬ್ಬ ವ್ಯಕ್ತಿಗೆ ತನ್ನ ವೃತ್ತಿಯನ್ನು ಬದಲಾಯಿಸುವ ಸ್ವಾತಂತ್ರ್ಯ ಅಗತ್ಯವಾಗುತ್ತದೆ. ನಿತ್ಯ ನಿರಂತರ ಬದಲಾಗುವ ಸಾಮಾಜಿಕ ಪರಿಸ್ಥಿತಿಗೆ ತಕ್ಕ ಹಾಗೆ ತನ್ನನ್ನು ಬದಲಾಯಿಸಿಕೊಳ್ಳುವ ಅದಕ್ಕೆ ಅನುಗುಣವಾಗಿ ತನ್ನ ವ್ಯಕ್ತಿತ್ವವನ್ನು ಪುನರ್‌ರೂಪಿಸಿಕೊಳ್ಳುವ ಸ್ವಾತಂತ್ರ್ಯ ಇಲ್ಲದಿದ್ದರೆ ಆ ವ್ಯಕ್ತಿಗೆ ಅರ್ಥಪೂರ್ಣವಾದ ಬದುಕಿನ ಸಾಧ್ಯತೆಗಳೇ ಎಟುಕುವುದಿಲ್ಲ. ಜಾತಿವ್ಯವಸ್ಥೆಯಿಂದೊಡಗೂಡಿದ ನಮ್ಮ ಸಮಾಜದಲ್ಲಿ ಇಂಥ ಯಾವುದೇ ಸ್ವಾತಂತ್ರ್ಯವಿಲ್ಲ. ಪರಿಣಾಮವಾಗಿ ತನ್ನ ಜಾತಿಗೆ ಹೊರತಾದ ಹೊಸ ವೃತ್ತಿಯನ್ನು ಅನುಸರಿಸುವುದಕ್ಕೆ ಬದಲಾಗಿ ಉಪವಾಸ ಸಾಯುವುದೆ ಒಬ್ಬ ಹಿಂದುವಿನ ದುರ್ಗತಿಯಾಗಿದ್ದರೆ, ಅದಕ್ಕೆ ಮೂಲಕಾರಣ ನಮ್ಮ ಜಾತಿವ್ಯವಸ್ಥೆಯೇ ಆಗಿದೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ಜಾತಿವ್ಯವಸ್ಥೆಯೂ ವ್ಯಕ್ತಿ ತನ್ನ ಸಾಮರ್ಥ್ಯ ಹಾಗೂ ಯೋಗ್ಯತೆಗಳಿಗೆ ಅನುಗುಣವಾದ ವೃತ್ತಿ ಆಯ್ಕೆ ಮಾಡಿಕೊಳ್ಳಲು ಅವಕಾಶ ಕೊಡುವುದಿಲ್ಲ. ಹೀಗಾಗಿ ನಮ್ಮ ದೇಶದಲ್ಲಿಯೆ ನಿರುದ್ಯೋಗಕ್ಕೆ ಬಹಳಷ್ಟು ಮಟ್ಟಿಗೆ ಈ ಜಾತಿವ್ಯವಸ್ಥೆಯೇ ಕಾರಣೀಭೂತವಾಗಿದೆ. ಇಲ್ಲಿ ನಾವು ಗಮನಿಸಲೇಬೇಕಾದ ಇನ್ನೊಂದು ದೋಷವಿದೆ; ಈ ಜಾತಿವ್ಯವಸ್ಥೆಯಿಂದ ಉದ್ಭವಿಸಿರುವ ಶ್ರಮ ವಿಭಜನೆ ಶ್ರಮಿಕರ ಸ್ವಂತ ಇಚ್ಛೆ ಮತ್ತು ಆಯ್ಕೆಯಿಂದ ಅಸ್ತಿತ್ವಕ್ಕೆ ಬಂದುದ್ದಲ್ಲ. ಇಲ್ಲಿ ವೈಯಕ್ತಿಕ ಭಾವ ಭಾವನೆಗಾಗಲಿ, ಆಸೆ–ಆಕಾಂಕ್ಷೆಗಳಿಗಾಗಲಿ ಒಂದಿನಿತೂ ಸ್ಥಾನವಿಲ್ಲ. ವೈಯಕ್ತಿಕವಾಗಿ ಯಾವುದೇ ಒಂದು ಕೆಲಸಕ್ಕೆ ಯಾರು ಹೆಚ್ಚು ಸೂಕ್ತರು. ಯೋಗ್ಯರು, ದಕ್ಷರು ಎನ್ನುವಂಥ ತರ್ಕ, ಜಿಜ್ಞಾಸೆಗೆ ಇಲ್ಲಿ ಅವಕಾಶವೇ ಇಲ್ಲ. ಕರ್ಮ ಸಿದ್ಧಾಂತವೇ ಇಲ್ಲಿ ಸರ್ವಸ್ವವನ್ನು ನಿರ್ಧರಿಸುವ ಪ್ರಧಾನ ತತ್ವವಾಗಿರುತ್ತದೆ. ಸಾಮಾಜಿಕ ಕಾರ್ಯದಕ್ಷತೆ ದೃಷ್ಟಿಯಿಂದ ಪರಿಶೀಲಿಸಿದಾಗ ಔದ್ಯೋಗಿಕ ಉತ್ಪಾದನಾ ವ್ಯವಸ್ಥೆಯ ಅತ್ಯಂತ ಭಯಾನಕವಾದ ಸಮಸ್ಯೆ ಯಾವುದು? ಬಡತನ ಈ ಸಮಸ್ಯೆಯಲ್ಲ; ಬಡತನದಿಂದ ಹೊರಹೊಮ್ಮಿದ ಅಪರಂಪಾರ ಸಂಕಟಗಳ ಸರಣಿಯೂ ಅಲ್ಲ. ಬದಲಾಗಿ, ಇಲ್ಲಿ ಅವಿರತ

ದುಡಿಮೆಗೆ ತೊಡಗಿರುವ ಇಷ್ಟು ಬೃಹತ್ ಸಂಖ್ಯೆಯ ಜನರಿಗೆ ತಾವು ಮಾಡುತ್ತಿರುವ ಕೆಲಸ ಎಳ್ಳಷ್ಟೂ ತೃಪ್ತಿ ತಂದುಕೊಡುತ್ತಿಲ್ಲ ಎಂಬ ನಿಜ ಸ್ಥಿತಿಯೇ ಆ ಭೀಕರ ಕಂಟಕವಾಗಿದೆ. ಇಂಥ ಉದ್ಯೋಗಗಳು ಕಾರ್ಮಿಕರಲ್ಲಿ ಉದಾಸೀನತೆಯನ್ನು ಸೃಷ್ಟಿಸುತ್ತವೆ. ಅವರಲ್ಲಿ ತಮ್ಮ ಕಾಯಕದ ಬಗ್ಗೆ ದ್ವೇಷ ಉಕ್ಕಿಸುತ್ತವೆ. ಕ್ರಮೇಣ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಮನೋಧರ್ಮವನ್ನು ಬೆಳೆಸುತ್ತವೆ. ಭಾರತದಲ್ಲಿ ಮೇಲ್ಜಾತಿಯ ಹಿಂದೂಗಳು ಅತ್ಯಂತ ಹೀನ, ಹೇಯವೆಂದು ಭಾವಿಸುವ ಅನೇಕ ವೃತ್ತಿಗಳಿವೆ. ಈ ವೃತ್ತಿಗಳು ಹೇಯವೆಂಬ ಅಸಹ್ಯ ಭಾವನೆ ಮೇಲ್ಜಾತಿಯ ಹಿಂದೂಗಳಲ್ಲಿ ಮನೆ ಮಾಡಿರುವುದರಿಂದಲೇ ಆ ವೃತ್ತಿಗಳಲ್ಲಿ ತೊಡಗಿರುವ ಕಾರ್ಮಿಕರನ್ನು ಕೂಡ ಅತ್ಯಂತ ಕೀಳು ಭಾವನೆಯಿಂದಲೇ ಕಾಣಲಾಗುತ್ತದೆ. ಈ ಅಸಹ್ಯ ವೃತ್ತಿಗಳಲ್ಲಿ ತೊಡಗಿರುವ ಕಾರ್ಮಿಕರಿಗೆ ಅವುಗಳಿಂದ ತಪ್ಪಿಸಿಕೊಳ್ಳುವ, ಬೇರೆ ವೃತ್ತಿಯನ್ನು ಅನುಸರಿಸುವ ಆಸೆ ನಿರಂತರವಾಗಿ ಇದ್ದೇ ಇರುತ್ತದೆ. ಅವರು ಮುಂದುವರೆದು ತಮ್ಮ ವೃತ್ತಿ ಬಾಂಧವರೆಲ್ಲರಲ್ಲಿಯೂ ಅಂಥದ್ದೇ ಬಯಕೆಯನ್ನು ಪ್ರೇರೇಪಿಸುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಹಿಂದೂ ಧರ್ಮ ಈ ವೃತ್ತಿಗಳಿಗೆ ಲೇಪಿಸಿರುವ, ಆರೋಪಿಸಿರುವ ತಿರಸ್ಕಾರ ಹಾಗೂ ಕಳಂಕ. ಯಾವುದೇ ಸಮಾಜದಲ್ಲಿ ಕಾರ್ಮಿಕರಿಗೆ ತಾವು ತೊಡಗಿರುವ ಕಾಯಕದಲ್ಲಿ ಮನಸ್ಸು ಇಲ್ಲದಿದ್ದರೆ ಆ ಕಾಯಕದ ಬಗ್ಗೆ ಗೌರವಾದರ ಹುಟ್ಟಿಸುವ ವ್ಯವಸ್ಥೆಯಿಲ್ಲದಿದ್ದರೆ ಅಲ್ಲಿಯ ವೃತ್ತಿ ಉದ್ಯಮಗಳು ಸುಸೂತ್ರವಾಗಿ ಮುನ್ನಡೆಯಲು ಸಾಧ್ಯವಾದೀತೆ? ಮನುಷ್ಯನ ಸಹಜ ಆಸಕ್ತಿ ಹಾಗೂ ಸಾಮರ್ಥ್ಯಗಳನ್ನು ಗೌಣಗೊಳಿಸಿ ಸಮಾಜದ ಗೊಡ್ಡು ಕಂದಾಚಾರಿ ನಿಯಮಗಳಿಗೆ ಗಂಟು ಬೀಳಿಸುವುದೇ ಜಾತಿವ್ಯವಸ್ಥೆಯ ಪ್ರಧಾನ ಕಾರ್ಯವಾಗಿದೆ. ಇವೆಲ್ಲ ಕಾರಣಗಳಿಂದಾಗಿ ಜಾತಿವ್ಯವಸ್ಥೆಯು ಆರ್ಥಿಕ ದೃಷ್ಟಿಯಿಂದಲೂ ಬಹು ಅಪಾಯಕಾರಿ ವ್ಯವಸ್ಥೆಯಾಗಿದೆ.

ಜಾತಿವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳಲು ಅನೇಕರು ಹಲವಾರು ಚಾರಿತ್ರಿಕ ಕಾರಣ ಹಾಗೂ ಸಾಧನ ಮಾರ್ಗಗಳನ್ನು ಬಳಸುವುದುಂಟು. ಅವರಲ್ಲಿ ಕೆಲವರು ಜಾತಿವ್ಯವಸ್ಥೆಯ ರಕ್ಷಣೆ ಮತ್ತು ಸಮರ್ಥನೆಗಾಗಿ ಜೈವಿಕ ತತ್ವಗಳನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಜಾತಿವ್ಯವಸ್ಥೆಯ ಮುಖ್ಯ ಉದ್ದೇಶ ಜನಾಂಗೀಯ ಪರಿಶುದ್ಧತೆ ಮತ್ತು ವಂಶಾವಳಿಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವುದು ಎಂದು ಹೇಳಲಾಗುತ್ತದೆ. ಆದರೆ ಈಗ ಜನಾಂಗೀಯ

ಶಾಸ್ತ್ರಜ್ಞರ ಪ್ರಕಾರ ಎಲ್ಲಿಯೂ ಶುದ್ಧ ಜನಾಂಗವೆಂಬುದು ಅಸ್ತಿತ್ವದಲ್ಲಿಯೇ ಇಲ್ಲ. ಜಗತ್ತಿನಾದ್ಯಂತ ಎಲ್ಲೆಲ್ಲೂ ಜನಾಂಗೀಯ ಸಂಕರವೇ ಕಂಡುಬರುತ್ತದೆ. ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಜನಾಂಗೀಯ ಮಿಶ್ರ ತಳಿಯ ಜನರೇ ಕಂಡುಬರುತ್ತಾರೆ. ವಿಶೇಷವಾಗಿ ಭಾರತದ ಮಟ್ಟಿಗಂತೂ ಈ ಮಾತು ಹೆಚ್ಚು ಸತ್ಯ. ಮಿ. ಡಿ.ಆರ್. ಭಂಡಾರ್‌ಕರ್ ತಮ್ಮ Foreign Elements in the Hindu Population ಎಂಬ ಲೇಖನದಲ್ಲಿ ಹೀಗೆ ಹೇಳಿದ್ದಾರೆ; 'ಭಾರತದಲ್ಲಿ ಜನಾಂಗೀಯವಾಗಿ ವಿದೇಶಿ ವಂಶ ಕಲಬೆರಕೆಯಾಗದಂಥ ಒಂದೇ ಒಂದು ವರ್ಗವಾಗಲಿ, ಜಾತಿಯಾಗಲಿ ಅಸ್ತಿತ್ವದಲ್ಲಿಲ್ಲ. ರಾಜಪೂತ್, ಮರಾಠಾ ಮುಂತಾದ ಕ್ಷತ್ರಿಯ ವರ್ಣಗಳಲ್ಲಿ ಅಷ್ಟೇ ಅಲ್ಲ, ತಮ್ಮನ್ನು ತಾವು ಜನಾಂಗೀಯವಾಗಿ ಸಂಪೂರ್ಣ ಪರಿಶುದ್ಧರೆಂದು ಬಹು ಖುಷಿಯಿಂದ ಭ್ರಮಿಸಿಕೊಂಡಿರುವ ಬ್ರಾಹ್ಮಣರಲ್ಲೂ ವಿದೇಶಿಯ ರಕ್ತ ಸಂಕರವಾಗಿದೆ.' ಅಂದರೆ ಜನಾಂಗೀಯ ಸಂಕರವನ್ನು ಪ್ರತಿಬಂಧಿಸುವ ಅಥವಾ ಅದಕ್ಕೆ ತಡೆಯೊಡ್ಡಿ ಜನಾಂಗೀಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳುವ ವಿಧಾನವಾಗಿಯೇ ಜಾತಿ ಪದ್ಧತಿ ಉಗಮಿಸಿ ವಿಕಾಸವಾಯಿತೆಂದು ಹೇಳಲಾಗದು. ಹಾಗೆ ನೋಡಿದರೆ ಭಾರತದ ವಿಭಿನ್ನ ಜನವರ್ಗ ಮತ್ತು ಜನಾಂಗಗಳಲ್ಲಿ ಪರಸ್ಪರ ರಕ್ತ ಸಂಬಂಧ ಹಾಗೂ ಸಾಂಸ್ಕೃತಿಕ ಸಂಸರ್ಗ ಸಂಭವಿಸಿದ ಬಹುಕಾಲದ ನಂತರ ಜಾತಿವ್ಯವಸ್ಥೆ ಜನ್ಮ ತಳೆಯಿತು. ಜಾತಿ ಭೇದಗಳನ್ನು ಜನಾಂಗೀಯ ಭಿನ್ನತೆಗಳೆಂದು ಭ್ರಮಿಸುವುದು ನೈಜಸ್ಥಿತಿಯ ಸತ್ಯತಥ್ಯಗಳನ್ನು ವಿರೂಪಿಗೊಳಿಸಿದಂತೆಯೇ ಸರಿ. ಈ ದೃಷ್ಟಿಯಿಂದ ನೋಡಿದರೆ ಪಂಜಾಬಿನ ಬ್ರಾಹ್ಮಣನಿಗೂ ಮದ್ರಾಸ್‌ನ ಬ್ರಾಹ್ಮಣನಿಗೂ ಯಾವ ವಂಶೀಯ ಸಂಬಂಧವಿದೆ? ಬಂಗಾಲದ ಅಸ್ಪೃಶ್ಯ ಮತ್ತು ಮದ್ರಾಸಿನ ಅಸ್ಪೃಶ್ಯ ಇವರ ನಡುವೆ ಯಾವ ರಕ್ತಸಂಬಂಧವಿದೆ? ಪಂಜಾಬಿನ ಬ್ರಾಹ್ಮಣನಿಗೂ ಅದೇ ಪಂಜಾಬಿನ ಸಮಗಾರನಿಗೂ ಯಾವ ವಂಶೀಯ ಭಿನ್ನತೆಯಿದೆ? ಮದ್ರಾಸಿನ ಬ್ರಾಹ್ಮಣ ಹಾಗೂ ಅದೇ ಮದ್ರಾಸ್‌ನ ಚಾಂಡಾಲ ಇವರ ನಡುವೆ ಯಾವ ವ್ಯತ್ಯಾಸವಿದೆ? ನಿಜವೆಂದರೆ, ಪಂಜಾಬಿನ ಬ್ರಾಹ್ಮಣ ಮತ್ತು ಸಮಗಾರ ಇಬ್ಬರೂ ಜನಾಂಗೀಯವಾಗಿ ಒಂದೇ ವಂಶಕ್ಕೆ ಸೇರಿದವರಾಗಿರುತ್ತಾರೆ. ಇದೇ ಸಂಗತಿ ಮದ್ರಾಸಿನ ವಿಭಿನ್ನ ಜಾತಿಗಳಿಗೂ ಅನ್ವಯಿಸುತ್ತದೆ. ಯಾಕೆಂದರೆ ಜಾತಿವ್ಯವಸ್ಥೆಯು ವಂಶಭೇದವನ್ನು ಗುರುತಿಸಿ ಪರಿಗಣಿಸುವುದಿಲ್ಲ. ಆದರೂ ಅದು ಒಂದೇ ವಂಶದವರಲ್ಲಿ ಸಾಮಾಜಿಕ ಭೇದ

ಭಿನ್ನತೆಗಳನ್ನು ಸೃಷ್ಟಿಸಿದೆ. ಇದಕ್ಕೆ ಪ್ರತಿಯಾಗಿ. ಒಂದು ವೇಳೆ ಜಾತಿಭೇದವು ವಂಶಭೇದವಾಗಿತ್ತು ಎಂದು ಪರಿಭಾವಿಸೋಣ. ಹಾಗಿದ್ದರೆ ಜಾತಿ–ಜಾತಿಗಳ ನಡುವೆ ಅಂತರ್‌ಜಾತೀಯ ವಿವಾಹಗಳಿಂದಾಗಿ ವಿಭಿನ್ನ ವಂಶಗಳು ಪರಸ್ಪರ ಸಂಕರವಾದರೆ ಅದರಲ್ಲಿ ಏನು ತಪ್ಪು? ಮಾನವರಿಗೂ ಮತ್ತು ಇತರ ಕೆಳವರ್ಗದ ಪ್ರಾಣಿಗಳಿಗೂ ಇರುವ ಅಂತರ ಬಹುದೊಡ್ಡದು. ಆದ್ದರಿಂದಲೇ ವಿಜ್ಞಾನಿಗಳು ಮನುಷ್ಯರು ಮತ್ತು ಪ್ರಾಣಿಗಳನ್ನು ಎರಡು ಪರಭಾರೆ ವರ್ಗಗಳನ್ನಾಗಿ ವಿಭಜಿಸಿದ್ದಾರೆ. ಸಮಾಜದಲ್ಲಿ ಕಾಣಸಿಗುವ ಜನಾಂಗೀಯ ಭೇದವು ಜೀವಿಗಳಲ್ಲಿ ಕಂಡುಬರುವ ವರ್ಗಭೇದವೆಂದು ವಿಜ್ಞಾನಿಗಳು ಸಮ್ಮತಿಸುವುದಿಲ್ಲ. ಯಾಕೆಂದರೆ, ಅವರ ಪ್ರಕಾರ ಬೇರೆ ಬೇರೆ ಜನಾಂಗಗಳು ವಾಸ್ತವವಾಗಿ ಒಂದೇ ವರ್ಗಕ್ಕೆ ಸೇರಿದ ವೈವಿಧ್ಯಮಯ ಶಾಖೆಗಳಲ್ಲದೆ ಬೇರೇನೂ ಅಲ್ಲ. ನಿಜಸ್ಥಿತಿ ಹೀಗಿರುವುದರಿಂದ ವಿಭಿನ್ನ ಜನಾಂಗಗಳು ಪರಸ್ಪರ ರಕ್ತ ಸಂಬಂಧ ಏರ್ಪಡಿಸಿಕೊಂಡಲ್ಲಿ ಜನಿಸುವ ಜೀವಿಗಳು ಮುಂದಿನ ವಂಶಾಭಿವೃದ್ಧಿಗೆ ಅವಶ್ಯವಿರುವ ದೈಹಿಕ ದಕ್ಷತೆ ಹಾಗೂ ಶಾರೀರಿಕ ಶಕ್ತಿ ಪಡೆದುಕೊಂಡೇ ಇರುತ್ತವೆ ವಿನಾ ಸಂತಾನ ಶಕ್ತಿಯಿಲ್ಲದ ಬಂಜೆಯಾಗಿ ಇರಲಾರವು. ಜಾತಿವ್ಯವಸ್ಥೆಯನ್ನು ಸಮರ್ಥಿಸಿಕೊಳ್ಳಲು ವಂಶದ ಪರಂಪರೆ, ಶ್ರೇಷ್ಠ ಸಂತಾನ ಇತ್ಯಾದಿ ಕುರಿತು ಕಟುವಾದ ಮಾತುಗಳನ್ನು ಆಡುತ್ತ ಹೇಗೋ ತಮ್ಮ ನಿಲುವನ್ನು ಗಟ್ಟಿಗೊಳಿಸಿಕೊಳ್ಳಲು ಯತ್ನಿಸುತ್ತಿರುವುದನ್ನು ಕಾಣುತ್ತೇವೆ. ಜಾತಿವ್ಯವಸ್ಥೆಯು ಶ್ರೇಷ್ಠ ಸಂತಾನ ತತ್ವಕ್ಕೆ ಬದ್ಧವಾಗಿದ್ದರೆ ಅದರ ಬಗ್ಗೆ ಯಾರದೂ ಇರಲಾರದು. ಆದರೆ ಜಾತಿವ್ಯವಸ್ಥೆಯು ಶ್ರೇಷ್ಠತಮವಾದ ಒಂದು ಗಂಡೂ ಹಾಗೂ ಶ್ರೇಷ್ಠತಮವಾದ ಹೆಣ್ಣು – ಇವರ ವಿವಾಹ, ದಾಂಪತ್ಯಕ್ಕೆ ಅನುಕೂಲಕರವಾಗಿದೆಯೆ? ಸಹಾಯಕವಾಗಿದೆಯೆ? ನಿಜವೆಂದರೆ ಸ್ವರೂಪತಃ ಜಾತಿವ್ಯವಸ್ಥೆಯು ನೇತ್ಯಾತ್ಮಕವಾಗಿದೆ. ತತ್‌ಕಾರಣ ಅದು ಜಾತಿ–ಜಾತಿಗಳ ನಡುವಿನ ವೈವಾಹಿಕ ಸಂಬಂಧವನ್ನು ನಿಷೇಧಿಸುತ್ತದೆ. ಜಾತಿ ಪದ್ಧತಿಯು ಶ್ರೇಷ್ಠ ಸಂತಾನವನ್ನು ಸೃಷ್ಟಿಸುವ ಉದ್ದೇಶದಿಂದ ಹುಟ್ಟಿದ್ದಲ್ಲ. ಒಂದು ವೇಳೆ ಜಾತಿಯನ್ನೇ ಜನಾಂಗವೆಂದು ಭಾವಿಸುವುದಾದರೆ, ಉಪಜಾತಿಗಳು ಜನಾಂಗದ ನಡುವಿನ ವಿಭಿನ್ನ ಸಮೂಹಗಳಾಗಿ ಪರಿಣಮಿಸುತ್ತವೆ. ಅದಕ್ಕೆ ಕಾರಣವೆಂದರೆ ಈ ಜನಾಂಗೀಯ ವಿಭಿನ್ನ ಶಾಖೆಗಳು ಒಂದೇ ಜನಾಂಗಕ್ಕೆ ಸೇರಿರುತ್ತವೆ. ಆದ್ದರಿಂದ ಜಾತಿ–ಜಾತಿಗಳ ನಡುವಿನ ವೈವಾಹಿಕ

ಸಂಬಂಧಕ್ಕಾಗಲಿ ಅಥವಾ ಅಂತರ್‌ಜಾತೀಯ ಸಹಪಂಕ್ತಿ ಭೋಜನಕ್ಕಾಗಲಿ ಯಾಕೆ ನಿಷೇಧವಿರಬೇಕು? ಜನಾಂಗೀಯ ಅಥವಾ ವಂಶದ ಪರಿಶುದ್ಧತೆಯನ್ನು ಕಾಪಾಡುವುದು ಜಾತಿವ್ಯವಸ್ಥೆಯ ಮತ್ತು ಅದರಿಂದ ಉಗಮಿಸಿರುವ ವಿಧಿ ನಿಷೇಧಗಳ ಉದ್ದೇಶವಲ್ಲ ಎಂಬುದು ಸುಸ್ಪಷ್ಟ. ಜಾತಿ ಜಾತಿಗಳ ನಡುವೆ ಅಷ್ಟೇ ಅಲ್ಲ. ವಿಭಿನ್ನ ಉಪಜಾತಿಗಳ ನಡುವೆಯೂ ಸಹಪಂಕ್ತಿ ಭೋಜನವನ್ನು ನಿರ್ಬಂಧಿಸುವುದರ ಉದ್ದೇಶವೇನು? ಸಹಪಂಕ್ತಿ ಭೋಜನದಿಂದ ಯಾವುದೇ ಜನಾಂಗೀಯ ವಂಶ ಹಾಳಾಗುವುದೂ ಇಲ್ಲ. ಶ್ರೇಷ್ಠವಾಗುವುದೂ ಇಲ್ಲ. ಈ ದೃಷ್ಟಿಯಿಂದ ನೋಡಿದರೆ ನಮ್ಮ ಸಾಮಾಜಿಕ ವ್ಯವಸ್ಥೆಯ ಲಕ್ಷಣವಾಗಿರುವ ಜಾತಿಭೇದವು ವೈಜ್ಞಾನಿಕವಲ್ಲ ಎಂಬುದು ಶತಸಿದ್ಧವಾಗುತ್ತದೆ. ಶ್ರೇಷ್ಠ ಸಂತಾನದ ತತ್ವವನ್ನಾಧರಿಸಿ ಜಾತಿವ್ಯವಸ್ಥೆಯನ್ನು ಸಮರ್ಥಿಸಿ ವಾದಿಸುವುದೆಂದರೆ, ತರ್ಕಹೀನ ಅವೈಜ್ಞಾನಿಕ ಸಂಗತಿಗಳಿಗೆ ವೈಜ್ಞಾನಿಕ ಸಮರ್ಥನೆ ಕೊಟ್ಟಂತಾಗುತ್ತದೆಯಲ್ಲದೆ ಬೇರೇನೂ ಅಲ್ಲ. ಒಂದು ವಂಶಾವಳಿಯಲ್ಲಿ ಪಿತ್ರಾರ್ಜಿತ ಸಂಗತಿ ಯಾವ ನಿಯಮಗಳನ್ನು ಆಧರಿಸಿತ್ತೆಂಬುದು ನಮಗೆ ಇಂದಿಗೂ ಸ್ಪಷ್ಟವಾಗಿ ಖಚಿತವಾಗಿ ತಿಳಿದುಬಂದಿಲ್ಲ. ಆದ್ದರಿಂದ ಜಾತಿವ್ಯವಸ್ಥೆಗೆ ಉತ್ತಮ ಸಂತಾನದ ಉದ್ದೇಶವೇ ಮುಖ್ಯ ಕಾರಣವೆಂದು ಸಾರುವ ಯಾವುದೇ ಪ್ರತಿಪಾದನೆ ವ್ಯಾವಹಾರಿಕವಾಗಿ ಸಮುಚಿತವೆಂದು ಹೇಳಲಾಗದು. Mendel's Principles of Heredity ಎಂಬ ತನ್ನ ಗ್ರಂಥದಲ್ಲಿ ಪ್ರೊಫೆಸರ್ ಬೇಟ್ಸನ್ ಹೀಗೆ ಹೇಳುತ್ತಾನೆ: 'ಶ್ರೇಷ್ಠತಮ ಮಾನಸಿಕ ಶಕ್ತಿ ಸಾಮರ್ಥ್ಯಗಳು ಅನುವಂಶಿಕವಾಗಿ ಬರುವುದಾದರೆ, ಅವು ಯಾವುದೇ ಒಂದು ನಿರ್ದಿಷ್ಟವಾದ ನಿಯಮ ಅಥವಾ ಒಂದು ಕ್ರಮಕ್ಕೆ ಅನುಗುಣವಾಗಿ ಬರುತ್ತದೆ ಎಂದು ಕಾಣುವುದಿಲ್ಲ. ವ್ಯಕ್ತಿಯ ದೈಹಿಕ ವಿಶಿಷ್ಟತೆಗಳಾಗಲಿ. ಧೀಶಕ್ತಿಯ ಗುಣಲಕ್ಷಣಗಳಾಗಲಿ ಅನೇಕ ಸಂಗತಿಗಳ ಆಕಸ್ಮಿಕ ಯೋಗ ಸಂಯೋಗದಿಂದ ಆವಿಷ್ಕರಿಸುವವೇ ಹೊರತು ಒಂದು ನಿರ್ದಿಷ್ಟವಾದ ವಂಶೀಯ ಸಂತಾನದ ಕಾರಣದಿಂದಲೇ ಉದ್ಭವಿಸುವವು ಎಂದು ಹೇಳಲು ಸಾಧ್ಯವಿಲ್ಲ., ಜಾತಿವ್ಯವಸ್ಥೆಯು ಶ್ರೇಷ್ಠ ಸಂತಾನಶಾಸ್ತ್ರದ ದೃಷ್ಟಿಯಿಂದಲೇ ಸೃಷ್ಟಿಯಾಯಿತು ಎಂದು ವಾದಿಸುವುದಾದರೆ, ನಮ್ಮ ಸಮಕಾಲೀನ ವಿಜ್ಞಾನಿಗಳಿಗೂ ಕೂಡ ಸಾಧ್ಯವಾಗಿರುವಂಥ ವಿಶೇಷ ಜ್ಞಾನ ಹಿಂದೂಗಳ ಪೂರ್ವಜರಿಗೆ ಇತ್ತೆಂದು ವಾದಿಸಿದಂತಾಗುತ್ತದೆ. ಒಂದು ಮರ ಕೊಡುವ

ಹಣ್ಣಿನ ಆಧಾರದ ಮೇಲೆಯೇ ಆ ಮರದ ಮೌಲ್ಯ ನಿರ್ಧಾರವಾಗಬೇಕಲ್ಲವೆ? ಜಾತಿವ್ಯವಸ್ಥೆಯು ಶ್ರೇಷ್ಠ ಸಂತಾನಶಾಸ್ತ್ರಕ್ಕೆ ಅನುಗುಣವಾಗಿದ್ದರೆ ಅದು ಎಲ್ಲಿ ಎಂಥ ಶ್ರೇಷ್ಠ ಜನಾಂಗವನನ್ನು ಸೃಷ್ಟಿಸಬೇಕಾಗಿತ್ತು? ನಿಜವೆಂದರೆ ಹಿಂದೂಗಳು ಮೂರನೇ ವರ್ಗದ ಜನರು. ದೇಹದಾರ್ಢ್ಯ ಮೈಕಟ್ಟು ಸಬಲವಲ್ಲದ, ಹಲವು ಚ್ಯುತಿ ನ್ಯೂನತೆಗಳಿಂದ ಕೂಡಿದ ವಾಮನರಾಗಿದ್ದಾರೆ, ಹಿಂದೂಗಳು! ಒಂದು ರೀತಿಯ ಕುಳ್ಳರು–ಪಿಗ್ಮಿಗಳು ನಾವು, ನೂರಕ್ಕೆ 90ರಷ್ಟು ಜನರು ಮಿಲಿಟರಿ ಸೇವೆಗೆ ಅನರ್ಹರಾಗಿರುವ ಜನರಿಂದಲೇ ತುಂಬಿರುವ ದೇಶ ನಮ್ಮದು. ನಿಜಸ್ಥಿತಿ ಹೀಗಿದ್ದಲ್ಲಿ ಶ್ರೇಷ್ಠ ಸಂತಾನದ ತತ್ವದ ಮಾತೆಲ್ಲಿಯದು? ವಾಸ್ತವವಾಗಿ ಪರಮ ಸ್ವಾರ್ಥಿಗಳು, ಮಹಾ ಘಮಂಡಿನ ದುರಹಂಕಾರಿಗಳ ಬೆಂಬಲದಿಂದ ಜಾತಿವ್ಯವಸ್ಥೆಯನ್ನು ಸೃಷ್ಟಿಸಿ, ದುರ್ಬಲ ಅಸಹಾಯಕ, ಅಮಾಯಕ ಜನತೆಯ ಮೇಲೆ ಬಲವಂತದಿಂದ ಹೇರಿದರು; ತಮ್ಮ ಸ್ಥಾನಬಲಗಳಿಂದಲೇ ತಮ್ಮ ಕೆಳಗಿನವರ ಮೇಲೆ ದಬ್ಬಾಳಿಕೆ ನಡೆಸಬಹುದಾದ ವ್ಯವಸ್ಥೆಯೊಂದನ್ನು ನಿರ್ಮಿಸಿದರು.

ಜಾತಿವ್ಯವಸ್ಥೆಯು ಆರ್ಥಿಕ ದಕ್ಷತೆಯನ್ನು ಸಹ ಸಾಧಿಸುವುದಿಲ್ಲ. ಅಷ್ಟೇ ಅಲ್ಲ, ಅದು ಎಂದೂ ಜನಾಂಗೀಯ ಉತ್ತಮಿಕೆಗೆ ಕಾರಣವಾಗಿಯೂ ಇಲ್ಲ. ಕಾರಣವಾಗುವುದೂ ಇಲ್ಲ. ಹಾಗಿದ್ದೂ ಜಾತಿವ್ಯವಸ್ಥೆಯು ಒಂದನ್ನು ಮಾತ್ರ ನಿರ್ವಿವಾದವಾಗಿ ಸಾಧಿಸಿದೆ: ಹಿಂದೂಗಳನ್ನು ಸಂಪೂರ್ಣವಾಗಿ ವಿಘಟಿಸಿ ಅವರನ್ನು ನೈತಿಕ ಪ್ರಪಾತಕ್ಕೆ ದೂಡಿದೆ.

ನಾವು ಮೊಟ್ಟ ಮೊದಲನೆಯದಾಗಿ ಗುರುತಿಸಲೇಬೇಕಾದ ಒಂದು ಸಂಗತಿ ಎಂದರೆ, ಹಿಂದೂ ಸಮಾಜವೆಂಬುವುದೇ ಒಂದು ಭ್ರಮೆ ಒಂದು ಮಿಥ್ಯೆ. ಸೋಜಿಗವೆಂದರೆ, ಹಿಂದೂವೆಂಬ ಹೆಸರೇ ವಿದೇಶಿಯದ್ದಾಗಿದೆ. ಹೊರಗಿನಿಂದ ಗುರುತಿಸುವ ಉದ್ದೇಶದಿಂದ 'ಹಿಂದೂ' ಎಂಬ ಹೆಸರಿನಿಂದ ಕರೆದರು. ಮೊಹಮ್ಮದೀಯರು ದಾಳಿಯಿಟ್ಟು ಈ ದೇಶವನ್ನು ಆಕ್ರಮಿಸಿಕೊಳ್ಳುವುದಕ್ಕಿಂತ ಮೊದಲಿನ ಯಾವುದೇ ಸಂಸ್ಕೃತ ಗ್ರಂಥದಲ್ಲಿಯೂ ಹಿಂದೂ ಎಂಬ ಪದದ ಪ್ರಸ್ತಾಪವಿಲ್ಲ. ಸಮಸ್ತ ಭಾರತೀಯರಿಗೂ ಅನ್ವಯಿಸಬಹುದಾದ ಒಂದು ಸಾಮಾನ್ಯ ಹೆಸರಿನ ಅವಶ್ಯಕತೆ ಇಲ್ಲಿನವರಿಗೆ ಉಂಟಾಗಲೇ ಇಲ್ಲ. ಅದಕ್ಕೆ ಕಾರಣ ಆಗ ಒಂದು ಸುಸಂಬದ್ಧವಾದ ಅಖಂಡವಾದ ಸಮಗ್ರ ಸಮುದಾಯದ ಕಲ್ಪನೆಯೇ ಇರಲಿಲ್ಲ. ಆದ್ದರಿಂದಲೇ ಇಂದು ಹಿಂದೂ ಸಮಾಜವೆಂಬುದು

ಅಸ್ತಿತ್ವದಲ್ಲಿಯೇ ಇಲ್ಲ. ವಾಸ್ತವವಾಗಿ ಅದು ಕೇವಲ ಹಲವಾರು ಜಾತಿಗಳ ಒಂದು ಸಮೂಹವಾಗಿದೆ ಅಷ್ಟೆ. ಪ್ರತಿಯೊಂದು ಜಾತಿಯೂ ತನ್ನ ಅಸ್ತಿತ್ವದ ಬಗ್ಗೆ ಜಾಗೃತವಾಗಿದೆ. ಪ್ರಜ್ಞೆಯಿಂದಿದೆ. ತಾನು ಬದುಕಿ ಉಳಿಯಬೇಕು ಎಂಬುದೇ ಪ್ರತಿಯೊಂದು ಜಾತಿಯ ಗುರಿ ಗಂತವ್ಯವಾಗಿದೆ. ಹಾಗೆ ನೋಡಿದರೆ ಇಲ್ಲಿ ವಿಭಿನ್ನ ಜಾತಿಗಳ ಒಂದು ಒಕ್ಕೂಟವು ಸಹ ಅಸ್ತಿತ್ವದಲ್ಲಿಲ್ಲ. ಒಂದು ಜಾತಿಯು ಹಿಂದೂ ಮುಸ್ಲಿಂ ಗಲಭೆ ದಂಗೆಗಳ ಸಮಯದ ಹೊರತು ಮತ್ತೊಂದು ಜಾತಿಗೆ ಅಧೀನವಾಗಿದೆ ಅಥವಾ ಸಂಲಗ್ನವಾಗಿದೆ ಎಂಬ ಭಾವನೆ ಕೂಡ ಯಾವ ಜಾತಿಯಲ್ಲಿಯೂ ಕಂಡುಬರುವುದಿಲ್ಲ. ಬೇರೆ ಎಲ್ಲಾ ಸಂದರ್ಭಗಳಲ್ಲಿ ಪ್ರತಿಯೊಂದು ಜಾತಿಯೂ ಮತ್ತೊಂದರಿಂದ ತನ್ನನ್ನು ಪ್ರತ್ಯೇಕಿಸಿಕೊಳ್ಳಲು, ತನ್ನ ವಿಶಿಷ್ಟ ಅಸ್ತಿತ್ವವನ್ನು ಉಳಿಸಿಕೊಳ್ಳಲು ಯತ್ನಿಸುತ್ತಲೇ ಇರುತ್ತದೆ. ಪ್ರತಿಯೊಂದು ಜಾತಿಯೂ ತನ್ನ ಜಾತಿಯ ಪರಿಧಿಯೊಳಗೇ ಉಣ್ಣುವ, ತಿನ್ನುವ, ವಿವಾಹ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವ ವಿಧಿ ವಿಧಾನಗಳನ್ನು ಪಾಲಿಸುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನದೇ ಆದ ವಿಶಿಷ್ಟ ವೇಷಭೂಷಣಗಳನ್ನು ಹೊಂದಿರುತ್ತದೆ. ತಮ್ಮ ತಮ್ಮ ಜಾತಿಯವರು ಇದೇ ತರದ ಉಡುಗೆ ತೊಡುಗೆಗಳನ್ನು ಬಳಸಬೇಕೆಂಬ ನಿರ್ಬಂಧನೆಗಳನ್ನು ಕೂಡ ಅದು ಹೇರುತ್ತದೆ. ವಿದೇಶಿಯರಿಗೆ ವಿಚಿತ್ರವಾದ ಮನೋರಂಜನೆ ಒದಗಿಸುವಂತಹ ಅಗಣಿತ ಉಡುಗೆ ತೊಡುಗೆಗಳ ವೈವಿಧ್ಯತೆ ಭಾರತದಲ್ಲಿ ಕಂಡುಬರುತ್ತದೆ. ಇದಕ್ಕೆ ಜಾತಿಯ ನಿರ್ಬಂಧನೆಗಳೇ ಕಾರಣವೆಂಬುದು ಸ್ಪಷ್ಟವಾಗಿದೆ. ಆದರ್ಶ ಹಿಂದೂವೊಬ್ಬನು ಹೊರಗಿನ ಯಾರೊಂದಿಗೂ ಸಂಪರ್ಕ ಸಾಧಿಸದಂತೆ ತನ್ನ ಬಿಲದೊಳಗೆ ವಾಸಿಸುವ ಒಂದು ಇಲಿಯಾಗಿರಬೇಕು. ಸಮಾಜಶಾಸ್ತ್ರಜ್ಞರು ಪ್ರಸ್ತಾಪಿಸುವ 'ಸಾಮುದಾಯಿಕ ಪ್ರಜ್ಞೆ', ತನ್ನ ಸಮುದಾಯದ ಅಸ್ಮಿತೆ ಹಿಂದೂಗಳಲ್ಲಿ ಒಂದಿಷ್ಟೂ ಇಲ್ಲ. ಪ್ರತಿಯೊಬ್ಬ ಹಿಂದೂವಿನಲ್ಲಿ ಢಾಳಾಗಿ ಎದ್ದು ಕಾಣುವ ಒಂದೇ ಒಂದು ಪ್ರಜ್ಞೆಯೆಂದರೆ, ಜಾತಿಯ ಪ್ರಜ್ಞೆ, ತತ್‌ಕಾರಣವಾಗಿಯೇ ಇಂದಿಗೂ ಹಿಂದೂಗಳದೇ ಆದ ಒಂದು ಅಖಂಡ ಸಮಾಜವಾಗಲಿ, ರಾಷ್ಟ್ರವಾಗಲಿ ಸಾಧ್ಯವಾಗಿಲ್ಲ. ಇಷ್ಟಾಗಿಯೂ ನಾವು ಭಾರತೀಯರು ಒಂದು ರಾಷ್ಟ್ರವಾಗಿಲ್ಲ ಎಂಬುದನ್ನು ಎಷ್ಟೋ ಜನ ಒಪ್ಪಲು ತಯಾರಿಲ್ಲ. ಅದಕ್ಕೆ ಅವರ ದೇಶಾಭಿಮಾನ ಅಡ್ಡಿಯೊಡ್ಡುತ್ತದೆ. ಈ ವಾಸ್ತವವನ್ನು ಮರೆಮಾಚುತ್ತ ಹೊರಗೆ ಕಾಣುವ ವೈವಿಧ್ಯತೆಯ ಗರ್ಭದೊಳಗೆ

ಮೂಲಭೂತವಾದ ಒಂದು ಏಕತೆಯ ಪ್ರವಾಹವಿದೆ. ಹಾಗಾಗಿ ಹಿಂದೂಗಳೆಲ್ಲ ಅಖಂಡಭಾವದಿಂದ ಒಂದೇ ಆಗಿದ್ದಾರೆ ಎಂಬುದು ಅವರ ವಾದ. ಇಡೀ ಭಾರತ ಉಪಖಂಡದ ತುಂಬಾ ಒಂದೇ ತೆರನಾದ ಸಂಪ್ರದಾಯಗಳು ನಂಬಿಕೆಗಳು ಆಚಾರವಿಚಾರಗಳು ಕಂಡುಬರುತ್ತವೆ. ಒಂದು ವಿಧದ ಸಾಮ್ಯತೆ ಎಲ್ಲೆಲ್ಲೂ ತಾನೇ ತಾನಾಗಿರುವುದು ಕಂಡುಬರುತ್ತದೆ ಎಂಬುದು ಅವರ ತರ್ಕ. ಇಂಥ ಸಾಮಾನ್ಯವಾದ ಸಾಮ್ಯತೆ ಇರುವುದು ಸುಳ್ಳಲ್ಲ. ಆದರೆ ಅದುವೇ ಸಮಸ್ತ ಹಿಂದೂಗಳು ಒಂದು ಅವಿಚ್ಛಿನ್ನ ಸಮಾಜ ಎಂಬುದನ್ನು ಸಾಬೀತುಗೊಳಿಸುವುದಿಲ್ಲ. ಆದರೂ ಈ ರೀತಿಯಾಗಿ ವಾದಿಸುತ್ತಾ ಅಖಂಡ ಭಾರತದ ತೀರ್ಮಾನಕ್ಕೆ ಬರುವವರಿಗೆ 'ಸಮಾಜ'ವೆಂಬ ಪದದ ಅರ್ಥವೇ ಗೊತ್ತಿಲ್ಲ ಎನ್ನಬೇಕಾಗುತ್ತದೆ. ಯಾವುದೇ ಒಂದು ಪ್ರಾಂತ ಪ್ರದೇಶದಲ್ಲಿ ಜನರು ಪರಸ್ಪರ ಸಮೀಪ ಹಾಗೂ ಸಾನ್ನಿಧ್ಯದಲ್ಲಿರುವುದರಿಂದಲೇ ಒಂದು ಸಮಾಜವಾಗಿ ಪರಿಣಮಿಸುವುದಿಲ್ಲ. ಹಾಗೆಯೇ ತಮ್ಮ ಸಮಾಜದವರಿಂದ ನೂರಾರು ಮೈಲು ದೂರವಿರುವುದರಿಂದಲೇ ಅವರು ತಮ್ಮ ಸಮಾಜಕ್ಕೆ ಹೊರಗಿನವರಾಗುವುದಿಲ್ಲ. ಅಂತೆಯೇ ಯಾವುದೇ ಸಾಮಾಜಿಕ ಸಂಪ್ರದಾಯ ರೂಢಿ, ಪದ್ಧತಿ, ನಂಬಿಕೆ, ಆಚಾರ–ವಿಚಾರಗಳ ಸಾಮ್ಯತೆಯಿಂದಾಗಿಯೇ ಒಂದು ಸಮಾಜ ಜನ್ಮ ತಳೆಯುವುದಿಲ್ಲ. ಇಟ್ಟಿಗೆಗಳಂಥ ವಸ್ತಗಳನ್ನು ಒಬ್ಬರಿಂದ ಒಬ್ಬರಿಗೆ ಸಾಗಿಸಬಹುದು. ವರ್ಗಾಯಿಸಬಹುದು. ಹಾಗೆಯೇ ಒಂದು ಜನಸಮೂಹದ ಆಚಾರ ವಿಚಾರಗಳು ಶ್ರದ್ಧೆ ಸಂಪ್ರದಾಯಗಳು ಕೂಡ ಮತ್ತೊಂದು ಜನಸಮುದಾಯಕ್ಕೆ ಹರಿದು ಹೋಗಿ ಅವೆರಡೂ ಸಮುದಾಯಗಳಲ್ಲಿ ಅನನ್ಯತೆ ಕಂಡುಬರಬಹುದು. ಸಾಂಸ್ಕೃತಿಕ ಪ್ರಸರಣವಾಗುವುದೇ ಹೀಗೆ. ತತ್‌ಪರಿಣಾಮವಾಗಿ ದೇಶಿಕವಾಗಿ ಬಹುದೂರ ದೂರದಲ್ಲಿರುವ ಪ್ರಾಚೀನ ಬುಡಕಟ್ಟು ಸಮುದಾಯಗಳಲ್ಲಿ ರೂಢಿ, ಪದ್ಧತಿ, ಶ್ರದ್ಧೆ–ಸಂಪ್ರದಾಯಗಳ ಹೋಲಿಕೆ ಕಂಡುಬರುವುದುಂಟು. ಈ ಹೋಲಿಕೆಯ ಕಾರಣದಿಂದಾಗಿಯೇ ಆ ಪ್ರಾಚೀನ ಬುಡಕಟ್ಟುಗಳೆಲ್ಲಾ ಹಿಂದೆ ಒಂದೇ ಸಮಾಜವಾಗಿದ್ದವು ಎಂದು ಹೇಳಲಾಗದು. ಮಾನವರು ಒಂದು ಅಖಂಡ ಸಮುದಾಯವಾಗಿ ಅಭಿನ್ನ ಸಮಾಜವಾಗಿ ಸಂಘಟನೆಗೊಳ್ಳಬೇಕಾದರೆ ಎಲ್ಲರಿಗೂ ಸಮಾನಾಧಿಕಾರದ ಕೆಲವು ಸಂಗತಿಗಳನ್ನು ಅದು ಹೊಂದಿರಲೇಬೇಕು. ಒಂದೇ ತೆರನಾದ ವಸ್ತುಗಳನ್ನು ಅಥವಾ ಸಂಗತಿಗಳನ್ನು ಹೊಂದಿರುವುದು ಬೇರೆ. ತನ್ನ ಸಮಾಜದ

ಇತರರೊಡನೆ ಕೆಲವು ವಿಷಯದಲ್ಲಿ ಸಮಾನ ಅಧಿಕಾರ ಲಭಿಸುವುದು ಪರಸ್ಪರ ಸಾನ್ನಿಧ್ಯ ಸಂಪರ್ಕದಿಂದಲೇ ಸಾಧ್ಯ ಎಂಬುದು ನಿಚ್ಚಳ. ಏಕರೂಪತೆ ಒಂದೇ ಇದ್ದರೆ ಸಾಲದು. ನಿದರ್ಶನಕ್ಕೆ ಹಿಂದೂಗಳ ವಿವಿಧ ಜಾತಿ ಮತ್ತು ಹಬ್ಬಗಳನ್ನು ನೋಡಬಹುದು; ಭಾರತದ ತುಂಬಾ ಹಿಂದೂಗಳು ಆಚರಿಸುವ ಹಬ್ಬ ಹರಿದಿನಗಳು ಒಂದೇ ರೀತಿಯಾಗಿವೆ; ಅವುಗಳಲ್ಲಿ ಹೇಳಿಕೊಳ್ಳುವಂತಹ ಭಿನ್ನತೆ ಕಾಣುವುದಿಲ್ಲ. ಇಡೀ ದೇಶದ ತುಂಬಾ ಹರಡಿರುವ ಹಲವಾರು ಜಾತಿಗಳು ಒಂದೇ ವಿಧದ ಹಬ್ಬಗಳನ್ನು ಆಚರಿಸುತ್ತ ಬಂದಿದ್ದರೂ ಈ ಸಮಸ್ತ ಜಾತಿಗಳು ಒಂದೇ ದೇಹದ ವಿಭಿನ್ನ ಅಂಗಗಳಾಗಿಲ್ಲ ಒಂದು ಪೂರ್ಣದ ವಿವಿಧ ಅಪೂರ್ಣ ಘಟಕಗಳಾಗಿಲ್ಲ. ಎಲ್ಲವೂ ಪ್ರತ್ಯೇಕವಾಗಿಯೇ ಉಳಿದುಕೊಂಡಿವೆ. ಎಲ್ಲರಿಗೂ ಸಮಾನವಾದ ಸಾಮಾಜಿಕ ಪ್ರಕ್ರಿಯೆಯೊಂದರಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರಲ್ಲಿಯೂ ಸಮಾನ ಭಾವನೆ ಇರುವುದು ಅವಶ್ಯಕ. ತನ್ನ ಸಮುದಾಯದ ಒಟ್ಟು ಯಶಸ್ಸು ತನ್ನ ಯಶಸ್ಸು ಕೂಡ; ಅದರ ಸೋಲು ತನ್ನ ಸೋಲು ಕೂಡ ಎನ್ನುವ ಮನೋಧರ್ಮ ಪ್ರತಿಯೊಬ್ಬನಲ್ಲಿ ಬೇರೂರಿದಾಗ ಮಾತ್ರ ಆ ಸಮುದಾಯದ ಸರ್ವರೂ ಒಂದು ಅಭಿನ್ನ ಸಮಾಜವಾಗಿ ಸಂಘಟನೆಗೊಳ್ಳುತ್ತಾರೆ. ಆದರೆ ಇಂಥ ಸಮಾನ ಭಾವ ಬಂಧುರತೆಯಿಂದ ಪರಸ್ಪರ ಒಗ್ಗೂಡಿ ಸಮಾನ ಚಟುವಟಿಕೆಗಳಲ್ಲಿ ತೊಡಗುವುದನ್ನು ಜಾತಿವ್ಯವಸ್ಥೆ ನಿಷೇಧಿಸುತ್ತದೆ. ಈ ಕಾರಣದಿಂದಾಗಿಯೇ ಇಲ್ಲಿ ಹಿಂದೂಗಳೆಲ್ಲರೂ ಪರಸ್ಪರ ಆಪ್ತತೆ ಅನ್ಯೋನ್ಯತೆಯನ್ನು ಸಾಧಿಸಿ ಒಂದು ಸಮಾಜವಾಗಿ ಪರಿಣಮಿಸುವುದನ್ನು ಅದು ತಪ್ಪಿಸಿದೆ.

ಒಂದು ಸಾಮಾಜಿಕ ಗುಂಪು ಅಥವಾ ವರ್ಗ ತಾನು ಇತರರಿಗಿಂತ ಭಿನ್ನ ಎಂದು ಭಾವಿಸುತ್ತ ಬೇರೊಬ್ಬರಿಂದ ಪ್ರತ್ಯೇಕಗೊಂಡು ನಿಲ್ಲುವುದು ಸಮಾಜವಿರೋಧಿ ನಿಲುವು ಎಂದು ಹಿಂದೂಗಳು ಆಗಾಗ ಗೊಣಗುಟ್ಟುತ್ತಾರೆ. ಆದರೆ ಇಂಥ ಸಮಾಜವಿರೋಧಿ ಮನೋಧರ್ಮ ಹಾಗೂ ಪ್ರತ್ಯೇಕತೆಯ ಭಾವ ಜಾತಿವ್ಯವಸ್ಥೆಯ ಅತ್ಯಂತ ಕ್ರೂರವೂ ದುಷ್ಟವೂ ಆದ ಲಕ್ಷಣವಾಗಿದೆ. ಎಂಬ ಸಂಗತಿಯನ್ನು ಸಾಂಪ್ರದಾಯಿಕ ಕಂದಾಚಾರಿ ಹಿಂದೂಗಳು ಮರೆಮಾಚಲು ಯತ್ನಿಸುತ್ತಾರೆ. ಇದರಿಂದ ಅವರಿಗೆ ಸಾಕಷ್ಟು ಅನುಕೂಲವೂ ಇದೆ ಎನ್ನಿ. ಒಂದು ಜಾತಿ ಇನ್ನೊಂದು ಜಾತಿಯ ವಿರುದ್ಧ ಪ್ರಗಾಢವಾದ ದ್ವೇಷ ಅಸೂಯೆಯ ಗೀತೆ ಹಾಡುವುದರಲ್ಲಿಯೇ ಪರಮಾನಂದ ಅನುಭವಿಸುತ್ತದೆ.

ಕಳೆದ ಯುದ್ಧದ ಸಂದರ್ಭದಲ್ಲಿ ಜರ್ಮನ್‌ರು ಇಂಗ್ಲಿಷರ ವಿರುದ್ಧ ಹೇಗೆ ದ್ವೇಷ ಉಕ್ಕಿಸುವ ಹಾಡನ್ನು ಹಾಡುತ್ತಿದ್ದರೋ ಹಾಗೆಯೇ ಜಾತಿವ್ಯವಸ್ಥೆಯಲ್ಲಿಯ ವಿಭಿನ್ನ ಜಾತಿಗಳು ಪರಸ್ಪರ ದ್ವೇಷಕಾರುವ ಗೀತೆಗಳನ್ನು ಹಾಡುವುದರಲ್ಲಿ ಸಂತೋಷಪಡುತ್ತವೆ. ಹಿಂದೂಗಳ ಸಾಹಿತ್ಯ ಪರಂಪರೆಯಲ್ಲಿ ಸಹ್ಯಾದ್ರಿ ಕಾಂಡ ಎಂಬುದು ಅತ್ಯಂತ ಕುಖ್ಯಾತವಾದ ಸಾಹಿತ್ಯದ ಪ್ರಸಂಗವಾಗಿದೆ. ಸಮಾಜವಿರೋಧಿ ಮನೋಭಾವ ಜಾತಿಗಳಿಗಷ್ಟೇ ಸೀಮಿತವಾಗಿಲ್ಲ. ಅದು ಒಂದು ರೀತಿಯ ವಿಷವಾಗಿ ಇನ್ನೂ ಆಳಕ್ಕಿಳಿದು ಜಾತಿವ್ಯವಸ್ಥೆಯ ನರನಾಡಿಗಳಲ್ಲಿ ಸೇರಿಕೊಂಡಿದೆ; ಉಪಜಾತಿಗಳಲ್ಲಿಯೂ ಕೂಡ ನುಸುಳಿ ಪರಸ್ಪರ ಸಂಬಂಧವನ್ನು ಹದಗೆಡಿಸಿದೆ.

ನಮ್ಮ ಪ್ರದೇಶದಲ್ಲಿ ಅನೇಕ ಪಂಗಡಗಳ ಬ್ರಾಹ್ಮಣರಿದ್ದಾರೆ; ಗೋಲಕ ಬ್ರಾಹ್ಮಣರು, ದೇವರುಖಾ ಬ್ರಾಹ್ಮಣರು. ಕರಾಡಾ ಬ್ರಾಹ್ಮಣರು, ಪಲಶೆ ಬ್ರಾಹ್ಮಣರು ಮತ್ತು ಚಿತ್‌ಪಾವನ ಬ್ರಾಹ್ಮಣರು. ಇವರೆಲ್ಲರೂ ಒಂದೇ ಬ್ರಾಹ್ಮಣ ಜಾತಿಯ ಉಪಜಾತಿಗಳೆಂದು ಭಾವಿಸುತ್ತಾರೆ. ಆದರೆ ಇವರ ಮಧ್ಯೆ ಇರುವ ತೀಕ್ಷ್ಣವಾದ ಭಿನ್ನತೆಗಳು ಇವರೆಲ್ಲರನ್ನು ಪ್ರತ್ಯೇಕವಾಗಿಸಿಟ್ಟಿವೆ. ಇದರಲ್ಲಿ ಆಶ್ಚರ್ಯಪಡುವಂಥದ್ದೇನೂ ಇಲ್ಲ. ಒಂದು ವರ್ಗ ತನ್ನ ರಕ್ಷಣೆ ಮಾಡಿಕೊಳ್ಳುವಾಗ ತನ್ನ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳುವ ಸಂದರ್ಭ ಬಂದಾಗ ಅದು ಬೇರೆ ಜನವರ್ಗಗಳನ್ನು ತನ್ನಿಂದ ಪ್ರತೇಕಗೊಳಿಸಿ ದೂರವಿಡುವ ಪ್ರಜ್ಞೆ ಪ್ರವೃತ್ತಿಗಳು ಒಮ್ಮೆಲೆ ಎದ್ದು ಬರುತ್ತವೆ. ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳು ತಮ್ಮ ಪ್ರತ್ಯೇಕ ಅಸ್ಮಿತೆ ಅಸ್ತಿತ್ವಕ್ಕಾಗಿ ಹೇಗೆ ಬಡಿದಾಡುತ್ತವೆಯೋ ಹಾಗೆಯೇ ಒಂದೊಂದು ಜಾತಿಯೂ ತನ್ನ ವಿಶಿಷ್ಟ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಬೇರೆ ಜಾತಿಗಳನ್ನು ವಿರೋಧಿಸುತ್ತದೆ. ಹಾಗಾಗಿ ತನ್ನಿಂದ ಪ್ರತ್ಯೇಕವಾದ ಇಡೀ ಸಮಾಜವನ್ನು ವಿರೋಧಿಸುವ ನಿಲುವು ತಳೆಯುತ್ತದೆ. ಯಾವುದೇ ಅಬ್ರಾಹ್ಮಣರಿಂದ ತಮ್ಮ ಅಸ್ತಿತ್ವಕ್ಕೆ ಯಾವುದೇ ಅಪಾಯ ಬಂದೆರಗದಂತೆ, ತಮ್ಮ ಹಿತಾಸಕ್ತಿಗೆ ಧಕ್ಕೆ ಬಾರದಂತೆ ಎಚ್ಚರಿಕೆ ವಹಿಸುವುದೇ ಈ ಎಲ್ಲಾ ಬ್ರಾಹ್ಮಣರಿಗೆ ಮುಖ್ಯ ಕರ್ತವ್ಯವಾಗುತ್ತದೆ. ಹಾಗೆಯೇ ಬ್ರಾಹ್ಮಣೇತರರು ಬ್ರಾಹ್ಮಣರಿಂದ ತಮ್ಮ ಹಿತಾಸಕ್ತಿಗೆ ಅಪಾಯ ಒದಗಿಬರಬಾರದೆಂದು ನಿಗಾ ವಹಿಸುವುದೇ ಮುಖ್ಯ ಕಾಯಕವಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಯ ಒಟ್ಟು ಪರಿಣಾಮವೆಂದರೆ, ಹಿಂದೂಗಳೂ ಭಿನ್ನವಿಭಿನ್ನ ಜಾತಿಗಳ ಒಂದು ಕಿಚಡಿ ಸಮಾಜವಾಗಿ ಬಿಟ್ಟಿದ್ದಾರೆ.

ಅಷ್ಟೇ ಅಲ್ಲ, ಸ್ವಾರ್ಥತೆಯೇ ಮೈವೆತ್ತಂತಿರುವ ಹಲವು ಪರಸ್ಪರ ವೈರ ಸ್ವಭಾವದ ಸಮೂಹಗಳಾಗಿಯೂ ಪರಿಣಮಿಸಿದ್ದಾರೆ. ಇದಕ್ಕೂ ಮೀರಿ ವಿಷಾದನೀಯವಾದ ಇನ್ನೊಂದು ಲಕ್ಷಣವನ್ನೂ ಜಾತಿವ್ಯವಸ್ಥೆ ಗರ್ಭೀಕರಿಸಿಕೊಂಡಿದೆ. ಸದ್ಯದ ಬ್ರಿಟಿಷರ ಪೂರ್ವಜರು ಗುಲಾಬಿಯುದ್ಧ ಹಾಗೂ ಕ್ರಾಮ್‌ವೆಲ್‌ನ ಯುದ್ಧದಲ್ಲಿ ಪಾಲ್ಗೊಂಡು ಇದುವೋ ಅದುವೋ ಒಟ್ಟಿನಲ್ಲಿ ವಿಭಿನ್ನ ಪಕ್ಷಗಳ ಪರವಾಗಿ ಕಾದಾಡಿದ್ದರು. ಪರಸ್ಪರರ ವಿರುದ್ಧವಾಗಿ ಹೋರಾಡಿದ್ದರು. ಆದರೆ ಈಗ ಒಂದು ಪಕ್ಷದ ವಂಶಜರು ಮತ್ತೊಂದು ಪಕ್ಷದ ವಂಶಜರನ್ನು ಹಗೆತನದಿಂದ ಬಗೆಯುವುದಿಲ್ಲ; ವೈರಭಾವದಿಂದ ದ್ವೇಷ ಸಾಧಿಸುವುದಿಲ್ಲ. ಸದ್ಯದ ಪರಸ್ಪರ ಸೌಹಾರ್ದತೆಯಿಂದಾಗಿ ಗತದ ದ್ವೇಷ ಅಸೂಯೆಗಳು, ಜಗಳ–ತೋಟಿಗಳು ಇಂದು ಕಾಣೆಯಾಗಿವೆ. ಆದರೆ ಭಾರತದಲ್ಲಿ ಮಾತ್ರ ನಡೆಯುತ್ತಿರುವುದೇ ಬೇರೆ. ಪ್ರಾಯಶಃ ಇಲ್ಲಿ ಗತದ ವೈಷಮ್ಯ ವಿಸ್ಮೃತಿಗೆ ಸೇರಿ ಹೋಗಿಲ್ಲ. ಪರಿಣಾಮವಾಗಿ ಹಿಂದೆ ಬ್ರಾಹ್ಮಣರು ಶಿವಾಜಿಗೆ ಅಪಮಾನ ಮಾಡಿರುವುದನ್ನು ಮರೆಯದೆ ಈಗಿನ ಕಾಯಸ್ಥರು, ಅಬ್ರಾಹ್ಮಣರು ಬ್ರಾಹ್ಮಣರನ್ನು ಶಿಕ್ಷಿಸಲು ಹಾತೊರೆಯುತ್ತಾರೆ. ಒಟ್ಟಿನಲ್ಲಿ ಪರಸ್ಪರ ದ್ವೇಷ ಸಾಧನೆಯೇ ಇಲ್ಲಿ ನಿರಂತರವಾಗಿ ನಡೆಯುವ ನಿತ್ಯ ಕರ್ಮ! ಇದಕ್ಕೆಲ್ಲ ಕಾರಣವೇನು? ಜಾತಿವ್ಯವಸ್ಥೆಯೇ ಏಕೈಕ ಕಾರಣವೆಂಬುದು ವಾದಾತೀತ, ಪ್ರತಿಯೊಬ್ಬನಲ್ಲೂ ಜಾತಿಪ್ರಜ್ಞೆ ಮಡುವುಗಟ್ಟಿರುವುದರಿಂದಲೇ ಹಿಂದಿನ ಕಾಲದ ಜಾತಿವೈಷಮ್ಯಗಳೂ, ಕಲಹ, ಕಾದಾಟಗಳು ಪ್ರತಿಯೊಬ್ಬನ ಮನೋಭೂಮಿಯಲ್ಲಿ ಆಳವಾಗಿ ಬೇರುಬಿಟ್ಟು ನಮ್ಮ ಅಖಂಡ ಐಕ್ಯತೆಗೆ ಅಡ್ಡಿಯಾಗಿ ಪರಿಣಮಿಸಿವೆ.

ಇತ್ತೀಚೆಗೆ ಸಮಾಜದಿಂದ ಹೊರಗಿಡಲ್ಪಟ್ಟಂಥ ಮತ್ತು ಅಂಶಿಕವಾಗಿ ಒಳಗೊಳ್ಳಲ್ಪಟ್ಟಂಥ ಕ್ಷೇತ್ರಗಳ ಬಗ್ಗೆ ನಡೆದಿರುವ ಚರ್ಚೆಯು ಭಾರತದಲ್ಲಿಯ ಮೂಲ ನಿವಾಸಿಗಳೆಂದು ಕರೆಯಲ್ಪಡುವ ಪಂಗಡಗಳ ಕಡೆಗೆ ಸಾರ್ವಜನಿಕರ ಗಮನ ಸೆಳೆದಿದೆ. ಅವರ ಸಂಖ್ಯೆ ಕನಿಷ್ಠ ಪಕ್ಷ 13 ಮಿಲಿಯನ್‌ಗೂ ಕಡಿಮೆಯಿಲ್ಲ. ಹೊಸ ಸಂವಿಧಾನದಲ್ಲಿ ಈ ಜನಪದರನ್ನು ಒಳಗೊಳ್ಳದೆ ಬಿಟ್ಟಿರುವುದನ್ನು ಉಚಿತವೋ ಅನುಚಿತವೋ ಒತ್ತಟ್ಟಿಗಿರಲಿ. ಸಾವಿರಾರು ವರ್ಷಗಳಷ್ಟು ದೀರ್ಘವಾದ ನಾಗರಿಕತೆ ತನ್ನದೆಂದು ಬಡಾಯಿ ಕೊಚ್ಚಿಕೊಳ್ಳುವ ಈ ದೇಶದಲ್ಲಿಯ ಈ ಎಲ್ಲ ಆದಿವಾಸಿಗಳು ಇವತ್ತಿಗೂ ತಮ್ಮ ಪ್ರಾಚೀನ ಹಾಗೂ ಅನಾಗರಿಕ ಸ್ಥಿತಿಯಲ್ಲಿಯೇ ಜೀವನ ಸಾಗಿಸುತ್ತ ಬರುತ್ತಿದ್ದಾರೆ ಎಂಬುದು ಇಲ್ಲಿಯ

ವಾಸ್ತವ. ಈ ಜನರು ಅನಾಗರಿಕರಾಗಿ ಉಳಿದಿರುವುದಲ್ಲದೆ, ಕೆಲವು ಪಂಗಡದವರು ಅನುಸರಿಸುವ ವ್ಯವಹಾರಗಳ ಕಾರಣದಿಂದಾಗಿಯೇ ಅಪರಾಧಿಗಳೆಂದು ಪರಿಗಣಿಸಲ್ಪಟ್ಟಿದ್ದಾರೆ. ಭಾರತದಂಥ ಒಂದು ಬೃಹತ್ ನಾಗರಿಕ ದೇಶದಲ್ಲಿ ಹದಿಮೂರು ಮಿಲಿಯನ್ ಜನರು ಅನಾಗರಿಕರಾಗಿ ಬಳಲುತ್ತಿದ್ದಾರೆ. ಪಾರಂಪರಿಕವಾಗಿ ಅಪರಾಧಿಗಳಾಗಿಯೇ ಜೀವನ ಸಾಗಿಸುತ್ತಿದ್ದಾರೆ. ಎಂಬುದು ಏನನ್ನು ಧ್ವನಿಸುತ್ತದೆ? ಸೋಜಿಗದ ಸಂಗತಿಯೆಂದರೆ ಈ ವಾಸ್ತವವನ್ನು ಈ ಜನರ ದಾರುಣ ಸ್ಥಿತಿಯನ್ನು ಕಂಡು ಹಿಂದೂಗಳಿಗೆ ಒಮ್ಮೆಯೂ ನಾಚಿಕೆಯಾಗಿಲ್ಲ. ಇಂಥ ವಿಚಿತ್ರ ವಾಸ್ತವ ಪ್ರಪಂಚದ ಬೇರೆ ಯಾವ ಭಾಗದಲ್ಲೂ ಕಾಣಸಿಗದು ಸರಿ, ಈ ನಾಚಿಕೆಗೇಡಿನ ದುರ್ಭರಸ್ಥಿತಿಗೆ ಕಾರಣವಾದರೂ ಏನು? ಈ ಮೂಲ ನಿವಾಸಿಗಳಿಗೆ ನಾಗರಿಕತೆಯ ಸೇವೆ ಸೌಲಭ್ಯಗಳನ್ನು ಪೂರೈಸಿ ಅವರು ಕೂಡ ಗೌರವಾರ್ಹವಾದ ಬದುಕು ನಡೆಸಲು ಸಾಧ್ಯವಾಗುವಂತೆ ಯಾಕೆ ಸೂಕ್ತ ಕ್ರಮ ಕೈಗೊಳ್ಳಲೇ ಇಲ್ಲ? ಈ ಆದಿವಾಸಿಗಳ ಅನಾಗರಿಕ ಸ್ಥಿತಿಗೆ ಅವರ ಬದುಕಿನ ದುರವಸ್ಥೆಗೆ ಅವರ ಅನುವಂಶಿಕ ಪಾರಂಪರಿಕ ಹೆಡ್ಡತನವೇ ಕಾರಣವೆಂದು ಹಿಂದೂಗಳು ಹೇಳುವ ಸಾಧ್ಯತೆಯಿಲ್ಲದಿಲ್ಲ. ಈ ನತದೃಷ್ಟರಿಗೆ ನಾಗರೀಕ ಸೇವಾ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗಿತ್ತು. ವೈದ್ಯಕೀಯ ಸಹಾಯ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕಾಗಿತ್ತು. ಅವರ ಬದುಕಿನ ಅನಾಗರಿಕ ಅಂಶಗಳನ್ನು ತಿದ್ದಿ ತೀಡಿ ಅವರು ಕೂಡ ಉನ್ನತ ದರ್ಜೆಯ ಪ್ರಜೆಗಳಾಗುವಂತೆ ಕ್ರಮ ಕೈಗೊಳ್ಳಬೇಕಾಗಿತ್ತು. ಈ ಎಲ್ಲಾ ಜವಾಬ್ದಾರಿ ಹಿಂದೂಗಳದ್ದೇ ಆಗಿದ್ದರೂ ಅವರು ತಮ್ಮ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಸೋತಿದ್ದಾರೆ ಎಂಬುದನ್ನು ಪ್ರಾಯಶಃ ಅವರು ಒಪ್ಪಿಕೊಳ್ಳಲಾರರು. ಸದ್ಯ ಕ್ರೈಸ್ತ ಮಿಷನರಿಗಳು ಈ ಆದಿವಾಸಿಗಳಿಗಾಗಿ ಮಾಡುತ್ತಿರುವುದೆಲ್ಲ ಒಬ್ಬ ಹಿಂದೂ ಕೂಡ ಮಾಡಬಯಸುತ್ತಾನೆ ಎಂದಿಟ್ಟುಕೊಳ್ಳಿ. ಆದರೆ ಹಿಂದೂ ಸಮಾಜದಲ್ಲಿ ಹೀಗೆ ಮಾಡುವುದು ಸಾಧ್ಯವೇ? ಇಲ್ಲ. ಸಾಧ್ಯವಿಲ್ಲವೆಂದು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಪ್ರಾಚೀನ ಕಾಲದ ಅನಾಗರಿಕ ಬದುಕಿಗೇ ಅಂಟಿಕೊಂಡಿರುವ ಜನರನ್ನು ನಾಗರಿಕರನ್ನಾಗಿ ಮಾರ್ಪಡಿಸಬೇಕಾದರೆ, ನಾವು ಕೈಗೊಳ್ಳಬೇಕಾದ ಕ್ರಮವೇನು? ನಾವು ಮೊಟ್ಟ ಮೊದಲು ಮಾಡಬೇಕಾದ ಕೆಲಸವೆಂದರೆ, ಅವರನ್ನು ತಮ್ಮವರೆಂದು ಒಪ್ಪಿಕೊಂಡು ನಮ್ಮ ಸಾಮಾಜಿಕ ಪರಧಿಯೊಳಗೆ ಸೇರಿಸಿಕೊಳ್ಳಬೇಕು. ಅವರ

ನಡುವೆಯೇ ಬದುಕುತ್ತಾ ಅವರೊಂದಿಗೆ ಬಂಧುತ್ವದ ಭಾವ ಮೊಳೆಸಿಕೊಳ್ಳಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ, ಅವರೆಲ್ಲರ ಮೇಲೆ ನಮ್ಮ ಸ್ನೇಹ ಸೌಹಾರ್ದತೆಯ, ಪ್ರೀತಿ ಪ್ರೇಮದ ಹೊಳೆ ಹರಿಸಬೇಕು. ಯಾವಾಗಲೂ ಎಲ್ಲರನ್ನು ದೂರವಿಡುವ ಸ್ವಭಾವ ರಕ್ತಗತ ಮಾಡಿಕೊಂಡಿರುವ ಹಿಂದೂವಿಗೆ ಇದು ಸಾಧ್ಯವಾಗಬಲ್ಲುದೆ? ತನ್ನ ಜಾತಿಯನ್ನು ರಕ್ಷಿಸಿಕೊಳ್ಳುವುದಕ್ಕೆ ಇಡೀ ಜೀವನ ಸೆಣಸುವ ಪ್ರವೃತ್ತಿಗೆ ದಾಸನಾಗಿರುವ ಹಿಂದೂವಿಗೆ ಇದು ಹೇಗೆ ಸಾಧ್ಯ? ಜಾತಿಯೆಂಬುದು ಯಾವ ಬೆಲೆ ಕೊಟ್ಟಾದರೂ ಸರಿ, ರಕ್ಷಿಸಿಕೊಳ್ಳಲೇಬೇಕಾದ ಒಂದು ಅಮೂಲ್ಯ ಆಸ್ತಿಯೆಂದು ಭಾವಿಸುತ್ತಾನೆ ಅವನು. ವೇದಕಾಲೀನ ಅನಾರ್ಯ ಜನಸಮೂಹದ ವಂಶದಲ್ಲಿ ಜನಿಸಿರುವ ಈ ಅನಾಗರಿಕರೊಂದಿಗೆ ಕಿಂಚಿತ್ ಸಂಪರ್ಕ ಬೆಳೆಸಿದರೂ ಎಲ್ಲಿ ತನ್ನ ಜಾತಿ ಹಾಳಾಗಿ ಹೋಗುವುದೋ ಎಂಬ ಭಯಾತಂಕದಲ್ಲಿ ಸದಾ ತತ್ತರಿಸುತ್ತಾ ಅವನು ಅನಾಗರಿಕರ ನಾಗರಿಕರಣ ಪ್ರಕ್ರಿಯೆಯಿಂದ ಬಹುದೂರ ನಿಲ್ಲುತ್ತಾನೆ. ಹೀಗೆಂದ ಮಾತ್ರಕ್ಕೆ ಕೆಳಗೆ ಬಿದ್ದವರನ್ನು ಮೇಲೆತ್ತುವಂಥ ಮನುಷ್ಯ ಸಹಜ ಸಹಾನುಭೂತಿಯುಕ್ತ ಮಾನವೀಯ ಕ್ರಿಯೆಗೆ ಹಿಂದೂ ಎಂದೂ ತಯಾರಾಗುವುದಿಲ್ಲ ಎಂದು ಹೇಳಲಾಗದು. ಆದರೆ ತನ್ನ ಜಾತಿರಕ್ಷಣೆಯ ಪ್ರಶ್ನೆ ಬಂದಾಗ ಅವನ ಮಾನವೀಯಪ್ರಜ್ಞೆ ಸ್ಥಗಿತಗೊಳ್ಳುತ್ತದೆ. ನಿಷ್ಕ್ರಿಯವಾಗುತ್ತದೆ. ಆದಿವಾಸಿಗಳ ಅನಾಗರಿಕ ಸ್ಥಿತಿ, ನಾಗರಿಕ ಹಿಂದೂ ಸಮಾಜಕ್ಕೆ ಅಪಾಯಕಾರಿಯಾಗಿ ಬಿಡಬಹುದೆಂಬುದು ಹಿಂದೂಗಳ ಅರಿವಿನ ಪರಿಧಿಗೆ ಇನ್ನೂ ಹೊಕ್ಕಿಲ್ಲ. ಈ ಆದಿವಾಸಿಗಳು ಅನಾಗರಿಕರಾಗಿಯೇ ಉಳಿದರೆ ಹಿಂದೂಗಳಿಗೆ ಸದ್ಯ ಅಪಾಯವೇನೂ ಆಗದು. ಆದರೆ ಹಿಂದೂಯೇತರ ಜನರು ಇವರನ್ನು ಮತಾಂತರಗೊಳಿಸಿ ತಮ್ಮ ಧರ್ಮಕ್ಕೆ ಸೇರಿಸಿಕೊಂಡರೆ, ಹಿಂದೂಗಳ ವೈರಿಗಳ ಸಂಖ್ಯೆ ಮತ್ತಷ್ಟು ವರ್ಧಿಸುವುದು ಖಂಡಿತ. ಒಂದು ವೇಳೆ ಇದೇನಾದರೂ ಸಂಭವಿಸಿದರೆ ಅಂಥ ಸ್ಥಿತಿಗೆ ಹಿಂದೂವೇ ಜವಾಬ್ದಾರನಾಗಬೇಕಾಗುತ್ತದೆ. ಅಂತಿಮವಾಗಿ ಅವನ ಜಾತಿವ್ಯವಸ್ಥೆಯೇ ಅದರ ಹೊಣೆಯನ್ನೂ ಹೊರಬೇಕಾಗುತ್ತದೆ.

ಅನಾಗರಿಕ ಆದಿವಾಸಿಗಳನ್ನು ಸುಧಾರಿಸಿ ನಾಗರಿಕರನ್ನಾಗಿ ಮಾಡುವ ಮಾನವೀಯ ಪ್ರಯತ್ನಕ್ಕೆ ಹಿಂದೂಗಳು ಮನಸ್ಸು ಮಾಡಲಿಲ್ಲ. ಅಷ್ಟೇ ಅಲ್ಲ, ಹಿಂದೂಗಳಲ್ಲಿಯ ಮೇಲ್ಜಾತಿಯವರು ತಮ್ಮಲ್ಲಿಯೇ ಇರುವ

ಕೆಳಜಾತಿಯವರನ್ನು ಕೂಡ ಶೈಕ್ಷಣಿಕವಾಗಿ ಸಾಂಸ್ಕೃತಿಕವಾಗಿ ಮೇಲೆತ್ತಲಿಲ್ಲ. ತಮ್ಮ ಸ್ತರಕ್ಕೆ ಏರಲು ಅವಕಾಶ ಮಾಡಿಕೊಡಲಿಲ್ಲ. ಈ ಮಾತಿಗೆ ನಾನು ಎರಡು ಉದಾಹರಣೆಗಳನ್ನು ಕೊಡಬಯಸುತ್ತೇನೆ: ಒಂದು ಸೋನಾರದ್ದು; ಇನ್ನೊಂದು, ಪಠಾರೆ ಪ್ರಭುಗಳದ್ದು. ಇವೆರಡೂ ಮಹಾರಾಷ್ಟ್ರದಲ್ಲಿ ಎಲ್ಲರಿಗೂ ಪರಿಚಿತವಾಗಿರುವ ಜಾತಿಗಳು, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ತಮ್ಮ ಮಟ್ಟವನ್ನು ಎತ್ತರಿಸಿಕೊಳ್ಳಬೇಕೆಂಬ ಎಲ್ಲ ಜಾತಿಗಳ ಬಯಕೆಯಂತೆಯೇ ಆಸೆಯಿಂದ ಅವು ಬ್ರಾಹ್ಮಣರ ಕೆಲವು ಆಚಾರಗಳನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದವು. ಸೋನಾರರು ತಮ್ಮನ್ನು ತಾವು ದೈವಜ್ಞ ಬ್ರಾಹ್ಮಣರೆಂದು ಕರೆದುಕೊಂಡು ಅವರಂತೆಯೇ ಮಡಿ ಮೈಲಿಗೆ ವ್ರತಾಚರಣೆಗಳನ್ನು ಪಾಲಿಸತೊಡಗಿದ್ದರು. ಅಲ್ಲದೆ ಪರಸ್ಪರ ಎದುರುಗೊಂಡಾಗ 'ನಮಸ್ಕಾರ'ವೆಂಬ ಸಂಸ್ಕೃತ ಪದದ ಮೂಲಕ ಒಬ್ಬರಿಗೊಬ್ಬರು ನಮಿಸತೊಡಗಿದ್ದರು. ನೆರಿಗೆ ಹಾಕಿ ಧೋತರ ಉಟ್ಟುಕೊಳ್ಳುವುದು ಮತ್ತು ನಮಸ್ಕಾರವೆಂಬ ಪದ ಬಳಸುವುದು ಬ್ರಾಹ್ಮಣರಿಗೆ ವಿಶಿಷ್ಟವಾಗಿದ್ದ ಆಚರಣೆಗಳಾಗಿದ್ದವು. ಸೋನಾರರು ಬ್ರಾಹ್ಮಣರಂತೆ ವರ್ತಿಸುತ್ತಿದ್ದದ್ದು ಬ್ರಾಹ್ಮಣರಿಗೆ ಸರಿ ಎನಿಸಲಿಲ್ಲ. ಅವರ ಅನುಕರಣೆಯ ಪ್ರಯತ್ನ ಬ್ರಾಹ್ಮಣರಲ್ಲಿ ಅಸಹನೆ ಹುಟ್ಟಿಸಿತು. ಪೇಶ್ವೆಗಳ ಅಧಿಕಾರಾವಾದಿಯಲ್ಲಿ ಬ್ರಾಹ್ಮಣರು ಸೋನಾರರ ಈ ಹಂಬಲವನ್ನು ಯಶಸ್ವಿಯಾಗಿ ಸದೆ ಬಡೆದರು. ಬ್ರಾಹ್ಮಣರು ಅಷ್ಟಕ್ಕೆ ಬಿಡದೆ, ಈಸ್ಟ್ ಇಂಡಿಯಾ ಕಂಪನಿಯ ಬಾಂಬೆ ಸೆಟ್ಲ್‌ಮೆಂಟಿನ ಕೌನ್ಸಿಲ್ ಅಧ್ಯಕ್ಷನವರೆಗೂ ದೂರು ಸಲ್ಲಿಸಿ, ಬಾಂಬೆಯಲ್ಲಿ ವಾಸವಾಗಿದ್ದ ಸೋನಾರರ ವಿರುದ್ಧ ಒಂದು ನಿಷೇಧಾಜ್ಞೆ ಹೊರಡಿಸುವಲ್ಲಿ ಸಫಲರಾದರು. ಒಂದು ಕಾಲದಲ್ಲಿ ಪಠಾರೆ ಪ್ರಭುಗಳ ಸಮಾಜದಲ್ಲಿ ಪುನರ್‌ವಿವಾಹ ಪದ್ಧತಿ ಸರ್ವಸಮ್ಮತವಾಗಿತ್ತು. ಆದರೆ ಬ್ರಾಹ್ಮಣರಲ್ಲಿ ಪುನರ್ ವಿವಾಹ ಪದ್ಧತಿ ಇದ್ದಿರಲಿಲ್ಲ. ಯಾವಾಗ ಅದು ತಮಗೆ ಅವಮಾನಕರವೆಂದು ಭಾವಿಸಿ ಬ್ರಾಹ್ಮಣರನ್ನು ಅನುಕರಿಸುತ್ತಾ ತಮ್ಮ ಜಾತಿಯ ಮಟ್ಟವನ್ನು ಎತ್ತರಿಸುವ ಭರದಲ್ಲಿ ಪಠಾರೆ ಪ್ರಭುಗಳಲ್ಲಿಯ ಕೆಲವು ಜನರು ತಮ್ಮ ಪರಂಪರೆ ಸಮ್ಮತವಾಗಿದ್ದ ವಿಧವಾ ವಿವಾಹ ಪದ್ಧತಿಯನ್ನು ನಿಲ್ಲಿಸಲು ಯತ್ನಿಸಿದರು. ತತ್‌ಪರಿಣಾಮವಾಗಿ ಪ್ರಭುಗಳ ಸಮಾಜದಲ್ಲಿ ಇದಕ್ಕೆ ಪರ ಹಾಗೂ ವಿರೋಧಿಗಳ ಎರಡು ಪಂಗಡಗಳು ಹುಟ್ಟಿಕೊಂಡವು. ಪೇಶ್ವೆಗಳು ಸಂಪ್ರದಾಯವಾದಿ ಪಕ್ಷದ ನಿಲುವನ್ನು ಪುರಸ್ಕರಿಸಿ ಬ್ರಾಹ್ಮಣರನ್ನು ಅನುಕರಿಸಲು

ಯತ್ನಿಸುತ್ತಿದ್ದವರ ಮೇಲೆ ಪ್ರತಿಬಂಧನೆ ವಿಧಿಸಿದರು. ಮುಸಲ್ಮಾನರು ಹಿಂದೆ ತಮ್ಮ ಖಡ್ಗಬಲದಿಂದ ಮತ ವಿಸ್ತರಣೆಗೆ ತೊಡಗಿದ್ದವರೆಂದು ಹಿಂದೂಗಳು ಖಂಡಿಸುತ್ತಾರೆ. ಕ್ರೈಸ್ತಮತ ಪ್ರಚಾರಕರ ಬಗ್ಗೆಯೂ ಅವರು ಇಂಥದ್ದೇ ಮಾತುಗಳನ್ನು ಹೇಳಿ ಟೀಕಿಸುತ್ತಾರೆ. ಮುಸಲ್ಮಾನರೇ ಆಗಲಿ, ಕ್ರೈಸ್ತರೇ ಇರಲಿ ಜನರ ಕಲ್ಯಾಣಕ್ಕೆ, ಶ್ರೇಯೋಭಿವೃದ್ಧಿಗೆ ಅವಶ್ಯವೆಂದು ಭಾವಿಸಿದ ಎಲ್ಲವನ್ನೂ ಒಲ್ಲದವರ ತಲೆಗೂ ತುರುಕಿದರು ಸರಿ. ಆದರೆ ಹಿಂದೂಗಳು ಮಾಡಿದ್ದೇನು? ಮಹಾ ಕೂಪಮಂಡೂಕ ಪ್ರವೃತ್ತಿಯವರಾದ ಇವರು ತಮ್ಮದೇ ಜಾತಿಯ ಭದ್ರಕೋಟೆ ಕಟ್ಟಿಕೊಂಡು ಒಳಗಿನವರು ಹೊರಗೆ ಹೋಗದಂತೆ, ಹೊರಗಿನವರು ಒಳ ನುಸುಳದಂತೆ ಪ್ರತಿಬಂಧಿಸಿದರು. ಜ್ಞಾನದೀಪವನ್ನು ತಮಗೇ ಸೀಮಿತಗೊಳಿಸಿಕೊಂಡು ಉಳಿದವರನ್ನು ಕತ್ತಲೆಯ ಪ್ರಪಾತಕ್ಕೆ ತಳ್ಳಿದರು; ಅವರಲ್ಲಿ ಅಜ್ಞಾನ ಸ್ಥಾಯಿಗೊಳ್ಳುವಂತೆ ಹಲವಾರು ಹುನ್ನಾರ ಹೂಡಿದರು. ತಮ್ಮ ಬುದ್ಧಿಶಕ್ತಿಯನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಲಿಲ್ಲ. ಸಾಮಾಜಿಕ ಸಂಪತ್ತು ತಮ್ಮ ಕೈಯಲ್ಲಿಯೇ ಕೇಂದ್ರೀಕರಣಗೊಳ್ಳುವಂತೆ ಮಾಡಿದರು. ನಿಜಸ್ಥಿತಿ ಇದಾಗಿರುವಾಗ, ಈ ಉಪರೋಕ್ತ ಮೂವರಲ್ಲಿ ನಮಗೆ ಯಾರು ಹೆಚ್ಚು ಗೌರವಾರ್ಹರು? ನಾನು ನಿಸ್ಸಂಶಯವಾಗಿ ಯಾವುದೇ ಆಳುಕಿಲ್ಲದೆ ಹೇಳುತ್ತೇನೆ: ಮೊಹಮ್ಮದೀಯರು ಕ್ರೂರರಾಗಿದ್ದರೆ, ಹಿಂದೂವು ಪರಮನೀಚನಾಗಿದ್ದಾನೆ. ನೀಚತನ ಕ್ರೌರ್ಯಕ್ಕಿಂತಲೂ ಹೆಚ್ಚು ಕೆಟ್ಟದ್ದು.

**–ಜಾತಿ ವ್ಯವಸ್ಥೆ,**
**ಸುಮೇಧ ಪ್ರಕಾಶನ, ಕಲಬುರ್ಗಿ**

# ವ್ಯಕ್ತಿ ಬೆಳೆದರೆ ಮಾತ್ರ

**–ಶಿವರಾಮ ಕಾರಂತ**

ಜೀವನದ ವಿವಿಧ ಮುಖಗಳಲ್ಲಿ ನಾವು ಪ್ರಗತಿಯನ್ನು ಕಾಣಬಹುದಾದ ಸಂದರ್ಭಗಳು ನಿತ್ಯವಿದ್ಯಮಾನಗಳಲ್ಲ. ಜೀವನದ ಯಾವುದೇ ಮುಖವಾಗಲಿ– ಅದು ಸಾಂಸ್ಕೃತಿಕ, ಆಧ್ಯಾತ್ಮಿಕ ಇಲ್ಲವೆ ಸಾಂಪತ್ತಿಕ ಅಥವಾ ಆರ್ಥಿಕವಾದ ವಿಚಾರಗಳಿಗೆ ಸಂಬಂಧಪಟ್ಟುದಿದ್ದರೂ ಅದನ್ನು ಒಂದು ನಾಗರಿಕತೆಯಲ್ಲಿ, ಜನವರ್ಗದಲ್ಲಿ ಕೆಲವೊಮ್ಮೆ ಕಾಣುತ್ತೇವೆ; ಕೆಲವೊಮ್ಮೆ ಕಾಣುವುದಿಲ್ಲ. ಕೆಲವು ಬಾರಿ ಒಂದೊಂದು ಕ್ಷೇತ್ರದಲ್ಲಿ ವಿಶೇಷವಾಗಿ ಪ್ರಗತಿಯನ್ನು ಕಾಣುತ್ತೇವೆ; ಇನ್ನು ಕೆಲವು ಕಾಲ ಅವೇ ಜನಗಳ ಜೀವನ, ಮುಂದುವರೆಯದೆ ಇದ್ದಕ್ಕಿದ್ದಂತೆ ಕಾಲಹರಣ ಮಾಡುವ ಸ್ಥಿತಿಯನ್ನು ಕಾಣುತ್ತೇವೆ. ಕೆಲವೊಮ್ಮೆ ಈ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಬಹುದಾದಷ್ಟು ಅವನತಿಯನ್ನು ಕಾಣುತ್ತೇವೆ. ಇಂಥ ವಿಷಯಗಳಲ್ಲಿ ಹಿಂದಣ ಇತಿಹಾಸ ನಮಗೆ ಸ್ಥೂಲವಾಗಿ, ಒಂದು ಜನವರ್ಗದ ಇಲ್ಲವೆ ರಾಷ್ಟ್ರದ ಪ್ರಗತಿ ಎಂಥದಿತ್ತು ಎಂದು ಸೂಚಿಸಬಲ್ಲದು. ಆ ಪ್ರಗತಿಯೆಂಬುದು–ಆ ಜನವರ್ಗದ ಯಾವತ್ತೂ ವ್ಯಕ್ತಿಗಳು ಕೂಡಿ ಸಾಧಿಸಿದ ಯಶಸ್ಸಾಗಿರಲಾರದು. ಅದು ಆ ಕಾಲದ ವಿಹಂಗಮ ನೋಟ. ಚಾರಿತ್ರಿಕ ದಾಖಲೆಗಳು ವಿಶೇಷವಾಗಿ ದೊರೆಯುವಲ್ಲಿ ಒಂದೊಂದು ಕಾಲದಲ್ಲಿ ಅಂಥ ಪರಿಸ್ಥಿತಿಗೆ ಮಾರ್ಗದರ್ಶನ ಮಾಡಿದವನರಾರೆಂದು ತಿಳಿಸುವುದೂ ಉಂಟು. ಅಂಥವರಲ್ಲಿ ಪ್ರಸಿದ್ಧ ತತ್ವಜ್ಞಾನಿಗಳು, ವೈಜ್ಞಾನಿಕರು, ಕಲಾವಿದರು, ಉದ್ಯಮ, ವ್ಯಾಪಾರ ಮೊದಲಾದ ಕ್ಷೇತ್ರಗಳ ತಜ್ಞರೂ ಸೇರುತ್ತಾರೆ. ಇಂಥವರ ಮಾರ್ಗದರ್ಶನದಿಂದ, ಒಂದು ಜನವರ್ಗಕ್ಕೆ ಸೇರಿದ ಪ್ರಜೆಗಳು ಪ್ರಯೋಜನ ಪಡೆಯುವಷ್ಟು ಉತ್ಸುಕರಾಗಿ, ಕಾರ್ಯಪ್ರವೃತ್ತರಾಗಿದ್ದಷ್ಟು ಕಾಲ ಆಯಾ ಕ್ಷೇತ್ರದಲ್ಲಿ ತುಂಬ ಪ್ರಗತಿಯನ್ನು ಕಾಣುತ್ತೇವೆ. ಧಾರ್ಮಿಕ ಕ್ಷೇತ್ರದಲ್ಲಿ ದಾರ್ಶನಿಕರೋ, ಪ್ರವಾದಿಗಳೋ, ತಮ್ಮ ವ್ಯಕ್ತಿ ವಿಚಾರಸರಣಿಯಿಂದ ಸುತ್ತಣ ಜನಗಳ ಮನಸ್ಸನ್ನು ಪ್ರಚೋದಿಸಿ, ಮಾರ್ಗದರ್ಶನ ಮಾಡಬಹುದು. ಉಪನಿಷತ್ತು ಯುಗದ ಋಷಿಗಳು, ಗ್ರೀಕ್ ದಾರ್ಶನಿಕರು, ಬುದ್ಧ, ಯೇಸುಕ್ರಿಸ್ತರಂಥ ಪ್ರವಾದಿಗಳು, ಶಂಕರಾಚಾರ್ಯರಂಥ ವಿಚಾರವೇತ್ತರು ತಂತಮ್ಮ ಕಾಲದಲ್ಲಿ ಹಬ್ಬಿದ ಅಜ್ಞಾನದ ಕತ್ತಲನ್ನು ಕತ್ತರಿಸಬಲ್ಲ ನವೀನ

ವಿಚಾರಸರಣಿಗಳಿಂದ, ತಮ್ಮ ಸುತ್ತಣ ಜನಗಳ ಮನಸ್ಸನ್ನು ಕೆರಳಿಸಿದರು. ಬುದ್ಧಿಗಳನ್ನು ಪ್ರಚೋದಿಸಿದರು. ಜನರು ಧಾರ್ಮಿಕ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗುವಂತೆಯೂ ಮಾಡಿದರು. ಅಂಥವರನ್ನು ನಾಡಿನ ಸಾಕಷ್ಟು ಜನ ಹಿಂಬಾಲಿಸಿದರು. ತಿಳಿದು ಹಿಂಬಾಲಿಸಿದರು. ನಾಲ್ಕು ಸಾವಿರವಾಗಿರಲೂಬಹುದು; ನಾಲ್ಕು ಲಕ್ಷವೂ ಆಗಿರಬಹುದು. ಹೇಳಿದ ಪ್ರವಾದಿಗಳೂ ಮಾರ್ಗದರ್ಶನ ಮಾಡಿದ ದಾರ್ಶನಿಕರೂ ಅಥವಾ ಅವರನ್ನರಿತು ಅಂಥ ವಿಚಾರಸರಣಿಗಳಿಗೆ ಪ್ರಚಾರಕರಾದ ವ್ಯಕ್ತಿಗಳೂ ಬದುಕಿದ್ದಷ್ಟು ಕಾಲ ಜನಗಳಲ್ಲಿ ಸಾಕಷ್ಟು ಧರ್ಮಜಾಗೃತಿಯುಂಟಾದುದನ್ನು ಅಂಥ ಕಾಲಗಳಲ್ಲಿ ಕಾಣುತ್ತೇವೆ. ಅನಂತರ ಅದೇ ಜನವರ್ಗದಲ್ಲಿ, ಅದೇ ದೇಶದಲ್ಲಿ ಆರಂಭದ ಚುರುಕು, ಕಾರ್ಯಪ್ರವೃತ್ತಿ ಮಾಯವಾಗುತ್ತದೆ. ಆದರೆ ಅಂತಹ ಮತಗಳ ಅನುಯಾಯಿಗಳ ಸಂಖ್ಯೆ ಬೆಳೆಯಲೂಬಹುದು. ಆಚಾರ್ಯಪುರುಷರ ಪೂಜೆ ಹೆಚ್ಚಬಹುದು; ಅವರಿಂದ ವಚನಗಳ ಪ್ರವಚನ, ಮೆರವಣಿಗೆಗಳೂ ನಡೆಯಬಹುದು. ಆದರೆ ಜನಜಾಗೃತಿ ಉಳಿಯುವುದಿಲ್ಲ; ಹಿರಿಯರ ಉಪದೇಶಕ್ಕೂ ಆಚಾರಕ್ಕೂ ಇರುವ ನಡುವಣ ಅಂತರ ಬೆಳೆಯುತ್ತ ಹೋಗುತ್ತದೆ. ವಾಗಾಡಂಬರದಲ್ಲೇ ಕಾಲಯಾಪನೆಯಾಗುತ್ತದೆ.

## ಕಲಾಕ್ಷೇತ್ರಗಳಲ್ಲಿ

ಕಲಾಕ್ಷೇತ್ರಗಳಲ್ಲೂ ಇದೇ ವಿದ್ಯಮಾನ ಕಾಣಿಸಬಹುದು. ಈಜಿಪ್ಟಿನ ಚಿತ್ರಕಲಾ ವೈಭವ ಕೆಲವೇ ಶತಮಾನಗಳಿಗೆ ಮೀಸಲಾದದ್ದು. ಗ್ರೀಕ್‌ಶಿಲ್ಪ ಚೇತನಕಾರಿಯಾಗಿ, ತಮ್ಮ ಜನಗಳ ಅಲೌಕಿಕ ಭಾವನೆಗಳಿಗೆ, ಸುಂದರ ರೂಪು ಕೊಟ್ಟು, ಗಂಡುಹೆಣ್ಣುಗಳ ವಿವಿಧ ರೀತಿಯ ಪ್ರತಿಮೆಗಳನ್ನು ಸೃಷ್ಟಿಸಿದ್ದು ಒಂದೆರಡು ಶತಮಾನಗಳಲ್ಲಿ ಮಾತ್ರವೇ. ಯುರೋಪಿನಲ್ಲಿ ಮಧ್ಯಯುಗ ಸರಿಯುವ ತನಕವೂ ಪ್ರಚಲಿತವಾಗಿದ್ದ ಸಾಮಾನ್ಯ ಜಾನಪದ ಸಂಗೀತದ ಮಂದಗತಿಯನ್ನು ಭೇದಿಸಿ, ಉಜ್ವಲ ನವಸೃಷ್ಟಿಗಳಾಗತೊಡಗಿದ್ದು ಕೆಲವೇ ಪ್ರಭಾವಶಾಲಿ ಪ್ರೇರಣೆಯಿಂದ. ಕ್ರಾಸ್, ಬಿಥೋವನ್, ಮೊಸಾರ್ಟ್. ವೇಗ್ನರ್ ಮೊದಲಾದವರ ಅಪ್ರತಿಮ ಸೃಷ್ಟಿಗಳಿಂದ ಅದೊಂದು ಬಿರುಗಾಳಿಯಂತೆ ಬೀಸಿದ ಅದ್ಭುತ ಪ್ರಗತಿ.

ಪುರಾತನ ಗ್ರೀಸಿನ ವೈಜ್ಞಾನಿಕ ಕುತೂಹಲ ಅರಿಸ್ಟಾಟಲ್‌ನಂಥ ಪ್ರಭಾವಶಾಲಿ

ವ್ಯಕ್ತಿಗಳಿಂದ ತೊಡಗಿ, ಎರಡನೆಯ ತೋಲೆಮಿಯ ತನಕ ಸ್ಫುರಿಸಿ, ಬೆಳೆದು ವಿಸ್ತರಿಸುದನ್ನು ಕಾಣುತ್ತೇವೆ. ಆ ಅವಧಿಯೊಳಗಾಗಿ ಗಣಿತದಲ್ಲಿ, ಖಗೋಲದಲ್ಲಿ, ದೃಕ್‌ಶಾಸ್ತ್ರದಲ್ಲಿ ಸಂಶೋಧನೆ ನಡೆಯಿಸಿದವರ ಸಂಖ್ಯೆ ಹಲವಾರು. ಮುಂದೆ ಗಣಿತಶಾಸ್ತ್ರ ಚೇತನ ತಾಳುವುದಕ್ಕೆ ಹೊಸ ಕ್ಷೇತ್ರಕ್ಕೆ ಧುಮುಕುವುದಕ್ಕೆ ಐನ್‌ಸ್ಟೈನ್‌ನಂತಹ ಮೇಧಾವಿ ಹುಟ್ಟಬೇಕಾಯಿತು. ಪೈಥೋಗೋರಸ್, ಯುಕ್ಲಿಡರ್ ಕಾಲದಿಂದ ಐನ್‌ಸ್ಟೈನ್‌ನ ಕಾಲದ ತನಕ ಸಾಧಿಸಿದ ಪ್ರಗತಿ ಅಷ್ಟೊಂದು ಶೂನ್ಯವಲ್ಲವಾದರೂ ಗಣನೀಯವೂ ಅಲ್ಲ.

ವಿಜ್ಞಾನವು ಇದನ್ನೇ ಹೇಳುತ್ತದೆ. ಗ್ರೀಕ್ ಮತ್ತು ಈಜಿಪ್ತಿನ ಮೇಧಾವಿಗಳ ಮಾರ್ಗದರ್ಶನ ಮರೆವೆಯಾಯಿತು–ಮುಂದಿನ ಜನಕ್ಕೆ ಜಗತ್ತಿನ ಶಕ್ತಿ ಮತ್ತು ವಸ್ತುಗಳು ಎಂಥವು ಎಂದು ತಿಳಿಯಬಲ್ಲ ಕುತೂಹಲ ತಿರುಗಿ ತೊಡಗಬೇಕಾದರೆ 15 ಶತಮಾನಗಳು ಸರಿದುವು. ರೋಗರ್ ಬೇಕನ್, ಗೆಲೀಲಿಯೋ, ಡವಿನ್ಸಿ, ನೂಟನ್, ಕಾರ್ಲೆಲಿವೆ, ಡಾರ್ವಿನ್ ಮೊದಲದವರು ಹುಟ್ಟು ಹಳೆಯ ನಂಬಿಕೆಗಳಿಗೆ ಇದಿರಾಗಿ, ಸಂಶೋಧನೆಗಳಿಂದ ಪ್ರಯೋಗಗಳಿಂದ ಹೊಸ ಸಿದ್ಧಾಂತಗಳನ್ನು ಕಟ್ಟಬೇಕಾಯಿತು.

ಯಂತ್ರವಿಜ್ಞಾನದ ಪ್ರಗತಿಯಾದರೂ ಯುರೋಪಿನಲ್ಲಿ ಸ್ಫುರಿಸುವುದಕ್ಕೆ– ಈಚಿನ ಒಂದೆರಡು ಶತಮಾನಗಳು ಕಾರಣವಾದುವು. ವೈಜ್ಞಾನಿಕ ಸಾಧನೆಗಳಿಗೂ ಸಂಪತ್ತಿನ ಉತ್ಪಾದನೆಗಳಿಗೂ ಪರಸ್ಪರ ಸಂಬಂಧವನ್ನು ಕಂಡುಕೊಂಡು, ಅಲ್ಲಿನ ಪ್ರಾಜ್ಞರು ವಿವಿಧ ಕ್ಷೇತ್ರಗಳಲ್ಲಿ ದುಡಿದರು. ಈ ಕ್ಷೇತ್ರಗಳಲ್ಲಿ ಯುರೋಪು, ಅಮೆರಿಕ ದೇಶಗಳು ಅತಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದುದು ಕೇವಲ ಈಚಿನ ಒಂದುವರೆ ಶತಮಾನಗಳಲ್ಲಿ.

ಇಲ್ಲಿ ನಾವು ಎರಡು ಸ್ಪಷ್ಟವಾದ–ಚಿತ್ರಗಳನ್ನು ಕಾಣಬಹುದು. ಒಂದು ನಾಡು ಇಲ್ಲವೆ ರಾಷ್ಟ್ರ ಇಲ್ಲವೆ ಜನವರ್ಗ ಇದ್ದ ಸ್ಥಿತಿಯಿಂದ ಮುಂದಣ ಸ್ಥಿತಿಗೆ ಹೋದಂಥ ನಿದರ್ಶನಗಳ್ನು ಎಣಿಸಿದರೆ, ಅದಕ್ಕೆ ಕಾರಣರಾದವರು ಕೆಲವೇ ಪ್ರಭಾವಶಾಲಿಗಳೆಂಬುದನ್ನು, ಅವರ ಅಪ್ರತಿಮ ಬುದ್ಧಿಶಕ್ತಿ, ಸುತ್ತಣ ಆವರಣದ ನಂಬಿಕೆ, ಕಟ್ಟಳೆ ಮೊದಲಾದುವುಗಳೊಂದೊಂದನ್ನು ಪರಿಗಣಿಸದೆ ಪ್ರಕಟವಾಯಿತು. ಅದು ಕೆಲವೇ ವ್ಯಕ್ತಿಗಳ ಕಾಣಿಕೆ–ಎಂಬುದು ಸ್ಪಷ್ಟ. ಅಂಥ ಪ್ರಭಾವಶಾಲಿ ವ್ಯಕ್ತಿಗಳು ಹುಟ್ಟಿದ್ದರಿಂದಲೇ, ಆ ವ್ಯಕ್ತಿಗಳ ವಿಚಾರಸರಣಿಯ ಪ್ರಭಾವ ಜನಸಾಮಾನ್ಯರ ಮೇಲೆಯೂ ಬಿತ್ತು. ಜನರೂ ಕಣ್ತೆರೆದರು, ನೋಡಿದರು, ನಂಬಿದರು. ತಾವೂ ವಿಚಾರಮಾಡಿ ಮಾನಸಿಕವಾಗಿ

ಒಪ್ಪಿಕೊಂಡು, ತಮ್ಮ ಹಿರಿಯರ ಹಾದಿಯನ್ನು ತುಳಿದವರೂ ಉಂಟು. ಹಾಗೆ ತುಳಿದವರ ಸಂಖ್ಯೆ ವಿಶೇಷವಾಗಿದ್ದ ಕಾಲದಲ್ಲೇ –ಖಗೋಲ, ಗಣಿತ ಮೊದಲಾದ ವಿಜ್ಞಾನಗಳು ಗ್ರೀಸಿನಿಂದ ಈಜಿಪ್ತಿಗೆ ಹೋದುವು. ಅಲ್ಲಿ ಒಂದೆರಡು ಶತಮಾನಗಳ ಕಾಲ ಮೆರೆದುದನ್ನು ಕಾಣುತ್ತೇವೆ; ಮುಂದುವರಿದುದನ್ನೂ ಕಾಣುತ್ತೇವೆ. ಮೇಧಾವಿಗಳಿಂದ ತಿಳಿದು, ಅದೇ ದಾರಿಯಲ್ಲಿ ನಡೆಯುವವರ ಸಂಖ್ಯೆ ಹೆಚ್ಚಾದಾಗ ಮಾತ್ರವೇ ಪ್ರಗತಿ ಕಾಣಿಸುವುದು. ನಾಡಿನ ಜನರಿಗೆ ಹೊಸ ಚೈತನ್ಯವನ್ನೂ ಪ್ರೇರಣೆಯನ್ನೂ–ಕೊಟ್ಟವರು ಎಷ್ಟೇ ದೊಡ್ಡವರಿರಲಿ, ಅವರ ವಿಚಾರಸರಣಿಯನ್ನು ಅರಗಿಸಿಕೊಳ್ಳದೆ, ಬರಿದೆ ಮೆಚ್ಚಿ ತಲೆದೂಗಿದ್ದ ಕಾಲದಲ್ಲಿ, ಜನರಾಗಲೀ ದೇಶವಾಗಲೀ ದೊಡ್ಡದಾಗಲಿಲ್ಲ; ಆಗಲಾರದು.

## ಪಾಶ್ಚಾತ್ಯ ದೇಶಗಳಲ್ಲಿ

ಇಂದು ಪಾಶ್ಚಾತ್ಯ ದೇಶಗಳಲ್ಲಿ–ವಿಜ್ಞಾನದ ಓಟ ಇಂಥದೆಂಬುದನ್ನು ಪರಿಶೀಲಿಸಿದ್ದಾದರೆ, ನಮಗೆ ಅತ್ಯಂತ ಹೆಚ್ಚಿನ ಬೆರಗು ಕಾಣಿಸುತ್ತದೆ. ಭೌತಶಾಸ್ತ್ರ, ತಂತ್ರಶಾಸ್ತ್ರ, ಜೀವಾಜೀವ ರಸಾಯನಶಾಸ್ತ್ರ, ಜೀವಶಾಸ್ತ್ರ, ವೈದ್ಯಶಾಸ್ತ್ರ–ಇಂಥ ವಿವಿಧ ಕ್ಷೇತ್ರಗಳಲ್ಲಿ ಈಚಿನ ಐವತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿ ಎಂಬುದು ಅದಕ್ಕಿಂತ ಪೂರ್ವದ, ಯಾವತ್ತೂ ಮಾನವ ಇತಿಹಾಸದ ಪ್ರಗತಿಯನ್ನು ಹತ್ತು, ನೂರುಪಾಲು ಮಿಗಿಸುವಂಥದು. ಇದು ಹೇಗೆ ಸಾಧ್ಯ–ಎಂಬ ಪ್ರಶ್ನೆ ಬಂದೇ ಬರುತ್ತದೆ. ಇಂತಹ ಆವೇಗ ಯಾವುದೇ ಕ್ಷೇತ್ರಗಳಲ್ಲಿ ಕಾಣಿಸಬೇಕಾದರೂ ಕೇವಲ ನಾಲ್ಕಾರು ಜನರ ಮಾರ್ಗದರ್ಶನದಿಂದ ಅದು ಸಾಧಿಸಲಾರದು. ಬುದ್ಧಿಕ್ಷೇತ್ರಕ್ಕೆ ಸಂಬಂಧಿಸಿದ ಈ ಪಥದಲ್ಲಿ, ದುಡಿಯುವವರ ಸಂಖ್ಯೆ, ಅಷ್ಟೇ ಅಧಿಕ ಪ್ರಮಾಣದಿಂದ ಬೆಳೆಯಬೇಕಾಗುತ್ತದೆ. ಮೇಲೆ ಹೇಳಿದ ವಿವಿಧ ಕ್ಷೇತ್ರಗಳಲ್ಲಿ, ಯುರೋಪು, ಅಮೆರಿಕ ದೇಶಗಳಲ್ಲಿ ಇತ್ತೀಚೆಗೆ ದುಡಿಯುತ್ತಿರುವವರ ಸಂಖ್ಯೆ ಅದ್ಭುತವಾಗಿ ಬೆಳೆದುದರಿಂದಲೇ ಇದು ಸಾಧ್ಯವಾಗಿದೆ. "ಗುರು ದೇವರು ಹೀಗೆ ಹೇಳಿದರು" ಎಂದು ತಲೆದೂಗುವ ಶಿಷ್ಯವೃಂದಕ್ಕೂ ಇದಕ್ಕೂ ವಿಶೇಷ ಅಂತರವಿದೆ. ಇಲ್ಲಿ ಶಿಷ್ಯರು ಗುರುವಿನಂತೆ ತೀಕ್ಷ್ಣಬುದ್ಧಿಯವರಾಗಿದ್ದು ತಂತಮ್ಮ ಪಾಲಿನ–ಹೊಸ ಸಂಶಯಗಳಿಗೆ, ಹೊಸ ಪ್ರಶ್ನೆಗಳಿಗೆ, ಹೊಸ ಸಮಸ್ಯೆಗಳಿಗೆ ತಾವು ತಾವೇ ಪ್ರತ್ಯುತ್ತರವನ್ನು ಕಂಡುಹಿಡಿಯಬೇಕಾಗಿವೆ. ವಿಜ್ಞಾನಕ್ಷೇತ್ರ 'ಹೌದಪ್ಪ'ಗಳ ಕ್ಷೇತ್ರವಲ್ಲ. ಅದು 'ಯಾಕೆ?' ಎಂದು ಹೆಜ್ಜೆ ಹೆಜ್ಜೆಗೂ ಕೇಳುವವರ

ಕ್ಷೇತ್ರ. ಪ್ರಯೋಗಕ್ಕೆ ಗುರಿಯಾಗದ ಪ್ರಮಾಣವಚನಗಳು ವಿಚಾರಸರಣಿ ತರ್ಕಗಳೆಲ್ಲ – ಪ್ರಯೋಗ ಶಾಲೆಗಳಲ್ಲೇ ಪ್ರತ್ಯಕ್ಷ ಪ್ರಮಾಣಕ್ಕೆ ಅವಕಾಶವನ್ನು ಕೊಡಬೇಕಾಗುತ್ತದೆ. ಅಲ್ಲಿ ಅಂಧಶ್ರದ್ಧೆಯ ಪ್ರಶ್ನೆಯೇ ಇಲ್ಲ.

ಯುರೋಪು ಇಲ್ಲವೆ ಅಮೆರಿಕ ರಾಷ್ಟ್ರಗಳು ಮುಂದುವರೆದರೆ, ಅದರಿಂದ ನಮ್ಮ ದೇಶದಲ್ಲಿ ತನ್ನಂತೆಯೇ ಪ್ರಗತಿ ಸಾಧನೆಯಾಗುವುದಿಲ್ಲ. ಪ್ರಗತಿ ಅಂಧಶ್ರದ್ಧೆಯಲ್ಲ; ಆಚರಣಶೂನ್ಯ ಜೀವನವಲ್ಲ. ಅದು ಪ್ರತಿಯೊಬ್ಬನೂ ನಡೆದೇ ಹೋಗಬೇಕಾದ ದಾರಿ. ಅದರಲ್ಲಿಯೂ ಸ್ಪರ್ಧೆ ಬಲವಾಗಿರುವಾಗ–ಇವತ್ತಿನ ಸಂಶೋಧನೆ ನಾಳೆ ಹಳತೆನಿಸಬಹುದು. ಅನ್ಯದೇಶದ ವಸ್ತು ಒಡವೆಗಳನ್ನು ತಂದು, ಅದರಿಂದ ನಮ್ಮ ನಾಡಿನ ಪ್ರಗತಿ ಸಾಧಿಸಬಹುದೆಂಬ ಭ್ರಮೆಯನ್ನು ನಾವು ಎಷ್ಟು ಬೇಗ ಬಿಡುತ್ತೇವೆಯೋ ಅಷ್ಟು ಕ್ಷೇಮವಿದೆ. ಅಲ್ಲಿಂದ ಇಂದು ಸಾಲವಾಗಿ ತಂದು ಮಾಡಿದ ಯಂತ್ರಸ್ಥಾವರಗಳು ಉತ್ಪಾದನೆ ತೊಡಗುವಾಗ, ಅಲ್ಲಿ ಮತ್ತೊಂದೇ ಮನ್ವಂತರ ತೊಡಗಿರುತ್ತದೆ. ನಾವು ಯಂತ್ರ ನಿರ್ಮಾಪಕರೂ ಸಂಶೋಧಕರೂ ಆದರೇನೇ ವೈಜ್ಞಾನಿಕ ಯುಗದಲ್ಲಿ ಬದುಕಬಲ್ಲೆವು. ಅಂಥ ನಿರ್ಮಾಣ, ಸಂಶೋಧನ ಚಟುವಟಿಕೆಗಳು ನಮ್ಮ ದೇಶದಲ್ಲಿ ಯಾವ ಪ್ರಮಾಣದಲ್ಲಿ ಸಾಗುತ್ತಿವೆ?

ಭಾರತ–ಈ ತನಕ ಆರಾಧಕರ ದೇಶವಾಗಿತ್ತು. ವ್ಯಕ್ತಿಪೂಜೆಯಲ್ಲಿ ನಾವು ಪಾರಂಗತರು. ಅಂಥ ದೇಶದಲ್ಲಿ ಹತ್ತೆಂಟು ಮಂದಿ ಆರು ಅಡಿ ಗಾತ್ರದ ವ್ಯಕ್ತಿಗಳಿದ್ದರೆ, ಅವರನ್ನು ಕಂಡೇ, 'ನಾವು ಆರಡಿ ಗಾತ್ರದವರಾಗುತ್ತೇವೆ" ಎಂದು ತಿಳಿಯುವ ಜನ ಇಲ್ಲಿ ತುಂಬಿಕೊಂಡಿದ್ದಾರೆ. ಆರಡಿ ಗಾತ್ರದ ಮುಂದಾಳುಗಳು ಮಠಾಚಾರ್ಯರಾಗಿರಲಿ, ರಾಜಕೀಯ ಪುಢಾರಿಗಳಾಗಿರಲಿ, ಇತರ ಕ್ಷೇತ್ರಗಳ ಮುಂದಾಳುಗಳಾಗಿರಲಿ 'ತಮ್ಮ ಹಿಂಬಾಲಕರ ಸಂಖ್ಯೆ ಕೋಟಿಗಟ್ಟಲೆ ಇದೆ' ಎಂಬ ಕಾರಣದಿಂದ ನಾಡನ್ನು ಮುನ್ನಡೆಯಿಸುವುದು ಕನಸಿನ ಮಾತು.

## ಪ್ರಗತಿ ಸಾಧಿಸಬೇಕಾದರೆ

ನಾವು ಪ್ರಗತಿಯನ್ನು ಯಾವುದೇ ಕ್ಷೇತ್ರದಲ್ಲಿ ಸಾಧಿಸಬೇಕೆಂದು ಬಯಸುವುದಾದರೆ–ಜನತೆಯ ಅಂಧಶ್ರದ್ಧೆಯ ಮೇಲೆ, ವಿವೇಚನಾರಹಿತ ವಿಧೇಯತೆಯ ಮೇಲೆ, ಅದನ್ನು ಸಾಧಿಸಲಾರೆವು. ಎಲ್ಲ ದೇಶಗಳಲ್ಲೂ ಎಲ್ಲ ಕಾಲದಲ್ಲೂ ಇಂಥ ಜನ ಇದ್ದೆ ಇರುತ್ತಾರೆ. ಇವರಲ್ಲಿ ಆಕ್ಷೇಪವೆಂಬಂತೆ

ಮೇಧಾವಿಗಳೂ ಮಾರ್ಗದರ್ಶಕರೂ ಹುಟ್ಟುವುದು. ಈ ಮಾರ್ಗದರ್ಶಕರ ವ್ಯಕ್ತಿತ್ವವೂ ವಿಸ್ತೃತವಾಗಿ, ಪರಿಪುಷ್ಟವಾಗಿ, ಬೆಳೆದುದಕ್ಕೆ ಸಮನಾಗಿ, ಜನತೆಯ ವ್ಯಕ್ತಿತ್ವವೂ ಬೆಳೆಯದೆ ಹೋದರೆ ಪ್ರಗತಿ ಸಾಧಿಸಲಾರದು. ವ್ಯಕ್ತಿತ್ವ ಬೆಳೆಯುವುದೆಂದರೆ ತಾನು ಯೋಚಿಸಬಲ್ಲ ಶಕ್ತಿ. ತಾನಾಗಿ ತನ್ನ ಸುತ್ತಲಿನ ಪರಿಸ್ಥಿತಿಗಳನ್ನು ಪರಿಶೀಲಿಸುವ ಶಕ್ತಿ–ಇಂಥವನ್ನು ಹೆಚ್ಚಿಸಿಕೊಳ್ಳುವುದು. ಇಂಥ ವ್ಯಕ್ತಿತ್ವದ ಬೆಳವಣಿಗೆಗೆ ಇತಿಮಿತಿಯಿಲ್ಲ. ಅಂಥ ಜನಗಳ ಸಂಖ್ಯೆ ನಾಡಿನಲ್ಲಿ ಎಷ್ಟೆಷ್ಟು ಹೆಚ್ಚುತ್ತದೋ ಅಷ್ಟೊಂದು ಹೆಚ್ಚಿನ ಭರದಿಂದ ಕಾರ್ಯಗಳು ಸಾಧ್ಯವಾಗುತ್ತವೆ. ನಾಲ್ಕೆಂಟು ಮಂದಿ ಬೆಳೆದುದರಿಂದಲೇ ಯಾವುದೇ ದೇಶ ದೊಡ್ಡವಾಗಲಾರದು. ಆ ದೇಶಗಳ ಜನಗಳ ಜೀವನಕ್ಕೆ ಸಂಬಂಧಿಸಿದ, ಮನೋವ್ಯಾಪಾರಗಳಿಗೆ ನಿತ್ಯವ್ಯವಹಾರ ಮೊದಲಾದ ಒಂದೊಂದು ಕ್ಷೇತ್ರಗಳಲ್ಲೂ ಅಂಥವರ ಸಂಖ್ಯೆ ಹೆಚ್ಚಾಗಿ ಕಾಣಿಸಬೇಕು ಇದು ಕಾಣಿಸದೆ ಹೋದರೆ–ಕಲೆ ದೊಡ್ಡದಾಗದು; ಧರ್ಮ ದೊಡ್ಡದಾಗದು; ರಾಜಕೀಯ ವ್ಯವಹಾರ, ಸಂಪತ್ತು–ಇವಾವುವೂ ಬೆಳೆಯಲಾರವು.

ಇಂದು ನಮ್ಮ ನಾಡಿನಲ್ಲಿ ಯಾವ ಚಿತ್ರವನ್ನು ಕಾಣುತ್ತಿದ್ದೇವೆ?

ಮತ, ಧರ್ಮ ಮೊದಲಾದ ತಾತ್ವಿಕ ವಿಷಯಗಳಲ್ಲಿ "ನನ್ನ ವಿಚಾರಸರಣಿ ಇಂಥದು; ಅದಕ್ಕೆ ಇಂಥದು ಕಾರಣ" ಎನ್ನುವವರ ಸಂಖ್ಯೆಯಾದರೂ ಎಷ್ಟಿದೆ? ಅದರ ಬದಲು ಯಾವುದೋ ಒಂದು ಪ್ರಸಂಗದಲ್ಲಿ, ಯಾರೋ ಕೆಲವು ಮಹಾನುಭಾವರು, ಹೇಳಿದ ಯಾವುವೋ ಮಾತುಗಳನ್ನು ಎಲ್ಲೆಲ್ಲೂ ಉದಾಹರಿಸುವವರೇ ಬಹಳ. ಯಾವ ವಿಷಯದ ಚರ್ಚೆಗೆ ಹೋದರೂ "ಅವರು ಹಾಗೆ ಹೇಳಿದ್ದಾರೆ ಇವರು ಹೀಗೆ ಹೇಳಿದ್ದಾರೆ" – ಎಂಬ ಶ್ಲೋಕಗಳ ಸುರಿಮಳೆಯನ್ನು ಕಾಣುತ್ತೇವೆ. ಉದಾಹೃತರಾದ ವ್ಯಕ್ತಿಗಳೂ ಘನವೆತ್ತವರಿರಬಹುದು. ಉಕ್ತಿಗಳೂ ಚೆನ್ನಾಗಿರಬಹುದು. ಅವರ ವೇಷಭೂಷಣಗಳನ್ನು ನಾವು ತೊಟ್ಟು, ಅವರ ಮಾತುಗಳನ್ನು ನಾವು ಕಂಠಪಾಠ ಮಾಡಿ, ನಾವೇ ಅವರಾಗಲಾರೆವು. ಆ ನಾಟಕ ಬಹಳ ಸುಲಭ. ಆತ್ಮವಂಚನೆಯಿಂದ ತೊಡಗುವ ಅದು. ಜನವಂಚನೆಯಲ್ಲಿ ಕೊನೆಗೊಳ್ಳುತ್ತದೆ. ತನ್ನಲ್ಲಿ 'ನಾನು' ಎಂಬ ಪದಾರ್ಥವನ್ನು ಗುರುತಿಸಿ, ಅದರ ತೂಕ ತಿಳಿದು, ಶಕ್ತಿಗಳನ್ನು ಬೆಳೆಯಿಸಿ ಪ್ರಕಟಿಸುವುದಕ್ಕೆ ಯಾರೂ ನಾಚಿಕೆಪಡಬೇಕಾಗಿಲ್ಲ. ನಮ್ಮ ಗಾತ್ರಕ್ಕೆ ಸಮನಾದ ಮನ್ನಣೆ ನಮಗೆ ದೊರೆತರೆ ಸಾಲದೇ? ಮಹಾಗ್ರಂಥಗಳೂ ಮಹಾಪ್ರವಾದಿಗಳೂ, ಲೋಕದ ಸ್ವತ್ತು. ಅವರಿಂದ, ಅವುಗಳಿಂದ, ನಾವು

ಬೇಕಷ್ಟು ಲಾಭ ಪಡೆಯಬಹುದು. ಹಾಗೆ ಪಡೆಯಬಲ್ಲ ವ್ಯಕ್ತಿ, 'ತಾನಾ'ಗಿ ಉಳಿಯಲಾರನಾದರೆ, ಆತ ಹೊತ್ತುಕೊಂಡ ಗ್ರಂಥಗಳ ಹೊರೆ, ಅವನ ಜೀವನಕ್ಕೂ ನೆರವಾಗಲಾರದು.

ಸಾಹಿತ್ಯ ಕಲಾಕೃತಿಗಳ ವಿಚಾರವಾದರೂ ಹೀಗೆಯೇ, ಈ ಕ್ಷೇತ್ರಗಳಿಗೆ ಸಂಬಂಧಿಸಿದ ಪೂರ್ವಕೃತಿಗಳಿವೆ. ಸಂಪ್ರದಾಯಗಳಿವೆ. ಶೈಲಿಗಳಿವೆ. ಶಾಸ್ತ್ರಗಳೂ ಇವೆ. ಕಲಾವಿದರ ಮತ್ತು ಸಾಹಿತಿಗಳ ಸ್ವಂತ ಶಕ್ತಿ ಪ್ರತಿಭೆ, ಕಲಾಸೃಷ್ಟಿಗಳಿಗೆ ಒದಗಬೇಕಾದ ಸ್ಫೂರ್ತಿ, ಅವರವರ ಪರಿಶೀಲನೆ ಮತ್ತು ಅನುಭವಗಳಿಂದ ಬರಬೇಕು. ಅವುಗಳ ಪ್ರಾಮಾಣಿಕತೆ, ಒತ್ತಡ–ಅಂಥ ಸೃಷ್ಟಿಗಳಿಗೆ ಕಾರಣವಾಗಬೇಕು. ದೀರ್ಘಕಾಲ ಕೀರ್ತಿಯನ್ನು ಪಡೆದ ಕೃತಿಗಳೆಂಬವು ಇಂಥವು. ಸ್ವಂತ ವ್ಯಕ್ತಿತ್ವವಿಲ್ಲದ ಅನುಕರಣಶೀಲರಿಂದ ಉಜ್ವಲ ಕಲಾಸೃಷ್ಟಿ ಎಂದೂ ಉಂಟಾಗಿಲ್ಲ. ನಮ್ಮ ಪ್ರಚಲಿತ ಸಾಹಿತ್ಯವನ್ನು ನೋಡೋಣ. ಬರೆಯಲೇಬೇಕೆಂಬ ಆತ್ಮಪ್ರೇರಣೆ, ಒತ್ತಡ, ಅದಕ್ಕೆ ಬೇಕಾದ ಅನುಭವ, ಸಾಹಸ–ಯಾವ ಪ್ರಮಾಣದಲ್ಲಿ ಕಾಣಿಸುತ್ತಿದೆ? ಅನುಕರಣೆಯ ಪ್ರಮಾಣವೇನು? ಮೂಲ ಬರಹಗಾರರ ಲೇಖನಗಳ ಹೆಸರನ್ನಡಗಿಸಿ "ಆಧಾರದಿಂದ" ಎಂದು ತಲೆಮರೆಸಿಕೊಂಡು ಬರೆಯುವವರ ಸಂಖ್ಯೆ ಎಷ್ಟಿದೆ? ಹೆರರ ಮನೆಯ ಎಂಜಲು ನಾವು ಅಟ್ಟ ಮೃಷ್ಟಾನ್ನವಾಗಲಾರದು. ಅದು ನಾವೇ ಬೇಯಿಸಿದ ಗಂಜಿ ನೀರಿನಂತಾದರೂ ಇರಬೇಡವೇ! ನಾವು ಅನ್ಯರಿಂದ ಪಡೆದ ಋಣವನ್ನು ಬಹಿರಂಗವಾಗಿ ಹೇಳಲು ನಾಚುವವರು ಎಂದಾದರೂ ಪ್ರಾಮಾಣಿಕ ಸೃಷ್ಟಿ ಮಾಡಬಲ್ಲರೇ?

## ರಾಜಕೀಯದ ಸ್ಥಿತಿ

ರಾಜಕೀಯದ ಸ್ಥಿತಿ ಹೇಗಿದೆ? ಪ್ರಜಾಪ್ರಭುತ್ವದಲ್ಲಿ ಪ್ರಜೆ ಎಂಬ ವ್ಯಕ್ತಿ, ಮತದಾನದೊಡನೆ ತನ್ನ ಬುದ್ಧಿದಾನವನ್ನೂ ಮಾಡಿದಂತಿದೆ. ಅಂತಹ ಪ್ರಜಾಪ್ರಭುತ್ವ ಎಷ್ಟು ಉಜ್ವಲವಾದೀತು? ಇಂದಿನ ರಾಜಕೀಯ ಮಾರ್ಗದರ್ಶನ, ಇಂದಿನ ಮತ ಸಂಪ್ರದಾಯಿಗಳ ಪ್ರವೃತ್ತಿಯನ್ನೇ ಅನುಸರಿಸಿದಂತಿದೆ. ಆಚಾರ್ಯರ ಸ್ಥಾನದಲ್ಲಿ ಘುಡಾರಿಗಳು ನಿಂತು, 'ನಾವು ಹೇಳಿದ್ದೇ ಸತ್ಯ. ನಂಬದಿದ್ದರೆ ನರಕಕ್ಕೇ ಹೋಗುತ್ತೀರಿ' ಎನ್ನುತ್ತಿದ್ದಾರೆ. ದೇಶದ ಆರ್ಥಿಕ, ಸಾಂಪತ್ತಿಕ, ವ್ಯಾವಹಾರಿಕ, ಸಾಮಾಜಿಕ ಸಮಸ್ಯೆಗಳು–ಎಲ್ಲರನ್ನೂ ಬಾಧಿಸತಕ್ಕವು. ಆ ಎಲ್ಲರ ಸ್ಥಿತಿ, ಶಕ್ತಿ, ಆಶೆ, ಅಭಿರುಚಿ, ಜೀವಂತ ಜನಗಳಲ್ಲಿ ಒಂದೇ ತೆರನಾಗಿರುವುದು ಅಶಕ್ಯ. ಭಾರತದ

ಎಲ್ಲಾ ಜನಗಳ ಸಮಸ್ಯೆಗಳನ್ನು ನಾಲ್ಕೆಂಟು ಮಂದಿ ಊಹಿಸಿ ತಿಳಿದು ಪರಿಹರಿಸುವುದಾಗಲಿ, ಅಥವಾ ಪರಿಹಾರದ ದಾರಿ ಸೂಚಿಸುವುದಾಗಲಿ, ಅಸಾಧ್ಯದ ಮಾತು, ವಿವಿಧ ತೆರನ ಜನಗಳು ಇನ್ನಷ್ಟೇ ವಿವಿಧ ರೀತಿಯ ಜೀವನದ ದಾರಿಗಳೂ ಅವುಗಳ ಇತಿಮಿತಿಗಳೂ ಇರುವಲ್ಲಿ–ಇದೊಂದೇ ದಾರಿ ಸರಿ, ಇದೊಂದೇ ಪಕ್ಷ ಸರಿ–ಎನ್ನುವುದು ಮತೀಯ ಅಂಧಶ್ರದ್ದೆಗಿಂತ ಅಪಾಯಕಾರಿಯಾದ ಚಿತ್ತವೃತ್ತಿ. ಮತಧರ್ಮಗಳಲ್ಲಾದರೆ 'ನಾನೂ ಇದನ್ನು ನಂಬಿದೆ' ಎಂದರಾಯಿತು. ನಂಬದ ಪಾಪವೂ ನಂಬಿದ ಪುಣ್ಯವೂ ಕಾಣಿಸುವುದು ಸತ್ತಮೇಲೆ. ಆಮೇಲೆ, ತಿಳಿಯುವುದೆಷ್ಟೋ ತಿಳಿಯದ್ದೆಷ್ಟೋ. ರಾಜಕೀಯದ ವ್ಯಾಪ್ತಿ ಬದುಕಿಗೇ ಸಂಬಂಧಿಸಿದುದು. ಅದು ಕೆಲಸಗಳಲ್ಲಿ ಕೊನೆಗಾಣತಕ್ಕದ್ದು. ಆ ಕರ್ಮಗಳ ಫಲ, ಅದರ ಸ್ವರ್ಗ, ನರಕ–ಬದುಕಿದ್ದಾಗಲೇ ಅನುಭವಿಸತಕ್ಕದ್ದು, ಇಂಥಲ್ಲಿಯೂ ವ್ಯಕ್ತಿಯ ಸ್ವಬುದ್ಧಿಯು ಕೆಲಸ ಮಾಡದೆ ಹೋದರೆ ಹೇಗೆ? ಕೆಲವೇ ಮುಖಂಡರು ಹೇಳಿದ್ದಕ್ಕೆ ತಲೆದೂಗುವುದೇ ದೇಶಭಕ್ತಿ, ಎಂದು ತಿಳಿದರೆ ಹೇಗೆ? ಸ್ವತಃ ತಮ್ಮ ವಿಚಾರಗಳನ್ನು ವಾದ್ಯ ಘೋಷಣೆಯೊಂದಿಗೆ ನಾಡಿನ ಮೇಲೆ ಹೊರಿಸುವ ಈ ಜನರು, ಅವರ ಅಭಿಪ್ರಾಯಗಳಿಗೆ ವಿರೋಧವಾದ ಯಾವ ವಿಚಾರ ಸರಣಿ ಬಂದರೂ ಮೂದಲಿಸುವುದಾಗಲಿ ಕೆಂಡಕಾರುವುದಾಗಲಿ ಯಾವ ಲಕ್ಷಣ? ಅದು ವಿಚಾರ ಸ್ವಾತಂತ್ರ್ಯವನ್ನು ಮನ್ನಿಸುವ ದೇಶದ ಲಕ್ಷಣವೆ? ವ್ಯಕ್ತಿಯ ವಿಕಾಸವನ್ನು ಮಾರ್ಗದರ್ಶನವನ್ನು ದೇಶದ ಲಕ್ಷಣವೇ? ಇಂಥ ಅಸಹಿಷ್ಣುಪ್ರವೃತ್ತಿ ಬೆಳೆಯುತ್ತಾ ಹೋದುದಾದರೆ–ಜನ ಬೆಳೆದಾರೆಯೇ? ಎಲ್ಲ ಕ್ಷೇತ್ರಗಳಲ್ಲೂ ಅನುಕರಣೆ, ಮನೋದಾಸ್ಯಗಳಷ್ಟೇ ಬೆಳೆದಾವು. ದೇಶ ಬೆಳೆಯಲಾರದು. ನಾಡಿನ ವಿವಿಧ ಕ್ಷೇತ್ರಗಳು ಬೆಳೆಯಲಾರವು. ಜನಜೀವನ ಬೆಳೆಯಲಾರದು. ಪರೋಕ್ಷವಾಗಿ ವ್ಯಕ್ತಿಯ ಬೆಳವಣಿಗೆಗೆ ಆತಂಕಪ್ರಾಯವಾದ, ಅನೇಕ ಹೆಜ್ಜೆಗಳನ್ನು ಈಗಾಗಲೇ ಇಡುತ್ತ ಬಂದಿದ್ದಾರೆ. ನಮ್ಮ ಮುಖಂಡರು. ಅವರಿಗೆ ತಾವು ಬೆಳೆದದ್ದೆಂಬುದು, ಲೋಕಕ್ಕೆ ಸಾಕೆಂದು ಕಾಣಿಸುತ್ತಿರಬೇಕು. ತಮ್ಮಂತಿರುವ ಅನ್ಯಪ್ರಜೆಗಳ ಬೆಳವಣಿಗೆ, ತಮ್ಮ ಅಧಿಕಾರದ ಸ್ಥಾನಮಾನಗಳಿಗೆ ಕುಂದನ್ನು ತರಬಹುದೆಂಬ ಭಯವೂ ಬರುತ್ತಿರಬೇಕು. ಅಂಥವರು ನಿರಂಕುಶ ದೊರೆಗಳಾದಾರೇ ಹೊರತು, ಪ್ರಜೆಗಳ ಸತ್ವ, ಶಕ್ತಿ. ಮನಸ್ಸು, ಸಾಮರ್ಥ್ಯಗಳನ್ನು ಬೆಳೆಯಿಸಲಾರರು. ಅಂಥ ವ್ಯಕ್ತಿಗಳ ಮೂಕ ಉಪಾಸನೆ ನಾಡಿನ ಜನಗಳ ಮನೋದಾಸ್ಯದ ಚಿನ್ಹೆಯೇ ಹೊರತು, ಪ್ರಗತಿಯ ದಾರಿ ಎಂದೆಂದೂ ಅಲ್ಲ.

# ಹರಕೆಗಳು

**–ಎ.ಎನ್. ಮೂರ್ತಿರಾವ್**

"ನಮ್ಮ ಮನೆಯ ಎಮ್ಮೆ ಸರಿಯಾಗಿ ಹಾಲು ಕೊಡುತ್ತಿಲ್ಲ. ಆದ್ದರಿಂದ ಎಂಟಾಣೆ ಕಾಣಿಕೆ ಸಲ್ಲಿಸಿದ್ದೇನೆ. ಮಹಾಮಹಿಮ ಸಂತ ಅಂತೋಣಿಗೆ ಬೇಡಿಕೊಳ್ಳಿ". ಬಹು ದಿನಗಳ ಹಿಂದೆ ಮಾಸಪತ್ರಿಕೆಯೊಂದರಲ್ಲಿ ಕಂಡ ಈ ಭಕ್ತನ ಮೊರೆಯನ್ನು ಓದಿ ಇದೆಂಥ ಮೂಢಭಕ್ತಿ ಎಂದು ನಕ್ಕದ್ದು ನೆನಪಿದೆ. ಭಕ್ತನಿಗೆ ಸಂತರ ನೆನಪು ವರ್ಷಕ್ಕೊಂದು ಸಾರಿ ಬರುತ್ತದೆಯೋ ಇಲ್ಲವೋ–ಸಂಕಟ ಬಂದಾಗ ಸಂತ ಅಂತೋಣಿ. ಹಾಗೆ ನೆನಪು ಬಂದಾಗಲೂ ತನ್ನನ್ನು ಸಂಕಟದಿಂದ ಪಾರುಮಾಡುವ ಹೊರೆಯನ್ನು ಸಂಪೂರ್ಣವಾಗಿ ಸಂತರ ಮೇಲೆಯೇ ಒರಗಿಸುವ ಧೈರ್ಯ ಮಾಡುವುದಿಲ್ಲ. ಅವರ ಪ್ರಯತ್ನಕ್ಕೆ ನೆರವಾಗಿ ನಿಲ್ಲುವ ಸದುದ್ದೇಶದಿಂದ ಆ ಎಮ್ಮೆಗೆ ಹೆಚ್ಚು ಹೆಚ್ಚಾಗಿ ಹಿಂಡಿಯನ್ನೂ ಹತ್ತಿಯ ಬೀಜವನ್ನೂ ಹಾಕಿಯೇ ಹಾಕುತ್ತಾನೆ. ಬಹುಶಃ ಒಂದು ತಿಂಗಳಾದ ಮೇಲೆ ಎಮ್ಮೆ ಸರಿಯಾಗಿ ಹಾಲು ಕೊಡಬಹುದು. ಅದು ಹತ್ತಿಯ ಬೀಜದ ಕೃಪೆಯೋ ಸಂತರ ಕೃಪೆಯೋ ಹೇಗಾದರೂ ಇರಲಿ, ಕೀರ್ತಿಯೇನೋ ಸಂತರ ಬಗಲಿಗೇ ಬೀಳುತ್ತದೆ.

ಈ ಕಥೆಯನ್ನು ಹೇಳಿ ಹಾಸ್ಯಮಾಡಿದ ಸ್ವಲ್ಪ ದಿನಕ್ಕೇ ನಮ್ಮ ಮನೆಯಲ್ಲಿ ಲಲಿತೆ ಬಚ್ಚಿಟ್ಟಿದ್ದ ಒಂದು ಗುಟ್ಟು ಬಯಲಾಗಬೇಕಾಗಿ ಬಂತು. ನಾನು ಆಗ ತಾನೆ ನೌಕರಿಗೆ ಸೇರಿ ಮೊದಲನೆಯ ತಿಂಗಳ ಸಂಬಳವನ್ನು ಸ್ವಲ್ಪ ಹೆಮ್ಮೆಯಿಂದ ಹೊತ್ತು ತಂದೆ; ಅಂಥ ಹೊರಲಾಗದ ಭಾರವೇನೋ ಅಲ್ಲ, ಕೇವಲ ಎಪ್ಪತ್ತೈದು ರೂಪಾಯಿ. ಆದರೇನು, ಹೆಚ್ಚಾಗಲಿ ಕಡಿಮೆಯಾಗಲಿ ನನ್ನ ಸ್ವಂತ ಸಂಪಾದನೆ. ಸಂಪಾದನೆ ಮಾಡಿದ ಹೆಮ್ಮೆಯ ಜೊತೆಗೆ ಅದನ್ನು ಖರ್ಚು ಮಾಡುವ ಆತುರವೂ ಹೆಚ್ಚಾಗಿತ್ತು. ರಾಮಕೃಷ್ಣ ಪರಮಹಂಸರಂಥವರಿಗೆ ಹತ್ತಿರದಲ್ಲಿ ಹಣವಿದ್ದರೆ ಮನಶ್ಶಾಂತಿಯಿರುವುದಿಲ್ಲವಂತೆ. ನನ್ನ ಸ್ವಭಾವವೂ ಸ್ವಲ್ಪ ಹಾಗೆಯೇ; ಇರುವ ಹಣ ಮುಗಿದು ಬರಿಗೈಯಾಗುವವರೆಗೂ ಮನಸ್ಸು ಸ್ತಿಮಿತಕ್ಕೆ ಬರುವುದಿಲ್ಲ. ಆದ್ದರಿಂದ ದಾರಿಯಲ್ಲೇ ಆ ಎಪ್ಪತ್ತೈದು ರೂಪಾಯಿಗಳ ವೆಚ್ಚದ ವ್ಯವಸ್ಥೆ ಮಾಡಿ, ನೌಕರಿಗೆ ಸೇರಿದ್ದಕ್ಕೆ ಗುರುತಾಗಿ ಮೊದಲನೆಯ ತಿಂಗಳ ಸಂಬಳದಿಂದ ಒಂದು ಬೈಸಿಕಲ್ ಕೊಳ್ಳಬೇಕೆಂದು ನಿಶ್ಚಯಿಸಿಕೊಂಡು ಬಂದೆ.

ಆದರೆ ಮನೆಗೆ ತಲುಪಿದೊಡನೆಯೇ ಲಲಿತೆ ನನ್ನ ಬಯಕೆಯ ಮೇಲೆ ಹಾಸುಗಲ್ಲೆಳೆಯಲು ಅನುವಾದಳು. ಅವಳು ತಿರುಪತಿ ವೆಂಕಟರಮಣಸ್ವಾಮಿಗೆ ಹರಕೆ ಹೊತ್ತಿದ್ದಳಂತೆ; 'ಅವರಿಗೆ' ಕೆಲಸವಾದರೆ ಮೊದಲ ತಿಂಗಳ ಸಂಬಳವನ್ನು ಅರ್ಪಿಸುತ್ತೇನೆಂದು. ನಾನು ಸಂಪಾದನೆ ಮಾಡುವ ಮೊದಲೇ ಅವಳು ನನ್ನ ಹಣಕಾಸಿನ ಯಜಮಾನಿಕೆಯನ್ನು ವಹಿಸಿಕೊಂಡುಬಿಟ್ಟಿದ್ದಳು.

ಅವಳ ಹರಕೆಗೂ ನನಗೆ ಕೆಲಸ ದೊರೆತದ್ದಕ್ಕೂ ಐದಾರು ತಿಂಗಳ ಅಂತರ. ನಾನೇನೋ ಸರ್ಕಾರದವರು ನನ್ನ ಚಾತುರ್ಯಕ್ಕೂ ಕಾರ್ಯದಕ್ಷತೆಗೂ ಮೆಚ್ಚಿ ನನ್ನನ್ನು ನಿಯಮಿಸಿಕೊಂಡರೆಂದು ಭಾವಿಸಿದ್ದೆ. ಲಲಿತೆ ಆ ಭ್ರಮೆಯನ್ನು ಹೋಗಲಾಡಿಸಿದಳು. ಬುದ್ಧಿವಂತಿಕೆ, ಮುಂದಾಲೋಚನೆ ಇವೆಲ್ಲಾ ತನ್ನದೆಂದೂ ಅದರಲ್ಲಿ ನನ್ನ ಕೈವಾಡವೇನೂ ಇಲ್ಲವೆಂದೂ ಅವಳ ಮಾತಿನಿಂದ ವ್ಯಕ್ತವಾಯಿತು. ಅವಳು ವೆಂಕಟರಮಣಸ್ವಾಮಿಯ ಸಹಾಯವನ್ನು ಕೋರದಿದ್ದರೆ ನನ್ನ ಮುದ್ದು ಮುಖವನ್ನು ನೋಡಿ ಯಾರೂ ನೌಕರಿ ಕೊಡುತ್ತಿರಲಿಲ್ಲವಂತೆ. ಆ ಅವಹೇಳನವನ್ನು ಕೇಳಿ ನನ್ನ ಸ್ವಾಭಿಮಾನ ಕೆರಳಿತು; ಅಲ್ಲದೆ ಕೈಗೆ ಬಂದಂತಿದ್ದ ಬೈಸಿಕಲ್ಲಿನ ತುತ್ತು ಕಣ್ಮರೆಯಾಗುವಂತೆ ತೋರಿತು. ಗೃಹಕೃತ್ಯದಲ್ಲಿ ಅಲ್ಪ ವಿಷಯಗಳಿಗೆಲ್ಲಾ ಅಡ್ಡಿ ಬರಬಾರದೆಂದು ನಾನು ಖುದ್ದು ರಾಜಿಯಿಂದ ಮನೆಯ ಪಾರುಪತ್ಯವನ್ನು ಬಹುಮಟ್ಟಿಗೆ ಲಲಿತೆಗೇ ವಹಿಸಿರುವುದು ನಿಜ. ಆದರೆ ಅವಳು ತನ್ನ ಸ್ವಾತಂತ್ರ್ಯವನ್ನು ಹೀಗೆ ದುರುಪಯೋಗ ಮಾಡಿದರೆ ಸುಮ್ಮನಿರುವುದು ಹೇಗೆ? ಹೀಗೆಯೇ ಬಿಟ್ಟರೆ ನನ್ನನ್ನು ಕೈಗೊಂಬೆಯಂತೆ ಕುಣಿಸಿಬಿಡುತ್ತಾಳೆ. ಸಂಬಳವನ್ನು ತಿರುಪತಿ ದೇವರಿಗೆ ಒಪ್ಪಿಸಿ ಕೈಮುಗಿಯಲು ನಾನು ಒಪ್ಪಲಿಲ್ಲ. ಅವಳು ಹರಸಿಕೊಂಡದ್ದು ನಿಜವಿರಬಹುದು; ನನಗೆ ಕೆಲಸವಾದದ್ದೂ ನಿಜ. ಇವೆರಡಕ್ಕೂ ಸಂಬಂಧವಿದೆಯೆನ್ನುವುದನ್ನು ಮಾತ್ರ ನಂಬಲಾರದೆ ಹೋದೆ. ಅಥವಾ ಇದ್ದರೂ... ಮನೆಯ ಬಾಗಿಲಿನಲ್ಲಿ ನಕ್ಷತ್ರಿಕನಂತೆ ಬಂದು ನಿಲ್ಲುವ ಸಾಲಗಾರನಿಗೇ ಕೊಟ್ಟ ಸಾಲವನ್ನು ವಾಪಸ್ಸು ಮಾಡಲು ಮನಸ್ಸು ಬರುವುದಿಲ್ಲ–ಹೀಗಿರುವಾಗ ಬೇರೆ ಯಾವುದೋ ಲೋಕದಲ್ಲಿ ವಾಸಿಸುವ, ಕಣ್ಣಿಗೆ ಕಾಣದ ದೇವರಿಗೆ ಹಣ ಸಲ್ಲಿಸಲು ಮನಸ್ಸು ಒಪ್ಪೀತೆ? ಅವನು ಇದ್ದಾನೆಯೋ ಇಲ್ಲವೋ ಅದು ಸಹ ತಿಳಿಯದು!

ಒಂದು ವೇಳೆ ನನಗೆ ಕೆಲಸವಾದದ್ದು ವೆಂಕಟರಮಣನ ಕೃಪೆಯಿಂದಲೇ ಎಂದ ಒಪ್ಪಿದರೂ ಆತನ ಕೃಪೆಯನ್ನು ಅಳೆದು ಅದಕ್ಕೆ ಹಣದ ಬೆಲೆ ಕಟ್ಟಿ

ಪ್ರತಿಫಲವನ್ನು ಕೊಡಹೋಗುವ ಧಾರ್ಷ್ಟ್ಯಕ್ಕೆ ಕ್ಷಮೆಯುಂಟೆ? ಪ್ರತಿಫಲಾಪೇಕ್ಷೆಯೆಂಬ ದೋಷವನ್ನು ದೇವರಲ್ಲಿ ಆರೋಪಿಸಬಹುದೆ? ಅಥವಾ ಪ್ರತಿಫಲಾಪೇಕ್ಷೆಯಿದ್ದರೂ, ಆತನು ಕರುಣಾಮಯ; ನಾವು ಕೊಟ್ಟ ಭಾಷೆಗೆ ಒಂದುವೇಳೆ ತಪ್ಪಿದರೂ ಕ್ಷಮಿಸಲಾರನೆ? ಹಿಗೆಲ್ಲಾ ವಾದಮಾಡಿ ಲಲಿತೆಯ ಬಾಯಿ ಮುಚ್ಚಿಸಿದೆ. ಇನ್ನೂ ಆ ತಿಂಗಳ ಸಂಬಳವನ್ನು ಸಲ್ಲಿಸಿಲ್ಲ. ನನಗೆ ಯಾವಾಗಲಾದರೂ ನೆಗಡಿ ತಲೆನೋವು ಬಂದಾಗ ಮಾತ್ರ ಲಲಿತೆ ತನ್ನ ಹರಕೆಯನ್ನು ನೆನಪಿಗೆ ತಂದುಕೊಂಡು ಮೂರುಕಾಸಿನ ಬಿಲ್ಲೆಯೊಂದನ್ನು ಅರಿಸಿನದ ಬಟ್ಟೆಯಲ್ಲಿ ಕಟ್ಟಿ ಮುಡುಪಾಗಿ ಇಡುತ್ತಾಳೆ. ಹೀಗೆ ಎರಡು ಮೂರು ವರ್ಷಕ್ಕೊಂದು ಬಾರಿ ಹೊಸ ಪ್ರಾಮಿಸರಿ ನೋಟು ಬರೆದಿಟ್ಟ ಹಾಗೆ ಮಾಡಿ ಕಾಲ ತಳ್ಳುತ್ತ ಬಂದಿದ್ದೇವೆ. ಹರಕೆಯೇನೋ ನನ್ನ ಕೈ ಕಚ್ಚಲಿಲ್ಲ. ಆದರೆ ಹೀಗೆ ಮಾಡುವುದು ನ್ಯಾಯವೆ, ಹಣ ಸಲ್ಲಿಸದೆ ಇರುವುದರಿಂದ ಕೆಟ್ಟ ಪರಿಣಾಮವೇನೂ ಇಲ್ಲವೆ, ಎಂಬ ಸಂದೇಹ ಆಗಿಂದಾಗ ನನ್ನನ್ನೂ ಬಾಧಿಸುವುದುಂಟು. ಇನ್ನು ಮುಂದಾದರೂ ಇಂಥ ಧರ್ಮಸಂಕಟ ಒದಗದೆ ಇರಲೆಂದು ಲಲಿತೆಗೆ ಕಟ್ಟಾಜ್ಞೆ ವಿಧಿಸಿದ್ದೇನೆ–ನನಗೆ ತಿಳಿಸದೆ ಯಾವ ಹರಕೆಯನ್ನು ಮಾಡಕೂಡದೆಂದು. ಅದರ ಫಲವಾಗಿ ಅವಳಿಂದ ಸ್ತ್ರೀ ಸ್ವಾತಂತ್ರ್ಯದ ವಿಷಯ ಒಂದು ಉಪನ್ಯಾಸ ಕೇಳಬೇಕಾಯಿತು. ತಿರುಪತಿಯ ಯಾತ್ರಿಕರು ಕೆಲವು ವೇಳೆ ಮಾತಾಡುವುದಕ್ಕೆ ಅವಕಾಶವಿಲ್ಲದಂತೆ ಬಾಯಿಬೀಗ ಹಾಕಿಕೊಳ್ಳುವ ಸೇವೆ ನಡೆಸುವುದುಂಟು. ಒಂದು ಮಾತಿಗೆ ಮೂರು ಪ್ರತಿಮಾತಾಡಿ ನಮ್ಮ ಪ್ರಾಣಹಿಂಡುವ ಈ 'ಮಧುರಭಾಷಿಣಿ'ಯರು ಇಂಥ ಹರಕೆಯನ್ನಾದರೂ ಹೊತ್ತರೆ ದಾಂಪತ್ಯ-ಜೀವನ ಎಷ್ಟೋ ಹಗುರವಾದೀತು!

ವೈಜ್ಞಾನಿಕ ಮನೋವೃತ್ತಿಯುಳ್ಳವರೂ ಸಂದೇಹವಾದಿಗಳೂ ಹರಕೆಗಾರರ ಅಂಧಶ್ರದ್ಧೆಯನ್ನು ನೋಡಿ ತಿರಸ್ಕಾರದಿಂದ ನಗಬಹುದು. ನಾನೂ ಈ ಗುಂಪಿಗೆ ಸೇರಿದವನೇ. ಆದರೂ ನನಗಾಗಿ ಬೇರೊಬ್ಬರು ಮಾಡಿದ ಹರಕೆ ತೀರದಿದ್ದಾಗ ನನ್ನ ಮನಸ್ಸು ಸ್ವಲ್ಪ ಹೊಯ್ದಾಟಕ್ಕೆ ಒಳಗಾಯಿತು. ಇನ್ನು ನಂಬಿಕೆಯುಳ್ಳವರ ಗತಿಯೇನು? ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ತುಲಾಭಾರ ತೂಗುವವರನ್ನೂ ನದಿಯಿಂದ ಗುಡಿಯವರೆಗೆ ಒದ್ದೆ ಬಟ್ಟೆಯಲ್ಲಿ ಹೆಜ್ಜೆ ನಮಸ್ಕಾರ ಹಾಕಿ ಆ ಬೀದಿಯ ಪವಿತ್ರ ಧೂಳಿಯಿಂದ ಅಲಂಕೃತರಾದವರನ್ನೂ ಭಕ್ತರ ಎಂಜಲೆಲೆಯ ಮೇಲೆ ಹೊರಳಿ ಭವರೋಗವೈದ್ಯನ ಕರುಣೆ ಬೇಡುವವರನ್ನೂ ನೋಡಿದಾಗ

ನನಗೆ ತಿರಸ್ಕಾರವಿಲ್ಲವೆಂದು ಹೇಳಲಾರೆ. ಆದರೆ ಅವರ ದೈನ್ಯವು ತಿರಸ್ಕಾರಕ್ಕಿಂತಲೂ ಹೆಚ್ಚಾಗಿ ಮರುಕವನ್ನುಂಟು ಮಾಡುತ್ತದೆ. ನೈಸರ್ಗಿಕವಾದ ಕಾರ್ಯಕಾರಣನಿಯಮಕ್ಕೆ ಕಟ್ಟುಬಿದ್ದ ಈ ಪ್ರಪಂಚದ ವ್ಯವಹಾರದಲ್ಲಿ ದೈವವು ನಡುವೆ ತಲೆಹಾಕಿ ಯಾವನೋ ಒಬ್ಬನ ಬಯಕೆಯನ್ನು ಪೂರೈಸುವುದೆಂದು ನಂಬುವುದು ಕಷ್ಟ. ಹಾಗೆ ಭಗವಂತನು ಪರಸ್ಪರ ವಿರುದ್ಧವಾದ ನಮ್ಮೆಲ್ಲರ ಇಷ್ಟಾರ್ಥಗಳನ್ನೂ ಸಲ್ಲಿಸುವ ಕೆಲಸಕ್ಕೆ ನಿಂತರೆ ಲೋಕದಲ್ಲಿ ಅರಾಜಕತೆಯೆದ್ದು ತಾಂಡವವಾಡಬಹುದು. ನಾನು ಯಾವುದಕ್ಕೆ ಕೈಚಾಚುವೆನೋ ಅದೇ ಇನ್ನು ಸಾವಿರ ಜನಕ್ಕೆ ಬೇಕಾಗಿ, ನನ್ನ ಇಷ್ಟಸಿದ್ಧಿಯಾಗುವುದು ಅವರಿಗೆ ಬೇಡವಾಗಿ, ನಾವೆಲ್ಲರೂ ಏಕಕಾಲದಲ್ಲಿ ಹರಕೆಕಟ್ಟೆ ನಿಂತರೆ ದೇವರು ಯಾರ ಪಕ್ಷವನ್ನು ವಹಿಸಬೇಕು?

ಇದೆಲ್ಲಾ ನಿಜವಾದರೂ ನಮಗೆ ಹರಕೆಯಲ್ಲಿ ನಂಬಿಕೆ ಕಡಿಮೆಯಾಗಿಲ್ಲ, ಬಹುಶಃ ಕಡಿಮೆಯಾಗುವುದೂ ಇಲ್ಲ. ತೇನ ವಿನಾ ತೃಣಮಪಿ ನ ಚಲತಿ ಅವನ ಸಹಾಯವಿಲ್ಲದೆ ನಮ್ಮ ಕಾರ್ಯಸಿದ್ಧಿ ಹೇಗಾದೀತು? ಅಷ್ಟೈಶ್ವರ್ಯಕ್ಕೂ ಒಡೆಯನಾದವನು ನಮ್ಮೆಲ್ಲರನ್ನೂ ಏಕಕಾಲದಲ್ಲಿ ತೃಪ್ತಿಪಡಿಸಬಾರದೇಕೆ? ಬೇಕಾದರೆ ನಮ್ಮ ಸಂದೇಹವಾದಿಗಳು ತಮ್ಮ ಅಂತರಂಗವನ್ನು ಸಾಕ್ಷಿಯಾಗಿಟ್ಟು ಕೊಂಡು ಆತ್ಮಪರೀಕ್ಷೆಮಾಡಿಕೊಳ್ಳಲಿ–ಈ ಮೂಢಭಕ್ತಿ ಮಾನವನಾದವನು ಯಾರನ್ನೂ ಪೂರ್ಣವಾಗಿ ಬಿಟ್ಟಿದ್ದಲ್ಲ. ದೈವಭಕ್ತಿ ಕಡಿಮೆಯಾಗಿರುವುದಲ್ಲದೆ ದೇವರೇ ಇಲ್ಲವೆಂಬ ವಾದ ಹೆಚ್ಚುತ್ತಿರುವ ಈ ಕಲಿಗಾಲದಲ್ಲಿಯೂ ಸ್ವರ್ಗಕ್ಕೆ ಹರಕೆಗಳ ಬಾಬಿನಿಂದ ಬರುವ ಆದಾಯ ಕುಗ್ಗಿದೆಯೆಂದು ಯಾರೂ ಭಾವಿಸಲಾಗದು. ಪ್ರತಿದಿನವೂ ದೇವಾಲಯಗಳ ಬಳಿ ನಡೆಯುವ ವ್ಯಾಪಾರವನ್ನು ನೋಡಿದರೆ ನಮ್ಮಲ್ಲಿ ನಿರೀಶ್ವರವಾದಿಗಳು ಅಷ್ಟೇನೂ ಹೆಚ್ಚಿಲ್ಲವೆಂದೇ ತೋರುತ್ತದೆ. ನಾವೆಲ್ಲರೂ ಹಳೆಯ ಹುಚ್ಚು ನಂಬಿಕೆಗಳನ್ನು ಬಿಟ್ಟವರೇ ಆದರೂ ನಮ್ಮ ತಾಯಿಗೋಸ್ಕರ, ಹೆಂಡತಿಯ ಮನಸ್ಸು ನೋಯದಿರಲೆಂದು, ಏನೋ ಇದರಿಂದ ಅವಳಿಗೆ ಮನಶ್ಶಾಂತಿ ಬರುವುದಾದರೆ ನಾನೇಕೆ ಅಡ್ಡಬರಲಿ ಎಂದು–ಅಂತೂ ಯಾವ ಕಾರಣದಿಂದಲಾದರೂ ಹರಕೆ ಕಟ್ಟುವುದಕ್ಕೆ ನಾವೆಲ್ಲರೂ ಪರೀಕಾಗಿರುತ್ತೇವೆ. ಈಗಿನವರಲ್ಲಿ ಕುರುಡು ನಂಬಿಕೆ ಕಡಿಮೆಯಾಗಿಲ್ಲ, ಕಾಪಟ್ಯ ಹೆಚ್ಚಿದೆ. ಹಿಂದಿನವರಿಗೂ ನಮಗೂ ಇರುವ ವ್ಯತ್ಯಾಸವೆಂದರೆ, ಅವರು ತಮ್ಮ ಬಲಹೀನತೆಯನೊಪ್ಪಲು ಹಿಂಜರಿಯದೆ ದೇವರ ಮರೆಹೋಗುತ್ತಿದ್ದರು. ನಾವು

ಹೊರಗೆ ವಿಜ್ಞಾನ ಪಾರಾಯಣ ಮಾಡುತ್ತಾ ಗುಟ್ಟಾಗಿ ದೇವರ ಕಾಲು ಹಿಡಿಯುತ್ತೇವೆ. ಶುದ್ಧ ಸಂದೇಹವಾದಿಗಳಾದ ನನ್ನ ಮಿತ್ರರೊಬ್ಬರು ಹೊಸ ಬಟ್ಟೆಗಳಿಗೆ ಅರಿಸಿನ ಹಚ್ಚದೆ ಧರಿಸುವುದಿಲ್ಲ. ಆದರೆ ಅರಿಸಿನಬೇಕೆಂದು ಕೇಳಿದರೆ ಹೆಂಡತಿ ಹಾಸ್ಯಮಾಡಿಯಾಳೆಂಬ ಭಯದಿಂದ ಸರಸದ ನೆವಮಾಡಿಕೊಂಡು ಬಟ್ಟೆಗಳನ್ನು ಆಕೆಯ ಕೆನ್ನೆಗೆ ಸೋಕಿಸಿ ಧರಿಸುತ್ತಾರೆ. ಅವರು ಇಂಗ್ಲೆಂಡಿಗೆ ಹೋಗಲು ಸರ್ಕಾರಿ ವೇತನಕ್ಕೆ ಅರ್ಜಿ ಹಾಕಿದ್ದರು. ಆ ಸಂಬಂಧದಲ್ಲಿ ಮೈಸೂರಿನಲ್ಲಿ ದೇವರ ಸೇವೆ ಮಾಡಿಸಿದರೆ ನಾವೆಲ್ಲಾ ಚುಚ್ಚು ಮಾತಾಡಬಹುದೆಂದು ಹೆದರಿ ಕಳ್ಳತನದಿಂದ ಉಡುಪಿಗೆ ಹೋಗಿ ದೇವರ ಸೇವೆಗಾಗಿ ಐವತ್ತು ರೂಪಾಯಿ ಕಾಣಿಕೆ ಸಲ್ಲಿಸಿ ತೀರ್ಥಪ್ರಸಾದ ತೆಗೆದುಕೊಂಡು ಬಂದರು. ಅವರು ಐವತ್ತು ರೂಪಾಯಿನ ಮುಖ ನೋಡುವವರಲ್ಲ–ಏಳೆಂಟು ಸಾವಿರ ರೂಪಾಯಿಗಳ ನಿರೀಕ್ಷೆಯಿರುವಾಗ, ವೇತನವೇನೋ ದೊರೆಯಿತು. ಆದರೆ, ಅವರು ಇಂಗ್ಲೆಂಡಿಗೆ ಹೋಗದಿರಲೆಂದು ಮತ್ತರಾದರೂ ಕೃಷ್ಣಸ್ವಾಮಿಗೆ ನೂರು ರೂಪಾಯಿ ಸಲ್ಲಿಸಿದರೋ ಏನೋ ಆ ಸಮಯಕ್ಕೆ ಸರಿಯಾಗಿ ಯುದ್ಧ ಪ್ರಾಪ್ತವಾಗಿ ಪ್ರಯಾಣ ನಿಂತುಹೋಯಿತು. ದೇವರಿಗಂತೂ ಎರಡೂ ಪಕ್ಷದವರನ್ನೂ ಸಮಾಧಾನಪಡಿಸಿದ ತೃಪ್ತಿ. ಇಷ್ಟಾದರೂ ನನ್ನ ಮಿತ್ರರ ನಂಬಿಕೆಯೇನೂ ಅಳಿಯಲಿಲ್ಲ. ತಮ್ಮ ಭಕ್ತಿಯನ್ನು ಉಡುಪಿಯಿಂದ ತಿರುಪತಿಗೆ ವರ್ಗಾಯಿಸಿದರು, ಅಷ್ಟೆ. ಉಡುಪಿಯ ಕೃಷ್ಣ ನಂಬಿಸಿ ದ್ರೋಹ ಮಾಡಿದರೆ ಮತ್ತೇನು ಮಾಡಿಯಾರು!

ದೇವರನ್ನು ಒಲಿಸಿಕೊಂಡು ನಮ್ಮ ಇಷ್ಟಾರ್ಥಗಳನ್ನು ಸಾಧಿಸಬೇಕಾದರೆ ನಾವು ಅವನ ಮಟ್ಟಕ್ಕೆ ಏರಬೇಕು, ಇಲ್ಲವೆ ಅವನನ್ನು ನಮ್ಮ ಮಟ್ಟಕ್ಕೆ ಇಳಿಸಿಕೊಳ್ಳಬೇಕು. ನಾವು ಅವನ ಮಟ್ಟಕ್ಕೇರಿದರೆ ಅವನ ಸಹಾಯವೇ ಅನಾವಶ್ಯಕ; ಅಲ್ಲದೆ ಆಗ ನಮ್ಮ ಇಷ್ಟಾರ್ಥಗಳು ನಮಗೇ ಬೇಡವೆನ್ನಿಸಬಹುದು. ಆದ್ದರಿಂದ ದೇವರನ್ನೇ ನಮ್ಮ ಮಟ್ಟಕ್ಕೆ ಇಳಿಸಿಕೊಂಡು ಅವನೂ ನಮ್ಮಂತೆ ಸ್ತೋತ್ರಪ್ರಿಯನೆಂದು ಭಾವಿಸಿ ದೇವರನ್ನು ನಮ್ಮ ಪ್ರತಿಬಿಂಬವಾಗಿ ಸೃಷ್ಟಿಸುತ್ತೇವೆ. ದೊಡ್ಡ ಮನುಷ್ಯರ ಸಹಾಯವನ್ನು ಕೋರಿ ಅವರನ್ನು ನೋಡುವುದಕ್ಕೆ ಹೋದಾಗ ಕೈಯಲ್ಲಿ ಎರಡು ನಿಂಬೆಯ ಹಣ್ಣುಗಳನ್ನಾದರೂ ಹಿಡಿದುಕೊಂಡು ಹೋಗುತ್ತೇವೆ; ಏನಾದರೂ ನೆಪದಿಂದ ಅವರನ್ನು ಉಪಾಹಾರಕ್ಕೆ ಕರೆತರುತ್ತೇವೆ; ದೇವರನ್ನು ಟೀ ಪಾರ್ಟಿಗೆ ಕರೆಯಲಾಗುವುದಿಲ್ಲವಲ್ಲ; ಆದ್ದರಿಂದ

ಭಜನೆ ಮಾಡಿ ಹಣ್ಣುಕಾಯಿ ಮಾಡಿಸುತ್ತೇವೆ. ವಿಘ್ನೇಶ್ವರನಿಗೆ ಇಡಿಗಾಯಿ ಒಡೆದು, ಶ್ರೀಕಂಠೇಶ್ವರನಿಗೆ ಶಾಲಾನ್ನದ ಅಭಿಷೇಕ ಮಾಡಿಸಿ, ನರಸಿಂಹಹನಿಗೆ ಚಿನ್ನದ ಕಿರೀಟ ಹಾಕಿಸಿ– ಮುಚ್ಚುಮರೆಯೇನೂ ಇಲ್ಲದೆ ದೇವರಿಗೆ ಲಂಚ ಕೊಟ್ಟು ನಮ್ಮ ಕೆಲಸ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಮ್ಮಂತೆಯೇ ನಮ್ಮ ದೇವರಿಗೂ ನಾಲಗೆಯ ಚಪಲ ಹೆಚ್ಚು; ವಸ್ತ್ರಭೂಷಣಗಳ ಗೀಳೂ ಉಂಟು. ಪ್ರತಿಫಲಾಪೇಕ್ಷೆಯಿಲ್ಲದೆ ನಮ್ಮ ಪ್ರಾರ್ಥನೆಯನ್ನು ಸಲ್ಲಿಸುವುದು ಆತನಿಗೇನೂ ಕಷ್ಟವಲ್ಲವೆಂದರೂ ಪ್ರತಿಫಲ ದೊರಕಿದರೆ ಯಾರನ್ನು ಕೆಡಿಸೀತು! ಹರಕೆ ಮಾಡಿಕೊಂಡ ಮೇಲೆ ಅದನ್ನು ತೀರಿಸದಿದ್ದರೆ ದೈವಕ್ಕೆ ಸಿಟ್ಟು ಬಂದು ನಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ರೋಗರುಜಿನಗಳನ್ನು ತಂದು ಹಾಕಿ ಹರಕೆ ತೀರುವವರೆಗೂ ನಮ್ಮನ್ನು ಕಾಡುತ್ತಿರುತ್ತದೆ. ಅದರಲ್ಲಿಯೂ ತಿರುಪತಿ ವೆಂಕಟರಮಣನಂಥ ಸಾಲಗಾರ ದೈವವಾದರಂತೂ ಒಂದು ಕಿಲುಬು ಕಾಸೂ ಉಳಿಯದಂತೆ ವಸೂಲಾಗುವವರೆಗೂ ನಿಮ್ಮನ್ನು ಬಿಡುವುದಿಲ್ಲ. ಪದ್ಮಾವತಿಯನ್ನು ಮದುವೆಯಾದಾಗ ನಡೆದ ವೈಭವಕ್ಕೆ ತಂದ ಸಾಲವೆಲ್ಲಾ ಮಾನವ ಕೋಟಿಯ ಲಂಚದಿಂದ ತಾನೇ ತೀರಬೇಕು! ಒಂದು "ಮೋರಟೋರಿಯಂ" ಆಜ್ಞೆ ಹೊರಡಿಸಿ ವೆಂಕಟರಮಣ ತನ್ನ ಕಷ್ಟದಿಂದ ಪಾರಾಗಬಹುದು. ಆದರೆ ವೈಕುಂಠದಲ್ಲಿ ಮೋರಟೋರಿಯಂ ಪದ್ಧತಿ ಜಾರಿಯಲ್ಲಿಲ್ಲವೇನೋ.

ನಾವು ಹರಕೆ ಕಟ್ಟುವುದು ನಮ್ಮ ಜಾತಿಯ ದೇವರಿಗೆ ಮಾತ್ರವಲ್ಲ. ಮಹಮ್ಮದೀಯರು ಊರ ಮುಂದಿನ ಹನುಮಂತರಾಯನಿಗೆ ದಧ್ಯೋದನದ ಸೇವೆ ಮಾಡಿಸಿದ್ದುಂಟು. ಬ್ರಾಹ್ಮಣರು ಫಿಲೋಮೆನಾ ದೇವಾಲಯಕ್ಕೆ ಮುಡುಪು ಕಟ್ಟಿಡುತ್ತಾರೆ. ಹದಿನಾರಾಣೆ ಅಚ್ಚ ಹಿಂದುಗಳು ಹರಕೆ ತೀರಿಸಲು ಮೊಹರಂ ಹಬ್ಬದಲ್ಲಿ ವೇಷಹಾಕಿ ಕುಣಿಯುತ್ತಾರೆ. ಸ್ವಪ್ರಯೋಜನದ ಮುಂದೆ ಮತಧರ್ಮಗಳ ಎಲ್ಲೆ ಕಟ್ಟುಗಳು ಹೇಗೆ ನಿಂತಾವು? ನಮಗೆ ಸೌಖ್ಯ ಬೇಕು. ಅದು ಹಿಂದೂ ಅಂಗಡಿಯಲ್ಲಿ ಸಿಕ್ಕಲಿ, ಕ್ರೈಸ್ತರ ಅಂಗಡಿಯಲ್ಲಿ ಸಿಕ್ಕಲಿ, ಯಾವ ದೈವವು ಮಾರಿದರೂ ಕೊಳ್ಳಲು ಸಿದ್ಧರಿದ್ದೇವೆ. ಇದು ಸ್ವಾರ್ಥದ ಪರಮಾವಧಿಯೆಂದು ಬೇಕಾದವರು ಅಲ್ಲಗಳೆಯಬಹುದು. ನಿಜವಾಗಿ ನೋಡಿದರೆ ಸರ್ವಮತಸಮನ್ವಯಕ್ಕೆ ಸ್ವಪ್ರಯೋಜನವೂ ಒಂದು ಹೆದ್ದಾರಿ. ಹೀಗಾದರೆ ನಮ್ಮ ವಿಚಾರಶಕ್ತಿಯ ಗತಿಯೇನು ಎನ್ನಬಹುದು. ಈ ವಿಷಯಗಳು ವಿಚಾರಶಕ್ತಿಗೆ

ಮೀರಿದವು. ಜಗತ್ತಿನಲ್ಲಿ ವಿಪತ್ತನ್ನು ನಿವಾರಣೆ ಮಾಡುವ, ಮಂಗಳವುಂಟು ಮಾಡುವ, ಶಕ್ತಿ ಎಲ್ಲಿದೆಯೋ ಯಾರು ಬಲ್ಲರು? ಅದಕ್ಕೆ ನಾವು ನಾಮಕರಣ ಮಾಡಲಾರೆವು. ಇಂದ್ರಿಯಕ್ಕೆ ಗೋಚರವಲ್ಲದ ಆ ನಸುಗತ್ತಲಿನ ಅಸ್ಪಷ್ಟ ಪ್ರಪಂಚದ ನಕ್ಷೆಯನ್ನು ಯಾರೂ ಬರೆದಿಲ್ಲ. ಯಾವ ದಾರಿಯಲ್ಲಿ ಹೋದರೆ ಭಗವಂತನ ಪಾದ ಸ್ಪರ್ಶಮಾಡಬಹುದೋ ಆ ವಿಷಯದಲ್ಲಿ ನಿಷ್ಕೃಷ್ಟವಾದ ಅಭಿಪ್ರಾಯವನ್ನು ಕೊಡಲಾಗುವುದಿಲ್ಲ. ಅಲ್ಲದೆ ಸೌಖ್ಯದ ಆಕಾಂಕ್ಷೆ ಹೆಚ್ಚಿದ ಹಾಗೆಲ್ಲಾ ವಿಚಾರಶಕ್ತಿ ಅಳಿಯುತ್ತ ಬರುತ್ತದೆ.

ಈ ಪ್ರಾಪಂಚಿಕ ಸೌಖ್ಯದಿಂದ ಏನಾಗುತ್ತದೆ ಎನ್ನುವುದು ಬೇರೆ ಮಾತು. ವಿರಾಗಿಗಳಿಗೆ ಬಯಕೆಯೆನ್ನುವುದೇ ಹುಚ್ಚತನ. ಆದರೆ ಅದನ್ನು ತೊರೆಯುವುದೇ ಸೌಖ್ಯ ಎಂಬ ಶುಷ್ಕವೇದಾಂತ ನಮಗೆ ಒಪ್ಪದು. ನಾವು ಐಹಿಕ ಸುಖದ ಹಂಬಲವನ್ನು ಬಿಡಲಾರೆವು.

ಅಂದಣವ ಕೊಡು ಎಂದು ಅನುನಯದಿ ಬೇಡುವೆನೆ,

ಅಂದಣವನೇರಿದಾ ನಹುಷನೇನಾದ!

ಇರಬಹುದು. ಆದರೆ ಅಂದಣ ಬೇಡವೆನ್ನುವ ದಾಸರೊಬ್ಬರಿದ್ದರೆ ಅದನ್ನು ಬೇಡುವವರು ಲಕ್ಷಮಂದಿ. ಅಲ್ಲದೆ ನಮ್ಮೆಲ್ಲರ ಮನಸ್ಸಿನಲ್ಲೂ, "ನಾನೇನು ನಹುಷನಂತೆ ಹುಚ್ಚನಲ್ಲ, ಇಂದ್ರಪದವಿಗೆ ಏರಿದ್ದರೆ ಅದನ್ನು ಉಳಿಸಿಕೊಳ್ಳದೆ ಬಿಡುತ್ತಿರಲಿಲ್ಲ" ಎಂಬ ಭ್ರಾಂತಿ ನೆಲೆಗೊಂಡಿದೆ. ಜೀವನವು ಮಾಯೆಯೆಂದು ಹೇಳುವವರು ಯಾರು ತಾನೆ ಪ್ರಾಣವನ್ನೊಪ್ಪಿಸಲು ಸಿದ್ಧರಾಗಿದ್ದಾರೆ? ಬ್ರಹ್ಮ ಸಾಕ್ಷಾತ್ಕಾರವೇ ಮುಖ್ಯ. ಅದಾದ ಮೇಲೆ ನಾವು ಮತ್ತೇನನ್ನೂ ಬೇಡಿ ಹರಕೆ ಹೊರಬೇಕಾಗುವುದಿಲ್ಲ, ನಿಜ. ಆದರೆ ಸತ್ಯವಾಗಿ ಪರೀಕ್ಷಿಸಿ ನೋಡಿದರೆ ಬಾಯಲ್ಲಿ ನಾವು ಏನೇ ಹೇಳಲಿ, ಅಂಥ ಸಾಕ್ಷಾತ್ಕಾರ ನಮ್ಮಲ್ಲಿ ಬಹುಜನರಿಗೆ ಬೇಡ. ವಿರಾಗಿಗಳಿಗೆ ಸ್ವಾರ್ಥವನ್ನು ಜಯಿಸಿ ಹಂಬಲವೆಲ್ಲವನ್ನೂ ತೊರೆಯುವುದೇ ಅದಕ್ಕೆ ಮಾರ್ಗ. ಆದರೆ ಮಧುಪಾನದ ಚಟವಿರುವವನಿಗೆ ಮಧುವಿಲ್ಲದ ಬ್ರಹ್ಮಸಾಕ್ಷಾತ್ಕಾರವೆಂದರೆ ಅಷ್ಟೇನೂ ಆನಂದವಾಗುವುದಿಲ್ಲ. ಮದುವೆಯಾಗುವುದೂ ಮದುವೆಮಾಡಿಕೊಡುವುದೂ ಸ್ವರ್ಗದಲ್ಲಿಲ್ಲವೆಂದು ಕ್ರೈಸ್ತರ ವೇದ ಸಾರುತ್ತದೆ. ನನ್ನ ಪ್ರೇಯಸಿಯ ಮೇಲೆ ನನಗಿರುವ ವ್ಯಾಮೋಹ ಅಳಿದು ಹೋಗುವುದಾದರೆ, ನಮ್ಮಿಬ್ಬರ ಹೃದಯಬಂಧನವನ್ನು ಸ್ವರ್ಗ ಕುಡಿಯುವುದಾದರೆ, ಆ ಸ್ವರ್ಗ ದೂರವಿರಲಿ ಎನ್ನಿಸುತ್ತದೆ. ನಮ್ಮ ಹಸಿವು

ಬಾಯಾರಿಕೆಗಳಡಗಿ ಚಪಲಗಳೆಲ್ಲಾ ತೃಪ್ತಿ ಪಡೆದು ಕರಣಗಳ ಆಸೆ ಹಿಂಗಿದ ಮೇಲೆ ಚರ್ಚೆಗೆ ಕುಳಿತರೆ ಈ ವೇದಾಂತವನ್ನು ನಾವು ವಾಚಾ ಮಾತ್ರವಲ್ಲದೆ ಮನಸಾ ಸಹ ಒಪ್ಪುತ್ತೇವೆಯೋ ಏನೊ, ಆದರೆ ರಕ್ತವಿನ್ನೂ ಬಿಸಿಯಾಗಿರುವಾಗ, ಯೌವನದ ಕಾಂತಿಯೂ ಅವಯವದ ಚೈತನ್ಯವೂ ಕುಗ್ಗದಿರುವಾಗ, ಲವಲವಿಕೆ ಉಕ್ಕಿ ಹೊರಹೊಮ್ಮಿ ನಾವು ಜೀವನವನ್ನು ನೂಕುವುದಕ್ಕೆ ಬದಲು ನರ್ತಿಸುತ್ತಿರುವಾಗ, ನಮಗೆ ಪ್ರಪಂಚದ ತೃಷ್ಣೆಯಡಗಬೇಕೆಂಬ ಬಯಕೆಯಾದರೂ ಇದ್ದೀತೆ! ದೇವರು ನಮ್ಮನ್ನು ಇಲ್ಲಿ ತಂದಿಟ್ಟಿರುವುದು ಇಲ್ಲಿಂದ ಹೊರಡಲು ಸಿದ್ದರಾಗಲೆಂದು ಮಾತ್ರವೇ? ವೈರಾಗ್ಯವೆಂದರೆ ಯೌವನದ ಉತ್ಸಾಹ ಮಾಗಿದ ಗುರುತೋ ಅಥವಾ ಮುಗ್ಗಿದ ಗುರುತೋ ಎಂಬ ಸಂದೇಹ ಬರುತ್ತಿದೆ. ಅದು ಅನೇಕ ವೇಳೆ ಜೀವನವನ್ನು ಎದುರಿಸುವ ಕೆಚ್ಚಿಲ್ಲದೆ ಬೆನ್ನು ತಿರುಗಿಸುವ ಹೇಡಿಯ ಮನೋಭಾವ. ನಾವು ಪ್ರಪಂಚದ ಹಂಬಲವನ್ನು ಬಿಡಲಾರೆವು. ಈಸಬೇಕು, ಇದ್ದು ಜೈಸಬೇಕು. ಈಜುವುದಕ್ಕೆ ಹೊರಟಾಗ ನಮ್ಮ ಸಹಾಯಕ್ಕೆ ಈ ಹರಕೆಗಳೇ ಈಜುಬುರುಡೆಗಳು.

ಅದರಿಂದಲೇ ನಾವು ಸಹನೆಗೆ ಮೀರಿದ ಕಷ್ಟಕ್ಕೆ ಸಿಕ್ಕಿದಾಗ ನಮ್ಮ ವಿಚಾರಶಕ್ತಿಯನ್ನು ಹೊರದೂಡಿ ಎಂತಹ ಕುರುಡು ನಂಬಕೆಯಾದರೂ ಅದರ ಶರಣು ಹೋಗುತ್ತೇವೆ. ನಮ್ಮ ಕಂದನಿಗೆ ಖಾಯಿಲೆಯಾದಾಗ ಸತ್ತರೆ ಸ್ವರ್ಗವೆಂದು ಸುಮ್ಮನಿರಲಾಗುವುದಿಲ್ಲ. ಇನ್ನೂ ತಿಳಿಮನಸ್ಸಿನ ಶುದ್ಧಹೃದಯದ ಕೂಸಾಗಿರುವಾಗೇ ಪರಮಾತ್ಮನಲ್ಲಿ ಐಕ್ಯವಾಗಲೆಂದು ಅದಕ್ಕೆ ವಿಷ ಉಡಿಸುವುದಿಲ್ಲ. ಔಷಧಿಯಿಂದ ಗುಣ ಕಾಣದಿದ್ದರೆ ಕಂಡ ಕಲ್ಲಿಗೆಲ್ಲಾ ಹರಕೆಯಿಟ್ಟೇ ಇಡುತ್ತೇವೆ. ಜೀವಕ್ಕೆ ಹೊಣೆಬೇಡುವ ತನ್ನ ಮಗುವಿನ ಬಳಿ ಕಣ್ಣೀರಿಡುತ್ತ ಕುಳಿತಿರುವ ತಾಯಿಗೆ ವೇದಾಂತವನ್ನು ಬೋಧಿಸಿ ಅವಳ ಹಂಬಲವನ್ನು ಹಾಸ್ಯ ಮಾಡುವ ಧೈರ್ಯ ಯಾರಿಗಿದೆ! ಆ ಹಂಬಲು, ಯಾವ ಮಾರ್ಗದಿಂದಲಾದರೂ ಸರಿಯೆ, ಮಗುವನ್ನು ಉಳಿಸಿಕೊಳ್ಳಬೇಕೆಂಬ ಉತ್ಕಟವಾದ ಆಸೆ, ಕೇವಲ ಸ್ವಾರ್ಥವಲ್ಲ; ಮಾನವ ವಂಶವನ್ನು ಉಳಿಸಲು ಪ್ರಕೃತಿ ನಮ್ಮ ಎದೆಯಲ್ಲಿ ನೆಟ್ಟಿರುವ ರಕ್ಷೆ. ದೈವವೆನ್ನುವುದು ನಮ್ಮನ್ನು ಬೇಟೆಯಾಡಿ ಕೊಲ್ಲುತ್ತಿದೆಯೋ ಅಥವಾ ನಮ್ಮ ರಕ್ಷಣೆಯ ಭಾರವನ್ನು ಹೊತ್ತು ನಮಗಾಗಿ ಮರುಗುತ್ತಿದೆಯೋ ತಿಳಿಯದು. ಜಿಂಕೆ ಸಾಯುವಾಗ ತನ್ನನ್ನು

ಕೊಂದವನ ಕಡೆಗೇ ದೀನ ದೃಷ್ಟಿಯನ್ನು ಬೀರುವಂತೆ ನಾವೂ ಸಹ ನಮ್ಮ ಹೃದಯದೊಡನೆ ಚೆಂಡಾಟವಾಡು ಕ್ರೂರ ದೈವವನ್ನೇ ಶರಣು ಹೋಗುತ್ತಿರಬಹುದು. ಆದರೆ ಎಲ್ಲವನ್ನೂ ಪೊರೆ ಕಳೆದ ತೀಕ್ಷ್ಣ ದೃಷ್ಟಿಯಿಂದ ವಿಮರ್ಶಿಸತೊಡಗಿದರೆ ಮಾನವನ ಜೀವನ ದುಸ್ಸಹವಾದೀತು. ಅದಕ್ಕೇ ಜನರು ತಮ್ಮ ಆಸೆ ಹುಚ್ಚೆಂದು ತೋರಿದರೂ ಇಂಥ ನಂಬಿಕೆಗಳನ್ನು ಬಿಡಲಾರರು. ಮುಳುಗುತ್ತಿರುವಾಗ ಹುಲ್ಲುಕಡ್ಡಿಯನ್ನಾದರೂ ಹಿಡಿಯಬೇಕು. ಆದ್ದರಿಂದಲೇ ಮಾನವನು ಕಂಡ ದೇವರಿಗೆಲ್ಲಾ ಹರಕೆಯಿಟ್ಟು ಕೈಮುಗಿಯುತ್ತಾನೆ. ಅಲ್ಲಾ ಆಗಲಿ, ಅಂತೋಣಿಯಾಗಲಿ, ಹವಿಸ್ಸನ್ನಿಡಲು ಸಿದ್ಧನಾಗಿದ್ದಾನೆ. "ಕಸ್ಮೈ ದೇವಾಯ" ಎಂಬ ಪ್ರಶ್ನೆಯೇ ಸಲ್ಲದು.

# ಓದು ಪತ್ಯ

# ವಾಲ್ಮೀಕಿ ತೂಕಡಿಸಿದಾಗ–1

– ಗೌರೀಶ ಕಾಯ್ಕಿಣಿ

## ಶಂತನು ಮತ್ತು ದಶರಥ

ಇತ್ತೀಚೆಗೆ ಶ್ರೀರಾಮನ ವನವಾಸದ ಹಿಂದಿನ ಪ್ರೇರಣೆಯ ವಿಷಯದ ಒಂದು ಉದ್ಬೋದಕ ಲೇಖನವು ಉದಯವಾಣಿಯ ರವಿವಾರದ ಸಂಚಿಕೆಯಲ್ಲಿ ಪ್ರಕಟವಾಯಿತು. ಅದನ್ನು ಓದಿದಾಗ ನನ್ನ ಮನಸ್ಸು ನೆನಪಿನ ಓಣಿಯಲ್ಲಿ ಹಿಂದೆ ಓಡಿತು. 20 ವರ್ಷಗಳ ಹಿಂದೆ ಹೊನ್ನಾವರದ ಅಂದಿನ ಜನತಾ ಸಾಪ್ತಾಹಿಕದಲ್ಲಿ ನಾನು ಒಂದು ಲೇಖಮಾಲೆಯನ್ನು ಪೋಣಿಸಿದ್ದೆ 'ವಾಲ್ಮೀಕಿ ತೂಕಡಿಸಿದಾಗ – ಶ್ರೀರಾಮ ತಪ್ಪಿ ಬಿದ್ದ!' ಇದು ಆ ಮಾಲೆಯ ಶೀರ್ಷಿಕೆ ಮತ್ತು ಉಪಶೀರ್ಷಿಕೆ ಆಗಿತ್ತು.

ಹಿರಿಯ ಪತ್ರಿಕೋದ್ಯಮಿಗಳೂ, ಕವಿಗಳೂ ಆದ ದಿ॥ ಶ್ರೀ ಪಾಂಡೇಶ್ವರ ಗಣಪತಿರಾಯರ ಸಂಪಾದಕತ್ವದಲ್ಲಿ ನಡೆಯುತ್ತಿದ್ದ ಆ 'ಜನತಾ' ಪತ್ರಿಕೆಯಲ್ಲಿ ನನ್ನ ಬರಹದಿಂದ ಸಾಕಷ್ಟು ಕೆರಳಿದ ಪ್ರತಿಕ್ರಿಯೆಗಳು ಶ್ರೀರಾಮ ಭಕ್ತರಿಂದ ಬಂದವು. ಆದರೆ ಸೂಕ್ತ ಸಮರ್ಪಕ ಖಂಡನೆ ಬರೆಯಲು ತೊಂದರೆಪಟ್ಟವರು ಯಾರೂ ಇಲ್ಲ!

ಈ ಲೇಖಮಾಲೆಯಲ್ಲಿ ರಾಮನ ವನವಾಸದ ಮೂಲಕಾರಣ ಮಂಥರೆಯ ಕಿತಾಪತಿ–ಕೈಕೇಯಿಯ ಮೂಲಕ ಇತ್ಯಾದಿ ವಿವೇಚನೆ ಅನುಷಂಗಿಕವಾಗಿ ಬಂದಿತ್ತು. ಅಂದಿನಿಂದ ಇಂದಿಗೆ ವಿಮರ್ಶಾ ಪ್ರಜ್ಞೆಯ ಪಾತಾಳಿ, ಸಾಮಾನ್ಯ ಓದುಗರಲ್ಲಿಯೂ ಹೆಚ್ಚಿದೆ. ಇಂದು ವಿಕಾರಕ್ಕಿಂತ ವಿಚಾರಕ್ಕೆ ಹೆಚ್ಚು ಅವಕಾಶ ದೊರೆಯುವ ಭರವಸೆ ಕಾಣುತ್ತದೆ. (ಉದಾ.) – ಡಾ. ಸಂಕಾಲಿಯಾ ಎತ್ತಿದ ಶ್ರೀರಾಮ ಪಾದುಕೆಗಳ ಪ್ರಶ್ನೆಯ ಬಗೆಗೆ ಬರುವ ಪ್ರತಿಕ್ರಿಯೆಗಳು)

ಶ್ರೀಕೃಷ್ಣಮೂರ್ತಿ ಬರೆದ ಲೇಖದಿಂದ ಇನ್ನೊಂದು ಅತಿ ಮಹತ್ವದ ರಾಮಚರಿತಕ್ಕೆ ಮೂಲಗಾಮಿಯಾದ ಪ್ರಶ್ನೆ ಎದ್ದು ನಿಲ್ಲುತ್ತದೆ. ಅದನ್ನು ಲೇಖಕರು ತಿಳಿದೋ, ತಿಳಿಯದೆಯೋ ಅಲಕ್ಷ್ಯ ಮಾಡಿದಂತಿದೆ. ಲೇಖವನ್ನು ಮುಗಿಸುವಾಗ ಶ್ರೀರಾಮನ ಸಮಚಿತ್ತತೆಯ ಬಗೆಗೆ ವಿಶೇಷವಾಗಿ ಎತ್ತಿ ಹೇಳಿದ್ದಾರೆ.

ಆದರೆ ಈ ಸಮಚಿತ್ತತೆಯ ಹಿಂದೆ ಒಂದು ನಿರೀಕ್ಷಿತತೆಯ ವೃತ್ತ ಇತ್ತು. ಭರತನಿಗೂ ರಾಮಾಯಣದ ಓದುಗನಿಗೂ ಗೊತ್ತಿರದ ಆ ಅಂಶ ರಾಮನಿಗೆ ಅಂತರಾಳದಲ್ಲಿ ಮನವರಿಕೆಯಾಗಿತ್ತು. ಅದೇನೆಂದರೆ ತಾನು ರಾಜ್ಯವನ್ನು ಭರತನಿಗೆ ಬಿಟ್ಟುಕೊಡುವುದು ನೈತಿಕವಾಗಿ ಅನಿವಾರ್ಯವೇ ಆಗಿತ್ತು.

ಭರತನು ಸೋದದರಮಾವನಲ್ಲಿಯೇ ದೂರದ ಗಾಂಧಾರ (ಕಂದಹಾರ)ದಲ್ಲಿ ಬೆಳೆಯುತ್ತಿದ್ದನಾದರೂ. ಆತ ಸದ್ಗುಣಿ ಸ್ನೇಹಮಯ ಸಹೋದರನಾಗಿದ್ದರೂ, ಧೂರ್ತ ದಶರಥನೇ ಅಂದಂತೆ ಅವನ ಬುದ್ಧಿ ಯಾವಾಗ ಹೇಗೆ ಪರಿಣಮಿಸುವುದೆಂದು ಯಾರಿಗೆ ಗೊತ್ತು? ಪಟ್ಟಾಭಿಷೇಕದ ಬೃಹತ್ ಸಂಭ್ರಮವು ದಿಢೀರನೆ ನಡೆಯುವಂತಾದರೂ ಈ 'ರಾಜೇಂದ್ರನೇ ನೇಪಥ್ಯ ವಿಧಾನ ಶೋಭಿ' ಯಾವಾಗ ಕೆಡುವುದೋ ಎಂಬ ದಿಗಿಲು ಶ್ರೀರಾಮನ ಎದೆಯಲ್ಲಿ ಇದ್ದೇ ಇತ್ತು. He was prepared for the worst. ಅವನಿಗೆ ಆ ಪಿತೃವಚನ ಪರಿಪಾಲನೆ ಅನಿರೀಕ್ಷಿತವಾಗಿ ಬರಲಿಲ್ಲ. ಬಂದಾಗ ಶಾಂತ ಗಂಭೀರನಾಗಿಯೇ ಆ crisis ಇದುರಿಸಿದನು.

ಆದರೆ ಆ 'ಪಿತೃವಚನ' ಯಾವುದು? ದಶರಥ ಕೈಕೇಯಿಗೆ ಕೊಟ್ಟ ಎರಡು ವರಗಳ ಈಡೇರಿಕೆಯೇ? ಅಲ್ಲ. ಆ ವರಗಳನ್ನು ಅವಳು ಮರೆತಿದ್ದಳು. ಆದರೆ ಜ್ಞಾತಿ ದಾಸಿಯಾಗಿ ಅವಳೊಂದಿಗೆ ತವರಿನಿಂದ ಅಯೋಧ್ಯೆಗೆ ಬಂದು ಅಂತಃಪುರವನ್ನು ಸೇರಿದ ಮಂಥರೆ ಮರೆತಿದ್ದಿಲ್ಲ. ಅವಳು ಅವನ್ನು ನೆನಪಿಸಿ ಒಂದು ರೀತಿ ಪಟ್ಟಾಭಿಷೇಕಕ್ಕೆ ತಡೆ ತರುವಂತೆ ಮಾಡಿದಳು. ಆದರೆ ಮೂಲದ 'ಪಿತೃವಚನ' ದಶರಥನು ಕೈಕೇಯಿಯ ತಂದೆ ಅಶ್ವಪತಿಗೆ ಅವಳನ್ನು ಮದುವೆ ಆಗುವಾಗ ಕೊಟ್ಟಿದ್ದು.

ಇಲ್ಲಿ ಶ್ರೀಕೃಷ್ಣಮೂರ್ತಿ ದಶರಥನಿಗೆ ತುಸು ಅನ್ಯಾಯವನ್ನೇ ಮಾಡಿದ್ದಾರೆ. ಅತ ಕೇವಲ ಕಾಮುಕ ಲಂಟಪನಿದ್ದಿಲ್ಲ. ಅವನಿಗೆ ಪುತ್ರಸಂತತಿ ಬೇಕಿತ್ತು. ಕೌಸಲ್ಯೆ, ಸುಮಿತ್ರೆಯರಲ್ಲಿ ಆತ ವಿಫಲನಾಗಿದ್ದ. ಶಂತನು ರಾಜನಂತೆಯೇ ಆತ ಕಾಮವಶನಾಗಿಯೇ ಕೈಕೇಯಿಗೆ ಮನಸೋತಿರಬಹುದು. ಆದರೆ ಅವನು ಬಯಸಿದ್ದು ಆ ಮೂರನೆಯ 'ಸಂಬಂಧ'ದಿಂದಾದರೂ ಒಂದು ಪುತ್ರ ಪ್ರಾಪ್ತಿ.

ಆದರೆ ಕೈಕೇಯಿಯ ತಂದೆ ಆ ಮುದುಕನಿಗೆ ಮುದ್ದು ಮಗಳನ್ನು ಕೊಡುವ ಮುನ್ನ. ಮುಂದೆ ಅವಳಲ್ಲಿ ಹುಟ್ಟಿದ ಮಗನಿಗಾಗಿ ಅರಸೊತ್ತಿಗೆಯ ಆಶ್ವಾಸನೆಯನ್ನು ಅಪೇಕ್ಷಿಸಿದ್ದ. ಶಂತನು ರಾಜನಿಂದ ಸತ್ಯವತಿಯ ತಂದೆ (ದಾಸರಾಜ) ಬಯಸಿದಂತೆ. ಆದರೆ ಇದೆಲ್ಲ ವಿವರ ಆದಿಕವಿ ಆರಂಭದಲ್ಲಿ

ಎತ್ತುವುದೇ ಇಲ್ಲ! ಈ ವಿಷಯ ಒಮ್ಮೆಲೇ ಒಂದೇ ಶ್ಲೋಕದಲ್ಲಿ ರಾಮನ ಬಾಯಿಯಿಂದಲೇ ವ್ಯಕ್ತವಾಗುತ್ತದೆ–ಚಿತ್ರಕೂಟದಲ್ಲಿ ಆತ ಭರತನಿಗೆ ತನ್ನ ಈ ರಾಜ್ಯತ್ಯಾಗದ ಮೂಲ ಕಾರಣವನ್ನು ಅರಹುತ್ತಾನೆ. ಆಗಲೇ ಅದು ನಮಗೂ ತಿಳಿಯುತ್ತದೆ. ಇಲ್ಲಿಯೇ ಈ 'ರಾಜ್ಯಶುಲ್ಕ'ದ ರಹಸ್ಯದ ಬಗ್ಗೆ ಎಲ್ಲೂ ಸುಳುವುಗೊಡದಿರುವುದರಲ್ಲಿಯೇ ವಾಲ್ಮೀಕಿ ತೂಕಡಿಸಿದ್ದು! `Even homer Nods' ಎಂದು ಒಂದು ಸಾಹಿತ್ಯಿಕ ನಾಣ್ಣುಡಿಯೇ ಇದೆ. ವಾಲ್ಮೀಕಿಯೂ ಪಾಮರನಲ್ಲದಿದ್ದರೂ ಹೋಮರನ ಗೋತ್ರಕ್ಕೇ ಸೇರಿದವನು! ಮಹಾಕಾವ್ಯ ಬರೆಯುವ ಓಘದಲ್ಲಿ ಕೆಲ ಸಲ ಅವಧಾನ ತಪ್ಪಿ ಮಹಾಕವಿಯೂ ಇಂಥ ವಿಸಂಗತಿಗಳಿಗೆ ಕಾರಣನಾಗಬಹುದು. ಕೆಲವು ಪಾತ್ರಗಳನ್ನು ಉಪೇಕ್ಷಿಸಬಹುದು. ಕೆಲವು ಪ್ರಸಂಗಗಳನ್ನು ಉಲ್ಲೇಖಿಸದೇ ಸಾಗಬಹುದು. ಇಲ್ಲಿಯೂ ಆದದ್ದು ಹಾಗೆಯೇ.

### ಭೀಷ್ಮ ಮತ್ತು ರಾಮ

ಮತ್ತು ಇಲ್ಲಿಯೇ ಒಂದು ಮೂಲಭೂತ ಸಮಸ್ಯೆ ಏಳುತ್ತದೆ. ದಶರಥ ಮತ್ತು ಶಂತನು ಇವರ ಕಥಾ ಪ್ರಸಂಗಗಳ ಹೋಲಿಕೆಯನ್ನು ಇಷ್ಟು ಮುಂದುವರಿಸೋಣ. ಶಂತನುವಿನ ವಚನವನ್ನು ಪಾಲಿಸಲಿಕ್ಕೆ (ಅಥವಾ ಶಂತನುವಿನ ಪರವಾಗಿ ತಾನು ಮಾಡಿದ ಶಪಥವನ್ನು ಪಾಲಿಸಲಿಕ್ಕೆ) ಭೀಷ್ಮನು ಪಟ್ಟದ ಅಧಿಕಾರವನ್ನು ಬಿಟ್ಟುಕೊಟ್ಟನು. ಮಾತ್ರವಲ್ಲ ತನ್ನ ಮಕ್ಕಳಿಂದಲೂ ಆ ಮಾತಿಗೆ ಭಂಗ ಬರಬಾರದೆಂದು ಮದುವೆಯಾಗದೆಯೂ ಉಳಿದುಬಿಟ್ಟ. ಕುರುವಂಶಕ್ಕೇ ವಿಪತ್ತು ಬಂದಾಗ, ಸತ್ಯವತಿಯೇ ದುಂಬಾಲು ಬಿದ್ದರೂ ಆತ ಕೇಳದೆ ನಿಯೋಗ ಪದ್ಧತಿಯಲ್ಲಿ ವ್ಯಾಸರಿಂದ ಚಿತ್ರವೀರ್ಯ. ವಿಚಿತ್ರವೀರ್ಯರ ರಾಣಿಯರಿಗೆ insemination ಮಾಡಿಸಿದನೇ ಹೊರತು ತಾನೇ ಮದುವೆಯಾಗಿ ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಪಡೆಯಲಿಲ್ಲ.

ಆದರೆ ಶ್ರೀರಾಮ ಮಾಡಿದ್ದೇನು? ತನ್ನದೇ ಮಾತಿನಂತೆ ದಶರಥ ಕೈಕೇಯಿಯ ಮಗನಿಗೇ ಪಟ್ಟ ಕಟ್ಟಲು ಬದ್ಧ. ಅಯೋಧ್ಯೆಯ ರಾಜ್ಯ ಭರತನಿಗೇ ವಾಚಾದತ್ತ. ಭರತನಿಗೇ ಗೊತ್ತಿದ್ದಿಲ್ಲ. ಕೈಕೇಯಿಗೂ ಗೊತ್ತಿರಲಿಕ್ಕಿಲ್ಲ. ಮಂಥರೆಗೆ ಗೊತ್ತಿತ್ತು. ನೆನಪೂ ಇತ್ತು. ಆದರೆ ರಾಮನಿಗೆ ಅದು ಗೊತ್ತು. ಯಾವಾಗಲೋ ದಶರಥ ಅವನಿಗೆ ಈ ರಹಸ್ಯ ಅರುಹಿರಬೇಕು. (ಅಥವಾ ಕೌಶಲ್ಯೆಯಿಂದ ಆತ ಅರಿತಿರಬಹುದು) ಆಕೆ ಕೈಕೇಯಿ ತನ್ನ ಮಗನ 'ಪರಿಪಂಥಿ' ಎಂದು ತಿಳಿದು

ದ್ವೇಷಿಸುತ್ತಿದ್ದಳು!). ಯಾರೇ ಹೇಳಿರಲಿ, ವಾಲ್ಮೀಕಿ ಈ ರಹಸ್ಯವನ್ನು ರಾಮನ ಬಾಯಿಯಿಂದಲೇ ಭರತನಿಗೆ ಹೇಳಿಸಿದ್ದಾನೆ. (ಕೈಕೇಯಿಯ ಬಾಯಿಯಿಂದ ಆ ವಿವರಗಳ ಪೂರ್ತಿಯ ವಿಚಾರ ಕೇಳಿದಾಗ ಅವನಿಗೆ ಈ ವಿಷಯ ತಂದೆಯೇ ತನಗೆ ಹೇಳಲಿಲ್ಲ. ಹೇಳುವಂತಿಲ್ಲ ಎಂಬ ಕೊರಗು ರಾಮ ವ್ಯಕ್ತಪಡಿಸುತ್ತಾನೆ. ಆದರೆ ಇಲ್ಲಿ, ತಂದೆಯ ಸಂಕಲ್ಪ ತನಗೆ ತಿಳಿದಿದ್ದಿಲ್ಲವೆಂದರೂ ಮುಂದೆ ಚಿತ್ರಕೂಟದಲ್ಲಿ ಭರತನಿಗೆ ಆತ ಅರುಹಿದ. 'ರಾಜ್ಯಶುಲ್ಕ'ದ ವೃತ್ತಾಂತ ಈ ಹಿಂದೆಯೇ ಅವನಿಗೆ ಗೊತ್ತಿತ್ತು ಎಂದೇ ಭಾವಿಸಬೇಕಾಗುತ್ತದೆ).

ಆದರೆ ಈ ವಿಷಯ ತಿಳಿದಿದ್ದೂ ರಾಮನು ಮುಂದೆ ನಡೆದುಕೊಂಡ ರೀತಿಯಲ್ಲಿ ತಪ್ಪಿಬಿಟ್ಟಂತೆ ಕಾಣುತ್ತದೆ. ಅದು ಹೇಗೆ ನೋಡೋಣ. ರಾಜ್ಯವು ಭರತನಿಗೆ ಸಲ್ಲವೇಕಾದದ್ದು. ದಶರಥ ಭರತನ ಅಜ್ಜನಿಗೆ ಕೊಟ್ಟ ಭರವಸೆ 'ರಾಜ್ಯಶುಲ್ಕ'. ಅದು ದಶರಥನು ಕೈಕೇಯಿಗೆ ಕೊಟ್ಟ ಮಾತಲ್ಲ. ಹಾಗಿದ್ದರೆ ಚಿತ್ರಕೂಟಕ್ಕೆ ಆಕೆಯೂ ಬಂದಿದ್ದಳು. ಭರತನಂತೆ ಆಕೆಯೂ ಬೇಡಿಕೊಂಡಿದ್ದಳು. ಅದು ಅವಳಿಗೆ ಕೊಟ್ಟ ವಚನವಿದ್ದರೆ, ಅವಳು ಅದರ ಪಾಲನೆಯ ಭಾದ್ಯಸ್ಥಿಕೆಯಿಂದ ರಾಮನನ್ನು ಬಿಡುಗಡೆ ಮಾಡಬಹುದು. ಆದರೆ ಇದು ಭರತನ ತಂದೆ ಭರತನ ಅಜ್ಜನಿಗೆ ಕೊಟ್ಟ ವಚನ. ಅವರಿಬ್ಬರೂ ಇಲ್ಲ ಅಂದಾಗ ಅದು ಅದರೊಂದಿಗೆ sealed ಆದಂತೆ!

ಆ ಬಗೆಗೆ ರಾಮನಮಟ್ಟಿಗೆ ಪುನರ್ವಿಮರ್ಶೆ ಎಷ್ಟೇ ಇಷ್ಟವಿದ್ದರೂ ಸಾಧ್ಯವಿಲ್ಲ. ರಾಮನು ಹಿರಿಯ ಮಗ. ಪಟ್ಟಕ್ಕೆ ಸರ್ವಥಾ ಅರ್ಹ. ಸರ್ವ ಗುಣಸಂಪನ್ನ ತಂದೆಗೂ ಪರಮಪ್ರಿಯ. ತಂದೆಯ ಶಪಥ ವಿತಥಗಳೊಸಿದರೆ ಅದು ತಂದೆಗೂ ಇಷ್ಟವಿತ್ತು. ಮಗನ ಮೋಹಕ್ಕಾಗಿ! ಅಲ್ಲದೆ ಪ್ರಕೃತಿ ಪರಿಷತ್ತು ರಾಮನೇ ಯೋಗ್ಯ ಉತ್ತರಾಧಿಕಾರಿ ಎಂದು ನಿರ್ಣಯವನ್ನೂ ನೀಡಿದ್ದರು. ಭರತನ ಬದಲು ಹಿರಿಯ ಮಗ ರಾಮಚಂದ್ರನನ್ನೇ ಪಟ್ಟಕ್ಕೆ ಏರಿಸಲು ದಶರಥ ಹಾಗೆಲ್ಲ ವಿಧಿವಿಧಾನಗಳ ಭದ್ರತೆಯನ್ನೂ ಮಾಡಿಕೊಂಡದ್ದ; ಇದು ತನ್ನದಲ್ಲ ಜನಮುಖ್ಯರದ್ದೇ ಪ್ರಜಾ–ಪ್ರಕೃತಿಯದೇ ಆಯ್ಕೆಯೆಂದು ಸಾಬೀತುಗೊಳಿಸಲಿಕ್ಕೆ ಆದರೂ ಏನಾದರೂ ಒಳಸಂಚು ಆಗುವ ಭಯ. ಆದ್ದರಿಂದ ಕೂಡಲೆ ಪುಷ್ಯ ನಕ್ಷತ್ರಕ್ಕೇ ಅಭಿಷೇಕ ವಿಧಿಯನ್ನು ಮುಗಿಸಿಕೊಳ್ಳಬೇಕು. ಆ ಬಗ್ಗೆ ರಾಮ ಸೀತೆಯರು ಲಕ್ಷ್ಮಣನ ಕಾವಲಿನಲ್ಲಿ ಏಕಾಂತದಲ್ಲಿ ಇರಬೇಕು. ಶಿಲೆಯ ಮೇಲೆ ದರ್ಭಾಸನ ಹಾಸಿ ಅಲ್ಲಿ ರಾತ್ರಿ ಕಳೆಯಬೇಕು, ವ್ರತಸ್ಥರಾಗಿ! (ಕೊನೆಗೂ ವನವಾಸದ ರೂಪದಲ್ಲಿ ಆ ವೃತ್ತವೇ ಅವರ ಪಾಲಿಗೆ ಬರಬೇಕೇ?) ಇದೆಲ್ಲ ಭರತ

ರಾಜಧಾನಿಯಲ್ಲಿ ಇಲ್ಲದಿರುವಾಗಲೇ ಸಾಂಗವಾಗಬೇಕು – ಎಂದೆಲ್ಲ ಆ ಧೂರ್ತ ಮುದುಕ ಮೋಹಾಂಧ ತಂದೆಯ ಹೊಂಚು.

ಮತ್ತು ಆ ಹೊಂಚಿಗೆ ಶ್ರೀರಾಮನ ಮೂಕ ಸಮ್ಮತಿ! ತನ್ನ ಪಟ್ಟಾಭಿಷೇಕಕ್ಕೆ ಪ್ರೀತಿಯ ಸೋದರ ಭರತನೂ ಇರಲಿ. ಅವನನ್ನು ಕರೆಯಿಸಿಕೊಳ್ಳೋಣ ಎಂದು ಆತ ತಂದೆಗೆ ಸೂಚಿಸುವುದಿಲ್ಲ. ಲಕ್ಷ್ಮಣನನ್ನು ಮಾತ್ರ ನಂಬಿಗೆಯಲ್ಲಿ ತೆಗೆದುಕೊಳ್ಳುತ್ತಾನೆ. ತಾಯಿಗೂ ತಿಳಿಸುತ್ತಾನೆ. ಮೂವರೂ ಹಿಗ್ಗುತ್ತಾರೆ. ಇರಲಿ.

ತಾತ್ಪರ್ಯವೇನೆಂದರೆ ಈ 'ಮರ್ಯಾದಾ ಪುರುಷೋತ್ತಮ'ನು ಮರ್ಯಾದೆಯಂತೆ ನಡೆದುಕೊಳ್ಳಲಿಲ್ಲ. ಭರತನು ಸಕಲಪುರಜನ ಪರಿವಾರ ಸಮೇತನಾಗಿ ಬಂದು ಕಾಲಿಗೆ ಬಿದ್ದು ಅಂಗಲಾಚಿ ಬೇಡಿಕೊಂಡಿದ್ದೊಂದು ಭರತನ ಭಾತೃಪ್ರೇಮದ ನಿಷ್ಠೆಗೆ ಹಾಗೂ ನ್ಯಾಯಪ್ರಜ್ಞೆಗೆ ಸಾಕ್ಷಿ. ಅಷ್ಟು ಮಾತ್ರಕ್ಕೆ ರಾಮನ ವನವಾಸಿ ಮುಗಿಸಿ ತಿರುಗಿ ಪಟ್ಟವೇರಲು ಅಯೋಧ್ಯೆಗೆ ಹೋಗುವುದಾಗಲಿ, ಆ ತನಕ ತನ್ನ ಪಾದುಕೆಗಳನ್ನು ಗದ್ದುಗೆಯಲ್ಲಿ ಇರಿಸಿ (ತನ್ನ ಪ್ರಭುತ್ವವನ್ನು ಸಾಂಕೇತಿಕವಾಗಿ ಸ್ಥಾಪಿಸಿ!) ತನ್ನ ಪರವಾಗಿ, ಪರವಾನಗಿಯಿಂದ ರಾಜ್ಯವಾಳಲು ಭರತನಿಗೆ ನೇಮಿಸುವುದಾಗಲಿ ಹೇಗೂ ಸಮರ್ಥನೀಯವಲ್ಲ. (ಮಹಾಭಾರತದಲ್ಲಿ ಪಟ್ಟದ ಬಿಕ್ಕಟ್ಟು ಬಂದಾಗ ಭೀಷ್ಮ ಮಲತಾಯಿಯ ಮಾತಿಗೆ ಕರಗಿ ಈ ರೀತಿ ನಡೆದುಕೊಳ್ಳಲಿಲ್ಲ. ಆದರೆ ಭೀಷ್ಮನೇನೂ ರಾಮನಿಗೆ ಒಂದು ಮಾದರಿ ಆಗಬೇಕಿಲ್ಲ. ಈ ಮಾತು ಬೇರೆ).

14 ವರ್ಷದ ವನವಾಸ ಒಂದು ಪುರಾಣಕಾಲದ ವಿಶಿಷ್ಟ ಏರ್ಪಾಟು. ರಾಜ್ಯ ಹಸ್ತಾಂತರವಾದಾಗ ಹೊಸ ಆಳ್ವಿಕೆ ಭದ್ರವಾಗಲೆಂದು ಪದಚ್ಯುತ ಆಳರಸರನ್ನು ರಾಜ್ಯದಿಂದ ಹೊರಗೆ ಅವರ ಬೆಂಬಲಿಗ ಗುಂಪುಗಳಿಂದ ದೂರ, ಕಾಡಿಗೆ ಅಟ್ಟುವುದು ಅಂದಿನ ವಾಡಿಕೆ. ಪಾಂಡವರೂ, ನಳರಾಜನೂ ವನಕ್ಕೆ ತೆರಳಿದ್ದರು. ಹಳೆಯ ದೊರೆ ರಾಜ್ಯದಲ್ಲಿಯೇ ಉಳಿದರೆ ಅವನ ಪರವಾಗಿ ದೊಂಬಿ ಏಳುವ ಭಯವಿರುತ್ತದೆ. ಅದಕ್ಕೆ ಇದೊಂದು ಪ್ರತಿಬಂಧ. ಮಂಥರೆ ಕೈಕೇಯಿಗೆ ಇದನ್ನು ಒತ್ತಿ ಹೇಳುತ್ತಾಳೆ– "ನಿನ್ನ ಮಗನ ರಾಜ್ಯ ಸ್ಥಿರವಾಗುವುದು. ಅದಕ್ಕಾಗಿ 2ನೆಯ ವರದಿಂದ ರಾಮನಿಗೆ ವನವಾಸವನ್ನು ಬೇಡು."

ಆದರೆ ಇದೊಂದು ಶರ್ತು ಪಾಲಿಸಿದ ಮೇಲೆ 14 ವರ್ಷದ ವನವಾಸ ಮುಗಿಯಿತೆಂದು ರಾಮನಿಗೆ ಮರಳಿ ಪಟ್ಟಕ್ಕೆ ಬರುವ ಅಧಿಕಾರ ಸಲ್ಲುವುದಿಲ್ಲ. ಅದೇನು ಅವಧಿಬಾಧಕ ಹಕ್ಕು ಭರತನಿಗೆ ಬಂದದ್ದಲ್ಲ–ಪಟ್ಟವನ್ನು ಬಿಟ್ಟು ಕೊಡಲಿಕ್ಕೆ.

ಅಯೋಧ್ಯೆಗೆ ಹಿಂದಿರುಗಿ ಬಂದರೂ ರಾಮನು ಪಿತೃವಾಕ್ಯ ಪರಿಪಾಲನೆ ಪೂರ್ತಿಗೊಳಿಸಲಿಕ್ಕೆ ಓರ್ವ ಗಣ್ಯ ಪ್ರಜೆಯಾಗಿಯೋ, ರಾಜಕುಲದಲ್ಲಿಯೇ ಹಿರಿಯ ರಾಜಪುರುಷನಾಗಿಯೋ (ಮತ್ತೆ ಭೀಷ್ಮನಂತೆ) ಉಳಿಯಬೇಕಿತ್ತು.

ಆದರೆ ಈ ಮಹಾಕಾವ್ಯದಲ್ಲಿ ನಡೆದದ್ದೇ ಬೇರೆ. ಭರತನ ಮಾತಿಗೆ ಕೊನೆಯಲ್ಲಿ ಒಪ್ಪಿರಾಮನು ತಿರುಗಿ ರಾಜ್ಯವನ್ನು ತನ್ನದಾಗಿ ಸ್ವೀಕರಿಸುತ್ತಾನೆ. ಆ ಮೊದಲು ತನ್ನದಾಗಿಯೇ ಉಳಿಯುವಂತೆ ತನ್ನ ಪಾದುಕೆಗಳನ್ನೂ ಕಳುಹಿಸುತ್ತಾನೆ. ಪಾದುಕೆಗಳನ್ನು ಭರತನೇ ಬೇಡಿ ತಂದಿರಬಹುದು. ರಾಮನ ಜನಪ್ರಿಯತೆ ಪ್ರಜಾಪ್ರಕೃತಿ–ಪರಿಷತ್ತುಗಳಲ್ಲಿ ಅವನ ಬಗೆಗಿದ್ದ ಅಪಾರ ಒಲವು ಮನಗಂಡು ಭರತ ತಾನೇ ತಾನಾಗಿ ರಾಜ್ಯವಾಳಲು ಧೈರ್ಯಪಡದಿರುವುದು ಸಹಜ. ರಾಮನ ಪರವಾಗಿ care taker ಸರಕಾರವಾಗಿ ಆತ ಆಳಬೇಕು – ಎಂದು ಭರತನ ಯೋಚನೆ. ಅದಕ್ಕಾಗಿ ಆತ ಬರುವಾಗ ಸ್ವರ್ಣ ಪಾದುಕೆಗಳನ್ನು ಜತೆಗೆ ತಂದಿದ್ದ! ಅವುಗಳ ಮೇಲೆ ರಾಮನನ್ನು ನಿಲ್ಲಿಸಿ ಅವನ್ನು ಅವನದಾಗಿಸಿ ಆತ ಅಯೋಧ್ಯೆಗೆ ತಿರುಗಿ ಒಯ್ದನು.

ಪಶ್ಚಾತ್ತಾಪದಗ್ದೆ ಕೈಕೇಯಿಯದು. ಹಾಗೂ ಪ್ರೀತಿಮುಗ್ಧ ಭರತನ ನಿಲುಮೆ, ನಿವೇದನೆ ಏನೇ ಇರಲಿ. ಹೇಗೇ ಇರಲಿ. ತಂದೆಯಿಂದ ಭರತನದೆಂದು ಅವನ ಅಜ್ಜನಿಗೆ 'ಸಮಾಶ್ರಾವಿತ'ವಾದ ಅಯೋಧ್ಯೆಯ ರಾಜ್ಯದ ಪಟ್ಟಕ್ಕೇರಲಿಕ್ಕೆ ಮರಳಿ ಹೋಗಲು ಶ್ರೀರಾಮನಿಗೆ ಯಾವುದೇ ನೈತಿಕ ಅಧಿಕಾರವೂ ಸಲ್ಲುವುದಿಲ್ಲ. ತಂದೆಯೇ ಅವನನ್ನು ಆ ಶಪಥದ ಬಂಧನದಿಂದ ಮುಕ್ತಮಾಡಬಲ್ಲ. ಅದು ಸಾಧ್ಯವೇ ಇದ್ದಿಲ್ಲ. ಆತ ದುರ್ಬಲ ಮನಸ್ಸಿನ ಮುದುಕ. ನಿರುಪಾಯವಾಗಿ ಮಾತುಕೊಟ್ಟ. ಆದರೆ ಮುಂದೆ ಉಪಾಯಗಾರಿಕೆಯಿಂದ ಅದರಿಂದ ನುಣುಚಿ ಕೊಳ್ಳಲು ಹವಣಿಸಿದ. ಅದಕ್ಕೆ ರಾಮನೂ ಅನುಕೂಲವಾದ ಇಬ್ಬರಿಗೂ ಪ್ರಜೆಯ ಪ್ರೀತಿಯ ಬೆಂಬಲ! ಆದರೆ ಮಂಥರೆ ಅಡ್ಡ ಬಂದು ಕೈಕೇಯಿಗೆ ಸಲ್ಲಬೇಕಿದ್ದ ಎರಡು ವರಗಳನ್ನು ಕೂಟನೀತಿಯಿಂದ ಉಪಯೋಗಿಸಿಕೊಂಡಳು. ತಂದೆಯ ಶಪಥ ರಾಮನು ಪಾಲಿಸುವಂತೆ ಆಯಿತು. ಅಂದಾಗ ಅಲ್ಲಲ್ಲಿ ಕೈಕೇಯಿ, ಭರತ ಇಬ್ಬರೂ ಒಂದು ನಿಮಿತ್ತ. ತಂದೆಯ ಸತ್ಯಪಾಲನೆಗಾಗಿ ರಾಮನು ಬದ್ಧ. ಅದು ಆತ ವನವಾಸ ಮುಗಿಸಿ ಬಂದು ಅಯೋಧ್ಯೆಯ ಅರಸನಾದರೂ 2ನೆಯ ವರಪೂರ್ತಿಯಾದಂತೆ. ಆದರೆ 1ನೇ ವರ ಭಂಗಗೊಳಿಸಿದಂತೆ!

ವಾಲ್ಮೀಕಿ ಇಲ್ಲಿ ಹೀಗೆ ಏಕೆ ತೂಕಡಿಸಿದನೋ– ಶ್ರೀರಾಮ ತಪ್ಪಿ ಬೀಳುವಂತೆ!

# ಘಟಕ – 4
# ಆಶಯ – ಸಂಕೀರ್ಣ

ಭೂವಿಷಯದಲ್ಲಿ ಪುದಿದ ರಸವಾಸನೆಗಳೆಲ್ಲ ।
ಆವಿಯಾಗೇಳ್ದು ಮುಗಿಲಾಗಿ ಮಳೆಗರೆದು ॥
ಬಾವಿಗೂಟೆಯನಿತ್ತು ನರರೊಡಲ ಸೇರುವುದು ।
ದೈವ ರಸತಂತ್ರವಿದು – ಮಂಕುತಿಮ್ಮ ॥

–ಡಿ.ವಿ.ಜಿ.

## ಸವಾಲನ್ನು ಎದುರಿಸುವ ಛಲ

–ಜಿ.ಟಿ. ನಾರಾಯಣ ರಾವ್

ಅನೇಕ ಮಂದಿ ವಿದ್ಯಾರ್ಥಿಗಳು. ಪದವೀಧರರು ಮತ್ತು ಅವರ ತಂದೆತಾಯಂದಿರು ನನ್ನಲ್ಲಿ ಬರುವುದು ವಾಡಿಕೆ ಆಗಿಹೋಗಿದೆ. ಇದು ನನ್ನ ಉದ್ಯೋಗದ ಸಂಬಂಧವಾಗಿ ಅಥವಾ ಅವರ ಹಾಗೂ ನನ್ನ ಮೈತ್ರಿಯ ಫಲವಾಗಿ ಖಂಡಿತ ಅಲ್ಲ. ನಾನೇನೋ ಭಾರೀ ಪ್ರಭಾವ ಮತ್ತು ವರ್ಚಸ್ಸು ಇರುವ ವ್ಯಕ್ತಿ. ಹಿರಿಕುಳಗಳೊಡನೆ ನಿಕಟಸಂಪರ್ಕ ಇರುವ 'ಜನ.' ನನ್ನ ಮಾತಿನ ಯಾ ಪತ್ರದ ಹೆರೆಯೆಣ್ಣೆಯಿಂದ ಆಡಳಿತ ಯಂತ್ರದ ಗಾಲಿ ಉರುಳಿ ತಮ್ಮ ಕೆಲಸ ಸಲೀಸು ಆಗುತ್ತದೆ ಎಂಬ ಪ್ರಾಮಾಣಿಕ ನಂಬಿಕೆಯಿಂದ ಅವರು ನನ್ನಲ್ಲಿಗೆ ಬರುತ್ತಾರೆ. ಇಂಥ 'ಬಿಟ್ಟಿ ಕೆಲಸ' ಅಥವಾ 'ಬಿಟ್ಟಿ ಭೇಟಿ'ಗಳ ಪೈಕಿ ಇಲ್ಲಿ ನಾನು ನಿರುದ್ಯೋಗಿ ಪದವೀಧರರ ಸಮಸ್ಯೆಯನ್ನು ಮಾತ್ರ ಆಯ್ದು ಚರ್ಚಿಸುತ್ತೇನೆ.

ನನ್ನಲ್ಲಿಗೆ ಬರುವಂಥ ನಿರುದ್ಯೋಗಿ ಪದವೀಧರರ ಪೈಕಿ ಹೆಚ್ಚಿನವರು ನನ್ನ ಮಿತ್ರರ ಒಂದು ಪರಿಚಯಪತ್ರ ತರುವುದು ವಾಡಿಕೆ. ಈ 'ವಿಭೀಷಣ ಪತ್ರ'ದಿಂದ ಅವರಿಗೆ ಅದೆಷ್ಟರ ಮಟ್ಟಿನ 'ಧೈರ್ಯ' ಪ್ರಾಪ್ತವಾಗಿರುವುದೆಂದರೆ ಅವರು ಖುದ್ದು ಯಾರಿಂದ ನೆರವನ್ನು ನಿರೀಕ್ಷಿಸುವರೋ ಆ ನನಗೇ ಪ್ರಾಥಮಿಕ ಮರ್ಯಾದೆಯನ್ನು ಸಲ್ಲಿಸಲು ಕೂಡ ಮರೆತುಬಿಡುತ್ತಾರೆ ಅವರು ಬಾಣದಂತೆ

ನೇರ ನನ್ನ ಕೊಠಡಿಗೆ ನುಗ್ಗಿ ಅರೆ ಹಲ್ಕಿರಿದು ಲಕ್ಕೋಟೆಯನ್ನು ನನಗೆ ಒಪ್ಪಿಸುವವರು. ಇಂಥ ಓರ್ವ ಅಭ್ಯರ್ಥಿಗೆ ಆ ಕ್ಷಣವೇ 'ಪೀಚೇ ಮೂಡ್, ದೌಡ್ಕೇ ಚಲ್' ಎಂಬ ಹುಕುಮನ್ನು 'ಅನುಗ್ರಹಿಸಬೇಕು' ಎಂಬುದು ನನ್ನ ಪ್ರಥಮ (ಅಂತರಂಗಿಕ) ಪ್ರತಿಕ್ರಿಯೆಯಾದರೂ ಅವನು ತಿಳಿದು ಮಾಡಿದ ತಪ್ಪು ಇದಲ್ಲ. ಅವನಿಗೆ ತಿಳಿಯದೆ ಘಟಿಸಿದ ಅಪಚಾರ ಎಂಬುದಾಗಿ ಅನುಭವದಿಂದ ಅರಿತಿರುವುದರಿಂದ ಅವನನ್ನು ಕೂರ ಹೇಳಿ ನೇರ ಕೂರಂಬುಗಳನ್ನು ತೂರುತ್ತೇನೆ:

"ಅಪ್ಪಾ! ನೀನಾಗಿ ನಿನ್ನ ಕೆಲಸಕ್ಕೋಸ್ಕರ ಇಲ್ಲಿವರೆಗೆ ಬಂದಿರುವೆ, ನಾನು ಕರೆದು ಅಲ್ಲ, ಹೌದಷ್ಟೆ?"

ಹೌದು ಸರ್."

"ಇಂಥ ಸನ್ನಿವೇಶಗಳಲ್ಲಿ ಅದು ವಯಸ್ಸಿನಲ್ಲಿ ನಿನಗಿಂತ ಹಿರಿಯರನ್ನು ನೋಡುವ ಸಂದರ್ಭದಲ್ಲಿ ಪಾಲಿಸಬೇಕಾದ ನಡತೆಯ ಕೆಲವು ನಿಯಮಗಳು ಇವೆಯೆಂದು ನಿನಗೆ ತಿಳಿಸಿದೆಯೇ?"

ಅವನು ಹೆಬಗನಂತೆ ಬಾಯಿ ಕಳೆಯುತ್ತಾನೆ. ನಾನೇ ವಿವರಿಸಿ ಹೇಳುತ್ತೇನೆ: "ಅನುಮತಿ ಪಡೆದು ಕೊಠಡಿಯೊಳಗೆ ಬರಬೇಕು. ವಿನಯಪೂರ್ವಕವಾಗಿ ನಮಸ್ಕಾರವಿತ್ತು ಸುಮ್ಮನೆ ನಿಂತಿರಬೇಕು. ಮಾತಾಡಿಸಿದ ವಿನಾ ಮಾತಾಡಬಾರದು. ಮಾತಾಡಿಸಿದಾಗ ಹೇಳಬೇಕಾದ್ದನ್ನು ಸ್ಪಷ್ಟವಾಗಿಯೂ ನೇರವಾಗಿಯೂ ಪೂರ್ಣವಾಗಿಯೂ ನುಡಿಯಬೇಕು. ಕಡಿಮೆ ನುಡಿಗಳಲ್ಲಿ ಹೇಳಬಹುದಾದಲ್ಲಿ ಜಾಸ್ತಿ ಮಾತನ್ನು ಪೋಲು ಮಾಡಬಾರದು. ಕೆಲಸ ಮುಗಿದೊಡನೆ ಕೃತಜ್ಞತೆ ಮತ್ತು ವಂದನೆ ಸಲ್ಲಿಸಿ ಹಿಂತಿರುಗಬೇಕು. ಮುಂದೆ ಈ ಕೆಲಸದ ಫಲಿತಾಂಶ ತಿಳಿದಾಗ ನನಗೊಂದು ಕಾಗದ ಹಾಕಬೇಕು."

ಅಧಿಕಾರ ಕುಲಮದ, ದರ್ಪ, ದುರಭಿಮಾನ ಇವೇ ಮುಂತಾದ ಬೃಹತ್ ಕ್ರೇನ್ ಯಂತ್ರಗಳು ಜಗ್ಗಿಸಲಾರದ ಯಮಭಾರವನ್ನು ನಚಿಕೇತ ವಿನಯ ಬಲು ಸುಲಭವಾಗಿಯೂ ಲಘುವಾಗಿಯೂ ಅಲುಗಿಸಬಲ್ಲುದು. ನಚಿಕೇತ ಪ್ರಯತ್ನ ಮತ್ತು ಸಿದ್ಧಿಯ ತಳದ ಪ್ರಧಾನ ಶ್ರುತಿ ವಿನಯ. ಇಂಥ ವಿನಯ ಒಬ್ಬನ ವ್ಯಕ್ತಿತ್ವದ ಸಹಜ ಅಂಶವಾಗಿರಬೇಕು. ಆತನ ಸಮಗ್ರ ಜೀವನದ ಅವಿಭಾಜ್ಯ ಅಂಗವಾಗಿರಬೇಕು.

ವಾಹನಗಳ ಪೊಲೀಸ್ ಇನ್ಸ್‌ಪೆಕ್ಟರ್ ಕುಟ್ಟಪ್ಪ ಎಂದರೆ ಅಶಿಸ್ತುವಂತ

ಚಾಲಕರಿಗೆ ಸಿಂಹ ಸ್ವಪ್ನ. ರಾಜ ಮಹಾರಾಜರೇ ಆಗಲಿ ಮಂತ್ರಿ ಮಹೋದಯರೇ ಆಗಲಿ ಕುಟ್ಟಪ್ಪ ಸದಾ ಕರ್ತವ್ಯನಿಷ್ಠ. ಯಾವ ವಿಧವಾದ ಆಸೆ ಆಮಿಷಗಳಿಗೂ ಬಗ್ಗುವ ಕುಳ ಇವರಲ್ಲ. ಅದೇ ವೇಳೆ ನಿಯಮಬದ್ಧ ಚಾಲಕರಿಗೆ ಸ್ವತಃ ಮಾರ್ಗದರ್ಶಿಯಾಗಿ ಉಪಕಾರವೆಸಗುವ ಹಿರಿಯ ಮಾನವ ಕುಟ್ಟಪ್ಪ. ದಸರಾದಿನಗಳ ಒಂದು ಸಂಜೆ ಮೈಸೂರಿನಿಂದ ಮಡಿಕೇರಿಗೆ ಖಾಸಗಿ ವಿಶೇಷ ಬಸ್ಸೊಂದು ಹೊರಟಿತು. ಅದರಲ್ಲಿ ಇದ್ದವರು 49 ಮಂದಿ ಎನ್‌ಸಿಸಿ ಕ್ಯಾಡೆಟುಗಳು ಮತ್ತು ಅವರ ಅಧಿಕಾರಿ. ಇವರೆಲ್ಲರೂ ಸಮವಸ್ತ್ರದಾರಿಗಳು ಬೆಂಗಳೂರಿನಲ್ಲಿ ನಡೆದ ಒಂದು ಶಿಬಿರದಲ್ಲಿ ಇವರು ಭಾಗವಹಿಸಿ ಊರಿಗೆ ಮರಳುತ್ತಿದ್ದರು. ಇವರನ್ನು ಸ್ವಾಗತಿಸಲೋಸ್ಕರ ಮಡಿಕೇರಿಯಿಂದ ಇದೇ ವಿಶೇಷ ಬಸ್ಸಿನಲ್ಲಿ ಆಗಮಿಸಿದ್ದ ಎನ್‌ಸಿಸಿ ಮುಖ್ಯಸ್ಥರೂ ಆ ಬಸ್ಸಿನಲ್ಲಿ ಇದ್ದರು. ಅವರು ಮಾತ್ರ ಸಮವಸ್ತ್ರದಾರಿಗಳಾಗಿರಲಿಲ್ಲ; ಸಾದಾ ಉಡುಪು ತೊಟ್ಟಿದ್ದರು. ಹೀಗೆ ಬಸ್ಸಿನ ಒಟ್ಟು ಪ್ರಯಾಣಿಕರ ಸಂಖ್ಯೆ 51ಕ್ಕೆ ಏರಿತ್ತು. ಆದರೆ ಅದಕ್ಕೆ ಪರವಾನಿಗೆ ದೊರೆತಿದ್ದುದು 50 ಮಂದಿಗೆ ಮಾತ್ರ.

ಬಸ್ಸು ಮೈಸೂರು ರೈಲ್ವೇ ನಿಲ್ದಾಣ ಬಿಡುವ ಮುನ್ನ ಚಾಲಕ ಹೇಳಿದ: "ಸ್ವಾಮೀ! ಒಬ್ಬ ಪ್ರಯಾಣಿಕ ಹೆಚ್ಚಾಗಿದ್ದಾರೆ. ಹಾದಿಯಲ್ಲಿ ಕುಟ್ಟಪ್ಪ ಕಾದಿದ್ದಾರೆ."

"ನಾವಿದ್ದೇವಲ್ಲ. ಪರವಾ ಇಲ್ಲ". ಎಂದು ಸಮವಸ್ತ್ರದಾರಿ ಅಧಿಕಾರಿ ಧೈರ್ಯ ನೀಡಿದರು.

ಮೈಸೂರಿನ ಗಡಿ ದಾಟುವ ಮೊಲದೇ ಕುಟ್ಟಪ್ಪದೂತರು ಆಂತಕನದೂತ ರಂತೆ ಪ್ರತ್ಯಕ್ಷರಾದರು. ಬಸ್ಸು ನಿಂತಿತು. ಎಲ್ಲವೂ ನಿಶ್ಯಬ್ದ. ಯಾಂತ್ರಿಕ. ಅತಿಕ್ಷಿಪ್ರ. ಕುಟ್ಟಪ್ಪ ಕಾಗದ ಪತ್ರ ತಪಾಸಣೆ ಮಾಡಿದರು. ಚಾಲಕನ ವಿರುದ್ಧ ಫಿರ್ಯಾದಿ ಹೂಡಲು ಆತನ ಲೈಸೆನ್ಸ್ ಪುಸ್ತಕವನ್ನು ಕೇಳಿದರು. ಆತಂಕನ ದೂತರಿಗೆ ಕಿಂಚಿತ್ತು ದಯವಿಲ್ಲ! ಚಾಲಕ ಎನ್‌ಸಿಸಿ ಅಧಿಕಾರಿಯತ್ತ ನೋಡಿದ. ಕ್ಯಾಪ್ಟನ್ ದರ್ಜೆಯ ಸಮವಸ್ತ್ರಧಾರಿ ಅಧಿಕಾರಿ ಬಸ್ಸಿನಿಂದ ಇಳಿದರು. ಜಬರದಸ್ತಿನಿಂದ ಕುಟ್ಟಪ್ಪನವರೆಡೆಗೆ ನಡೆದರು. ಇನ್ಸ್‌ಪೆಕ್ಟರ್ ಕುಟ್ಟಪ್ಪ ಕ್ಯಾಪ್ಟನ್ ದರ್ಜೆಗೆ ಗೌರವ ಸೂಚಿಸಲು ಪೊಲೀಸ್ ಸಲಾಮು ನೀಡಿದರು.

ಅಧಿಕಾರಿ ಬಲು ಗತ್ತಿನಿಂದಲೇ ಮಾತು ತೊಡಗಿದರು: "ಕುಟ್ಟಪ್ಪನವರೇ! ನೀವು ಹೀಗೆಲ್ಲ ಮಾಡಬಾರದು. ಇದು ತಪ್ಪು. ಈ ಬಸ್ಸು ಎನ್‌ಸಿಸಿ ಕ್ಯಾಡೆಟುಗಳನ್ನು ಕೊಂಡೊಯ್ಯುತ್ತಿದೆ."

"ಮನ್ನಿಸಬೇಕು ಸರ್! ವ್ಯಾಜ್ಯವಿರುವುದು ಸರಕಾರಕ್ಕೂ ಈ ಬಸ್ಸಿನ ಚಾಲಕನಿಗೂ ನಡುವೆ. ನೀವು ತಿಳಿದವರು ಇಲ್ಲಿ ಬರಬಾರದು."

"ಹಾಗೆಂದರೇನು ಅರ್ಥ? ನಾನು ಕೇಂದ್ರ ಸರಕಾರದ ಗೆಝೆಟೆಡ್ ಆಫೀಸರ್..."

"ಕ್ಷಮಿಸಬೇಕು ಸರ್! ನನಗೆ ಪುರುಸೊತ್ತಿಲ್ಲ."

ಪರಿಸ್ಥಿತಿ ಹೀಗೆ ಬಿಗಡಾಯಿಸಿದಾಗ ಬಸ್ಸಿಗೆ ಒಳಗೆ ಆ ತನಕ ಮಾತಾಡದೇ ಕುಳಿತುಕೊಂಡಿದ್ದ. ಮುಖ್ಯಸ್ಥರು ಹೊರಬಂದರು. "ನಮಸ್ಕಾರ ಕುಟ್ಟಪ್ಪನವರೇ! ಕಾನೂನನ್ನು ಉಲ್ಲಂಘನೆ ಮಾಡಿದಂಥ ಅಧಿಕ ಪ್ರಯಾಣಿಕ ನಾನು. ನಾನಿಲ್ಲಿ ಅಪರಾಧಿ. ಆದ್ದರಿಂದ ನೀವು ಫಿರ್ಯಾದಿಯನ್ನು ದಯವಿಟ್ಟು ನನ್ನ ವಿರುದ್ಧ ದಾಖಲು ಮಾಡಬೇಕು" ಎಂದು ಹೇಳಿ ತಮ್ಮ ಮಿಲಿಟರಿ ಗುರುತುಪತ್ರವನ್ನು (ಅವರು ಮೇಜರ್ ದರ್ಜೆಯವರು) ಕುಟ್ಟಪ್ಪನವರಿಗೆ ತೋರಿಸಿದರು: "ನೀವು ಹೇಳಿದಲ್ಲಿಗೆ ಹೇಳಿದ ದಿನ ಬಂದು ನ್ಯಾಯಾಲಯ ವಿಧಿಸುವ ಶಿಕ್ಷೆಯನ್ನು ಒಪ್ಪಿಕೊಳ್ಳುತ್ತೇನೆ. ಈ ನಿರಪರಾಧಿ ಚಾಲಕನ ಮೇಲೆ ಮಾತ್ರ ಕೈಫಿಯತ್ತು ಹೂಡಬೇಡಿ."

ಇನ್ಸ್‌ಪೆಕ್ಟರ್ ಕುಟ್ಟಪ್ಪ ಮೇಜರ್ ಸಾಹೇಬರಿಗೆ ಸಲಾಮು ನೀಡಿ. "ಕುಟ್ಟಪ್ಪ ಕೂಡ ಮನುಷ್ಯ ಸರ್! ನೀವು ಮುಂದುವರಿಸಿ ನಿಮ್ಮ ಪ್ರಯಾಣ ಸುಖಪ್ರದವಾಗಲಿ" ಎಂದರು ನಗುಮೊಗದಿಂದ ದರ್ಪ ಅಲುಗಿಸಲಾರದ್ದನ್ನು ವಿನಯ ಬಾಗಿಸಿತ್ತು. ಆಂತಕನ ದೂತರಿಗೆ ಸಮೃದ್ಧ ದಯವುಂಟ!

ವಿನಯ ಅಂದರೇನು?

ನಮ್ಮ ವ್ಯಕ್ತಿತ್ವ ಬಾಹ್ಯ ಪ್ರಪಂಚಕ್ಕೆ ಪ್ರಕಟವಾಗುವ ರೀತಿ ವಿನಯ. ನಮ್ಮ ಅಂತರಂಗಿಕ ಸಂಸ್ಕೃತಿಯ ಬಾಹಿರಂಗಿಕ ರೂಪ ವಿನಯ. ನಾವು ಇತರರಿಗೆ ವ್ಯಕ್ತಪಡಿಸುವ ಗೌರವ ವಿನಯ. ಇತರರಿಂದ ನಾವು ನಿರೀಕ್ಷಿಸುವ ವರ್ತನೆ ಇತರರನ್ನು ಕುರಿತು ನಮ್ಮ ವರ್ತನೆ ಆದಾಗ ಅದು ವಿನಯವೆನ್ನಿಸುವುದು. ವ್ಯಕ್ತಿ–ವ್ಯಕ್ತಿ. ವ್ಯಕ್ತಿ–ಸಮಾಜ, ಸಮಾಜ–ವ್ಯಕ್ತಿ. ಸಮಾಜ–ಸಮಾಜ ನಡುವಿನ ಸಮಸ್ತ ನಡವಳಿಕೆಗಳಲ್ಲಿಯೂ ವಿನಯ ಸಹಜವಾಗಿ ಪ್ರಕಟವಾದಾಗ ಹಿಮಾಲಯ ಸದೃಶ ಸಮಸ್ಯೆಗಳೂ ಸಹೃದಯ ವಾತಾವರಣದಲ್ಲಿ ಮೇಲ್ಮೈಗೆ ಬಂದು ಹೂವಿನ ರೇಕುಗಳಂತೆ ಹಗುರವಾಗಿ ಪರಿಹಾರಗೊಳ್ಳುತ್ತವೆ. ಹಾಗಲ್ಲದೆ ಇಂಥ ನಡವಳಿಕೆಗಳಲ್ಲಿ ವಿನಯ ಗೈರುಹಾಜರಾಗಿದ್ದಲ್ಲಿ, ಇಲ್ಲದ ಹೊಸ ಸಮಸ್ಯೆಗಳು ಉದ್ಭವವಾಗಿ ಮೇರುಭಾರದಿಂದ ಎಲ್ಲರನ್ನೂ ಕೆಳ ಜಗ್ಗುವುವು.

ಇದು ಹಾಗಿರಲಿ. ಈ ಎಂಎ, ಎಂ.ಕಾಂ. ಬಿಇ. ಪಿಎಚ್.ಡಿ. ಮುಂತಾದ ಉನ್ನತ ಪದವೀಧರ ತರುಣ ನಿರುದ್ಯೋಗಿಗಳ ಘನಾಶಯವೇನು? ಬ್ಯಾಂಕಿನಲ್ಲಿ ಇಲಲವೇ ಎಲ್ಐಸಿಯಲ್ಲಿ ಗುಮಾಸ್ತಿಕೆ. ಸರಕಾರದ ಯಾವುದೋ ಒಂದು ಖಾತೆಯಲ್ಲಿ ಕೆಲಸ. ಖಾಸಗಿ ಸಂಸ್ಥೆಯೊಂದರಲ್ಲಿ ಹುದ್ದೆ ಮುಂತಾದವು ಮಾತ್ರ. ಇಲ್ಲೆಲ್ಲ ಬಹುತೇಕವಾಗಿ ಅವರು ಕಲಿತ ವಿಷಯಕ್ಕೂ ಆಶೀಸುವ ಉದ್ಯೋಗಕ್ಕೂ ಯಾವ ಸಂಬಂಧವೂ ಇರುವುದಿಲ್ಲ. ಅವರು ಈ ವಿಚಾರದಲ್ಲಿ ತೀರ ನಿರ್ಲಿಪ್ತರು. ನಿರಾಸಕ್ತರು. ನಿಷ್ಪಕ್ಷಪಾತಿಗಳು. "ವಿದ್ಯೆ ಜ್ಞಾನಾರ್ಜನೆಗಾಗಿ. ಹುದ್ದೆ ಹೊಟ್ಟೆಪಾಡಿಗಾಗಿ, ವಿದ್ಯೆಗೂ ಹೊಟ್ಟೆಪಾಡಿಗೂ ನಂಟು ಹಾಕುವುದು ಶತಮೂರ್ಖತೆ" ಎಂದು ಇವರ ವರ್ತನೆಯಿಂದ ನಿಚ್ಚಳವಾಗುವುದು.

"ಅಯ್ಯಾ ಪುಣ್ಯಾತ್ಮ! ನೀನು ರಸಾಯನವಿಜ್ಞಾನದಲ್ಲಿ ಎಂಎಸ್‌ಸಿ ಪಡೆದಿರುವೆ. ಬ್ಯಾಂಕಿನಲ್ಲಿ ಗುಮಾಸ್ತನಾದಾಗ ಈ ಕಲಿಕೆಯಿಂದ ಉಪಯೋಗವೇನು?"

ಅವನ ಉತ್ತರ ವಾದಾತೀತವಾಗಿರುತ್ತದೆ: "ಸರ್! ನಿಮ್ಮ ಪ್ರಶ್ನೆ ಏನೋ ಸರಿ. ಆದರೆ ನನ್ನ ಅಧ್ಯಯನಕ್ಕೆ ಅನುಗುಣವಾದ ಕೆಲಸ ನನಗೆ ದೊರೆಯುವುದಿಲ್ಲವಲ್ಲ? ಹತ್ತು ಸಂಶೋಧನ ಮಂದಿರಗಳಿಗೆ ಇಪ್ಪತ್ತು ಕಾಲೇಜುಗಳಿಗೆ, ಕೊನೆಗೆ ಪ್ರೌಢಶಾಲೆಗಳಿಗೂ ಅರ್ಜಿ ಗುಜರಾಯಿಸಿದ್ದಾಯಿತು. ಎಲ್ಲೆಡೆಯೂ ಕತ್ತಲೆ ಮತ್ತೇನು ಮಾಡಲಿ?"

ಈ ಬ್ರಹ್ಮಗಂಟನ್ನು ಬಿಡಿಸುವುದು ಯಾ ಅಲೆಗ್ಸಾಂಡರ್ ಮಹಾಶಯ ಗಾರ್ಡಿಯನ್ ಗಂಟಿಗೆ ಮೋಕ್ಷ ಕಾಣಿಸಿದಂತೆ ಕತ್ತರಿಸುವುದು ಹೇಗೆ? ನಮ್ಮ ದೇಶದ ಸದ್ಯದ ಪರಿಸ್ಥಿತಿಯಲ್ಲಿ ಇದು ಸಾಧ್ಯವಿಲ್ಲ. ವಿದ್ಯೆಗೂ ಹುದ್ದೆಗೂ ಸಂಬಂಧವಿರಬೇಕು. ಮೇಲಾಗಿ ಕಲಿವಾತನ ಒಲಿವಿಗೆ ಅನುಗುಣವಾದ ವಿದ್ಯೆಯನ್ನು ಆತ ಕಲಿಯಬೇಕು. ವಿದ್ಯೆ ಎಂದರೆ ಸಾಂಪ್ರದಾಯಿಕ ಶಾಲೆ ಕಾಲೇಜು ಕರ್ಮಾಗಾರಗಳು ಮಾತ್ರ ಒದಗಿಸುವ ಘನ ವಸ್ತು ಅಲ್ಲ ಎಂಬಿವೇ ಮುಂತಾದವು ಆದರ್ಶದ ಮೋಡದಿಂದ ವಾಸ್ತವತೆಯ ನೆಲಕ್ಕೆ ಇಳಿದಿರದ ಸತ್ಯಗಳು. ಸರಳವಾಗಿ ಹೇಳುವುದಾದರೆ ನಮಗಿಲ್ಲಿ ಎಲ್ಲರಿಗೂ ವಿತರಿಸಲು ಬೇಕಾಗುವಷ್ಟು ಹುದ್ದೆಗಳೇ ಇಲ್ಲ. ನಮ್ಮ ತರುಣ ನಿರುದ್ಯೋಗಿ ಪದವೀಧರನ ಎದುರು ಇರುವ ಸವಾಲು ಇದು: ಕಡಿಮೆ ರೊಟ್ಟಿಗಳನ್ನು ಹೆಚ್ಚು ಹೊಟ್ಟೆಗಳಿಗೆ ಹಂಚುವುದು ಹೇಗೆ? ಗಣಿತ ಈ ಸಮಸ್ಯೆಗೆ ಎರಡು ಪರಿಹಾರಗಳನ್ನು ಸೂಚಿಸುವುದು; ಒಂದು ಹುದ್ದೆಗಳನ್ನು ಅಭ್ಯರ್ಥಿಗಳ ಸಂಖ್ಯೆಯವರೆಗೂ

ಏರಿಸುವುದು; ಎರಡು, ಅಭ್ಯರ್ಥಿಗಳ ಸಂಖ್ಯೆಯನ್ನು ಹುದ್ದೆಗಳ ಸಂಖ್ಯೆಯವರೆಗೆ ಇಳಿಸುವುದು. ಇಲ್ಲಿ ಕರ್ತಾರನು ಯಾರಾಗಬೇಕು? ಸುಲಭ ಉತ್ತರ ಸರಕಾರ. ಹುದ್ದೆಗಳನ್ನು ಹಿಗ್ಗಿಸಿದ ಸರಕಾರ ದಿವಾಳಿ ಎದ್ದರೆ ಅಭ್ಯರ್ಥಿಗಳ ಸಂಖ್ಯೆಯನ್ನು ತಗ್ಗಿಸಿದ ಸರಕಾರ ಸ್ವಜನಾಂಗ ಹತ್ಯೆಯ ದೋಷಕ್ಕೆ ಈಡಾಗುತ್ತದೆ. ಆದ್ದರಿಂದ ಈ ಸಾಂಪ್ರದಾಯಿಕ ಪರಿಹಾರ ಅಪ್ರಾಯೋಗಿಕ. ಸಂಪ್ರದಾಯದ ಚೌಕಟ್ಟಿನಿಂದ ಹೊರಕ್ಕೆ ಸಾಗಿ ಸಮಸ್ಯೆಯನ್ನು ಪರಿಶೀಲಿಸೋಣ.

ಸರಕಾರ ಅಥವಾ ಯಾವುದೇ ಸಂಸ್ಥೆ ಉದ್ಯೋಗ ಒದಗಿಸುವ ಒಂದು ಆಕರ ಎಂಬುದು ನಿಜ. ಇವೆಲ್ಲವೂ ವ್ಯಕ್ತಿಗಳ ಸಮುದಾಯದಿಂ ಉದ್ಭವಿಸಿದಂಥವು. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೊಲ್ಲಿಯೂ ಉದ್ಯೋಗಗಳನ್ನು ನಿರ್ಮಿಸಬಲ್ಲ. ಸಾಮರ್ಥ್ಯ ಸುಪ್ತವಾಗಿಯಾದರೂ ಇದೆ ಎಂದು ಅಂಗೀಕರಿಸಬಹುದು. ಈ ಸಾಮರ್ಥ್ಯವನ್ನೇ ಅಭಿವೃದ್ಧಿಗೊಳಿಸಿ ವ್ಯಕ್ತಿ ತನಗೆ ತಾನೇ ಹುದ್ದೆ ಒದಗಿಸಿಕೊಳ್ಳುವಂತೆ ಮಾಡುವುದು ಮತ್ತು ಅಂಥ ಪರಿಸರವನ್ನು ಸೃಷ್ಟಿಸುವುದು ಸಾಧ್ಯಾವಾದರೆ ಆಗ ನಿರುದ್ಯೋಗ ಸಮಸ್ಯೆ ಹೇಳಹೆಸರಿಲ್ಲದೇ ಹೋಗುವುದು. ವ್ಯಕ್ತಿ ಬೇರೊಂದು ಸಂಸ್ಥೆಯತ್ತ ಉದ್ಯೋಗಾಕಾಂಕ್ಷಿಯಾಗಿ ದಿಟ್ಟಿ ಹಾಯಿಸುವ ಬದಲು ತನಗೆ ತಾನೇ ಉದ್ಯೋಗ ಒದಗಿಸಿಕೊಳ್ಳುವ ನಿಪುಣನಾಗುವುದು ಇಲ್ಲಿಯ ಮರ್ಮ. ಇಲ್ಲಿ ತನ್ನ ಬಾಳ ಬಟ್ಟೆಯನ್ನು ಅವನೇ ಅರಸುತ್ತಾನೆ. ಅವನೇ ಕಾಣುತ್ತಾನೆ. ಹೀಗೆ ನಿರುದ್ಯೋಗದ ಸವಾಲನ್ನು ವ್ಯಕ್ತಿ ಸ್ವೋದ್ಯೋಗದಿಂದ ಎದುರಿಸುವನು. ಇದು ಹೇಳಿದಷ್ಟು ಸುಲಭ ಸುತರಾಂ ಅಲ್ಲ. ಇಂಥ ಒಂದು ನಿಲುವನ್ನು ತಳೆಯಲು ವ್ಯಕ್ತಿಯಲ್ಲಿ ಸಾಕಷ್ಟು ದಿಟ್ಟತನ ಇರಬೇಕು. ಈ ಹಾದಿಯಲ್ಲಿ ಗಮಿಸಲು ಸಾಕಷ್ಟು ಛಲ ಇರಬೇಕು. ನಿರಂತರವಾಗಿ ಎದುರಾಗುವ ವೈಫಲ್ಯ ಹತಾಶೆಗಳಿಂದ ಎದೆಗುಂದದೆ ಮುಂದುವರಿಯುವ ಕೆಚ್ಚು ಇರಬೇಕು. ಅತ್ಯುನ್ನತ್ತ ಮಟ್ಟದ ಶಿಸ್ತು ಪ್ರತಿಯೊಂದು ರಂಗದಲ್ಲಿಯೂ ಅನಿವಾರ್ಯ.

ಶಿಸ್ತು ಅಂದರೇನು?

ಪರಿಸರದ ಬಲಗಳಿಗೆ ಅನುವರ್ತಿಯಾಗಿ ನಮ್ಮ ಬದುಕನ್ನು ರೂಪಿಸಿ ಕೊಳ್ಳುವ ವಿಧಾನಕ್ಕೆ ಶಿಸ್ತು ಎಂದು ಹೆಸರು ಶಿಲಾವರೋಹಣ ಎನ್ನುವ ಕ್ರೀಡೆಯಲ್ಲಿ ಭಾಗವಹಿಸಲು ನಾವು ಉದ್ದೇಶಿರುವೆವೆಂದು ಭಾವಿಸೋಣ. ಕಡಿದಾದ ಮತ್ತು ಎತ್ತರವಾದ ಒಂದು ಬಂಡೆ ಉಂಟು. ಅದರ ಮಂಡೆಯ ಮೇಲೆ ಅಂಚಿನವರೆಗೆ ಬಂದು ಕೆಳಗಿನ ಆಳವಾದ ಪ್ರಪಾತಕ್ಕೆ ಜಿಗಿಯುವ ಆಟವಿದು. ಹಿಂದೆ ಮುಂದೆ

ನೋಡದೆ ನೇರವಾಗಿ ನೆಗೆದೇ ಬಿಟ್ಟೆವಾದರೆ ನಮಗೆ 'ಶಾಶ್ವತ ಸಂತೋಷ' ಪ್ರಾಪ್ತವಾಗುವುದರ ಜೊತೆಗೆ ಇತರ ಭಾಗಿಗಳಿಗೆ ಸಾಕಷ್ಟು ತಾಪತ್ರಯವನ್ನೂ ಈ ಹುಚ್ಚು ಸಾಹಸ ಒದಗಿಸುತ್ತದೆ ಎನ್ನುವುದು ಸ್ಪಷ್ಟ. ಇಂಥ ದುರಂತಕ್ಕೆ ನಾವು ತುತ್ತಾಗಬಾರದು. ಆದರೆ ಅವರೋಹಣ ಕ್ರೀಡೆಯ ಸಂತೋಷ ನಮಗೆ ಲಭಿಸಬೇಕು ಎನ್ನುವುದು ನಮ್ಮ ಉದ್ದೇಶ. ಇದರ ಸಿದ್ಧಿಗಾಗಿ ನಾವು ಪರಿಸರದ ಬಲಗಳು ಏನು, ನಮ್ಮ ಇತಿಮಿತಿಗಳು ಎಂಬೀ ವಿವರಗಳನ್ನು ಕೂಲಂಕುಷವಾಗಿ ಅಧ್ಯಯನ ಮಾಡಬೇಕಾಗುವುದು. ಸ್ಥೂಲವಾಗಿ ಇವು ಹೀಗಿವೆ. ತಳದೆಡೆಗೆ ನಮ್ಮನ್ನು ಆಕರ್ಷಿಸುವ ಭೂಗುರುತ್ವ ಬಲ, ಬಂಡೆಯ ರಚನೆ–ಇವಿಷ್ಟು ಪರಿಸರದ ಬಲಗಳು. ನಮ್ಮ ದೇಹ ಬಲು ಜಟಿಲವಾದ ಮತ್ತು ನವುರಾದ ಒಂದು ಜೈವಿಕ ವ್ಯವಸ್ಥೆ. ಇದು ಅತಿ ವೇಗವನ್ನಾಗಲಿ ತೀವ್ರ ಢಕ್ಕೆಯನ್ನಾಗಲಿ ಎದುರಿಸಿ ಉಳಿಯಲಾರದು. ಇದರ ಪ್ರತಿಯೊಂದು ಚಟುವಟಿಕೆಯ ಮೇಲೆಯೂ ನಮ್ಮ ಹತೋಟಿಯನ್ನು ಕಾಯ್ದುಕೊಂಡಿರಬೇಕಾದ್ದು ಅವಶ್ಯಕ – ಇವಿಷ್ಟು ನಮ್ಮ ಇತಿಮಿತಿಗಳ ವಿವರಣೆ. ಇವೆರಡನ್ನು ಅನುಲಕ್ಷಿಸಿ ಸ್ವರಕ್ಷಣೆಯನ್ನು ಸಾಧಿಸಲು ನಾವು ಅನುಸರಿಸಬೇಕಾದ ವಿಧಾನ ಶಿಲಾವರೋಹಣ ಕ್ರೀಡೆಯಲ್ಲಿಯ ಶಿಸ್ತು ಆಗುತ್ತದೆ. ನೈಲಾನ್ ದಾರಗಳು, ಲೋಹದ ಕೊಣಿಕೆಗಳು. ಬಿಲೇಕಾರ ಜಿಗಿವಾತನ ದೇಹ ವಿನ್ಯಾಸ ಇವೆಲ್ಲವೂ ಈ ಶಿಸ್ತಿನ ಅಂಗಗಳಾಗಿ ಒದಗಿಬರುತ್ತದೆ. ಇದರಲ್ಲಿಯ ಯಾವುದೇ ಅಂಗದ ಅಲಕ್ಷ್ಯವೂ ಶಿಸ್ತಿನ ಉಲ್ಲಂಘನೆ ಆಗುತ್ತದೆ. ಆಗ ನಮಗೆ ಅಪಾಯ ತಪ್ಪಿದ್ದಲ್ಲ. ಮನುಷ್ಯ ಪರಿಸರದ ಶಿಶು. ಆದ್ದರಿಂದ ಆತನ ಯಾವುದೇ ಉದ್ಯಮದಲ್ಲಿ ಪರಿಸರವನ್ನು ಅಸಡ್ಡೆ ಮಾಡಿದ್ದೇ ಆದರೆ ಅಂಥ ಕ್ರಿಯೆ ಶಿಸ್ತಿನ ಉಲ್ಲಂಘನೆ ಎನ್ನಿಸುತ್ತದೆ. ಇದರಿಂದ ಅವನ ಉದ್ಯಮದಲ್ಲಿ ವೈಫಲ್ಯ ಸ್ವತಸ್ಸಿದ್ಧ, ಶತಸ್ಸಿದ್ಧ ಕೂಡ.

ವ್ಯಕ್ತಿಯ ಸಾಮರ್ಥ್ಯವನ್ನು ಒಂದು ನಿರ್ದಿಷ್ಟ ಉದ್ದೇಶದೆಡೆಗೆ ಪ್ರವರ್ತಿಸುವ ಗುಣವೇ ಶಿಸ್ತು. ನಿತ್ಯಜೀವನದ ಅವಿಭಾಜ್ಯ ಅಂಗವಾಗಿ ಶಿಸ್ತು ಪ್ರತಿಯೊಬ್ಬನಲ್ಲಿಯೂ ಇರಲೇಬೇಕು. ಶಿಸ್ತುಗಾರನೊಬ್ಬ ಅತ್ಯಂತ ಅಂಗವಾಗಿ ಶಿಸ್ತು ಪ್ರತಿಯೊಬ್ಬನಲ್ಲಿಯೂ ಇರಲೇಬೇಕು. ಶಿಸ್ತುಗಾರನೊಬ್ಬ ಅತ್ಯಂತ ಪ್ರಾಮಾಣಿಕ ವ್ಯಕ್ತಿ. ಕರ್ತವ್ಯ ನಿರ್ವಹಣೆ ಒಂದೇ ಶಿಸ್ತುಗಾರನ ಆದರ್ಶ. "ಕರ್ತವ್ಯದ ಕ್ಷೇತ್ರ ಅನಂತವಾಗಿದೆ. ಜೀವನದ ಪ್ರತಿಯೊಂದು ರಂಗವನ್ನೂ ಅದು ವ್ಯಾಪಿಸಿದೆ. ನಾವು ಹಣವಂತರಾಗಿರುವುದಾಗಲಿ ಬಡವರಾಗಿರುವುದಾಗಲಿ

ಸಂತೋಷಿಗಳಾಗಿರುವುದಾಗಲಿ ದುಃಖಿಗಳಾಗಿರುವುದಾಗಲಿ ನಮ್ಮ ಆಯ್ಕೆಯಿಂದ ಅಲ್ಲ. ಆದರೆ ನಮ್ಮನ್ನು ಎಲ್ಲ ಕಡೆಗಳಲ್ಲಿಯೂ ಸುತ್ತುವರಿದುಕೊಂಡಿರುವ ಕರ್ತವ್ಯವನ್ನು ನಿರ್ವಹಿಸುವುದು ನಮ್ಮ ಪಾತ್ರ ಎನ್ನುವುದಂತೂ ಖಂಡಿತ. ಎಷ್ಟೇ ತ್ರಾಸದಾಯಕವಾಗಲಿ ಮತ್ತು ಅಪಾಯಕಾರಿ ಆಗಲಿ ಪರಮೋಚ್ಚ ನಾಗರಿಕ ಜೀವನದ ತಿರುಳು ಕರ್ತವ್ಯಕ್ಕೆ ತಲೆಬಾಗುವುದೇ ಆಗಿದೆ. ಮಹಾಸಾಧನೆಗಳಿಗಾಗಿ ಈಗಲೂ ಗತ ಕಾಲದಂತೆಯೇ ಕಾರ್ಯ ಎಸಗಲೇಬೇಕು. ಆಶಿಸಲೇಬೇಕು. ಸಾಯಲೇಬೇಕು" ಎಂಬುದಾಗಿ ಸ್ಯಾಮ್ಯುಯಲ್ ಸ್ಮೈಲ್ಸ್ ಹೇಳಿರುವ (1880) ಮಾತು ಚಿರಂತನ ಸತ್ಯ. ಸೀತಾನ್ವೇಷಣೆಗಾಗಿ ಸಾಗರೋಲ್ಲಂಘನ ಮಾಡುತ್ತಿದ್ದ ಹನುಮಂತನ ಹಾದಿಗೆ ಎದುರಾಗಿ ಮೈನಾಕ ಪರ್ವತರಾಜ ಜಲರಾಶಿಯಿಂದ ಮೇಲೆದ್ದು ತನ್ನ ಆತಿಥ್ಯವನ್ನು ವಾಯುಸುತ ಸ್ವೀಕರಿಸಿ ಮುಂದೆ ಸಾಗಬೇಕೆಂದು ಬಿನ್ನವಿಸಿಕೊಂಡ. ಆಗ ಹನುಮಂತ ನೀಡಿದ ಉತ್ತರ ತುಂಬ ಧ್ವನಿಪೂರ್ಣವಾಗಿದೆ: "ನಾನು ಸಂತುಷ್ಟನಾದೆನನು. ಆತಿಥ್ಯವನ್ನು ನೀನು ಮಾಡಿದ್ದಾಯಿತು. ಕೋಪಿಸಿಕೊಳ್ಳಬೇಡ. ಕಾರ್ಯ ಸಾಧನೆಯಾಗಬೇಕಾದ ಕಾಲವು ನನ್ನನ್ನು ತ್ವರೆ ಪಡಿಸುತ್ತಿದೆ. ಹಗಲೂ ಕಳೆದುಹೋಗುತ್ತಿದೆ. ಎಲ್ಲಿಯೂ ಮಧ್ಯಮಾರ್ಗದಲ್ಲಿ ನಾನು ನಿಲ್ಲುವುದಿಲ್ಲವೆಂದು ಭಾಷೆಕೊಟ್ಟಿರುವೆನು (ಸಿ.ಎನ್. ಶ್ರೀನಿವಾಸ ಅಯ್ಯಂಗಾರ್ ಬರೆದಿರುವ 'ಕನ್ನಡ ವಾಲ್ಮೀಕಿ ರಾಮಾಯಣ). ಕರ್ತವ್ಯಪ್ರಜ್ಞೆಗೆ ಶಾಶ್ವತ ಪ್ರತೀಕ ರಾಮನ ಬಂಟ ಹನುಮಂತ.

ಕಾಲನಿಷ್ಠೆ ಶಿಸ್ತುಗಾರನ ಬದುಕಿನ ಉಸಿರು. ನಮ್ಮ ಯಾವ ಪ್ರಯತ್ನವೂ ಇಲ್ಲದೆ ಸ್ಥಿರದರದಿಂದ ಜಗುಳಿ ಹೋಗುವ ಮತ್ತು ಎಂದೆಂದೂ ಮರಳಿ ಬರದಿರುವ ಏಕೈಕ ಪರಿಮಾಣ ಅಥವಾ ಅನುಭವವೆಂದರೆ ಕಾಲ. ಸರ್ವಕಾಲಗಳಲ್ಲಿಯೂ ಸರ್ವರಿಗೂ ಸಮವಾಗಿ ಅನ್ವಯಿಸುವ ನಿಯಮವಿದು. ಆದ್ದರಿಂದ ನಾವು ಏನನ್ನಾದರೂ ಲೋಕದ ಮಾತಂತಿರಲಿ ಕನಿಷ್ಠ ಪಕ್ಷ ನಮ್ಮ ಒಳಿತಿಗಾಗಿ ಆದರೂ. ಸಾಧಿಸಬೇಕೆಂದಿದ್ದರೆ ಅದು ವರ್ತಮಾನ ಕಾಲದ ಸದುಪಯೋಗವೊಂದರಿಂದಲೇ ಸಾಧ್ಯ. ಗತಕಾಲದಿಂದ ಪಡೆದ ಅನುಭವದಿಂದ ಭವಿಷ್ಯತ್ತನ್ನು ರೂಪಿಸುವುದಕ್ಕೋಸ್ಕರ ವರ್ತಮಾನ ಕಾಲದಲ್ಲಿ ತೀವ್ರವಾಗಿ ಬಾಳಬೇಕು. ಕಾಲನಿಷ್ಠೆ ಇಲ್ಲದ ಸೇನಾನಿಗಳ ಬೇಜವಾಬ್ದಾರಿಕೆಯಿಂದಾಗಿ ಯುದ್ಧಗಳಲ್ಲಿ ಸಾವು ಸೋಲು ಉಂಟಾಗಿದೆ. ಕಾಶ್ಮೀರದ ವೀರ ಎಂಬ ಬಿರುದನ್ನು ಪಡೆದ ಜನರಲ್ ತಿಮ್ಮಯ್ಯನವರು ಒಮ್ಮೆ

ಒಂದು ಭಾಷಣದಲ್ಲಿ ಹೇಳಿದ ಮಾತು ಬಲು ಅರ್ಥಪೂರ್ಣವಾಗಿದೆ: "ಯಾವುದೇ ಯಶಸ್ವೀಕಾರ್ಯದ ಅಡಿಪಾಯ ಶಿಸ್ತು, ಇಂಥ ಶಿಸ್ತು ನಮ್ಮ ಸಮಸ್ತ ಚಟುವಟಿಕೆಗಳಲ್ಲಿಯೂ ಹಾಸುಹೊಕ್ಕಾಗಿ ಪಸರಿಸಬೇಕಾದರೆ ನಾವು ಕಲಿಯಬೇಕಾದ ಮೊದಲ ಪಾಠ ಕಾಲಪ್ರಜ್ಞೆಯನ್ನು ಕುರಿತದ್ದು." ಓರ್ವ ಶಿಸ್ತುಗಾರ ಸ್ವಂತ ಜೀವನದಲ್ಲಿ ಕಾಲನಿಷ್ಠೆಯನ್ನು ಬಲು ಸಹಜವಾಗಿ ರೂಢಿಗೆ ತಂದಿರುತ್ತಾನೆ. ತನ್ನ ವೇಳೆಗೆ ತುಂಬ ಬೆಲೆಕೊಡುವ ಆತ ಇತರರ ವೇಳೆಗೆ ಅದಕ್ಕಿಂತಲೂ ಹೆಚ್ಚಿನ ಮಹತ್ವ ಕೊಡುವನು.

ನನ್ನಲ್ಲಿಗೆ ಬರುವ ತರುಣರಿಗೆ ಈ ಸಂಗತಿಗಳನ್ನು ವಿವರಿಸಿ ಹೇಳುವಾಗ ಸಿದ್ಧಾಂತದ ಮಟ್ಟದಲ್ಲಿ ಅವರು ಪೂರ್ಣವಾಗಿ ನನ್ನನ್ನು ಅನುಮೋದಿಸುತ್ತಾರೆ. ಹಾಗಾದರೆ ಕಾರ್ಯ ರಂಗಕ್ಕೆ ಇಳಿಯೋಣ ಎನ್ನುವಾಗ ನಾನಾ ಕಾರಣಗಳಿಂದ ಹಿಂದೇಟು ಹೊಡೆಯುತ್ತಾರೆ. ಕೆಲವು ಪ್ರರೂಪೀ ಉದಾಹರಣೆಗಳನ್ನು ಪರಿಶೀಲಿಸೋಣ.

ಬಿಇ ಪದವೀಧರನೊಡನೆ ಮಾತು ಬೆಳೆಸುತ್ತೇನೆ: "ನೀನು ಸ್ವತಂತ್ರವಾಗಿ ಏನನಾದರೂ ಉದ್ಯಮವನ್ನು ಏಕ ತೊಡಗಬಾರದು? ಸಿವಿಲ್ ಎಂಜಿನಿಯರಿಂಗ್ ಬೇರೆ ಓದಿರುವೆ. ಉದಾಹರಣೆಗೆ ಚಿಕ್ಕಪುಟ್ಟ ಮನೆಗಳನ್ನು ಕಟ್ಟಿಸುವ ಇಲ್ಲವೇ ಹಳೇ ಮನೆಗಳಿಗೆ ಸುಣ್ಣಬಣ್ಣ ಬಳಿಸುವ ಹೊಣೆಗಾರಿಕೆ".

"ಬಂಡವಾಳ ಎಲ್ಲಿಂದ ತರಲಿ?"

"ಯಾವ ಒಳ್ಳೆಯ ಕೆಲಸವೂ ಬಂಡವಾಳದ ಕೊರತೆಯಿಂದಾಗಿ ನಿಂತದ್ದಿಲ್ಲ. ಮುಖ್ಯವಾಗಿ ಬೇಕಾದ್ದು ಕೆಲಸವನ್ನು ಶ್ರದ್ಧೆಯಿಂದ ನಡೆಸಬಲ್ಲೆ ಎನ್ನುವ ದೃಢ ಮನಸ್ಸು."

"ನನಗೆ ಅಂಥ ಧೈರ್ಯವೇ ಇಲ್ಲ. ಸರ್. ನಿಜ ಹೇಳುವುದಾದರೆ ನಮ್ಮ ಕೆಲಸಕ್ಕೂ ಇಂಥ ಕೆಲಸ ಬೇಡುವ ಅನುಭವಕ್ಕೂ ಏನೇನೂ ಸಂಬಂಧ ಇರುವುದಿಲ್ಲ. ಆದ್ದರಿಂದ ನೀವು ಸೂಚಿಸಿದಂಥ ಕೆಲಸವನ್ನು ನಾನು ನಿಭಾಯಿಸಲಾರೆ."

ದಂಡೆಯ ಮೇಲೆ ನಿಂತು ಈಸುವುದರ ವಿಚಾರ ನಿರರ್ಗಳ ವಾಗ್ಝರಿ ಹರಿಸಬಲ್ಲ ಈ ನಿಸ್ಸೀಮ ವಾಕ್ಪಟು ನೀರಿನ ಅಂಚನ್ನು ಸೋಂಕಲು ಕೂಡ ತಯಾರಿಲ್ಲ.

ನಿಜನಕಲುಗಳಿಗೆ ರುಜುಮಾಡಿಸಲು ಒಬ್ಬ ನಿರುದ್ಯೋಗಿ ಪದವೀಧರ ನನ್ನಲ್ಲಿಗೆ ಬಿಜಯಂಗೈಯ್ಯುತ್ತಾನೆ. ಮೂರು ವರ್ಷಗಳಿಂದಲೂ ಅವನನ್ನು

ನೋಡುತ್ತಿದ್ದೇನೆ. ಯಾವ ದಂಧೆಯೂ ಇಲ್ಲದೆ ಉಡಾಳನಾಗಿಯೇ ಅಡ್ಡಾಡುತ್ತಿದ್ದಾನೆ. ಅವನ ಮೇಲೆ ಒಂದು ಬಾಣ ಎಸೆಯುತ್ತೇನೆ: “ಈಗ ನೀನು ನಾನು ಎಲ್ಲರೂ ಇರುವ ನಮ್ಮ ಬಡಾವಣೆ ಉಂಟು. ಇಲ್ಲಿರುವ ಹೆಚ್ಚಿನ ಜನರು ಮಧ್ಯಮ ವರ್ಗದ ನೌಕರರು. ನಮಗೆಲ್ಲರಿಗೂ ಏಕಪ್ರಕಾರವಾಗಿ ಅನ್ವಯವಾಗುವ ಕೆಲವು ತೊಂದರೆಗಳಿವೆ– ಮನಗೆ ಬೇಕಾಗುವ ಉತ್ತಮ ಸಾಮಗ್ರಿಗಳನ್ನು ಸಕಾಲದಲ್ಲಿ ಪೂರೈಸಿಕೊಳ್ಳುವುದು ವಿವಿಧ ಬಗೆಯ ಬಿಲ್ಲುಗಳನ್ನು ಪಾವತಿ ಮಾಡುವುದು ವಿದ್ಯುದುಪಕರಣಗಳ ಮತ್ತು ಮನೆಗಳ ಸಣ್ಣಪುಟ್ಟ ರಿಪೇರಿಗಳು. ಇತ್ಯಾದಿ. ಮೊದಲು. ಆಯ್ದ ನಾಲ್ಕೋ ಐದೋ ಮನೆಗಳಿಂದ ಮಾತ್ರ ತೊಡಗು. ಒಂದು ನಿರ್ದಿಷ್ಟ ಕ್ರಮದಲ್ಲಿ ಅವರಿಗೆ ಈ ಅವಶ್ಯಕತೆಗಳನ್ನು ನ್ಯಾಯಬೆಲೆಯಲ್ಲಿ ಒದಗಿಸುವ ದಿಶೆಯಲ್ಲಿ ನೀನು ದುಡಿದು ನೋಡು. ಇಂಥ ಸೇವೆಗೆ ನಿಗದಿಯಾದ ಶುಲ್ಕವನ್ನು ಸಂತೋಷವಾಗಿ ತೆರಲು ಅವರು ಸಿದ್ಧರಾಗಿರುತ್ತಾರೆ. ಕ್ರಮೇಣ ನಿನ್ನ ಸೇವಾಕ್ಷೇತ್ರವನ್ನೂ ವಿಧಗಳನ್ನೂ ವಿಸ್ತರಿಸು. ಖಂಡಿತವಾಗಿಯೂ ನೀನು ಉತ್ಕರ್ಷ ಪಡೆಯುವೆ.”

ಈ ಮಹಾಶಯ ಮೊದಲು ನನ್ನ ಮನೆಯಿಂದಲೇ ತೊಡಗುತ್ತಾನೆ. ನನ್ನ ಪರಿಚಯದ ಎರಡು ಮೂರು ಮನೆಗಳವರೂ ಇವನ ಸೇವೆಯನ್ನು ಸ್ವೀಕರಿಸಲು ಮುಂಬರುತ್ತಾರೆ. ಒಂದು ವಾರ ದುಡಿಯುವಾಗ ಇವನು ಥಪಡಾಸಿ. ನಮಗೆ ಮೋಸ ಮಾಡುತ್ತಿದ್ದಾನೆ ಎಂಬ ಶಂಕೆ ಮಾಡಿ ದೃಢವಾಗುತ್ತದೆ. ಅಲ್ಲಿಗೆ ಈ ಕೂಸು ಕಣ್ಣು ಬಿಡುವ ಮೊದಲೇ ಮಡಿಯುವುದು.

ಒಂದು ಸಲ ನಾನೇ ಒಂದಷ್ಟು ಮಂದಿಯನ್ನು ಕಲೆ ಹಾಕಿ ಅವರ ಸಮಸ್ಯೆಯನ್ನೂ ಅದಕ್ಕೆ ನಾನು ಸೂಚಿಸಲಿರುವ ಪರಿಹಾರವನ್ನೂ ವಿವರಿಸಿದ.ಎ ಅವರು ಇವರು ನನಗೆ ಕೆಲಸ ಕೊಡಲಿಲ್ಲ. ಎಂಬುದಾಗಿ ಗಂಟು ಮೋರೆ ಸಿಂಡರಿಸುವುದಕ್ಕಿಂತ ನಾನೇ ನನಗೆ ಕೆಲಸ ಕೊಟ್ಟುಕೊಳ್ಳಲಿಲ್ಲ ಎಂಬುದಾಗಿ ಆ ಆರೋಪವನ್ನು ನನ್ನ ಮೇಲೆಯೇ ಏಕೆ ಹೇರಿಕೊಳ್ಳಬಾರದು? ನಾನೇ ನನಗೆ ಕೆಲಸ ಕೊಟ್ಟುಕೊಳ್ಳುವುದೆಂದರೇನು? ಇದಕ್ಕೆ ಮಾನಸಿಕವಾಗಿ ನನ್ನಲ್ಲಿ ಕೆಲವು ಪೂರ್ವಸಿದ್ಧತೆಗಳಿರಬೇಕು.

ಒಂದನೆಯದು, ಯಾವ ಕಾರ್ಯವೂ ನನ್ನ ಘನತೆಗೆ ಕಡಿಮೆಯದಲ್ಲ. ವಾಸ್ತವವಾಗಿ ಕಾರ್ಯನಿರ್ವಹಣೆಯಲ್ಲಿನ ನನ್ನ ಪಾತ್ರದಿಂದಾಗಿ ನನಗೆ ಘನತೆ ಪ್ರಾಪ್ತವಾಗುವುದೇ ಶಿವಾಯಿ ಬೇರೆ ಯಾವುದೇ ಒತ್ತು ಗಂಬಗಳಿಂದ ಅಥವಾ

ಅಟ್ಟಳಿಗೆಗಳಿಂದ ಅಲ್ಲ. ಕಾರ್ಯ ಎಂಬ ವಿದ್ಯುತ್ತು ಪ್ರವಹಿಸುವಾಗ ನನ್ನ ವ್ಯಕ್ತಿತ್ವದ ಹಸಿ ಕಬ್ಬಿಣಕ್ಕೆ ಕಾಂತತ್ವ ಎಂಬ ಪ್ರಭಾವ ಒದಗಿಬರುತ್ತದೆ. ಆದ್ದರಿಂದ ಕಾರ್ಯವನ್ನು ನಿರ್ವಹಿಸಲು ನನ್ನನ್ನು ನಾನು ಹೇಗೆ ತಯಾರು ಮಾಡಿಕೊಳ್ಳುತ್ತೇನೆ ಎನ್ನುವ ಕಡೆ ಪ್ರಧಾನ ಲಕ್ಷ್ಯ ಇರಬೇಕು.

ಎರಡನೆಯದು. ಯಾವ ಕಾರ್ಯವೂ ನನ್ನ ಅಳವಿಗೆ ಮೀರಿದ್ದಲ್ಲ. ದೃಢ ನಿರ್ಧಾರವಿದ್ದ ಸಾವಿತ್ರಿ. ಕಾಲಪುರುಷನನ್ನೇ ಒಲಿಸಿ ಪತಿಜೀವವನ್ನು ಮರುಪಡೆದಳು. ಏಕಾಗ್ರ ಚಿತ್ತದಿಂದ ಪ್ರತ್ಯಕ್ಷ ಪ್ರಯತ್ನ ಮಾಡಿದ್ದೇ ಆದರೆ ನನ್ನ ಸಾಮರ್ಥ್ಯಕ್ಕೆ ಮಣಿಯದ ಹಿಮಾಲಯ ಪರ್ವತವೇ ಇರುವುದಿಲ್ಲ.

ಮೂರನೆಯದು ಕಾರ್ಯ ಯಾವುದೇ ಇರಲಿ. ಅದನ್ನು ಸಮರ್ಪಕವಾಗಿ ನಿಭಾಯಿಸುವುದರಲ್ಲಿಯೇ ನಾನು ಪರಮಾನಂದ ಪಡೆಯುತ್ತೇನೆ. ಒಂದು ಕೆಲಸ ತೊಡಗುವಾಗ ಅದರ ಹೊಸತನದಿಂದಾಗಿ ನಾನು ಉತ್ಸಾಹಿ ಆಗಿರುವುದು ಸಹಜ. ಆದರೆ ದಿನ ಉರುಳಿದಂತೆ ಕೆಲಸದ ಏಕತಾನ ವಿತಾನದಿಂದ ಇಲ್ಲವೇ ಪದೇ ಪದೇ ಎದುರಾಗುವ ಅಡೆತಡೆಗಳಿಂದ ನನ್ನಲ್ಲಿ ನಿರುತ್ಸಾಹ ಉದ್ವೇಗ ಒತ್ತಡ ಮುಂತಾದವು. ತಲೆದೋರಿ ಹೊಲಬು ತಪ್ಪಿ ಅಂಡಲೆಯುವುದು ವಿರಳವೇನಲ್ಲ. ಆದ್ದರಿಂದ ಕಾರ್ಯನಿರ್ವಹಣೆಯ ಹಾದಿಯಲ್ಲಿ ಎದುರಾಗುವ ಮೈನಾಕ ಸುರಸೆ ಸಿಂಹಿಕೆಯರಿಂದ ನಾನು ವಿಚಲಿತನಾಗುವುದಿಲ್ಲ ಎಂಬ ದೃಢ ನಿರ್ಧಾರ ಅಗತ್ಯ.

ನಾಲ್ಕನೆಯದು. ಕಾಲದ ಸದ್ವಿನಿಯೋಗದಲ್ಲಿ ನಾನು ಪರಮ ಕಟ್ಟುನಿಟ್ಟಿನವನಾಗಿರುತ್ತೇನೆ. ಸರಿದ ಕಾಲ ಮತ್ತು ಹರಿದ ಸಲಿಲ ಮತ್ತೆ ಎಂದೆಂದೂ ದೊರೆಯುವು ಎಂಬುದು ನನಗೆ ಚೆನ್ನಾಗಿ ತಿಳಿದಿದೆ. ನನ್ನ ಕಾಲ ಎಂತೋ ಅಂತೆ ಇತರರ ಕಾಲವೂ ಅಪವ್ಯಯವಾಗದಂತೆ ಬಲು ಎಚ್ಚರ ವಹಿಸುತ್ತೇನೆ.

ಐದನೆಯದು. ಹಣದ ಅಂತೆಯೇ ವಸ್ತುಗಳ ನಿರ್ವಹಣೆಯಲ್ಲಿ ನಾನು ಅತ್ಯಂತ ಪ್ರಾಮಾಣಿಕನಾಗಿರುತ್ತೇನೆ. ಇತರರಿಗೆ ಸಲ್ಲಬೇಕಾದದ್ದನ್ನು ಮೊದಲು ಪಾವತಿಸಿಬಿಡುವೆನು. ನನ್ನ ಸಮಸ್ತ ವ್ಯವಹಾರಗಳೂ ತೆರೆದ ಒಂದು ಪುಸ್ತಕವಾಗಿರುವಂತೆ ಆರ್ಥಿಕ ದೃಷ್ಟಿಯನ್ನು ರೂಪಿಸಿಕೊಳ್ಳುತ್ತೇನೆ. ಸವಾಲನ್ನು ಎದುರಿಸಿ ನೇರ ಬದುಕನ್ನು ಬಾಳಿ ಸಂತೋಷಪಡಲು ಹಣ ಒಂದು ಸಾಧನೆಯೇ ಹೊರತು ಅದರ ಗಳಿಕೆಯೇ ಜೀವನದ ಉದ್ದೇಶವಲ್ಲ. ಇಂದಿನ

ತೀವ್ರ ಮತ್ತು ಭ್ರಷ್ಟ ಸಾರ್ವಜನಿಕ ಜೀವನದಲ್ಲಿ ಆರ್ಥಿಕ ಪಾರಿಶುದ್ಧ್ಯ ಮಿಕ್ಕೆಲ್ಲವುಗಳಿಗಿಂತಲೂ ಅತಿ ಹೆಚ್ಚಿನ ರಚನಾತ್ಮಕ ಪಾತ್ರ ವಹಿಸುತ್ತದೆ. ಎಂಥೆಂಥ ಬೃಹತ್ ಸಂಘಟನೆಗಳೂ ಮಹಾನೌಕೆಗಳೂ ಸೋರಿ ಮುಳುಗಿ ಹೋಗಲು ಒಂದು ಮುಖ್ಯ ಕಾರಣ ಎಂದರೆ ಆರ್ಥಿಕ ರಂಗದಲ್ಲಿಯ ಐಬು.

ಆರನೆಯದು. ನಾನು ಸದಾ ಸಚ್ಛೀಲವಂತನಾಗಿರುತ್ತೇನೆ. ಶೀಲ ಎಂದರೇನು? ಪರಿಸರದೊಡನೆ ವ್ಯಕ್ತಿ ವ್ಯವಹರಿಸುವ ರೀತಿಗೆ ಶೀಲ ಎಂದು ಹೆಸರು. ನಿರಂತರವಾಗಿ ಎದುರಾಗುವ ವಿವಿಧ ಸನ್ನಿವೇಶಗಳಿಗೆ ವ್ಯಕ್ತಿಯ ಪ್ರತಿಕ್ರಿಯೆಗಳನ್ನು ನಿರ್ಧರಿಸುವ ಗುಣ ಆತನ ಶೀಲ. ವ್ಯಕ್ತಿಯ ಸಂಸ್ಕಾರದ ಶಿಕ್ಷಣದ ಅಂತಿಮವಾಗಿ ವ್ಯಕ್ತಿತ್ವದ ಪ್ರಕಟಿತ ರೂಪವೇ ಶೀಲ. ಶೀಲದಿಂದ ಶೈಲಿ.

ಕೊನೆಯದು. ಒಂದು ಕಾರ್ಯವನ್ನು ಮನಃಪೂರ್ವಕವಾಗಿ ನಿರ್ವಹಿಸುವಾಗ ನನಗೆ ಒದಗುವ ಸಂತೃಪ್ತಿಯೇ ನಿಜವಾದ ಯಶಸ್ಸು. "ಮನಃಪೂರ್ವಕವಾಗಿ ನಿರ್ವಹಿಸುವುದು" ಎಂಬುದನ್ನು ವಿಶೇಷವಾಗಿ ಗಮನಿಸಬೇಕು. ಹೀಗೆ ಸಾಗುವಾಗ ಮೊದಮೊದಲು, ನಮ್ಮ ಅನುಭವರಾಹಿತ್ಯದಿಂದ ಇಲ್ಲವೇ ಅತ್ಯುತ್ಸಾಹದಿಂದ, ಕಷ್ಟನಷ್ಟಗಳು ಪ್ರಾಪ್ತವಾಗುವುದು ಸಾಮಾನ್ಯ. ಆಗ ವಿಫಲ ಮನೋಭಾವದಿಂದ ಆ ಕಾರ್ಯವನ್ನೇ ಕೈಬಿಡುವ ಆಳ್ವೇಶಿ ನಾನಾಗುವುದಿಲ್ಲ. ಮತ್ತೆ ಮತ್ತೆ ಪ್ರಯತ್ನ ಮಾಡಿಯೇ ತೀರುತ್ತೇನೆ.

ನನ್ನ ಕಿರಿಯ ಮಿತ್ರರು ಈ ಸಪ್ತಶೀಲ ಪ್ರವಚನವನ್ನು ಅತ್ಯುತ್ಸಾಹದಿಂದ ಸ್ವಾಗತಿಸುತ್ತಾರೆ. ನಾನು ಮಧ್ಯೆ ಮಧ್ಯೆ ಹೇಳಿದ ಉಪಕತೆಗಳಿಂದ ಸಾಕಷ್ಟು ಉತ್ತೇಜಿತರಾಗುತ್ತಾರೆ. ನಾನು ಯಾವ ಯೋಜನೆಯನ್ನು ಅವರ ಮುಂದೆ ಇಟ್ಟರೂ–ಮಂಗಳಲೋಕದ ಅಂಗಳಕ್ಕೆ ನೆಗೆವುದೇ ಇರಲಿ ಶಾಂತಸಾಗರದ ಪಾತಾಳಕ್ಕೆ ಮುಳುಗುವುದೇ ಇರಲಿ–ತಾವು ಅದನ್ನು ನಿಷ್ಠಾಪೂರ್ವಕವಾಗಿ ಪ್ರಯತ್ನಿಸುವುದು ಖಾತ್ರಿ ಎಂದು ಆಶ್ವಾಸನೆ ನೀಡುತ್ತಾರೆ. ಬಲು ಸುಲಭವಾಗಿ ಮತ್ತು ಕ್ಷಿಪ್ರವಾಗಿ ಆರ್ಥಿಕ ಗಳಿಕೆ ನೀಡಬಲ್ಲ ಎರಡು ಕಸುಬುಗಳನ್ನು ಬುಟ್ಟಿಯಿಂದ ಹೊರತೆಗೆಯುತ್ತೇನೆ.

ಒಂದನೆಯದು ಕೆಲವು ಸುಪ್ರಸಿದ್ಧ ಇಂಗ್ಲಿಷ್ ಹಾಗೂ ಕನ್ನಡ ದೈನಿಕಗಳಿಗೆ ಚಂದಾದಾರರನ್ನು ಸೇರಿಸುವುದನ್ನು ಇದಕ್ಕೆ ಯಾವ ಬಂಡವಾಳವೂ ಬೇಡ. ಬೇಕಾದದ್ದು ದುಡಿಯಬಲ್ಲ ಸಾಮರ್ಥ್ಯ ಒಂದೇ ಆಯಾ ದೈನಿಕಗಳ

ವ್ಯವಸ್ಥಾಪನೆಗಳೊಂದಿಗೆ ನಾನು ಪತ್ರವ್ಯವಹಾರ ನಡೆಸಿ ಈ ದುಡಮೆಗಾರರಿಗೆ ಅವರ ಕೆಲಸದ ಪ್ರಮಾಣವನ್ನು ಗಮನಿಸಿ ಯುಕ್ತ ಸಂಭಾನೆ ಕೊಡಿಸಲು ಏರ್ಪಾಡು ಮಾಡಿದ್ದಾಯಿತು. ನನ್ನ ತರುಣ ಮಿತ್ರರು ಬೇರೆ ಬೇರೆ ದೈನಿಕಗಳ ಮಾದರಿ ಸಂಚಿಕೆಗಳನ್ನು ತಮ್ಮೊಡನೆ ಮನೆಮನೆಗೆ ಒಯ್ದು ಅಲ್ಲಿಯ ಜನರಿಗೆ ಇವುಗಳ ವಿಚಾರ ಮನಮುಟ್ಟುವಂತೆ ಮಾತಾಡಿ ಅವರನ್ನು ಚಂದಾದಾರರಾಗಿ ದಾಖಲು ಮಾಡುವುದು ಇಲ್ಲಿಯ ಕೆಲಸದ ತಂತ್ರ. ಮೊದಲ ಎರಡು ದಿವಸ ನಾನೂ ಅವರೊಡನೆ ಹೋದೆ. ಆದರೆ ಸ್ವತಂತ್ರವಾಗಿ ಮುಂದುವರೆಸಿಕೊಂಡು ಹೋಗುವ ಛಾತಿ ಬಹುಮಂದಿಗೆ ಇರಲಿಲ್ಲ. ಹೀಗಾಗಿ ಮಾಡಿದ ಕಾರ್ಯಕ್ಕೆ ಅನುಗುಣವಾದ ಆರ್ಥಿಕ ಸಂಭಾವನೆ ಅವರಿಗೆ ಆಗಿಂದಾಗಲೇ ಲಭಿಸಿದರೂ. ಈ ಸಾಹಸ ಕ್ರಮೇಣ ನಂದಿ ಹೋಯಿತು. ದಿನ ದಿನದ ಸಂಘರ್ಷದಲ್ಲಿ ಎದುರಾಗುವ ಹತಾಶೆಯನ್ನೂ ಮುಖಭಂಗವನ್ನೂ ತಡೆದು ಮುನ್ನುಗ್ಗುವ ಪ್ರವೃತ್ತಿ ಹೆಚ್ಚಿನವರಿಗೆ ಇರಲೇಇಲ್ಲ ಅರ್ಥಾತ್ ಕಷ್ಟಪಡದೇ ಸುಖಫಲವನ್ನು ನಿರೀಕ್ಷಿಸುವುದು ಇವರ ಬಾಳಿನ ದೃಷ್ಟಿ ಮತ್ತು ರೀತಿ ಆಗಿದ್ದುವು.

ಎರಡನೆಯದು ಕನ್ನಡ ಹಾಗೂ ಇಂಗ್ಲಿಷ್ ಪುಸ್ತಕಗಳನ್ನು ಮಾರುವ ಸಂಚಾರಿ ವ್ಯಾಪಾರಿ ವ್ಯವಸ್ಥೆ. ಈ ಕಸಬಿಗೆ ಕೂಡ ಯಾವುದೇ ಮೂಲಧನ ಬೇಕಾಗಿರಲಿಲ್ಲ. ದೊಡ್ಡ ಮಾರಾಟಗಾರರಿಂದ ಮಾಲನ್ನು ರಿಯಾಯಿತಿ ದರದಲ್ಲಿ ಕಡ ಪಡೆದು ಮಾರಾಟವಾದ ಬಳಿಕ ಅವರಿಗೆ ಉಳಿದ ಪುಸ್ತಕಗಳನ್ನೂ ಹಣವನ್ನೂ ಸಲ್ಲಿಸಿ ಲಾಭಾಂಶವನ್ನು ಪಡೆಯುವುದು ಇಲ್ಲಿಯ ಕ್ರಮ. ನನ್ನ ಜಾಮೀನಿನ ಮೇಲೆ ಪುಸ್ತಕ ವ್ಯಾಪಾರಿಗಳು ಈ ತರುಣ ಮಿತ್ರರಿಗೆ ಸುಲಭವಾಗಿ ಬಿಕರಿ ಆಗಬಹುದಾದ ಪುಸ್ತಕಗಳನ್ನು ಸಾಲವಾಗಿ ಒದಗಿಸಿದರು. ಮೊದಲ ದಿವಸಗಳಲ್ಲಿ ಇವರ ಪೈಕಿ ಕೆಲವರು ಕೇವಲ ನಾಲ್ಕು ಗಂಟೆಗಳ "ಮನೆ ಮನೆಗೆ ಸರಸ್ವತಿ" ವ್ಯವಹಾರದಲ್ಲಿ ನೂರು ರೂಪಾಯಿಗಳಷ್ಟು ವ್ಯಾಪಾರ ಮಾಡಿ ಇಪ್ಪತ್ತೈದು ರೂಪಾಯಿಗಳಷ್ಟು ಲಾಭ ಗಳಿಸಿದರು. ಆದರೆ ಇಲ್ಲಿಯೂ ಪಾಥೇಯ ಮುಗಿದ ಬಳಿಕ ಮುಂದೆ ಸಾಗಲು ಬೇಕಾದ ತಾಕತ್ತು ಇವರಿಗೆ ಇದ್ದಂತೆ ತೋರಲಿಲ್ಲ. ಅನುದಿನ ಸ್ವಂತ ಪ್ರಯತ್ನವನ್ನು ಪ್ರಯೋಗಿಸಿದ ವಿನಾ ಇಂಥ ಯಾವ ಸಾಹಸವೂ ಮುಂದುವರಿಯಲಾರದು. ಆಂತರಿಕ ಇಂಧನ ಉತ್ಪಾದಿಸಿ ನಡೆದ ಜೀವಂತ ಯಂತ್ರ ನಮ್ಮ ದೇಹ.

ಈ ಕಾಲು ಶತಮಾನಕ್ಕೂ ಮಿಕ್ಕದ ನನ್ನ ವಿವಿಧ ಪ್ರಯೋಗಗಳಲ್ಲಿ ಒಂದು

ಅಂಶವನ್ನಂತೂ ಚೆನ್ನಾಗಿ ಕಂಡುಕೊಂಡಿದ್ದೇನೆ: ನಮ್ಮ ತರುಣ ನಿರುದ್ಯೋಗೀ ಪದವೀಧರರಿಗೆ ಸವಾಲನ್ನು ಎದುರಿಸುವ ಛಲ ಬಹುತೇಕವಾಗಿ ಇರುವುದಿಲ್ಲ; ಸ್ವೋದ್ಯೋಗ ಮಾಡಿ ಗಟ್ಟಿ ಕುಳ ಆಗಿ ಬಾಳೋಣ ಎನ್ನುವ ಆಕಾಂಕ್ಷೆ ಇವರಲ್ಲಿ ಬಲು ಕಡಿಮೆ. ಇದರ ಬದಲು ದೊಡ್ಡ ಸಂಬಳದ ಕಡಿಮೆ ಕೆಲಸದ. ಹೆಚ್ಚು ಅಧಿಕಾರದ ತಾಬೆದಾರಿಕೆಯೇ ಇವರಿಗೆ ಅಧಿಕ ಆಕರ್ಷಣೆ. ಎಂಜಿನಿಯರಿಂಗ್. ವೈದ್ಯ ವ್ಯವಸಾಯಗಳಂಥ ವೃತ್ತಿ ಶಿಕ್ಷಣಗಳನ್ನು ಪಡೆದವರು ಕೂಡ ನೌಕರಿಗಳನ್ನು ಗಿಟ್ಟಿಸಿಕೊಳ್ಳಲು ಬಲು ವಿಧವಾದ ದೊಂಬರಾಟಗಳನ್ನು ಹೂಡುವುದೂ ಆಡುವುದೂ ಕಾಣುವಾಗ ಸಾಹಸಪ್ರಿಯತೆಯ ಸೆಲೆಯೇ ಇವರಲ್ಲಿ ಹಿಂಗಿ ಹೋಗಿದೆಯೇ ಎಂಬ ಸಂದೇಹ ಮೂಡುವುದು.

ತಾಬೆದಾರಿಕೆ ಎಂದರೆ ಇತರರ (ವ್ಯಕ್ತಿ ಆಗಬಹುದು. ಸಂಸ್ಥೆ ಆಗಬಹುದು ಸರಕಾರ ಆಗಬಹುದು) ಆಶ್ರಯದಲ್ಲಿ ಗೊತ್ತಾದ ಒಂದು ಹುದ್ದೆಯನ್ನು ಪಡೆದು ಆ ಸೇವೆಗೆ ಪ್ರತಿ ಫಲವಾಗಿ ಗೊತ್ತಾದ ಒಂದು ಸಂಬಳವನ್ನು ಹೊಂದಿಕೊಳ್ಳುವುದು ಎಂದು ಅರ್ಥ. ಆದ್ದರಿಂದ ಈ ಅರ್ಥದಲ್ಲಿ ಇಂದಿನ ಯುವಜನಾಂಗದ ದಿವ್ಯಾದರ್ಶಗಳಾದ ವಾಣಿಜ್ಯ ಸಂಸ್ಥೆಗಳಲ್ಲಿಯ ವ್ಯವಸ್ಥಾಪಕರ ಹುದ್ದೆಗಳು. ಬೃಹತ್ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿಯ ಹಿರಿಯ ಎಂಜಿನಿಯರರ ಹುದ್ದೆಗಳು. ವಿಶ್ವವಿದ್ಯಾಲಯಗಳಲ್ಲಿಯ ಪ್ರಾಧ್ಯಾಪಕರ ಹುದ್ದೆಗಳ. ಅಖಿಲ ಭಾರತೀಯ ಸೇವಾ ಹುದ್ದೆಗಳು. ರಕ್ಷಣಾ ಬಲಗಳಲ್ಲಿ ಕಮಿಷನ್ ಪಡೆದ ಹುದ್ದೆಗಳು ಮುಂತಾದವು ಕೂಡ ತಾಬೆದಾರಿಕೆಗಳೇ. ಅಂತೆಯೇ ತಾಲೂಕು ಕಚೇರಿಯಲ್ಲಿ ಗುಮಾಸ್ತರ ಹುದ್ದೆಗಳು. ಅಂಗಡಿಗಳಲ್ಲಿ ಕಾರಕೂನರ ಹುದ್ದೆಗಳು. ಬಸ್ಸುಗಳಲ್ಲಿ ಕಂಡಕ್ಟರರ ಹುದ್ದೆಗಳು ಮುಂತಾದವು ಕೂಡ ತಾಬೆದಾರಿಕೆಗಳು. ತಾಬೆದಾರಿಕೆಯಲ್ಲಿ ವ್ಯಕ್ತಿಯ ಬದುಕಿಗೆ ಒಂದು ವಿಧವಾದ ರಕ್ಷಣೆ ಒದಗುತ್ತದೆ. ಆತ ನಾಳೆಯನ್ನು ಕುರಿತು ಚಿಂತೆ ಮಾಡಬೇಕಾಗುವುದಿಲ್ಲ. ಅವನಿಗೆ ಹಲವಾರು ವಿಧಧ ಸೌಕರ್ಯಗಳು ತಾಬೆದಾರಿಕೆಯ ಮಿತಿಯೊಳಗೆ ಮಂಜೂರಾಗಿರುವುದರಿಂದ ಅನೇಕ ವೇಳೆ ಕೆಲಸ ಮಾಡದೆಯೂ ಆತ ಅದರ ಪ್ರತಿಫಲ ಪಡೆಯಬಲ್ಲ. ಅವನ ಸಮಾಜದ ದೃಷ್ಟಿಯಲ್ಲಿ ಅವನೊಬ್ಬ 'ಜನ' ಎನ್ನಿಸಿಕೊಳ್ಳುತ್ತಾನೆ. ಆದ್ದರಿಂದ ಇಂಥ ಹೊಣೆಗಾರಿಕೆ ಇಲ್ಲದ, ಆದರೆ ಸವಲತ್ತು ಮತ್ತು ದವಲತ್ತು ವಿಪುಲವಾಗಿ ಲಭಿಸುವ. ಒಂದು ಕೃಪಾಶ್ರಯದ ನೆರಳಿನಲ್ಲಿ ಬಾಳಲು ನಮ್ಮ ತರುಣತರುಣಿಯರು

ಧಾವಿಸುವುದು ಖಂಡಿತವಾಗಿಯೂ ಅಪರಾಧವಲ್ಲ. ಇದೇ ಸಹಜವಾದ ನಡವಳಿಕೆ ಎಂದರೂ ತಪ್ಪಿಲ್ಲ. ಆದರೆ ಇದು ನಮ್ಮ ರಾಷ್ಟ್ರೀಯ ಮನೋಧರ್ಮ ಮತ್ತು ನಮ್ಮ ತರುಣ ಜನಾಂಗದ ಪ್ರವೃತ್ತಿ ಆಗಿರುವುದು ಖಂಡಿತ ಸಾಹಸಪ್ರಿಯತೆಯ ಅಭಾವದ ದ್ಯೋತಕ. ಇಂಥ ಒಂದು ಜನಾಂಗ ಅಂತಾರಾಷ್ಟ್ರೀಯವಾಗಿ ಹೆಚ್ಚಿನ ಎತ್ತರ ಏರಲಾರದು. ಅಧಿಕ ಜನಸಂಖ್ಯೆ ಸಮೃದ್ಧ ನೈಸರ್ಗಿಕ ಸಂಪನ್ಮೂಲಗಳು. ಸಾಹಸ ಪ್ರಿಯರನ್ನು ಆಕರ್ಷಿಸುವ ಅಸಂಖ್ಯ ನವ ಕ್ಷೇತ್ರಗಳನ್ನು ಸ್ಥಿರ ಸರಕಾರ ಹಾಗೂ ಆಂತರಿಕ ಶಾಂತಿಯ ಸುದೀರ್ಘ ಪರಂಪರೆ ಇರುವ ರಾಷ್ಟ್ರಗಳ ಪೈಕಿ ಭಾರತಕ್ಕೆ ಪ್ರಪಂಚದಲ್ಲಿ ಗಣ್ಯಸ್ಥಾನವಿದ್ದರೂ ಕೈಗಾರಿಕೋದ್ಯಮ ರಂಗದಲ್ಲಿ ನಾವಿನ್ನೂ ಅಭಿವೃದ್ಧಿಶೀಲ ರಾಷ್ಟ್ರವಾಗಿರುವುದು. ವಿಜ್ಞಾನ ಸಂಶೋಧನೆಯ ರಂಗದಲ್ಲಿ ನಾವು ಯಾವುದೇ ಗಮನಾರ್ಹ ಸಿದ್ಧಿ ಸಾಧಿಸದಿರುವುದು ಮತ್ತು ನಮ್ಮ ರಾಷ್ಟ್ರೀಯ ಕಸುಬಾದ ಕೃಷಿರಂಗದಲ್ಲಿ ಕೂಡ ನಾವು ಕೆಂಪು–ನೀಲಿಗಳ ನಡುವೆ ಓಲಾಡುತ್ತಿರುವುದು ನಾನು ಮೇಲೆ ಬರೆದಿರುವ ಮಾತಿಗೆ ವೇದನಾಸಹಿತ ನಿದರ್ಶನಗಳು. ಎರಡನೆಯ ಮಹಾಯುದ್ಧದ ವೇಳೆ ಧೂಳಿ ದೂಸರಿತವಾದ ಜಪಾನ್ ಜರ್ಮನಿಗಳ ಕ್ಷಿಪ್ರ ಪ್ರಗತಿಯನ್ನು ಕಾಣುವಾಗ ಅಂಥ ಯಾವ ಘಾಸಿಗೂ ಈಡಾಗದ ನಾವು ಇನ್ನೂ ಕುಂಟುತ್ತ ತೆವಳುತ್ತ ಇರುವುದನ್ನು ನೋಡುವಾಗ ನಮ್ಮ ಪ್ರಧಾನ ಕೊರತೆ ಇರುವುದು ಸಾಹಸಪ್ರಿಯತೆಯ ಗೈರುಹಾಜರಿಯಲ್ಲಿ ಎಂದು ಯಾರಿಗೂ ಹೊಳೆಯದಿರದು. ಇಂಥ ಪರಾವೃತ್ತ ಮನೋಧರ್ಮ, ಸಿಂದಬಾದನ ಮುದುಕನಂತೆ ನಮ್ಮ ಬೆನ್ನೇರಿರುವುದರ ಕಾರಣವನ್ನು ಗುರುತಿಸುವುದು ಕಷ್ಟವಲ್ಲ. ಸುದೀರ್ಘ ಬ್ರಿಟಿಷ್ ಆಳ್ವಿಕೆಯ ಪ್ರಮುಖ ಉಪೋತ್ಪನ್ನವಿದು. ವಿಷಫಲವಿದು. ನನ್ನ ಪೀಳಿಗೆಯವರನ್ನು (ಅಂದರೆ ಸ್ವಾತಂತ್ರ್ಯಪೂರ್ವದಲ್ಲಿ ಪದವಿ ಪಡೆದಂಥವರು) ಪ್ರಕಟಿತವಾಗಿಯೇ ಆಡಳಿತದ ನೊಗಹೊರಲೆಂದು ತಯಾರು ಮಾಡುತ್ತಿದ್ದುದು ವಾಡಿಕೆ. "ಒರತೆ ನೀರಿನಂತೆ ಸತತವಾಗಿ ಸಂಬಳ ಸಮಾಜದಲ್ಲಿ ಅಪಾರ ಅಧಿಕಾರ ಗೌರವ" ಒದಗಿಸುವಂಥ ಸರಕಾರದ ಸೇವೆಯನ್ನು ಸೇರುವುದೊಂದೇ ಜೀವನದ ಸಾರ್ಥಕ ಎಂದು ಅಂದಿನವರು ಪ್ರಾಮಾಣಿಕವಾಗಿ ನಂಬಿ ಅನುಷ್ಠಾನಕ್ಕೆ ತಂದಿದ್ದರು. ಶ್ರೀನಿವಾಸ ರಾಮಾನುಜನ್ (1887–1920) ಮತ್ತು ಸರ್ ಸಿ.ವಿ. ರಾಮನ್ (1888–1970) ಇವರಂಥ ಯುಗಪುರುಷರೇ ತಮ್ಮ ಬದುಕಿನ ಆರಂಭದ ದಿನಗಳಲ್ಲಿ ತಾವು

ಕಲಿತ ವಿದ್ಯೆಗೆ ಯಾವುದೇ ಸಂಬಂಧವಿಲ್ಲದ ನೌಕರಿಗಳನ್ನು ಹಿಡಿಯಬೇಕಾಯಿತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಅಂದಿನ ಸ್ಥಿತಿಗತಿ ಉದ್ಯೋಗ ವಿಭವ (employment potential). ಸಾರ್ವಜನಿಕ ಪರಿಸರ. ಆಸೆ ಆಕಾಂಕ್ಷೆಗಳು ಏನೇ ಇರಲಿ ಸ್ವಾತಂತ್ರ್ಯ ಬಂದು 27 ವರ್ಷಗಳು ಉರುಳಿದ ಬಳಿಕವೂ (1974) ಅದೇ ಮನೋಧರ್ಮ ಮುಂದುವರಿಯುತ್ತಿರುವುದನ್ನು ಗಮನಿಸುವಾಗ ಇದೊಂದು ತಳಿಸಂಬಂಧೀ ಬೇನೆ ಎಂದು ನಿಧಾನಿಸದೇ ಗತ್ಯಂತರವಿಲ್ಲ. ಪ್ರಯತ್ನಪೂರ್ವಕವಾಗಿ ಇದರ ಹುಟ್ಟಳಿಸುವುದೊಂದೇ ಹಾದಿ.

ತಾಬೆದಾರಿಕೆಯೂ ವ್ಯಕ್ತಿತ್ವವಿಕಾಸವೂ ಪರಸ್ಪರ ಪ್ರತಿಲೋಮಾನುಪಾತದಲ್ಲಿ (inversely proportional) ಇರುವುದು ಬದುಕಿನ ಕಠೋರ ಸತ್ಯ. ತಾಬೆದಾರಿಕೆಯಲ್ಲಿ ಒದಗುವ ವಿವಿಧ ಬಗೆಯ ರಕ್ಷಣೆಗಳ ಪರಿಣಾಮವಾಗಿ ವ್ಯಕ್ತಿ ಕನಿಷ್ಠ ಕಾರ್ಯಪ್ರವೃತ್ತವಾಗುವುದು ಅಪರೂಪವೇನಲ್ಲ. ತಾನು ಕೆಲಸ ಮಾಡಿದರೂ ಮಾಡದಿದ್ದರೂ ನೌಕರ ಶಾಹಿಯ ಸಾಗುಪಟ್ಟಿ ತನ್ನನ್ನು ಮುಂದೆ ಮುಂದೆ ಕೊಂಡೊಯ್ದೇ ಒಯ್ಯುತ್ತದೆ. ತನ್ನ ಸಂಬಳ ಮುಂತಾದ ಸವಲತ್ತುಳು ನಿಗದಿ ಆದಂತೆ ಬಂದೇಬರುತ್ತವೆ ಎಂಬ "ತೃಪ್ತ" ಮನೋಭಾವವನ್ನು ಆತ ತಳೆಯುತ್ತಾನೆ. ಇದು ಅವನಲ್ಲಿ ಸಾಮಾನ್ಯವಾಗಿ ಜಡತ್ವವನ್ನು ಪ್ರೇರಿಸುತ್ತದೆ. ಹೀಗಾಗಿ ಅವನಿಗೆ ಸವಾಲುಗಳು ಎದುರಾಗುವುದಿಲ್ಲ. ಆದ್ದರಿಂದ ಅವನ್ನು ಬಿಡಿಸುವ ಮತ್ತು ತನ್ಮೂಲಕ ತನ್ನ ವ್ಯಕ್ತಿತ್ವವನ್ನು ಅಭಿವರ್ಧಿಸುವ ಅವಕಾಶಗಳೇ ಅವನಿಗೆ ಒದಗಲಾರವು. ನೌಕರಶಾಹಿ ಒದಗಿಸುವ ರಕ್ಷಣೆಗೆ ವ್ಯಕ್ತಿ ತನ್ನ ವಿಕಾಸರಾಹಿತ್ಯವನ್ನು ಶುಲ್ಕವಾಗಿ ತರಬೇಕಾಗುತ್ತದೆ. ತಾಬೆದಾರಿಕೆಯ ಗಾಣಕ್ಕೆ ಹೆಗಲನ್ನು ಒಡ್ಡಿರುವ ಪ್ರತಿಯೊಂದು "ಎತ್ತಿ"ನ ಅನುಭವವಾದರೂ ಏನು? ಮುಖಭಂಗ, ಆತ ಸ್ಪಷ್ಟವಾಗಿ ತಪ್ಪು ಎಂದು ತಿಳಿದಿರುವ ಹಾದಿಯಲ್ಲಿ ನಡೆಯಲೇಬೇಕಾಗುವ ಧರ್ಮಸಂಕಷ್ಟ. ಕ್ರಮೇಣ ಅವನು ಕನಿಷ್ಠ ರೋಧ ಪಥ ಅನುಸರಿಸಿ ಅಷ್ಟರಮಟ್ಟಿಗೆ ಸ್ವಪ್ರತಿಷ್ಠೆ ಸ್ವಂತ ವ್ಯಕ್ತಿತ್ವ ಕಳೆದುಕೊಂಡು. ಲೋಭೋತ್ಕರ್ಷಗಳನ್ನು ಪಡೆಯುವುದು ನಿಯಮ.

ಸ್ವೋದ್ಯೋಗದಲ್ಲಿ ವ್ಯಕ್ತಿಗೆ ಪ್ರಕಟಿತವಾಗಿ ಯಾವ ರಕ್ಷಣೆಯೂ ಇರುವುದಿಲ್ಲ. ಅವನು ತಿಳಿದು ದುಡಿದರೆ ಉಂಟು. ದುಡಿಯದಿದ್ದರೆ ಇಲ್ಲ. ಅದೃಷ್ಟ ನಂಬಿ ಕ್ರಿಯಾಹೀನರಾಗುವಂಥ ಮತಿಗೇಡಿಗಳ ವಿನಾ ಉಳಿದವರು ಕನಿಷ್ಠ ಪಕ್ಷ ತಮ್ಮ ಹೊಟ್ಟೆಯ ತಪ್ಪು ತಾಳವನ್ನೂ ತಮ್ಮನ್ನು ನಂಬಿದವರ ಅಪಸ್ವರ

ಪಿಟೀಲುವಾದನವನ್ನೂ ಹತೋಟಿಯಲ್ಲಿ ಇಡಲೋಸ್ಕರವಾದರೂ ದುಡಿಮೆಗೆ ಕೈ ಹಚ್ಚಬೇಕಾಗುತ್ತದೆ. ಆದ್ದರಿಂದ ಸುಗಮವಾಗಿ ಬದುಕಬಲ್ಲಂಥ ಬೇರೆ ಬೇರೆ ಹಾದಿಗಳನ್ನು ಅವನು ಆಯುವುದು ಅನಿವಾರ್ಯವಾಗುವುದು. ಇಂಥಲ್ಲಿ ದಿನದಿನವೂ ಹೊಸ ಹೊಸ ಸವಾಲುಗಳು. ಅನೇಕ ವೇಳೆ ಹಲವಾರು ಬಾಹ್ಯಕಾರಣಗಳ ಪರಿಣಾಮವಾಗಿ ಊಹಾತೀತ ಸಮಸ್ಯೆಗಳು ಎದುರಾಗುತ್ತವೆ. ಯಾವಾತ ಇವನ್ನು ಸ್ಥಿತಪ್ರಜ್ಞನಾಗಿ ಅವಿಚಲಿತ ಮನಸ್ಕನಾಗಿ ಕಾರ್ಯಕಾರಣ ಸಂಬಂಧಗ್ರಾಹಿಯಾಗಿ ಪರಿಗ್ರಹಿಸಿ ಪರಿಹರಿಸುತ್ತಾನೋ ಆತ ಹೊಸ ಎತ್ತರಗಳನ್ನು ಏರುತ್ತಾನೆ. ಹೊಸ ಹುಸುರುಗಳನ್ನು ಕಾಣುತ್ತಾನೆ. ಇತರರಿಗೆ ಮುಂದಾಳು ಆಗುತ್ತಾನೆ. ಹೀಗೆ ಮಾಡಲಾಗದವರಿಗೆ ನೌಕರ ಶಾಹಿಯ ಕೃಪಾಶ್ರಯ ಪಡೆಯಲು ನಿರ್ಗಮದ್ವಾರ ಸದಾ ತೆರೆದೇ ಇದೆ. (ಆದರೆ ಅಲ್ಲಿಯ ಆಗಮದ್ವಾರದಲ್ಲಿ ಸ್ವಾಗತ ಕಾದಿದೆಯೇ ಎಂಬ ಪ್ರಶ್ನೆ ಮಾತ್ರ ಬೇರೆ!) ಸವಾಲನ್ನು ಎದುರಿಸುವಾತ ಅನುಭವಿಸುವ ಒಂದೊಂದು ಸೋಲೂ, ಗೆಲುವಿಗಿಂತಲೂ ಅಧಿಕ. ಪ್ರಯೋಜನಕಾರಿ. "ಏಕೆಂದರೆ. ಒಂದು ತಕ್ಕಡಿಯಲ್ಲಿ ತನ್ನ ಆವರಣದ ಭಾರವು ಒಂದು ಕಡೆ ಇರುವಾಗ, ವ್ಯಕ್ತಿಯ ತೂಕವು ಮತ್ತೊಂದು ಕಡೆ ಇದ್ದು ಮೊದಲಿನವರ ಭಾರಕ್ಕೆ ವ್ಯಕ್ತಿಯು ಕಡಿಮೆ ತೂಕದವನಾಗಿ ಕಾಣುತ್ತಾನೆ. ಯಶಸ್ಸು ನಮ್ಮಂತೆ ಹೋರಾಡುವ ಇತರ ಪ್ರಾಣಿಗಳ ಮುಂದೆ ನಮ್ಮ ಹಿರಿಮೆಯನ್ನು ತೋರಿಸಬಹುದಾದರೂ ಆ ಹಿರಿಮೆಯಿಂದ ಹೆಮ್ಮೆ ಉದಯಿಸಬಹುದಾದರೂ, ವ್ಯಕ್ತಿಯ ತೂಕವನ್ನು ಅದೊಂದೇ ಹೇಳಲಾರದು. ಸಮಾಜದ ಪ್ರವಾಹಕ್ಕೆ ಅನುಕೂಲವಾಗಿ ಹೋಗುವವನಿಗೆ. ಗಾಳಿಗೆ ತಕ್ಕಂತೆ ಕೊಡೆಯನ್ನು ಹಿಡಿಯಬಲ್ಲವನಿಗೆ ಯಶಸ್ಸು ಸಾಧ್ಯವಾಗುವಷ್ಟು ಇತರರಿಗೆ ಆಗಲಾರದು. ಲೌಕಿಕದ ಯಾವ ಯಶಸ್ಸೇ ಆಗಲಿ ಬರಿಯ ನಮ್ಮನ್ನು ಹೊಂದಿಲ್ಲ ಎಂಬುದನ್ನೂ ಮನಗಂಡಿದ್ದೇನೆ. ವಿಧಿಯೋ ಅದೃಷ್ಟವೋ ಅನುಕೂಲ ಸಂದರ್ಭವೋ ಹೇಳ ಹೆಸರಿಲ್ಲದ ಇನ್ನೇನೋ– ಕೆಲವು ವೇಳೆ ನಮ್ಮ ಪ್ರಯತ್ನಕ್ಕೆ ಮಿಗುವ ಯಶಸ್ಸನ್ನು ದೊರಕಿಸಿಕೊಡುತ್ತದೆ. ನಾವು ಅತ್ಯಂತ ಶ್ರಮಪಟ್ಟಾಗಲೂ ಅದೇ ಯಶಸ್ಸು ನಮ್ಮನ್ನು ಕುಕ್ಕಿ ಮೂದಲಿಸಿ ಹೊರಟು ಹೋಗುವುದುಂಟು. ಆದರೆ ಒಂದು ನಿಜ. ಸೋತವನಿಗೆ ತಿರುತಿರುಗಿ ಕೆಲಸ ಮಾಡಲು ಅವಕಾಶವಿದೆ. ಗೆದ್ದವನಿಗೆ ಆ ಕೆಲಸ ಮುಗಿದಂತೆಯೇ ಎಲ್ಲಿಯ ತನಕ ನಾವು ಕೆಲಸದಲ್ಲಿ ಆಸಕ್ತಿಯನ್ನು ವಹಿಸುತ್ತೇವೋ ಅದರ ಅವಶ್ಯಕತೆಯನ್ನೂ ಚೆಲುವನ್ನೂ ಮನಗಾಣುತ್ತೇವೋ

ಅಲ್ಲಿಯ ತನಕ ಕೆಲಸವೇ ಆನಂದ. ಸೋಲು ತಂದುಕೊಡುವ ವಸ್ತು ಪ್ರಪಂಚದ ಅರಿವೆಂಬುದು ಕೂಡ ಒಂದು ಆನಂದವೇ ವ್ಯಕ್ತಿಯು ಎಚ್ಚರವುಳ್ಳವನಾದರೆ ಸೋಲು ದೊರಕಿಸಿಕೊಡುವ ಅನುಭವಗಳೂ ವ್ಯರ್ಥವಾಗವು. ಮುಂದಿನ ಬದುಕಿಗೆ ಅವು ಸಹಾಯ." (ಶಿವರಾಮ ಕಾರಂತ 'ಹುಚ್ಚು ಮನಸ್ಸಿನ ಹತ್ತು ಮುಖಗಳು')

ತಾಬೆದಾರಿಕೆಯ ಕೃಪಾಶ್ರಯ ಪಡೆಯುವುದು ಅಪರಾಧ ಎಂದಾಗಲಿ ಸ್ವೋದ್ಯೋಗದ ಕಂಟಕಾಶ್ರಯ ಸ್ವೀಕರಿಸುವುದು ಪುಣ್ಯಕಾರ್ಯ ಎಂದಾಗಲಿ ಸಾಧಿಸಲು ನಾನು ಹೊರಟಿಲ್ಲ. ದೇಶದ ಬಂಡಿ ಸಾಗಲು. ಅಂತಿಮವಾಗಿ ಪ್ರಾಯಶಃ ನೂಕುವವರ ಹಾಗೂ ಎಳೆಯುವವರ ಸಂಖ್ಯೆಯೇ ಅಧಿಕವಾಗಿ ಬೇಕಾದೀತು. ಇನ್ನು ತಾಬೆದಾರಿಕೆಯಲ್ಲಿ ವ್ಯಕ್ತಿತ್ವ ವಿಕಾಸಗೊಳ್ಳುವುದೇ ಇಲ್ಲವೆಂದಾಗಲಿ ಅಂತೆಯೇ ಸ್ವೋದ್ಯೋಗದಲ್ಲಿ ಅದು ಪರಿಪೂರ್ಣ ವಿಕಾಸಗೊಂಡೇ ತೀರುವುದು ಎಂದಾಗಲಿ ಕೂಡ ನಾನು ಸಾಧಿಸಲು ಹೊರಟಿಲ್ಲ. ಮಾನವ ಗತಿವಿಜ್ಞಾನದಲ್ಲಿ ಇಂಥ ಯಾವ ನಿಯಮಗಳೂ ಸಾಧು ಆಗಲಾರವು. ನನ್ನ ವಾದದ ಸಾರಾಂಶ ಇಷ್ಟು: ವ್ಯಕ್ತಿಯ ಮನಸ್ಸು ಬಲು ಪುಟಿತತೆಯಿಂದ ಕೂಡಿದೆ. ಚಂಡನ್ನು ಎಷ್ಟೆಷ್ಟು ಹೆಚ್ಚು ಬಲಯುತವಾಗಿ ನೆಲಕ್ಕೆ ಬಡಿಯುವಿರೋ ಅಷ್ಟಷ್ಟು ಹೆಚ್ಚು ಎತ್ತರಕ್ಕೆ ಅದು ಪುಟ ನೆಗೆಯುವಂತೆ ಈ ಮನಸ್ಸಿನ ಸಾಮರ್ಥ್ಯ ಉಂಟು. ಅದನ್ನು ಎಳವೆಯಿಂದಲೇ ಸಮರ್ಪಕವಾಗಿ ರೂಪಿಸಿದರೆ, ಅಂದರೆ ಅದನ್ನು ಸವಾಲುಗಳೆಂಬ ಬಲದಿಂದ ಬದುಕೆಂಬ ನೆಲಕ್ಕೆ ಬಡಿದು ಬಡಿದು ಅದರ ಪುಟಿತತೆಯನ್ನು ಕ್ರಮೇಣ ವರ್ಧಿಸಿದರೆ ಅದು ಏರಬಲ್ಲ ಎತ್ತರ ಅಗಾಧವಾಗಿರುತ್ತದೆ. ಹೀಗಲ್ಲದೆ ಅದನ್ನು ಅಜ್ಜಿ ಸಾಕಿದ ಮಗುವಿನಂತೆ ಬೆಳೆಸಿದರೆ ಕಾಲಾನುಕ್ರಮದಲ್ಲಿ ಅದು ಬೊಜ್ಜಕ್ಕೂ ಬಾರದಾಗುವುದು ತಿಳಿದದ್ದೇ. ಚಿಕ್ಕಂದಿನಿಂದಲೇ ಸವಾಲುಗಳನ್ನು ಎದುರಿಸಬಲ್ಲಂಥ. ನವಸಾಹಸಕೃತ್ಯಗಳನ್ನು ಪ್ರದರ್ಶಿಸಬಲ್ಲಂಥ ಹಾಗೂ ಹೊಸ ಜಾಡುಗಳನ್ನು ತುಳಿಯಬಲ್ಲಂಥ ವ್ಯಾಪಕ ವ್ಯಕ್ತಿತ್ವ ರೂಪಿಸಿಕೊಂಡು ಬೆಳೆದು ಬಂದ ತರುಣ ತರುಣಿಯರ ಆದ್ಯ ಲಕ್ಷ್ಯ ಇರುವುದು ಸ್ವಪ್ರತಿಭೆಯನ್ನು ಸ್ವೋದ್ಯೋಗಕ್ಷೇತ್ರದಲ್ಲಿ ಬೆಳಗಿಸಲು. ತಾಬೆದಾರಿಕೆಯಲ್ಲಿ ಅದನ್ನು ಮುಸುಕುಗೊಳಿಸಲು ಅಲ್ಲ. ಇಂಥವರೇ ನೆಲದ ರಸಧಾತು. ರಾಜ್ಯದ ಪ್ರಾಣವಾಯು. ರಾಷ್ಟ್ರದ ತಪಶ್ಚರ್ಯೆ ತಾವು ರೂಪಿಸಿ ಕೊಂಡಿರುವ ಆದರ್ಶದತ್ತ ಸಾಗಲು ಇರುವ ವಿವಿಧ ಸಾಧನೆಗಳು ಮಾತ್ರ.

ಮೋಹನ್ ಕೆಪ್ಲರ್ (1571–1630) ಕಡು ಬಡತನದಲ್ಲಿ ಸದಾ ಕಾಯಿಲೆ ಕಸಾಲೆಗಳಿಂದ ಪೀಡಿತನಾಗಿ ಬೆಳೆದ ಒಬ್ಬ ಗಣಿತವಿಜ್ಞಾನಿ. ಸೌರವ್ಯೂಹದ ರಚನೆಯ ಬಗ್ಗೆ ಆತನಿಗೆ ಮೂಲಭೂತವಾದ ಒಂದು ಸಂದೇಹ ಮೊಳೆಯಿತು: ಇದರಲ್ಲಿ ಆರು ಗ್ರಹಗಳು ಮಾತ್ರ (ಅಂದು ತಿಳಿದಿದ್ದಂಥವು ಬುಧ, ಶುಕ್ರ, ಭೂಮಿ, ಮಂಗಳ, ಗುರು, ಶನಿ) ಏಕೆ ಇರಬೇಕು? ಗಣಿತಜ್ಞನಾದ ಆತ ಈ 6 ಎಂಬ ಸಂಖ್ಯೆಯ ಮೇಲೆ ಸಹಜವಾಗಿ ತನ್ನ ಲಕ್ಷ್ಯವನ್ನು ಸಾಂದ್ರೀಕರಿಸಿದ ಇದರ ಅಪವರ್ತನಗಳ ಗುಣಲಬ್ಧವೂ ಮೊತ್ತವೂ ಇದೇ ಆಗುತ್ತದೆ: $1 \times 2 \times 3 = 6 = 1+2+3$. ಇಂಥ ಸಂಖ್ಯೆ ಇದೊಂದೇ. ಈ ಸುಂದರ ಹಾಗೂ ಏಕೈಕ ಗುಣದ ಪ್ರಕಟಿತ ರೂಪವಾಗಿ. ಸ್ವತಃ ಮಹಾಗಣಿತ ವಿದ್ವಾಂಸನಾದ ಪರಮಾತ್ಮ. ಸೌರವ್ಯೂಹದಲ್ಲಿ 6 ಗ್ರಹಗಳನ್ನು ಪ್ರತಿಷ್ಠಾಪಿಸಿದ್ದಾಗಿರಬೇಕು ಎಂಬುದಾಗಿ ಕೆಪ್ಲರ್ ತರ್ಕಿಸಿದ ತನ್ನ ಈ ಗಣಿತ ಚಿಂತನೆಯ ಧಾಟಿಗೆ ಆತ ಇನ್ನೂ ಒಂದು ರಸಪುಷ್ಟಿಯನ್ನು ಪಡೆದ: ವಿಶ್ವದಲ್ಲಿರುವ (ನಾವು ರಚಿಸಬಹುದಾದವನ್ನೂ ಒಳಗೊಂಡಂತೆ) ಸಮಘನಾ ಕೃತಿಗಳು (regular solids) ಐದು ಮಾತ್ರ; ಇವನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಒಂದರ ಹೊರಗೆ ಇನ್ನೊಂದು ಇರುವಂತೆ ಅಳವಡಿಸಿ ಪ್ರತಿಯೊಂದನ್ನು ಅಂತಃಸ್ಪರ್ಶಿಸುವಂತೆಯೂ ಪರಿಗೋಲಿಸುವಂತೆಯೂ ವಿವಿಧ ಗಾತ್ರಗಳ ಆರು ಏಕಕೇಂದ್ರಿಯ ಗೋಲಗಳನ್ನು ರಚಿಸಬಹುದು. ಈ ಗೋಲಗಳ ಕೇಂದ್ರವೇ ಸೂರ್ಯನ ಸ್ಥಾನ. ಇವುಗಳ ತ್ರಿಜ್ಯಗಳು ಸೂರ್ಯನಿಂದ ಬೇರೆ ಬೇರೆ ಗ್ರಹದೂರಗಳ ನಿಷ್ಪತ್ತಿಗಳನ್ನು ಕೊಡುತ್ತವೆ. ಕೆಪ್ಲರ್ ನೀಡಿದ ಸೌರವ್ಯೂಹದ ಈ ಸುಂದರ ಪ್ರತಿರೂಪ ಕೇವಲ ಬೌದ್ಧಿಕ ದೊಂಬರಾಟವಾಗಿ ಐತಿಹಾಸಿಕ ಪ್ರಾಮುಖ್ಯ ಗಳಿಸಿತೇ ಹೊರತು ವಾಸ್ತವಿಕತೆಗೆ ಬರೆದ ಭಾಷ್ಯ ಆಗಲಿಲ್ಲ. ಇದನ್ನು ಬಲು ಬೇಗನೆ ಅರಿತುಕೊಂಡು ಕೆಪ್ಲರ್ ಆ ತನಕ ತಾನು ದೃಢವಾಗಿ ನಂಬಿ ಪೋಷಿಸಿಕೊಂಡು ಬಂದಿದ್ದ ತನ್ನ ತಾರ್ಕಿಕ ಶಿಶುವನ್ನು ಪೂರ್ಣವಾಗಿ ತ್ಯಜಿಸಿ ಹೊಸದಾಗಿ ವೈಜ್ಞಾನಿಕ ಮಾರ್ಗವನ್ನು ಅನುಸರಿಸಿದ. ಇವನ ಅಸಾಧಾರಣ ಅಧ್ಯಯನ, ಚಿಂತನೆ, ದುಡಿಮೆ ಹಾಗೂ ಪ್ರತಿಭೆಗಳ ಫಲವಾಗಿ, ಇಂದು ನಾವು ಕೆಪ್ಲರನ ನಿಯಮಗಳು ಎಂದು ಕರೆಯುವ, ಸೌರವ್ಯೂಹದ ಮೂರು ಪ್ರಧಾನ ಮಂತ್ರಗಳು ಆವಿಷ್ಕೃತವಾದುವುಗಳು. ಖಗೋಳವಿಜ್ಞಾನವನ್ನು ಅದೊಂದು ವಿವರಣಾತ್ಮಕ ಶಾಸ್ತ್ರವೆಂಬ ದ್ವಿತೀಯಕ ಅಂತಸ್ತಿನಿಂದ ಮೇಲೆತ್ತಿ ಭೌತವಿಜ್ಞಾನದ ಸುಭದ್ರ ತಳಹದಿಯ ಮೇಲೆ ನೆಲೆನಿಲ್ಲಿಸಿ

ಅದಕ್ಕೆ ಪ್ರಾಥಮಿಕ ಅಂತಸ್ತನ್ನು ನೀಡಿದ ಶಕಪುರುಷ ಯೋಹನ್‌ಕೆಪ್ಲರ್ ರೂಪುಗೊಂಡದ್ದು ಅವನಿಗೆ ಎದುರಾದ ಮಹಾಮಹಾ ಸವಾಲುಗಳನ್ನು ಎದುರಿಸುವ ಮತ್ತು ವೈಫಲ್ಯಗಳಿಂದ ಧೃತಿಗೆಡದಿರುವ ಛಲವನ್ನೂ ಛಾತಿಯನ್ನೂ ಪ್ರದರ್ಶಿಸಿದುದರಿಂದ ಮಾತ್ರ.

**–ಅತ್ರಿ ಬುಕ್‌ಸೆಂಟರ್, ಮಂಗಳೂರು.**

# ಮಂಗಳನ ಅಂಗಳಕ್ಕೆ ಭಾರತದ ಭವ್ಯ ಪ್ರವೇಶ

**–ಬಿ.ಆರ್. ಗುರುಪ್ರಸಾದ್**

ಸೆಪ್ಟೆಂಬರ್ 22, 2014, ಅಂದು ಎರಡು ರೋಬಾಟ್ ಅಂತರಿಕ್ಷ ನೌಕೆಗಳು ಮಂಗಳ ಗ್ರಹವನ್ನು (ಮಾರ್ಸ್) ಸಮೀಪಿಸುತ್ತಿದ್ದವು. ಶರವೇಗದಿಂದ ಸಮೀಪಿಸುತ್ತಿದ್ದವು. ಆ ಪೈಕಿ ಮೊದಲನೆಯದಾದ 'ಮಾವೆನ್' ಎಂಬ ಅಮೇರಿಕದ ದೊಡ್ಡ ನೌಕೆ ಅದೇ ದಿನ ಮಂಗಳ ಗ್ರಹದ ಸುತ್ತಲಿನ ಕಕ್ಷೆಯೊಂದನ್ನು ಪ್ರವೇಶಿಸಿತು. ('ಮಾವೆನ್' ಎಂಬುದು ಮಾರ್ಸ್ ಆಟ್‌ಮಾಸ್ಫೀಯರ್ ವಾಲಟೈಲ್ ಎವಲ್ಯೂಷನ್ ಮಿಷನ್ ಎಂಬುದರ ಹ್ರಸ್ವ ಹೆಸರು). ಇದಕ್ಕೆ ಮೊದಲು ಅಮೆರಿಕದ ಅಂತಹ ಅನೇಕ ರೋಬಾಟ್ ನೌಕೆಗಳು ಆ ಕೆಲಸವನ್ನಾಗಲೀ ಯಶಸ್ವಿಯಾಗಿ ಮಾಡಿದ್ದವು; ಅದೇನೂ ಅಂತಹ ದೊಡ್ಡ ಸುದ್ದಿಯಾಗಲಿಲ್ಲ.

ಅದಾದ ಎರಡೇ ದಿನಕ್ಕೆ 'ಮಾವೆನ್'ದ ಹಿಂದೆ ಧಾವಿಸಿ ಬರುತ್ತಿದ್ದ ಮತ್ತೊಂದು ನೌಕೆ ಮಂಗಳ ಗ್ರಹದ ಸುತ್ತಲಿನ ಮತ್ತೊಂದು ಕಕ್ಷೆಗೆ ಪ್ರವೇಶಿಸಲು ಸಜ್ಜಾಯಿತು. ಇದು 'ಮಾವೆನ್'ಗಿಂತ ಸಾಕಷ್ಟು ಚಿಕ್ಕದಾಗಿತ್ತು. ಅಲ್ಲದೆ 'ಮಾಎನ್' ನೌಕೆಯ ಯಾನಕ್ಕೆ ತಗಲಿದ ವೆಚ್ಚಕ್ಕಿಂತ ಸುಮಾರು ಹತ್ತುಪಟ್ಟು ಕಡಿಮೆ ವೆಚ್ಚದಲ್ಲಿ (450 ಕೋಟಿ ರೂಪಾಯಿಗಳು) ನಿರ್ಮಿಸಿ, ನಿಭಾಯಿಸಲಾದ ಆ ಪುಟ್ಟ ನೌಕೆಯತ್ತ ಜಗತ್ತು ತನ್ನ ಗಮನವನ್ನು ಕೇಂದ್ರೀಕರಿಸಿತು. 'ಮಾಮ್' ಹೆಸರಿನ ಆ ಪುಟ್ಟನೌಕೆಯ ಬಗ್ಗೆ ಭಾರತದಲ್ಲಿ ಎಲ್ಲಿಲ್ಲದ ಕುತೂಹಲ ಉಂಟಾಯಿತು. ಭಾರತೀಯ ಮಾಧ್ಯಮಗಳಂತೂ 'ಮಾಮ್' ನೌಕೆಯ ಮಂಗಳ ಗ್ರಹದ ಕಕ್ಷೆಯ ಪ್ರವೇಶಕ್ಕೆ ಪೂರ್ವಭಾವಿಯಾಗಿ ಭಾರಿ ಪ್ರಮಾಣದ ಪ್ರಚಾರವನ್ನು ನೀಡಿದವು.

ಆ ಸಂಬಂಧದ ಅಂತಿಮ ಕ್ಷಣಗಣನೆ ಸೆಪ್ಟೆಂಬರ್ 24ರ ಬೆಳಗಿನ ಜಾವ ಪ್ರಾರಂಭವಾಯಿತು.

ಆ ದಿನ ಬೆಳಗ್ಗೆ 6.56ರ ಸುಮಾರಿಗೆ 'ಮಾಮ್' ನೌಕೆ ಆ ಮೊದಲೇ ಯೋಚಿಸಿದಂತೆ ಅಂತರಿಕ್ಷದಲ್ಲಿ ನಿಧಾನವಾಗಿ 'ಪಲ್ಟಿ' ಹೊಡೆಯಲಾರಂಭಿಸಿ ತನ್ನ ಮುಖ್ಯ ರಾಕೆಟ್ ಯಂತ್ರವನ್ನು ಸರಿಯಾದ ದಿಕ್ಕಿನತ್ತ ಕೇಂದ್ರೀಕರಿಸಿತು. ಅನಂತರ ಸಮಯ 7.17ಕ್ಕೆ ಸರಿಯಾಗಿ ಆ ಮುಖ್ಯ ರಾಕೆಟ್ ಯಂತ್ರ ಕಾರ್ಯೋನ್ಮುಖವಾಯಿತು. ಅದರೊಂದಿಗೇ ಇತರ ಎಂಟು ಪುಟ್ಟ ರಾಕೆಟ್

ಯಂತ್ರಗಳೂ ಕಾರ್ಯಾರಂಭ ಮಾಡಿದವು. ಆ ಸಮಯದಲ್ಲಿ ಮಂಗಳ ಗ್ರಹ ಭೂಮಿಯಿಂದ ಸುಮಾರು ಇಪ್ಪತ್ತೆರಡೂವರೆ ಕೋಟಿ ಕಿಲೋಮೀಟರ್ ದೂರದಲ್ಲಿತ್ತು. ನೌಕೆಯ ಕಾರ್ಯನಿರ್ವಹಣೆಯನ್ನು ಸಾರುವ ರೇಡಿಯೋ ಮಾಹಿತಿ ನೌಕೆಯಿಂದ ದೂರದ ಭೂಮಿಗೆ ತಲುಪಲು ಸುಮಾರು ಹನ್ನೆರಡೂವರೆ ನಿಮಿಷಗಳ ಕಾಲ ತೆಗೆದುಕೊಂಡಿತು!

ರಾಕೆಟ್ ಯಂತ್ರಗಳ ಚಾಲನೆ ಸಮಯಕ್ಕೆ ಸರಿಯಾಗಿ ಆರಂಭವಾದ ಮೂರು ನಿಮಿಷಗಳಲ್ಲೇ ನೌಕೆ ಬಹುಮಟ್ಟಿಗೆ ಆ ಮೊದಲು ಉದ್ದೇಶಿಸಿದಂತೆಯೇ ಮಂಗಳಗ್ರಹದ ಹಿಂದೆ ಮರೆಯಾಯಿತು. ಇದನ್ನು ತಿಳಿದ ನಂತರದ ಸುಮಾರು ಇಪ್ಪತ್ತೈದು ನಿಮಿಷಗಳ ಕಾಲ ಭಾರತೀಯರ ಉದ್ವೇಗ ಪರಾಕಾಷ್ಠೆಯನ್ನು ತಲುಪಿತ್ತು.

ಇಂತಹ ಪರಿಸ್ಥಿತಿಯಲ್ಲಿ ಎಂಟು ಗಂಟೆಯ ಸುಮಾರಿಗೆ ಮಂಗಳ ಗ್ರಹದ ಮತ್ತೊಂದು ಬದಿಯಿಂದ ಹೊರಬಂದ ಆ ನೌಕೆಯಿಂದ ಬಂದ ಮಾಹಿತಿ, ಅದು ಮಂಗಳ ಗ್ರಹದ ಸುತ್ತಲಿನ ಕಕ್ಷೆಯೊಂದನ್ನು ಪ್ರವೇಶಿಸಿರುವುದಾಗಿ ಸಾರಿತು. ಆ ಮಾಹಿತಿ ನೌಕೆಯನ್ನು ನಿಯಂತ್ರಿಸುತ್ತಿದ್ದ ವಿಜ್ಞಾನಿಗಳ ಮುಂದಿದ್ದ ಕಂಪ್ಯೂಟರ್ ಪರದೆಯ ಮೇಲೆ ಸ್ಪಷ್ಟವಾಗಿ ಮೂಡುತ್ತಲೇ ಇಡೀ ನಿಯಂತ್ರಣ ಕೇಂದ್ರವೇ ಹರ್ಷೋದ್ಗಾರಗಳಲ್ಲಿ ಮುಳುಗಿಹೋಯಿತು. ವಿಜ್ಞಾನಿಗಳನ್ನು ಉತ್ತೇಜಿಸಲು ನಿಯಂತ್ರಣ ಕೇಂದ್ರದಲ್ಲಿ ಆ ಮಹತ್ವದ ವೇಳೆಯಲ್ಲಿ ಖುದ್ದಾಗಿ ಹಾಜರಿದ್ದ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಸಂತಸದಿಂದ 'ಇಂದು ಮಾಮ್ ಮಂಗಳನನ್ನು ಸಂಧಿಸಿದೆ, ಮಂಗಳ (ಗ್ರಹಕ್ಕೆ) ಮಾಮ್ ಸಿಕ್ಕಿದೆ' ಎಂದು ಘೋಷಿಸಿದರು.

ಟಿವಿ ಹಾಗೂ ಅಂತರಜಾಲದ ಮೂಲಕ ಇದನ್ನು ತಿಳಿದ ಕೋಟ್ಯಂತರ ಭಾರತೀಯರ ಸಂತಸಕ್ಕೆ ಎಣೆಯೇ ಇಲ್ಲದಂತಾಯಿತು. ಕಾರಣ, ಸೆಪ್ಟೆಂಬರ್ 24, 2014ರಂದು ಮಂಗಳ ಗ್ರಹದ ಸುತ್ತಲಿನ ಕಕ್ಷೆಯೊಂದನ್ನು ಪ್ರವೇಶಿಸಿದ 'ಮಾಮ್' ನೌಕೆ ಬೇರಾವುದೂ ಅಲ್ಲ, ಭಾರತದಲ್ಲೇ ಯೋಜಿಸಿ, ರೂಪಿಸಿ, ನಿರ್ಮಿಸಿ, ಭಾರತದಿಂದಲೇ ಉಡಾಯಿಸಲಾದ ನೌಕೆ. 'ಮಾಮ್' ಎಂಬುದು 'ಮಾರ್ಸ್ ಆರ್ಬಿಟರ್ ಮಿಷನ್' (ಮಂಗಳ ಕಕ್ಷಾ ಅಭಿಯಾನ) ಎಂಬ ಹೆಸರಿನ ಇಂಗ್ಲಿಷ್ ಪದಗಳ ಹ್ರಸ್ವರೂಪ.

'ಮಾಮ್'ನ ಮೂಲಕ ಭಾರತ ಮಂಗಳ ಗ್ರಹವನ್ನು ರೋಬಾಟ್ ಅಂತರಿಕ್ಷ ನೌಕೆಯೊಂದರ ನೆರವಿನೊಡನೆ ಅನ್ವೇಷಿಸುವ ಮೊದಲ ಪ್ರಯತ್ನದಲ್ಲೇ

ಯಶಸ್ಸನ್ನು ಸಾಧಿಸಿತು. ಈ ಬಗೆಯ ಯಶಸ್ಸು ಇದೇ ಸಂಬಂಧದಲ್ಲಿ ಇದಕ್ಕೆ ಮೊದಲು ಶ್ರಮಿಸಿದ ಅಮೆರಿಕಾ, ರಷ್ಯಾ, ಯುರೋಪ್, ಜಪಾನ್ ಹಾಗೂ ಚೀನಾ ಇವುಗಳ ಅಂತರಿಕ್ಷ ಸಂಸ್ಥೆಗಳಿಗೆ ದೊರಕಿರಲಿಲ್ಲ. ಇದಕ್ಕೆ ಪ್ರತಿಯಾಗಿ ಭಾರತಕ್ಕೆ ಶುಭಾಶಯಗಳ ಮಹಾಪೂರವೇ ಹೊರ ಜಗತ್ತಿನಿಂದ ಹರಿದುಬಂದಿತು. ಭಾರತದ ಈ ಮಹತ್ ಆಂತರಿಕ್ಷ ಸಾಧನೆಗೆ ಜಗತ್ತಿನಾದ್ಯಂತ ಶ್ಲಾಘನೆ ದೊರಕಿರುವುದು ಅತ್ಯಂತ ಸಮಂಜಸವಾಗಿಯೇ ಇದೆ.

ಮಂಗಳಗ್ರಹದ ಒಂದು ಕೃತಕ ಉಪಗ್ರಹವಾದ ನಂತರ ಭಾರತದ 'ಮಾಮ್' ಅಥವಾ 'ಮಂಗಳ ಕಕ್ಷಾ ನೌಕೆ' ಆ ಗ್ರಹವನ್ನು ಕೋಳಿಮೊಟ್ಟೆಯಾಕಾರದ ಕಕ್ಷೆಯೊಂದರಲ್ಲಿ ಸುತ್ತು ಹಾಕಲಾರಂಭಿಸಿತು. ಆ ನಡುವೆ ಅದು ಮಂಗಳ ಗ್ರಹಕ್ಕೆ ಅತಿ ಹತ್ತಿರದಲ್ಲಿದ್ದಾಗ ಆ ಗ್ರಹದ ಮೇಲ್ಮೈಯಿಂದ ಕೇವಲ 422 ಕಿ.ಮೀ. ದೂರದಲ್ಲಿದ್ದರೆ ಅತಿ ದೂರದಲ್ಲಿದ್ದಾಗ ಸುಮಾರು 77 ಸಾವಿರ ಕಿಲೋಮೀಟರ್‌ನಷ್ಟು ಎತ್ತರದಲ್ಲಿರುತ್ತಿತ್ತು. ಮಂಗಳಗ್ರಹವನ್ನು ಸುತ್ತುವ ನಡುವೆ ಅದು ತೆಗೆದ ಆ ಗ್ರಹದ ಚಿತ್ರಗಳು ಮಂಗಳಗ್ರಹದ ಮೇಲಿನ ದೊಡ್ಡ ಸ್ವರೂಪಗಳನ್ನು ನಿಚ್ಚಳವಾಗಿ ಪ್ರದರ್ಶಿಸುತ್ತಿವೆ. 'ಮಂಗಳ ಕಕ್ಷಾ ನೌಕೆ' ಇದುವರೆವಿಗೂ ಭಾರತ ನಿರ್ಮಿಸಿರುವ ಕೃತಕ ಭೂ ಉಪಗ್ರಹ ಮತ್ತು ರೋಬಾಟ್ ಆಂತರಿಕ್ಷ ನೌಕೆಗಳ ಪೈಕಿ ಅತ್ಯಂತ ದೂರಸಾಗಿರುವ ನೌಕೆ ಆದರೆ ಇಂತಹ ನೌಕೆಯನ್ನು ಕೇವಲ ಹದಿನೈದು ತಿಂಗಳುಗಳ ಅವಧಿಯಲ್ಲಿ ಯಶಸ್ವಿಯಾಗಿ ನಿರ್ಮಿಸಲಾಯಿತೆನ್ನುವುದು ಭಾರತೀಯ ಆಂತರಿಕ್ಷ ಸಂಶೋಧನ ಸಂಸ್ಥೆ ಇಸ್ರೋದ ವಿಜ್ಞಾನಿಗಳ ತಾಂತ್ರಿಕ ಸಾಮರ್ಥ್ಯಕ್ಕೆ ಕೈಗನ್ನಡಿಯಾಗಿದೆ.

ಮಂಗಳ ಗ್ರಹವು (ಮಾರ್ಸ್) ಬುಧ (ಮರ್ಕ್ಯುರಿ) ಶುಕ್ರ (ವೀನಸ್) ಹಾಗೂ ಭೂಮಿ. ಇವುಗಳ ಕಕ್ಷೆಯಾಚೆ ಸೂರ್ಯನನ್ನು ಪರಿಭ್ರಮಿಸುತ್ತಿರುವ ಸೌರವ್ಯೂಹದ ನಾಲ್ಕನೆಯ ಗ್ರಹ ಭೂಮಿಗೆ ಅತಿ ಹತ್ತಿರದಲ್ಲಿದ್ದಾಗಲೂ ಇಲ್ಲಿಂದ ಸುಮಾರು ಐದೂವರೆ ಕೋಟಿ ಕಿ.ಮೀ. ದೂರದಲ್ಲಿರುವ ಆ ಗ್ರಹ ರಾತ್ರಿಯ ಆಗಸದಲ್ಲಿ ಕೆಂಪು ಚುಕ್ಕಿಯೊಂದರಂತೆ ಕಾಣುತ್ತದೆ. ಆಗಸದಲ್ಲಿ ನಿಶ್ಚಲವಾಗಿ ನಿಂತಂತೆ ತೋರುವ ಮಿನುಗು ತಾರೆಗಳ ಹಿನ್ನೆಲೆಯಲ್ಲಿ ವಾರದಿಂದ ವಾರಕ್ಕೆ ನಿಧಾನವಾಗಿ ಚಲಿಸುವ ಈ ಕೆಂಪು ಚುಕ್ಕಿಯನ್ನು ಪ್ರಾಚೀನ ಮಾನವರು ಕುತೂಹಲದಿಂದ ಗಮನಿಸಿದ್ದರು. ಕೆಂಪಗೆ ಕಂಡದ್ದರಿಂದ ಮಂಗಳ ಗ್ರಹವನ್ನು ರೋಮನರು 'ಯುದ್ಧದೇವತೆ' ಎಂದರು. ಭಾರತದಲ್ಲಿ ಇದಕ್ಕೆ ಕುಜ, ಮಂಗಲ,

ಅಂಗಾರಕ ಎಂಬ ಹೆಸರುಗಳಿವೆ.

ಸೌರವ್ಯೂಹದ ಎಂಟು ಗ್ರಹಗಳ ಪೈಕಿ ಭೂವಾಸಿಯಾದ ಮಾನವನಿಗೆ ಮಂಗಳಗ್ರಹದ ಮೇಲೆ ಇರುವಷ್ಟು ಕುತೂಹಲ ಬೇರಾವ ಗ್ರಹದ ಬಗ್ಗೆಯೂ ಇಲ್ಲವೆನ್ನಬಹುದು. ಸೌರವ್ಯೂಹದ ಬೇರಾವ ಗ್ರಹಕ್ಕಿಂತಲೂ ಹೆಚ್ಚಾಗಿ ಮಂಗಳ ಗ್ರಹವು ಭೂಮಿಯನ್ನು ಹೋಲುವುದು ಇದಕ್ಕೆ ಕಾರಣ ವ್ಯಾಸದ (ಡಯಾಮೀಟರ್) ದೃಷ್ಟಿಯಿಂದ ಭೂಮಿಯ ಸುಮಾರು ಅರ್ಧದಷ್ಟಿರುವ ಮಂಗಳ ಗ್ರಹವು ಸೂರ್ಯನನ್ನೊಮ್ಮೆ ಪರಿಭ್ರಮಿಸಲು 687 ದಿನಗಳ ಕಾಲ ತೆಗೆದುಕೊಳ್ಳುತ್ತದೆ. (ಭೂಮಿ 365 ದಿನಗಳ ಕಾಲ ತೆಗೆದುಕೊಳ್ಳುತ್ತದೆ) ಆಶ್ಚರ್ಯವೆಂದರೆ ಈ ಗ್ರಹದ ಮೇಲಿನ ಒಂದು 'ದಿನ'ವು 24 ಗಂಟೆ 39 ನಿಮಿಷಗಳಷ್ಟಿದ್ದು ಬಹುಮಟ್ಟಿಗೆ ಅದು ಭೂಮಿಯ ಮೇಲಿನ ಒಂದು ದಿನಕ್ಕೆ ಸಮನಾಗಿದೆ.

ಭೂಮಿಯಂತೆಯೇ ಮಂಗಳಗ್ರಹದ ಮೇಲೂ ಬೆಟ್ಟ ಗುಡ್ಡ, ಪರ್ವತ, ಬಯಲು, ಕಣಿವೆ ಮುಂತಾದ ಸ್ವರೂಪಗಳು ಇವೆ. ಮಂಗಳಗ್ರಹದ ಮೇಲಿಳಿದಿರುವ ರೋಬಾಟ್‌ಗಳು ಅಲ್ಲಿಂದ ಕಳುಹಿಸಿದ ಚಿತ್ರಗಳನ್ನು ಕಂಡಾಗ ಕೆಲಮಟ್ಟಿಗೆ ಇವು ಭೂಮಿಯ ಮೇಲಿನದೇ ಇರಬೇಕು ಎಂಬ ಸಂದೇಹ ಬಲವಾಗಿ ನಮಗೆ ಮೂಡುತ್ತದೆ. ಆದರೆ ಗಗನಯಾತ್ರಿಗಳು ಹಾಕಿಕೊಳ್ಳುವಂತಹ ವಿಶೇಷ ಉಡುಪಿನ ನೆರವಿಲ್ಲದೆ ಮಂಗಳಗ್ರಹದ ಮೇಲೆ ಕೆಲವೇ ಕ್ಷಣಗಳಿಗಿಂತ ಹೆಚ್ಚಾಗಿ ನಾವು ಜೀವಿಸಲಾಗುವುದಿಲ್ಲ ಎಂಬುದು ಬೇರೆ ವಿಷಯ. (ಅಲ್ಲಿನ ಒತ್ತಡ 0.007ಕೆಜಿ/ಸೆಂ.ಮೀ.2, ಭೂಮಿಯ ಮೇಲೆ 1.03 ಕೆ.ಜಿ./ಸೆಂ.ಮೀ.2)

ಘನರೂಪದ ನೀರಿನ (ಮಂಜುಗಡ್ಡೆಯ) ಅಸ್ತಿತ್ವವೂ ಸೇರಿದಂತೆ ಮಂಗಳ ಗ್ರಹಕ್ಕೂ ಭೂಮಿಗೂ ಇರುವ ಸಾಮ್ಯವನ್ನು ದೂರದರ್ಶಕಗಳ ಮೂಲಕ ಖಗೋಳ ವಿಜ್ಞಾನಿಗಳು ಗ್ರಹಿಸಿದ ನಂತರ ಆ ಬಗ್ಗೆ ಕೆಲವು ತಪ್ಪು ಗ್ರಹಿಕೆಗಳೂ ಜನಿತವಾದವು. ಇಂತಹ ಗ್ರಹಿಕೆಯಲ್ಲಿ ಮಂಗಳ ಗ್ರಹದ ಮೇಲೆ ಮಾನವನಿಗಿಂತ ಹೆಚ್ಚಿನ ಬುದ್ಧಿಶಕ್ತಿಯುಳ್ಳ ಜೀವಿಗಳಿದ್ದಾರೆಂಬುದು ಪ್ರಮುಖವಾಗಿತ್ತು! ಇದಕ್ಕೆ ಸಂಬಂಧಿಸಿದಂತೆ 1938ರಲ್ಲಿ ಪ್ರಸಾರವಾದ ರೇಡಿಯೋ ನಾಟಕವೊಂದನ್ನು (ಎಚ್.ಜಿ. ವೇಲ್ಸ್‌ನ 'ವಾರ್ ಆಫ್ ದಿ ವರ್ಲ್ಡ್' ಕೃತಿಯ ನಾಟಕ ರೂಪ) ಕೇಳಿದ ಅಮೆರಿಕನ್ನರು ಮಂಗಳ ಗ್ರಹದ ಮೇಲಿನ ಜೀವಿಗಳು ಭೂಮಿಯನ್ನು ಧಾಳಿ ಮಾಡಿದ್ದಾರೆಂದು ನಂಬಿ ಭಯವಿಹ್ವಲರಾಗಿದ್ದರು.

ಆದರೆ 1957ರಲ್ಲಿ ಅಂತರಿಕ್ಷಯುಗ ಆರಂಭವಾದ ನಂತರ ಆ ಗ್ರಹಕ್ಕೆ ತೆರಳಿರುವ ಹತ್ತಾರು ರೋಬಾಟ್ ನೌಕೆಗಳು ಅಲ್ಲಿ ಬುದ್ಧಿಜೀವಿಗಳನ್ನು ಗುರುತಿಸುವುದಿರಲಿ, ಸೂಕ್ಷ್ಮ ಜೀವಿಗಳನ್ನೂ ಅಲ್ಲಿನ ಮಣ್ಣಿನಲ್ಲಿ ಖಚಿತವಾಗಿ ಗುರುತಿಸಿಲ್ಲ. ಇಂತಹ ಪರಿಸ್ಥಿತಿಯಲ್ಲೂ ವಿಜ್ಞಾನಿಗಳು ಮಂಗಳಗ್ರಹದ ಮೇಲೆ ಹಿಂದೆ ಇದ್ದಿರಬಹುದಾದ ಇಲ್ಲವೇ ಇಂದು ಅಸ್ತಿತ್ವದಲ್ಲಿರಬಹುದಾದ ಸೂಕ್ಷ್ಮಜೀವಿಗಳನ್ನು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಹುಡುಕುವ ಕಾರ್ಯವನ್ನು ಬಿಟ್ಟಿಲ್ಲ. ಹೀಗಾಗಿ ಮಂಗಳ ಗ್ರಹದತ್ತ ರೋಬಾಟ್ ಅಂತರಿಕ್ಷ ನೌಕೆಗಳನ್ನು ಕಳುಹಿಸುವ ಕಾರ್ಯ ಮುಂದುವರೆಯುತ್ತಲೇ ಇದೆ. ಈ ಜಾಗತಿಕ ವೈಜ್ಞಾನಿಕ ಅನ್ವೇಷಣಾ ಕಾರ್ಯಕ್ಕೆ 'ಮಂಗಳ ಕಕ್ಷಾ ಅಭಿಯಾನ' ಭಾರತದ ಕೊಡುಗೆಯಾಗಿದೆ.

'ಮಾಮ್'ನಂತಹ ಆಂತರಿಕ್ಷ ಅನ್ವೇಷಣಾ ಕಾರ್ಯಕ್ರಮಗಳು ಎಷ್ಟೇ ರೋಮಾಂಚನಕಾರಿಯಾಗಿದ್ದರೂ ಭಾರತೀಯ ಆಂತರಿಕ್ಷ ಕಾರ್ಯಕ್ರಮದಲ್ಲಿ ಹೆಚ್ಚು ಒತ್ತು ನೀಡಲಾಗಿರುವುದು ದೇಶದ ತ್ವರಿತ ಹಾಗೂ ಸರ್ವತೋಮುಖವಾದ ಅಭಿವೃದ್ಧಿಗೆ ಪೂರಕವಾಗುವ ಆಂತರಿಕ್ಷ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ ಬಳಕೆ, ಇವುಗಳಿಗಷ್ಟೆ ಇದರ ಅಂಗವಾಗಿ ಅರವತ್ತಕ್ಕೂ ಹೆಚ್ಚು ವಿವಿಧ ಬಗೆಯ ಉಪಗ್ರಹಗಳನ್ನು 'ಇಸ್ರೋ' ಯಶಸ್ವಿಯಾಗಿ ನಿರ್ಮಿಸಿದೆ. ಅಷ್ಟೇ ಅಲ್ಲ, ಅವುಗಳಲ್ಲಿ ಅನೇಕವನ್ನು ತಾನೇ ನಿರ್ಮಿಸಿದ ಬೃಹತ್ ಉಪಗ್ರಹ ಉಡಾವಣ ರಾಕೆಟ್ಟುಗಳಲ್ಲಿ ಕಕ್ಷೆಗೆ ಯಶಸ್ವಿಯಾಗಿ ಹಾರಿಬಿಟ್ಟಿದೆ.

ಅದಕ್ಕಿಂತ ಮಿಗಿಲಾಗಿ ಕಕ್ಷೆಯಲ್ಲಿನ ಆ ಉಪಗ್ರಹಗಳನ್ನು ಸುರಕ್ಷಿತವಾಗಿ ನಿಭಾಯಿಸುತ್ತಲೇ ಅವುಗಳನ್ನು ದೂರಸಂಪರ್ಕ, ಡಿಟಿಎಚ್ ತಂತ್ರಜ್ಞಾನವನ್ನು ಒಳಗೊಂಡಂತೆ ವಿವಿಧ ಬಗೆಯ ಟಿ.ವಿ. ಪ್ರಸಾರ, ಹವಾಮಾನ ವೀಕ್ಷಣೆ, ಪ್ರಕೃತಿ ವಿಕೋಪಗಳ ಬಗ್ಗೆ ಮುನ್ನೆಚ್ಚರಿಕೆ, ನಿಸರ್ಗ ಸಂಪತ್ತಿನ ಕ್ರಮಬದ್ಧವಾದ ಮಾಪನ, ಯಾನ ನಿರ್ವಹಣೆ (ನ್ಯಾವಿಗೇಷನ್) ಹೀಗೆ ಅನೇಕ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದೆ. ಇದರೊಂದಿಗೇ ದೂರಶಿಕ್ಷಣ, ದೂರಚಿಕಿತ್ಸೆ (ಟೆಲಿಮೆಡಿಸಿನ್) ಗ್ರಾಮೀಣ ಸಂಪನ್ಮೂಲ ಕೇಂದ್ರಗಳು ಹೀಗೆ ಅನೇಕ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಬಳಸಿಕೊಳ್ಳುವುದನ್ನು ಕಳೆದ ದಶಕದಿಂದ ಪ್ರಾರಂಭಿಸಿದೆ.

ಭಾರತದಲ್ಲೇ ನಿರ್ಮಾಣವಾದ ಪಿ.ಎಸ್.ಎಸ್.ವಿ. ಎಂಬ ಉಡಾವಣಾ ರಾಕೆಟ್ಟು ಭಾರತೀಯ ಉಪಗ್ರಹಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶಿ

ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾಯಿಸಿದ್ದಲ್ಲದೇ ಒಂದು ನಂಬಿಕಾರ್ಹವಾದ ಆಂತರಿಕ್ಷವಾಹನವೆಂಬ ಹೆಗ್ಗಳಿಕೆಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪಾತ್ರವಾಗಿದೆ. ಆ ಮೂಲಕ ಭಾರತೀಯ ಆಂತರಿಕ್ಷ ತಂತ್ರಜ್ಞಾನದ ಬಗ್ಗೆ ಹೊರಜಗತ್ತಿಗೆ ನಂಬಿಕೆ ಹೆಚ್ಚಾಗುವಂತೆ ಮಾಡಿದೆ. ಭಾರತದ ಮತ್ತಷ್ಟು ದೊಡ್ಡ ಉಡಾವಣಾ ರಾಕೆಟ್ಟಾದ ಜಿಎಸ್‌ಎಲ್‌ವಿ ತನ್ನ ಇತ್ತೀಚಿನ ಯಶಸ್ಸಿನ ಮೂಲಕ ಅತ್ಯಂತ ಸಂಕೀರ್ಣವಾದ ಕ್ರಯೋಜನಿಕ್ ರಾಕೆಟ್ ತಂತ್ರಜ್ಞಾನವನ್ನು ಭಾರತ ಕರಗತ ಮಾಡಿಕೊಂಡಿರುವುದನ್ನು ಸ್ಪಷ್ಟಪಡಿಸಿದೆ.

ಆಂತರಿಕ್ಷ ತಂತ್ರಜ್ಞಾನವನ್ನು ಭೂಮಿಯ ಮೇಲಿನ ಜೀವನದ ಸುರಕ್ಷತೆ ಹಾಗೂ ಅನುಕೂಲಕ್ಕಾಗಿ ಬಳಸಿಕೊಳ್ಳುವ ಸಂಬಂಧದಲ್ಲೇ ಇಸ್ರೋ ತನ್ನನ್ನು ಹೆಚ್ಚಾಗಿ ತೊಡಗಿಸಿಕೊಂಡಿದ್ದರೂ ಭವಿಷ್ಯದ ದೃಷ್ಟಿಯಿಂದ ಆಂತರಿಕ್ಷ ಸಂಶೋಧನೆ ಹಾಗೂ ಅನ್ವೇಷಣೆ ಇವುಗಳ ಪ್ರಾಮುಖ್ಯತೆಯನ್ನು ಮತ್ತು ಇವು ಸಾಮಾನ್ಯ ಜನರಲ್ಲಿ, ಅದರಲ್ಲೂ ವಿದ್ಯಾರ್ಥಿಗಳಲ್ಲಿ ಉಂಟು ಮಾಡುವ ಕುತೂಹಲದ ಮಹತ್ವವನ್ನು ಇಸ್ರೋ ಮರೆತಿಲ್ಲ. ಪರಿಣಾಮವಾಗಿ ಅಂತರಿಕ್ಷದ ಅನ್ವೇಷಣೆಗೆ ಸಂಬಂಧಿಸಿದ ಭಾರತೀಯ ಉಪಗ್ರಹ ಹಾಗೂ ಸ್ವಯಂಚಾಲಿತ ನೌಕೆಗಳು ಈ ಹಿಂದೆ ಕಕ್ಷೆಗೆ ತೆರಳಿರುವುದನ್ನು ನಾವು ಗಮನಿಸಬಹುದು. ಆ ಪೈಕಿ ಅಪಾರವಾದ ಯಶಸ್ಸನ್ನು ಈ ಮೊದಲು ಕಂಡದ್ದು ಚಂದ್ರಯಾನ–1 ನೌಕೆ.

2008ರಲ್ಲಿ ಶ್ರೀಹರಿಕೋಟಾದಿಂದ ಉಡಾಯಿಸಲ್ಪಟ್ಟ ಆ ರೋಬಾಟ್ ನೌಕೆ ಚಂದ್ರನ ಸುತ್ತಲಿನ ಕಕ್ಷೆಯೊಂದನ್ನು ಸೇರಿ ಆ ಆಕಾಶಕಾಯವನ್ನು ಅನ್ವೇಷಿಸಿತಲ್ಲದೇ ಭಾರತದಲ್ಲೇ ನಿರ್ಮಾಣವಾದ ಸಾಧನವೊಂದು ಚಂದ್ರನ ಮೇಲ್ಮೈಯನ್ನು ತಲುಪುವಂತೆ ಮಾಡುವಲ್ಲೂ ಯಶಸ್ವಿಯಾಯಿತು. ಅನಂತರ ಆ ನೌಕೆ ಕಳುಹಿಸಿದ ಮಾಹಿತಿಯ ವಿಶ್ಲೇಷಣೆಯಿಂದ ಚಂದ್ರನ ಮೇಲೆ ನೀರಿನ ಅಸ್ತಿತ್ವವನ್ನು ವಿಜ್ಞಾನಿಗಳು ಖಚಿತವಾಗಿ ಗುರುತಿಸಿದಾಗ ಚಂದ್ರಯಾನ–1 ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆಯಿತು.

ಭೂಕಕ್ಷೆಯಾಚೆ ತೆರಳಿ ಚಂದ್ರನನ್ನು ಅನ್ವೇಷಿಸಿದ 'ಚಂದ್ರಯಾನ–1' ನೌಕೆಯ ಯಶಸ್ಸಿನ ಬಳಿಕ ಕುತೂಹಲಕಾರಿಯಾದ ಮಂಗಳ ಗ್ರಹದತ್ತ ರೋಬಾಟ್ ನೌಕೆಯೊಂದನ್ನು ಕಳುಹಿಸುವ ಬಗ್ಗೆ ಕೂಲಂಕುಷವಾದ ಅಧ್ಯಯನಗಳು ಇಸ್ರೋದಲ್ಲಿ ನಡೆದವು. ಆದರೆ 'ಮಂಗಳ ಕಕ್ಷಾ ಅಭಿಯಾನ'ವು 2012ರ ಸ್ವಾತಂತ್ರ್ಯ ದಿನಾಚರಣೆಯಂದು ಅಂದಿನ ಪ್ರಧಾನಿಯವರು ಆ ಬಗ್ಗೆ

ಪ್ರಸ್ತಾಪಿಸಿದ ನಂತರ ವಿದ್ಯುಕ್ತವಾಗಿ ರೂಪುಗೊಂಡಿತು.

ಇದರ ಅಂಗವಾಗಿ ನೌಕೆಯ ನಿರ್ಮಾಣ ಬೆಂಗಳೂರಿನ ಇಸ್ರೋ ಉಪಗ್ರಹ ಕೇಂದ್ರದಲ್ಲಿ ನೂರಾರು ವಿಜ್ಞಾನಿ ಹಾಗೂ ತಂತ್ರಜ್ಞರ ಕೌಶಲ ಹಾಗೂ ಪರಿಶ್ರಮಗಳೊಂದಿಗೆ ಪ್ರಾರಂಭವಾಯಿತು. ಒಂದು ಕಾರಿನಷ್ಟು ದೊಡ್ಡದಾದ ಆ ನೌಕೆ ಪೆಟ್ಟಿಗೆಯಾಕಾರದಲ್ಲಿದ್ದು ಏಳು ಅಡಿ ಅಗಲವಿರುವ ತನ್ನ ತಟ್ಟೆಯಾಕಾರದ ಸಂಪರ್ಕ ಆಂಟೆನಾ ಹಾಗೂ ರೆಕ್ಕೆಯಂತಹ ಸೌರಫಲಕಗಳನ್ನು ಎರಡು ವಿರುದ್ಧ ದಿಕ್ಕುಗಳಲ್ಲಿ ಹರಡಿಕೊಂಡಿದೆ. ಮೈನಡುಗಿಸುವ ಕಡಿಮೆ ಉಷ್ಣತೆಯಿರುವ ಕಡು ಅಂತರಿಕ್ಷದಲ್ಲಿ ಅದನ್ನು ರಕ್ಷಿಸಲು ಅದರ ಮೇಲ್ಮೈಯನ್ನು ಚಿನ್ನದ ಬಣ್ಣದ ವಿಶೇಷ ಹೊದ್ದಿಕೆ ಆವರಿಸಿದೆ. ನೌಕೆಯ ಒಂದು ಬದಿಯಿಂದ ಚಾಚಿಕೊಂಡಿರುವ ಸೌರಫಲಕಗಳು ಸುಮಾರು 840 ವ್ಯಾಟ್‌ನಷ್ಟು ವಿದ್ಯುಚ್ಛಕ್ತಿಯನ್ನು ಮಂಗಳಗ್ರಹದ ಸಮೀಪದಲ್ಲಿ ಉತ್ಪಾದಿಸಬಲ್ಲವಾಗಿವೆ.

ಅಂತರಿಕ್ಷದಲ್ಲಿ ತನ್ನ ಸ್ವತಂತ್ರವಾದ ಅಸ್ತಿತ್ವವನ್ನು ಪ್ರಾರಂಭಿಸಿದ ಕ್ಷಣದಿಂದ ಆ ನೌಕೆ ತನ್ನ ಆರೋಗ್ಯದ ಬಗ್ಗೆ ರೇಡಿಯೋ ಮೂಲಕ ಸತತವಾಗಿ ಮಾಹಿತಿ ನೀಡುತ್ತಿದೆ. ನೌಕೆಯ ಸಂಪರ್ಕ ಅಂಟೆನಾವನ್ನು ಭೂಮಿಯೆಡೆಗೆ, ಅದರ ಸೌರಫಲಕಗಳನ್ನು ಸೂರ್ಯನೆಡೆಗೆ ಹಾಗೂ ವೈಜ್ಞಾನಿಕ ಉಪಕರಣಗಳನ್ನು ಮಂಗಳಗ್ರಹದತ್ತ ಗುರಿ ಮಾಡುವ ಕೆಲಸವನ್ನು ನೌಕೆಯ ಎಲೆಕ್ಟ್ರಾನಿಕ್ 'ಮಿದುಳಾದ' ಅದರ ನಿಯಂತ್ರಣ ವ್ಯವಸ್ಥೆ ವಿವಿಧ ಬಗೆಯ ಸಂವೇದಕಗಳ (ಸೆನ್ಸರ್ಸ್) ಹಾಗೂ ವೇಗವಾಗಿ ಸುತ್ತುವ ಚಕ್ರಗಳ ನೆರವಿನೊಡನೆ ನೋಡಿಕೊಳ್ಳುತ್ತದೆ. ನೌಕೆಯಲ್ಲಿನ ಸೂಕ್ಷ್ಮ ಜೈರೋಸ್ಕೋಪುಗಳು ಹಾಗೂ ಸಣ್ಣ ರಾಕೆಟ್ ಯಂತ್ರಗಳೂ ಈ ನಿಟ್ಟಿನಲ್ಲಿ ಅದರ ನೆರವಿಗೆ ಬರುತ್ತವೆ.

ನೌಕೆಯ ಕಕ್ಷೆ ಇಲ್ಲವೇ ಪಥವನ್ನು ಬದಲಿಸಲು ಹಾಗೂ ಅದಕ್ಕೆ ಸ್ಥಿರತೆಯನ್ನು ನೀಡಲು ಇಲ್ಲವೇ ನಿಧಾನವಾಗಿ ತಿರುಗಿಸಲು ನೌಕೆಯಲ್ಲೇ 'ಲ್ಯಾಮ್' ಎಂಬ ಒಂದು ಮುಖ್ಯ ರಾಕೆಟ್ ಯಂತ್ರ ಹಾಗೂ 'ಥ್ರಸ್ಟರ್'ಗಳೆಂಬ ಎಂಟು ಪುಟ್ಟ ರಾಕೆಟ್ ಯಂತ್ರಗಳಿವೆ. ಇವುಗಳಿಗೆ ಬೇಕಾದ ಸುಮಾರು 850 ಕಿಲೋಗ್ರಾಂ ಇಂಧನ ಹಾಗೂ ದಹನಾನುಕೂಲಿಗಳನ್ನು ನೌಕೆಯೊಳಗಿನ ಟ್ಯಾಂಕುಗಳಲ್ಲಿ ಸುರಕ್ಷಿತವಾಗಿ ಸಂಗ್ರಹಿಸಿ ಇಡಲಾಗಿತ್ತು. ಅದರಲ್ಲಿ ಬಹುಭಾಗ ಈಗಾಗಲೇ ಕಾರ್ಯಾಚರಣೆಗೆ ಬಳಕೆಯಾಗಿದೆ.

ಇಸ್ರೋ ಉಪಗ್ರಹ ಕೇಂದ್ರದ ವಿಶಾಲವಾದ 'ಸ್ವಚ್ಛ ಕೋಣೆ'ಯಲ್ಲಿ

ಅಂತಿಮವಾಗಿ ರೂಪುಗೊಂಡ ಮಂಗಳ ಕಕ್ಷಾನೌಕೆಯನ್ನು ಅಲ್ಲೇ ಕಠಿಣತಮವಾದ ಅನೇಕ ಪರೀಕ್ಷೆಗಳಿಗೆ ಒಳಪಡಿಸಿ ಅದರ ಸುರಕ್ಷಿತವಾದ ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲಾಯಿತು. ಅನಂತರ ನಿಧಾನಗತಿಯಲ್ಲಿ ಸಾಗಿದ ವಿಶೇಷ ಟ್ರಕ್ ಒಂದರಲ್ಲಿ ಉಡಾವಣ ಕೇಂದ್ರವಾದ ಶ್ರೀಹರಿಕೋಟಾಕ್ಕೆ ಅದನ್ನು ಒಯ್ಯಲಾಯಿತು. ಅಲ್ಲಿ ಅದಕ್ಕಾಗಿ ಕಾದಿದ್ದ ಹದಿನೈದು ಮಹಡಿ ಎತ್ತರದ ಪಿಎಸ್ಎಲ್‌ವಿ–ಸಿ 25 ಎಂಬ ಭಾರತದ ನಂಬಿಕಾರ್ಹ ವಾಹನದ ಶಿರದ ಮೇಲೆ 1,340 ಕಿಲೋಗ್ರಾಂ ತೂಕದ 'ಮಂಗಳ ಕಕ್ಷಾ ನೌಕೆಯನ್ನು' ಬಳಿಕ ಜೋಡಿಸಲಾಯಿತು.

2013ರ ನವೆಂಬರ್ 05ರಂದು ಮಧ್ಯಾಹ್ನ 2.38ಕ್ಕೆ ಸರಿಯಾಗಿ ಪಿಎಸ್‌ಎಲ್‌ವಿ ಸಿ25 ಭೋರ್ಗರೆಯುತ್ತ ಧರೆಯಿಂದ ಮೇಲೆದ್ದಂತೆ ಮಂಗಳ ಕಕ್ಷೆ ನೌಕೆಯ ರೋಮಾಂಚನಕಾರಿಯಾದ ಮಂಗಳ ಗ್ರಹ ಯಾನ ಪ್ರಾರಂಭವಾಯಿತು. ಆನಂತರದ ನಲವತ್ನಾಲ್ಕು ನಿಮಿಷಗಳಲ್ಲಿ ಆ ಬೃಹತ್ ರಾಕೆಟ್ಟು ತಾನು ಹೊತ್ತ ಮಂಗಳ ಕಕ್ಷಾ ನೌಕೆಯನ್ನು ಸುರಕ್ಷಿತವಾಗಿ ಕೋಳಿಮೊಟ್ಟೆಯಾಕಾರದ ಭೂಕಕ್ಷೆಯೊಂದರಲ್ಲಿ ಸೇರಿಸಿದ್ದು ಭಾರತದ ಮಟ್ಟಿಗೆ ಇತಿಹಾಸ ಬರೆಯಿತು. ಆನಂತರ ನೌಕೆಯನ್ನು ನಿಭಾಯಿಸುವ ಹಾಗೂ ಅದರ ಯಾನವನ್ನು ನಿರ್ವಹಿಸುವ ಜವಾಬ್ದಾರಿಯನ್ನು ಬೆಂಗಳೂರಿನ ಪೀಣ್ಯದಲ್ಲಿರುವ ನೌಕೆಯ ನಿಯಂತ್ರಣಾ ಕೇಂದ್ರದಲ್ಲಿದ್ದ ಇಸ್ರೋ ವಿಜ್ಞಾನಿಗಳು ವಹಿಸಿಕೊಂಡರು. ಆ ಕ್ಷಣದಿಂದ ನೌಕೆಯ ನಿಯಂತ್ರಣ ಕೇಂದ್ರವು 'ಮಂಗಳ ಕಕ್ಷಾ ಅಭಿಯಾನ'ದ ಸಂಪರ್ಕ ಕೇಂದ್ರಬಿಂದುವಾಯಿತು.

ಆನಂತರ ಆ ಕೇಂದ್ರದಿಂದ ಜನಿತವಾದ ರೇಡಿಯೋ ಆಜ್ಞೆಗಳು ನೌಕೆಯಿದ್ದ ಕಕ್ಷೆಯ ಎತ್ತರವನ್ನು ನೌಕೆಯ ಮುಖ್ಯ ರಾಕೆಟ್ ಯಂತ್ರದ ನೆರವಿನೊಡನೆ ಮತ್ತೆ ಮತ್ತೆ ಮೇಲೇರಿಸುವಲ್ಲಿ ಯಶಸ್ವಿಯಾದವು. ಆ ಬಳಿಕ 2013ರ ಡಿಸೆಂಬರ್ 01ರ ಬೆಳಗಿನ ಜಾವ ವಿಜ್ಞಾನಿಗಳ ಆಜ್ಞೆಗೆ ಅನುಗುಣವಾಗಿ ಘರ್ಜಿಸಿದ ನೌಕೆಯ ರಾಕೆಟ್ ಯಂತ್ರವು ಭೂಮಿಯನ್ನು ಸುತ್ತುವ ಕಾರ್ಯದಿಂದ 'ಮಂಗಳ ಕಕ್ಷಾ ನೌಕೆ'ಯನ್ನು ಪಾರು ಮಾಡಿತು. ಈ ರೀತಿ ಮೊದಲೇ ನಿಯೋಜಿಸಲಾಗಿದ್ದ 'ಮಂಗಳ ವರ್ಗಾವಣಾ ಪಥ'ವನ್ನು ಸೇರಿದ ನೌಕೆ 2014ರ ಸೆಪ್ಟೆಂಬರ್ 24ರಂದು ಮಂಗಳ ಗ್ರಹವನ್ನು ಸಂಧಿಸುವ ಸಲುವಾಗಿ ನಿರ್ದಿಷ್ಟ ವೇಗದಲ್ಲಿ ಅಂತರಿಕ್ಷದಲ್ಲಿ ಧಾವಿಸಲಾರಂಭಿಸಿತು.

ಅಷ್ಟೇ ಅಲ್ಲ, ಮುಂದಿನ ಹತ್ತು ತಿಂಗಳುಗಳ ಸುಮಾರಿನಲ್ಲಿ ಅದು ಸೂರ್ಯನ ಸುತ್ತಲಿನ ವಕ್ರ ಪಥವೊಂದರಲ್ಲಿ ಹತ್ತಿರ ಹತ್ತಿರ 67 ಕೋಟಿ ಕಿ.ಮೀ. ದೂರವನ್ನು ಅಂತರಿಕ್ಷದಲ್ಲಿ ಸುರಕ್ಷಿತವಾಗಿ ಕ್ಷಮಿಸಿ ನಿಗದಿಯಾದ ವೇಳೆಗೆ ಮಂಗಳಗ್ರಹವನ್ನು ಸಂಧಿಸಿತು ಕೂಡ. ಈ ವಿಷಯವು ಅದಕ್ಕೆ ಮೊದಲು ನೌಕೆಯೊಂದನ್ನು ಬೇರೊಂದು ಗ್ರಹಕ್ಕೆ ಕಳುಹಿಸಿದ ಯಾವುದೇ ಅನುಭವವಿಲ್ಲದಿದ್ದರೂ ಆ ನೌಕೆಯಯಾನವನ್ನು ಯೋಚಿಸಿ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದ ಇಸ್ರೋ ವಿಜ್ಞಾನಿಗಳ ಸಾಮರ್ಥ್ಯದ ಬಗ್ಗೆ ನಮಗೆ ಅರಿವು ಉಂಟುಮಾಡುತ್ತದೆ.

ಇದುವರೆಗೂ ಭಾರತದಲ್ಲಿ ನಿರ್ಮಾಣವಾದ ಉಪಗ್ರಹ ಮತ್ತು ಅಂತರಿಕ್ಷ ನೌಕೆಗಳಿಗೆ ಹೋಲಿಸಿದಲ್ಲಿ 'ಮಂಗಳ ಕಕ್ಷಾ ನೌಕೆ'ಗೂ ಅವುಗಳಿಗೂ ಒಂದು ಪ್ರಮುಖವಾದ ವ್ಯತ್ಯಾಸವಿದೆ. ಮಂಗಳ ಕಕ್ಷಾ ನೌಕೆ 'ಕೃತಕ ಬುದ್ಧಿಶಕ್ತಿ'ಯನ್ನು ಹೊಂದಿರುವುದೇ ಆ ವ್ಯತ್ಯಾಸಕ್ಕೆ ಕಾರಣವಾಗಿದೆ.

ಭೂಮಿಯಿಂದ ಮಂಗಳಗ್ರಹ ಕೋಟ್ಯಾಂತರ ಕಿಲೋಮೀಟರ್ ದೂರದಲ್ಲಿರುವುದರಿಂದ ಅದರತ್ತ ಮಂಗಳ ಕಕ್ಷಾ ನೌಕೆ ತೆರಳುವ ಹಾಗೂ ಅದನ್ನು ಸುತ್ತುವ ನಡುವೆ ಆ ನೌಕೆ ಕಳುಹಿಸುವ ರೇಡಿಯೋ ಮಾಹಿತಿ ಬೆಳಕಿನ ವೇಗದಲ್ಲಿ ಧಾವಿಸಿ ಬಂದರೂ ಭೂಮಿಯನ್ನು ತಲುಪಲು ಹತ್ತಾರು ನಿಮಿಷಗಳ ಕಾಲ ತೆಗೆದುಕೊಳ್ಳುತ್ತದೆ. ಅದನ್ನು ಗಮನಿಸಿದ ನೌಕೆಯ ನಿಯಂತ್ರಕ ವಿಜ್ಞಾನಿಗಳು ಆ ನಿಟ್ಟಿನಲ್ಲಿ ಅಗತ್ಯವಾದ ತಮ್ಮ ನಿರ್ಧಾರವನ್ನು ನೌಕೆಗೆ ರವಾನಿಸಿದ ನಂತರ ಆ ರೇಡಿಯೋ ಮಾಹಿತಿ ನೌಕೆಯನ್ನು ತಲುಪಲು ಮತ್ತೆ ಹತ್ತಾರು ನಿಮಿಷಗಳ ಕಾಲ ತೆಗೆದುಕೊಳ್ಳುತ್ತದೆ!

ಆ ನಡುವೆ ನೌಕೆಯ ಸುರಕ್ಷತೆಯ ದೃಷ್ಟಿಯಿಂದ ಏನಾದರೂ ಮಾಡುವುದು ಅಗತ್ಯವಾದಲ್ಲಿ ಅದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.

ಈ ಕಾರಣದಿಂದಾಗಿ ತನ್ನ ಆರೋಗ್ಯದ ಸ್ಥಿತಿಯನ್ನು ತಾನೇ ಗಮನಿಸಿ ಈ ನಿಟ್ಟಿನಲ್ಲಿ ಅಗತ್ಯವಾದ ಕೆಲವು ನಿರ್ಧಾರಗಳನ್ನು ಸ್ವತಃ ತಾನೇ ತೆಗೆದುಕೊಳ್ಳುವ ಸಾಮರ್ಥ್ಯವನ್ನು 'ಮಂಗಳ ಕಕ್ಷಾ ನೌಕೆ'ಯಲ್ಲಿ ಅಳವಡಿಸಲಾಗಿದೆ! ಈ ರೀತಿ 'ಮಂಗಳ ಕಕ್ಷಾ ಅಭಿಯಾನ'ವು ಅಂತರಿಕ್ಷ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತ ಮತ್ತಷ್ಟು ಪ್ರಗತಿ ಸಾಧಿಸುವುದಕ್ಕೆ ಎಡೆಮಾಡಿಕೊಟ್ಟಿದೆ.

'ಮಂಗಳ ಕಕ್ಷಾ ಅಭಿಯಾನ'ದ ಮೂಲ ಉದ್ದೇಶ ಮಂಗಳಗ್ರಹದ ಸುತ್ತಲಿನ

ಕಕ್ಷೆಯೊಂದಕ್ಕೆ ಸ್ವಯಂಚಾಲಿತ ಆಂತರಿಕ್ಷ ನೌಕೆಯೊಂದನ್ನು ಕಳುಹಿಸುವ ತಂತ್ರಜ್ಞಾನಗಳನ್ನು ಪ್ರದರ್ಶಿಸುವುದು ಎಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಆ ನೌಕೆಯ ನೆರವಿನೊಡನೆ ಪರಿಮಿತವಾಗಿದ್ದರೂ ಅರ್ಥಪೂರ್ಣವಾದ ಮಂಗಳಗ್ರಹದ ಅನ್ವೇಷಣೆಯನ್ನು ನಡೆಸುವ ಉದ್ದೇಶವೂ ಮಂಗಳ ಕಕ್ಷಾ ಅಭಿಯಾನಕ್ಕಿದೆ. ಈ ಕಾರಣದಿಂದಾಗಿ ಮಂಗಳ ಕಕ್ಷೆ ನೌಕೆಯಲ್ಲಿ ಐದು ವೈಜ್ಞಾನಿಕ ಉಪಕರಣಗಳನ್ನು ಅಳವಡಿಸಲಾಗಿದೆ.

ಆ ಪೈಕಿ ಮೊದಲನೆಯದು ವರ್ಣಚಿತ್ರಗಳನ್ನು ತೆಗೆಯಬಲ್ಲ ಒಂದು ಎಲೆಕ್ಟ್ರಾನಿಕ್ ಕ್ಯಾಮರವಾಗಿದೆ. ಆ ಮೂಲಕ ಮಂಗಳಗ್ರಹದ ಮೇಲ್ಮೈಯಲ್ಲಿ ನಡೆಯುವ ವಿದ್ಯಮಾನಗಳನ್ನು ನಾವು ಗಮನಿಸಬಹುದಾಗಿದೆ. ಈಗಾಗಲೇ ಆ ಕ್ಯಾಮೆರಾ ಮಂಗಳಗ್ರಹದ ಅನೇಕ ಚಿತ್ರಗಳನ್ನು ತೆಗೆದಿದೆ.

ನೌಕೆಯಲ್ಲಿನ ಎರಡನೇ ಉಪಕರಣವು ಆ ಗ್ರಹದಿಂದ ಚಿಮ್ಮಿ ಬರುವ ಅವಕೆಂಪು ಕಿರಣಗಳನ್ನು (ಇನ್ಫ್ರಾರೆಡ್ ರೇಸ್) ದಾಖಲು ಮಾಡಿಕೊಳ್ಳುವ ಮೂಲಕ ಮಂಗಳಗ್ರಹದ ರಾಸಾಯನಿಕ ಸಂಯೋಜನೆಯನ್ನು ಅದರಲ್ಲೂ ಅಲ್ಲಿನ ಖನಿಜ ಸಂಪತ್ತಿನ ಬಗ್ಗೆ ಅರ್ಥಮಾಡಿಕೊಳ್ಳುವಲ್ಲಿ ನಮ್ಮ ನೆರವಿಗೆ ಬರಲಿದೆ.

ಇನ್ನು ನೌಕೆಯಲ್ಲಿರುವ ಮೂರನೆಯ ಉಪಕರಣವಾದ 'ಮಂಗಳಗ್ರಹಕ್ಕಾಗಿರುವ ಮೀಥೇನ್ ಸಂವೇದಕ'ವನ್ನು ಆ ಗ್ರಹದ ಅತ್ಯಂತ ತೆಳುವಾದ ವಾತಾವರಣದೊಳಗೆ ಅತ್ಯಲ್ಪ ಪ್ರಮಾಣದಲ್ಲಿ ಇರಬಹುದಾದ ಮೀಥೇನ್ ಅನಿಲವನ್ನು ನಿಖರವಾಗಿ ಗುರುತಿಸುವುದಲ್ಲದೇ ಅದು ಜನಿತವಾದ ಬಗೆಯನ್ನು ನಾವು ಅರ್ಥಮಾಡಿಕೊಳ್ಳುವಲ್ಲೂ ನಮ್ಮ ನೆರವಿಗೆ ಬರುವಂತೆ ರೂಪಿಸಲಾಗಿದೆ. ಹೀಗಾಗಿ ಈ ಉಪಕರಣವು ಮಂಗಳಗ್ರಹದ ಮೇಲ್ಮೈಯಲ್ಲಿ ಜೈವಿಕ ಕ್ರಿಯೆಗಳೇನಾದರೂ ನಡೆಯುತ್ತಿದ್ದಲ್ಲಿ ಆ ಬಗ್ಗೆ ಬೆಳಕು ಚೆಲ್ಲಬಹುದೆಂದು ಆಶಿಸಲಾಗಿದೆ.

ಬಹು ಹಿಂದೆ ಮಂಗಳಗ್ರಹವೂ ಭೂಮಿಯಂತೆ ಜಲಾವೃತವಾದ ಗ್ರಹವಾಗಿತ್ತು ಎಂದು ವಿಜ್ಞಾನಿಗಳಿಂದು ಅಭಿಪ್ರಾಯಪಡುತ್ತಾರೆ. ಆದರೆ ಇಂದು ಆ ಗ್ರಹ ಒಂದು ಶೀತಪ್ರದೇಶದಲ್ಲಿನ 'ಬರಡು ಮರುಭೂಮಿ'ಯಂತಿದೆ. ಹಾಗಾದರೆ ಮಂಗಳಗ್ರಹದ ಮೇಲಿನ ನೀರು ಅಲ್ಲಿನ ವಾತಾವರಣದ ಮೂಲಕ ಏಕೆ ಮತ್ತು ಹೇಗೆ ನಷ್ಟವಾಯಿತು? ಮಂಗಳ ಕಕ್ಷಾ ನೌಕೆಯಲ್ಲಿನ ನಾಲ್ಕನೇ ವೈಜ್ಞಾನಿಕ ಉಪಕರಣವಾದ 'ಲೈಮನ್ ಆಲ್ಫಾ ಬೆಳಕು ಮಾಪಕ'ವು ಇದನ್ನು ಅರ್ಥಮಾಡಿಕೊಳ್ಳುವಲ್ಲಿ ನೆರವಾಗುತ್ತದೆ ಎಂದು ಆಶಿಸಲಾಗಿದೆ.

'ಮೆಂಕಾ' ಎಂಬ ಹೆಸರಿನ ಆ ನೌಕೆಯ ಐದನೇ ವೈಜ್ಞಾನಿಕ ಉಪಕರಣವು ಮಂಗಳಗ್ರಹದ ವಾತಾವರಣದ ಹೊರಭಾಗವನ್ನು ಹಾಗೂ ಆ ಗ್ರಹದ ಸಮೀಪದಲ್ಲಿನ ಅಂತರಿಕ್ಷ ಪ್ರದೇಶದ ಗುಣವಿಶೇಷಗಳನ್ನು ಅಭ್ಯಸಿಸಬಲ್ಲದಾಗಿದೆ.

ಭೂಮಿಯ ಮೇಲೆ ಕೇವಲ 15 ಕಿ.ಗ್ರಾಂ.ನಷ್ಟು ಒಟ್ಟು ತೂಕವಿದ್ದ ಈ ಐದು ಪುಟ್ಟ ವೈಜ್ಞಾನಿಕ ಉಪಕರಣಗಳ ನೆರವಿನೊಡನೆ ಮಂಗಳಗ್ರಹದ ಕ್ರಮಬದ್ಧವಾಗಿ ಅನ್ವೇಷಣೆಯನ್ನು ಸುಮಾರು ಆರು ತಿಂಗಳುಗಳ ಕಾಲ ಮಂಗಳಗ್ರಹದ ಸುತ್ತಲಿನ ಕಕ್ಷೆಯಿಂದ ನಡೆಸಲು ವಿಜ್ಞಾನಿಗಳು ಉದ್ದೇಶಿಸಿದ್ದಾರೆ. ಮಂಗಳ ಕಕ್ಷಾನೌಕೆ ಇಂದು ಮಂಗಳಗ್ರಹವನ್ನು ಸುಮಾರು ಮೂರು ದಿನಗಳಿಗೊಮ್ಮೆ ಪರಿಭ್ರಮಿಸುತ್ತಿದೆ.

ಮಂಗಳ ಕಕ್ಷಾನೌಕೆ ಮಂಗಳಗ್ರಹವನ್ನು ಪರಿಭ್ರಮಿಸುತ್ತಲೇ ಅಲ್ಲಿಂದ 'ಪಿಸುಗುಟ್ಟಿದ' ವೈಜ್ಞಾನಿಕ ಮಾಹಿತಿಯನ್ನು ಹಾಗೂ ನೌಕೆಯ ಆರೋಗ್ಯವನ್ನು ಕುರಿತ ಮಾಹಿತಿಯನ್ನು ಬೆಂಗಳೂರಿನ ಸಮೀಪದಲ್ಲಿರುವ ಬ್ಯಾಲಾಳು ಎಂಬಲ್ಲಿ ಸ್ಥಾಪಿಸಲಾಗಿರುವ 32 ಮೀಟ್ ವ್ಯಾಸದ ಒಂದು ಬೃಹತ್ ಬಾಣಲೆಯಾಕಾರದ ಆಂಟೆನಾ ಪಡೆಯುತ್ತಿದೆ. ಭೂಮಿಗೆ ಬರುವ ಹೊತ್ತಿಗೆ ಅತ್ಯಂತ ಶಕ್ತಿಹೀನವಾಗಿರುವ ಆ ರೇಡಿಯೋ ಮಾಹಿತಿಯನ್ನು ಸುತ್ತಲಿನ ಎಲೆಕ್ಟ್ರಾನಿಕ್ 'ಗದ್ದಲ'ದಿಂದ ಹೆಕ್ಕಿ ತೆಗೆದು. ಅದರ ಶಕ್ತಿಯನ್ನು ವೃದ್ಧಿಸಿ ನಂತರ ವಿಜ್ಞಾನಿಗಳಿಗೆ ಸರಬರಾಜು ಮಾಡುವ ಗುರುತರವಾದ ಜವಾಬ್ದಾರಿಯನ್ನು ಭಾರತೀಯ ಇಂಜಿನಿಯರಿಂಗ್‌ನ ಸಾಧನೆಯ ಪ್ರತೀಕವಾದ ಆ ಆಂಟೆನಾ ತೃಪ್ತಿಕರವಾಗಿ ನಿರ್ವಹಿಸುತ್ತಿದೆ. ಜೊತೆಗೇ ಮಂಗಳ ಕಕ್ಷಾನೌಕೆಯ ನಿಯಂತ್ರಕರ ರೇಡಿಯೋ ಆಜ್ಞೆಗಳನ್ನು ಆ ನೌಕೆಗೆ 'ಕೂಗಿ ಹೇಳುತ್ತಿರುವುದೂ' ಆ ಆಂಟಿನಾವೇ.

ಮಂಗಳ ಕಕ್ಷಾ ಅಭಿಯಾನದ ಇದುವರೆಗಿನ ಯಶಸ್ಸು ತಮ್ಮ ಸಾಮರ್ಥ್ಯದ ಬಗ್ಗೆ ಭಾರತೀಯ ವೈಜ್ಞಾನಿಕ ಸಮೂಹದಲ್ಲಿ ಆಶಾಭಾವನೆಯನ್ನು ಮೂಡಿಸುವುದರೊಂದಿಗೇ ಇನ್ನೂ ಹೊಸ ಆಂತರಿಕ್ಷ ಅನ್ವೇಷಣಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಅವರಲ್ಲಿ ಹುರುಪು ಮೂಡಿಸಿದೆ.

**–ಬೆಂಗಳೂರು ದರ್ಶನ**

**ಉದಯಭಾನು ಕಲಾಸಂಘ.**

# ಗೆಲಿಲಿಯೊ

ಬರ್ಟೋಲ್ಟ್ ಬ್ರೆಖ್ಟ್
ಅನು–ಎಚ್.ಕೆ. ರಾಮಚಂದ್ರಮೂರ್ತಿ
ಜೆ.ಆರ್. ಲಕ್ಷ್ಮಣರಾವ್

## ದೃಶ್ಯ 6

ವ್ಯಾಟಿಕನ್ ಸಂಶೋಧನಾ ಸಂಸ್ಥೆಯಾದ ಕೊಲೇಜಿಯಮ್ ರೋಮನಮ್ ಗೆಲಿಲಿಯೊ ಕಂಡುಹಿಡಿದ ವಿಷಯಗಳನ್ನು ಸಮರ್ಥಿಸುತ್ತದೆ.

ಹಮ್ಮ ತೊರೆದು ಕಲಿಯ ಹೊರಡೆ ಬಲ್ಲವರು
ಲೋಕಕಹುದು ಹೊಸ ಬೆಡಗಿನ ಹೊಗರು
ಇದ ಹೇಳಲು ನಮಗಂತೂ ಬಲು ಹರುಷ
ಗೆಲಿಲಿಯೆ ಸರಿ ಎಂದ ಕ್ಲೆವಿಯಸ್ಸ

**ರೋಮ್ ನಗರ. ಕೊಲೇಜಿಯಮ್ ರೋಮನಮ್‌ನ ಹಜಾರ**

ರಾತ್ರಿಯ ವೇಳೆ; ಚರ್ಚಿನ ಉನ್ನತಾಧಿಕಾರಿಗಳು, ಪಾದ್ರಿಗಳು, ವಿದ್ವಾಂಸರು ಗುಂಪುಗುಂಪಾಗಿ ನಿಂತಿದ್ದಾರೆ. ಒಂದುಕಡೆ ಗೆಲಿಲಿಯೊ ಒಬ್ಬನೇ ನಿಂತಿದ್ದಾನೆ. ಎಲ್ಲರೂ ಉತ್ಸಾಹದಿಂದ ಗಟ್ಟಿಯಾಗಿ ಮಾತನಾಡುತ್ತಿರುವ ಶಬ್ದ. ದೃಶ್ಯ ಪ್ರಾರಂಭವಾಗುವುದಕ್ಕೆ ಮುಂದೆ ಜನ ಗಟ್ಟಿಯಾಗಿ ನಗುವ ಸದ್ದು.

ಟೊಣಪ ಪ್ರಿಲೇಟ್ : ಹೊಟ್ಟೆ ಹಿಡಿದುಕೊಂಡು ಗೇಲಿ ಮಾಡಿ ನಗುತ್ತಾ ಅಯ್ಯೋ ಮೌಢ್ಯವೇ! ಯಾರೂ ನಂಬದೇ ಇರೋ ಅಂಥ ಒಂದು ಮತ ಹೇಳಬಾರದೇ ಯಾರಾದರೂ!

ವಿದ್ವಾಂಸ : ಉದಾಹರಣೆಗೆ, ನಿಮಗೆ ಭೋಜನ ಅಂದರೆ ಸುತರಾಂ ಆಗೋಲ್ಲ ಅಂತ ಹೇಳಿದರೆ?

ಟೊಣಪ ಪ್ರಿಲೇಟ್ : ಅದನ್ನ ನಂಬಿಬಿಡ್ತಾರೆ! ಖಂಡಿತ ನಂಬಿಬಿಡ್ತಾರೆ! ಸಕಾರಣವಾಗಿರೋದನ್ನ ಸಮಂಜಸವಾಗಿರೋದನ್ನ, ನಂಬೋದಿಲ್ಲ. ಉದಾಹರಣೆಗೆ, ಸೈತಾನ ಅನ್ನೋನು ಇದಾನೆ ಅಂತ ಹೇಳಿ; ಅದನ್ನ ನಂಬೋದಿಲ್ಲ. ಅದೇ. ಚರಂಡೀಲಿ ಬಿದ್ದಿರೋ ಗೋಲಿ ಹಾಗೆ ಭೂಮಿ ಗಿರ್ರನೆ

ತಿರುಗ್ತಾ ಇದೆ ಅನ್ನಿ. ಅದನ್ನ ನಂಬ್ತಾರೆ.

ಒಬ್ಬ ಪಾದ್ರಿ : ನಾಟಕೀಯವಾಗಿ ನನಗೆ ತಲೆ ಸುತ್ತುತ್ತಾ ಇದೆ. ಭೂಮಿ ಬಹಳ ಜೋರಾಗಿ ತಿರುಗೋಕೆ ಪ್ರಾರಂಭಿಸಿದೆ. ನಿಮ್ಮನ್ನ ಸ್ವಲ್ಪ ಹಿಡಿದುಕೊಳ್ಳಲೇ ಪ್ರೊಫೆಸರ್? ಅತ್ತಿತ್ತ ತೂಗಾಡುವಂತೆ ನಟಿಸುತ್ತಾ ವಿದ್ವಾಂಸನೊಬ್ಬನನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತಾನೆ.

ವಿದ್ವಾಂಸ : ತಾನೂ ಈ ನಾಟಕದಲ್ಲಿ ಭಾಗವಹಿಸುತ್ತಾ ಹೌದು. ಹೌದು, ನಮ್ಮ ಭೂಮಿತಾಯಿಗೆ ಇವತ್ತು ಪುನಃ ಕುಡಿದು ಅಮಲೇರಿಬಿಟ್ಟಿದೆ. ಅವನು ಭೂಮಿ ತಾಯಿಗೆ ಇವತ್ತು ಪುನಃ ಕುಡಿದು ಅಮಲೇರಿಬಿಟ್ಟಿದೆ. ಅವನು ಇನ್ನೊಬ್ಬ ವಿದ್ವಾಂಸನನ್ನು ಹಿಡಿದುಕೊಳ್ಳುತ್ತಾನೆ.

ವಿದ್ವಾಂಸ : ಮಹಾತಾಯಿ! ಸ್ವಲ್ಪ ನಿಲ್ಲಬಾರದೆ? ನಾವು ಬಿದ್ದು ಹೋಗ್ತಾ ಇದೀವಿ.

ಮೊದಲನೆಯ ಪಾದ್ರಿ:ಶುಕ್ರದೇವತೆ ಆಗಲೇ ಬಗ್ಗಿ ಹೋಗಿಬಿಟ್ಟಿದ್ದಾಳೆ. ಅವಳ ಬೆನ್ನು ಅರ್ಧ ಮಾತ್ರ ಕಾಣಿಸುತ್ತಾ ಇದೆ ಅಷ್ಟೆ.... ಅಯ್ಯೋ ಅಯ್ಯೋ!

ಪಾದ್ರಿಗಳ ಒಂದು ಗುಂಪು ನಗುತ್ತಾ ಬಿರುಗಾಳಿಗೆ ಸಿಕ್ಕಿದ ಹಡಗಿನಿಂದ ಬಿದ್ದು ಹೋಗದಂತೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವವರ ಹಾಗೆ ನಟಿಸುತ್ತಾರೆ.

ಎರಡನೆಯ ಪಾದ್ರಿ : ಸದ್ಯ, ನಾವು ಜಾರಿಕೊಂಡು ಚಂದ್ರನ ಮೇಲೆ ಬೀಳದಿದ್ದರೆ ಸಾಕು. ಅಲ್ಲಿ ಪರ್ವತಶಿಖರಗಳೆಲ್ಲಾ ಚೂಪಾಗಿವೆಯಂತೆ!

ಮೊದಲ ವಿದ್ವಾಂಸ : ಹುಷಾರು, ಕಾಲುಭದ್ರ!

ಎರಡನೆಯ ಪಾದ್ರಿ : ಕೆಳಗೆ ಬಗ್ಗಿ ನೋಡೀರಿ! ತಲೆ ತಿರುಗುತ್ತೆ.

ಟೋಣಪ ಪ್ರೊಲೇಟ್ : ಬೇಕೆಂದೇ ಗೆಲಿಲಿಯೊ ಕಡೆ ತಿರುಗಿ ಗಟ್ಟಿಯಾಗಿ ಅದು ಸಾಧ್ಯವೇ ಇಲ್ಲ. ಕೊಲೇಜಿಯಮ್ ರೋಮನಮ್‌ನಲ್ಲಿ ತಲೆ ತಿರುಗೋಣ ಅಂದರೇನು? ಎಲ್ಲರೂ ಗಟ್ಟಿಯಾಗಿ ನಗುವರು. ಹಿಂದಿನ ಬಾಗಿಲಿನಿಂದ ಇಬ್ಬರು ಖಗೋಳ ವಿಜ್ಞಾನಿಗಳ ಪ್ರವೇಶ. ಎಲ್ಲರೂ ಸ್ತಬ್ಧರಾಗುತ್ತಾರೆ.

ಒಬ್ಬ ಪಾದ್ರಿ : ಏನು? ನಿಮ್ಮ ಪರಿಶೀಲನೇನ ಇನ್ನೂ ನಡಸ್ತಲೇ ಇದೀರಾ? ನಾಚಿಕೆಗೇಡು?

ಮೊದಲ ಖಗೋಳ ವಿಜ್ಞಾನಿ : ನಾವು ನಡೆಸ್ತಾ ಇಲ್ಲ.

ಎರಡನೆಯ ಖಗೋಳ ವಿಜ್ಞಾನಿ : ಇದೆಲ್ಲಾ ಹೇಗೆ ಮುಗಿಯುತ್ತೋ ಕಾಣೆ! ಈ ಕ್ಲೇವಿಯಸ್‌ನ ವಿಷಯನೇ ಅರ್ಥವಾಗೋಲ್ಲ ನನಗೆ... ಈಗ ಐವತ್ತು

ವರ್ಷದಿಂದ ಯಾರ್ಯಾರೋ ಮನಸ್ಸು ಬಂದ ಹಾಗೆ ಏನೇನೋ ಹೇಳ್ತಾ ಇದಾರಲ್ಲಾ– ಅದನ್ನೆಲ್ಲಾ ನಾವು ನಂಬಿಕೊಳ್ಳೋಕೆ ಆಗುತ್ತೆ? 1572ರಲ್ಲಿ ಎಲ್ಲದಕ್ಕಿಂತ ಮೇಲಿರೋ ಆ ಎಂಟನೆಯ ಗೋಳದಲ್ಲಿ, ಅಂದರೆ ಸ್ಥಿರ ನಕ್ಷತ್ರಗಳಿರೋ ಗೋಳದಲ್ಲಿ, ಇದ್ದಕ್ಕಿದ್ದ ಹಾಗೆ ಒಂದು ಹೊಸ ನಕ್ಷತ್ರ ಕಾಣಿಸಿಕೊಂಡಿತು. ಸುತ್ತಮುತ್ತಲೂ ಇದ್ದ ಎಲ್ಲ ನಕ್ಷತ್ರಗಳಿಗಿಂತ ಜೋರಾಗಿ ಹೊಳೀತಿತ್ತು ಅದು. ಸುಮಾರು ಒಂದು ಒಂದೂವರೆ ವರ್ಷದೊಳಗೆ ಅದರ ಪಾಡಿಗೆ ಅದು ಕಣ್ಮರೆ ಆಯಿತು. ಅಂದ ಮಾತ್ರಕ್ಕೆ ನಕ್ಷತ್ರ ಲೋಕ ಶಾಶ್ವತ ಅಲ್ಲ ಅನ್ನೋದಕ್ಕೆ ಆಗುತ್ತೆ? ಏನಿದರ ಅರ್ಥ?

ತತ್ವಶಾಸ್ತ್ರಜ್ಞ: ಇವರ ಮಾತು ಕೇಳಿದರೆ ಆಯಿತು... ಇಡೀ ವಿಶ್ವಾನೇ ಧೂಳೀಪಟ ಮಾಡಿ ಹಾಕಿಬಿಡ್ತಾರೆ.

ಮೊದಲ ಖಗೋಳವಿಜ್ಞಾನಿ : ಅದನ್ನೇ ಮತ್ತೆ ನಾನು ಹೇಳ್ತಾ ಇರೋದು! ಅಲ್ಲಿಂದ ಐದು ವರ್ಷ ಆದ ಮೇಲೆ, ಆ ಡೆನ್ಮಾರ್ಕಿನ ಟೈಕೋ ಬ್ರಾಹೆ ಅನ್ನೋವನು ಒಂದು ಧೂಮಕೇತುವಿನ ಪಥ ಲೆಕ್ಕ ಹಾಕ್ತೀನಿ ಅಂತ ಕೂತುಕೊಂಡ. ಅದು ಚಂದ್ರನಿಗಿಂತ ಮೇಲಿದ್ದದ್ದು ಕೆಳಕ್ಕೆ ಬರೋಕೆ ಶುರುವಾಯಿತಂತೆ! ಒಂದೊಂದಾಗಿ ಪಾರದರ್ಶಕ ಗೋಳಗಳನ್ನೆಲ್ಲಾ ಭೇದಿಸಿಕೊಂಡು ಬಂತು ಅಂತ ಲೆಕ್ಕ ಹಾಕಿದ. ಗ್ರಹಗಳನ್ನೆಲ್ಲಾ ಹೊತ್ತುಕೊಂಡು ತಿರುಗುತಾ ಇರೋ ಆ ಗೋಳಗಳು ಆ ಧೂಮಕೇತುವಿನ ಚಲನೆಗೆ ಏನೂ ಅಡ್ಡಿ ಮಾಡಲಿಲ್ಲವಂತೆ! ಅದರ ಬೆಳಕು ಕೂಡ ಬಾಗಲಿಲ್ಲವಂತೆ! ಇದನ್ನೆಲ್ಲಾ ನಾವು ನಂಬಬೇಕಂತೆ! ಹಾಗಾದರೆ, ಆ ಗೋಳಗಳೆಲ್ಲಾ ಎಲ್ಲಿ ಹೋದವು ಅಂತ ನಾನು ಕೇಳೋದು!

ತತ್ವಶಾಸ್ತ್ರಜ್ಞ : ಎಂದೆಂದಿಗೂ ಸಾಧ್ಯವಿಲ್ಲ. ಇಟಲಿಯ ದೊಡ್ಡ ಖಗೋಳ ವಿಜ್ಞಾನಿ. ಚರ್ಚಿನ ಅತ್ಯಂತ ದೊಡ್ಡ ಖಗೋಳ ವಿಜ್ಞಾನಿ ಅನ್ನಿಸಿಕೊಂಡಿರೋ ಆ ಕ್ರಿಸ್ಟಫರ್ ಕ್ಲೇವಿಯಸ್ ಕೂತುಕೊಂಡು ಇಂಥ ವಿಷಯಗಳನ್ನೆಲ್ಲಾ ಪರಿಶೀಲನೆ ಮಾಡೋದು ಅಂದರೆ ಅರ್ಥವೇನು?

ಟೊಣಪ ಪ್ರಿಲೇಟ್ : ನಾಚಿಕೆಗೇಡು!

ಮೊದಲ ಖಗೋಳವಿಜ್ಞಾನಿ : ಆದರೆ ಮಾಡ್ತಾ ಇದಾನಲ್ಲಪ್ಪಾ! ಈ ಕ್ಷಣದಲ್ಲಿ ಅಲ್ಲಿ ಕೂತ್ಕೊಂಡು ಆ ಸೈತಾನಿ ಕೊಳವೆ ಒಳಗೆ ಕಣ್ಣಿಟ್ಟುಕೊಂಡು ನೋಡ್ತಾ ಇದಾನಲ್ಲಾ!

ಎರಡನೆಯ ಖಗೋಳವಿಜ್ಞಾನಿ : Principiis obsta ಆ ಪಾಷಂಡ

ಕೊಪರ್ನಿಕಸ್‌ನ ಕೋಷ್ಟ ಇಟ್ಟುಕೊಂಡು ನಾವು ಏನೇನೋ ಲೆಕ್ಕ ಹಾಕೋದಕ್ಕೆ ಪ್ರಾರಂಭಿಸಿದೆವಲ್ಲಾ. ಸೌರವರ್ಷದ ಅವಧಿ, ಸೂರ್ಯಗ್ರಹಣ, ಚಂದ್ರಗ್ರಹಣ, ಗ್ರಹ ನಕ್ಷತ್ರಗಳ ಸ್ಥಾನಗಳು. ಇದನ್ನೆಲ್ಲಾ ಲೆಕ್ಕ ಹಾಕಿದ್ದೇ ಈ ತೊಂದರೆಗೆಲ್ಲಾ ಮೂಲವಾಯಿತು.

ಒಬ್ಬ ಪಾದ್ರಿ : ನಾನು ಒಂದು ಪ್ರಶ್ನೆ ಕೇಳ್ತೀನಿ: ಗ್ರಹಣ ಎಂದು ಬರುತ್ತೆ ಅಂತ ಮೂರು ದಿನ ಮುಂಚೆ ಲೆಕ್ಕ ಹಾಕಿ ತಿಳುಕೊಳ್ಳೋದು ಮುಖ್ಯವೋ.... ಆತ್ಮೋದ್ಧಾರ ಮುಖ್ಯವೋ?

ಒಬ್ಬ ಸಣಕಲ ಪಾದ್ರಿ : ತೆರೆದ ಬೈಬಲ್ಲಿನಲ್ಲಿ ಬೆರಳಿಟ್ಟು ತೋರಿಸುತ್ತಾ ಮುಂದೆ ಬಂದು ಇಲ್ಲಿ ನಮ್ಮ ಧರ್ಮಗ್ರಂಥದಲ್ಲಿ ಏನು ಹೇಳಿದೆ ನೋಡಿ ಸ್ವಲ್ಪ. "ಎಲೈ ಸೂರ್ಯನೆ, ಗಿಬಿಯಾನ್ ನಗರದ ಮೇಲೆ ಸ್ಥಿರವಾಗಿ ನಿಲ್ಲು, ಎಲೈ ಚಂದ್ರನೆ, ನೀನು ಅಜೆಲಾನ್ ಕಣಿವೆಯಲ್ಲಿ ನಿಲ್ಲು" ಅಂತ ಸೂರ್ಯ ಚಂದ್ರರಿಗೆ ಹೇಳಿದ ವಿಷಯ ಇದೆಯಲ್ಲಾ ಇಲ್ಲಿ. ಈ ಪಾಷಂಡರು ಹೇಳೋ ಹಾಗೆ ಸೂರ್ಯ ಚಲಿಸೋದೆ ಇಲ್ಲ ಅನ್ನೋದಾದರೆ 'ಸ್ಥಿರವಾಗಿ ನಿಲ್ಲು' ಅಂತ ಅವನಿಗೆ ಯಾಕೆ ಹೇಳಬೇಕಾಗಿತ್ತು? ಧರ್ಮಗ್ರಂಥ ಸುಳ್ಳು ಹೇಳುತ್ಯೆ?

ಮೊದಲ ಖಗೋಳವಿಜ್ಞಾನಿ : ಎಂದಿಗೂ ಇಲ್ಲ. ಅದಕ್ಕೇ ನಾವು ಹೊರಟು ಹೋಗ್ತಾ ಇದೀವಿ.

ಎರಡನೆ ಖಗೋಳ ವಿಜ್ಞಾನಿ : ಖಗೋಳ ವಿಜ್ಞಾನಿಗಳಿಗೆ ವೈಜ್ಞಾನಿಕವಾಗಿ ತೊಂದರೆಗಳನ್ನ ಒಡ್ಡುತಾ ಇರೋ ಕೆಲವು ವಿದ್ಯಮಾನಗಳಿರೋದೇನೋ ನಿಜ. ಆದರೆ ಮನುಷ್ಯ ಎಲ್ಲವನ್ನೂ ಅರ್ಥ ಮಾಡಿಕೊಳ್ಳಲೇಬೇಕು ಅನ್ನೋ ಅಂಥಾದ್ದೇನು ಅಂತ ನಾನು ಕೇಳೋದು? ಇಬ್ಬರೂ ನಿರ್ಗಮಿಸುವರು.

ಸಣಕಲ ಪಾದ್ರಿ : ಮಾನವಕೋಟೀನೇ ಹೊತ್ತು ನಿಂತಿರೋ ನಮ್ಮ ಈ ಭೂಮಿ ತಾಯೀನ ಒಂದು ಯಃಕಶ್ಚಿತ ಅಲೆಮಾರಿ ಗ್ರಹದ ಸ್ಥಾನಕ್ಕೆ ಇಳಿಸಿಬಿಟ್ಟರು ಇವರು! ಮನುಷ್ಯರು, ಪ್ರಾಣಿಗಳು, ಗಿಡಮರಗಳು, ಎಲ್ಲವನ್ನೂ ಒಂದು ಗಾಡೀಲಿ ಒಟ್ಟಿ ರಂಕರಾಟಣದಲ್ಲಿ ತಿರುಗಿಸೋ ಹಾಗೆ ಖಾಲಿ ಆಕಾಶದಲ್ಲಿ ತಿರುಗಿಸುತ್ತಾ ಇದಾರೆ. ಭೂಲೋಕ. ಪರಲೋಕ, ಯಾವುದೂ ಇಲ್ಲ ಇವರ ಪ್ರಕಾರ. ಭೂಲೋಕ ಇಲ್ಲ... ಯಾಕೇ ಅಂದರೆ, ಭೂಮಿ ಒಂದು ಗ್ರಹ! ಪರಲೋಕ ಇಲ್ಲ. ಯಾಕೇ ಅಂದರೆ ಅಲ್ಲಿರೋದೆಲ್ಲಾ ಇಂಥಾ ಭೂಮಿಗಳೇ! ಇನ್ನು ಮುಂದೆ ಮೇಲೆ, ಕೆಳಗೆ, ಅನ್ನೋದಕ್ಕೆ ವ್ಯತ್ಯಾಸ ಇಲ್ಲ; ಶಾಶ್ವತ, ಕ್ಷಣಿಕ

ಅನ್ನೋದಕ್ಕೆ ವ್ಯತ್ಯಾಸ ಇಲ್ಲ! ಮನುಷ್ಯನ ಜೀವನ ಕ್ಷಣಿಕ ಅನ್ನೋದು ನಮಗೆ ಗೊತ್ತು. ಆದರೆ ಇವರು ಹೇಳ್ತಾರೆ: ಪರಲೋಕ ಅನ್ನೋದೂ ಕ್ಷಣಿಕ ಅಂತ ಚಂದ್ರ, ಸೂರ್ಯ, ನಕ್ಷತ್ರಗಳು, ಅವೆಲ್ಲಾ ಮೇಲಿವೆ. ನಾವು ಕೆಳಗೆ ಭೂಮಿ ಮೇಲೆ ಇದೀವಿ ಅಂತ ಇದುವರೆಗೂ ತಿಳಿಕೊಂಡಿದ್ವಿ. ಬೈಬಲ್‌ನಲ್ಲಿ ಹೇಳಿರೋದೂ ಅದನ್ನೇ. ಈಗ, ಇವರ ಪ್ರಕಾರ, ಭೂಮಿ ಅನ್ನೋದೇ ಒಂದು ಗ್ರಹ. ಗ್ರಹ, ಗ್ರಹ! ಗ್ರಹಗಳನ್ನು ಬಿಟ್ಟು ಇನ್ನೇನು ಇಲ್ವೇ ಇಲ್ಲ ಈ ವಿಶ್ವದಲ್ಲಿ! ಇನ್ನು ನಾಲ್ಕು ದಿನ ಹೋದರೆ ಮನುಷ್ಯರಿಗೂ ಮೃಗಗಳಿಗೂ ವ್ಯತ್ಯಾಸವೇ ಇಲ್ಲ ಅಂತಾ ಹೇಳಿಬಿಡ್ತಾರೆ ಇವರು. ಮನುಷ್ಯನೂ ಒಂದು ಮೃಗ. ಭೂಮಿ ಮೇಲೆ ಜೀವಿಸಿರೋದೆಲ್ಲಾ ಮೃಗಗಳೇ. ಮನುಷ್ಯರಲ್ಲ ಅಂತಾರೆ.

ಮೊದಲ ವಿದ್ವಾಂಸ : ಗೆಲಿಲಿಯೊ ಕುರಿತು ಗೆಲೀಲಿ ಅವರೇ! ನಿಮ್ಮ ಕೈಯಿಂದ ಏನೋ ಕೆಳಗೆ ಬಿತ್ತು ನೋಡಿ!

ಗೆಲಿಲಿಯೊ : ಮೇಲಿನದೆಲ್ಲಾ ನಡೆಯುವಾಗ ತನ್ನ ಜೇಬಿನಿಂದ ಒಂದು ಕಲ್ಲನ್ನು ತೆಗೆದು ಕೈಯಲ್ಲಿ  ಆಡಿಸುತ್ತಾ ಕೆಳಕ್ಕೆ ಬೀಳಿಸಿ ಅದನ್ನೆತ್ತಿಕೊಳ್ಳಲು ಬಗ್ಗುತ್ತಾ ಇಲ್ಲ ಸ್ವಾಮಿ, ಬೀಳೋದೆಲ್ಲಿ ಬಂತು? ಮೇಲಕ್ಕೆ ಹಾರಿತು ಅದು.

ಟೊಣಪ ಪ್ರಿಲೇಟ್ : ಅವನತ್ತ ಬೆನ್ನು ತಿರುಗಿಸಿ ಹೋಗುತ್ತಾ ಇವನ ಸೊಕ್ಕು ನೋಡಿ! ಹಣ್ಣು ಹಣ್ಣು ಮದುಕನಾದ ಒಬ್ಬ ಕಾರ್ಡಿನಲ್, ಪಾದ್ರಿಯೊಬ್ಬನ ಹೆಗಲಿನ ಮೇಲೆ ಕೈ ಊರಿಕೊಂಡು ಪ್ರವೇಶಿಸುವರು. ಉಳಿದವರು ಗೌರವದಿಂದ ಅವನಿಗೆ ದಾರಿ ಬಿಡುತ್ತಾರೆ.

ಹಣ್ಣು ಹಣ್ಣು ಮುದುಕ : ಅವರೆಲ್ಲಾ ಇನ್ನೂ ಒಳಗೇ ಇದಾರೆಯೇ? ಈ ಯಃಕಶ್ಚಿತ ವಿಷಯ ತೀರ್ಮಾನ ಮಾಡೋಕೆ ಇಷ್ಟು ಹೊತ್ತು ಬೇಕೇ? ಈ ಕ್ಲೇವಿಯಸ್‌ಗೆ ಖಗೋಳವಿಜ್ಞಾನ ಹೇಳಿಕೊಡಬೇಕಾಗಿದೆ ಈಗ. ಆ ಗೆಲಿಲಿಯೊ... ಮಾನವ ಕುಲಾನೇ ವಿಶ್ವದ ಕೇಂದ್ರದಿಂದ ಎಬ್ಬಿಸಿ ಎಲ್ಲೋ ಒಂದು ಮೂಲೆಗೆ ದೂಡಿದಾನಂತೆ! ಅಂದ ಮೇಲೆ ಅವನು ಮನುಷ್ಯ ಕುಲದ ಪರಮಶತ್ರು ಅನ್ನೋದರಲ್ಲಿ ಸಂದೇಹವೇ ಇಲ್ಲ. ಬರೀ ಅನ್ನೋದೇನು ಬಂತು? ನಿಜವಾಗಿಯೂ ಅವನ್ನ ಶತ್ರುವಿನ ಹಾಗೇ ಕಾಣಬೇಕು! ಮನುಷ್ಯ ಅನ್ನೋವನು ಸೃಷ್ಟಿಯಲ್ಲೇ ಸರ್ವಶ್ರೇಷ್ಠ. ಒಂದು ಸಣ್ಣ ಮಗುವಿಗೂ ಗೊತ್ತಿರೋ ವಿಷಯ ಇದು. ಮನುಷ್ಯ ಭಗವಂತನ ಸೃಷ್ಟೀಲಿ ಅತ್ಯಂತ ಶ್ರೇಷ್ಠನಾದೋನು, ಅತ್ಯಂತ ಪ್ರಿಯನಾದೋನು. ಇಂಥ ಅವನ ಸೃಷ್ಟೀನ. ಎಲ್ಲೋ ದೂರದಲ್ಲಿ ಸದಾ

ಅಲೆದಾಡುತ್ತಾ ಇರೋ ಒಂದು ಗ್ರಹದ ಮೇಲೆ ತಂದು ಕೂರಿಸುತಾನೆಯೇ ಅವನು? ತನ್ನ ಸಂದೇಶ ಸಾರೋ ತನ್ನ ಸುಪುತ್ರ ನನ್ನ ಎಲ್ಲಾ ಬಿಟ್ಟು ಅಲ್ಲಿಗೆ ಕಳಿಸೋದು ಉಂಟೇ? ತಾವೇ ತಯಾರಿಸಿರೋ ಗಣಿತ ಕೋಷ್ಟಕಗಳಿಗೆ ತಾವೇ ಗುಲಾಮರಾಗಿರೋ ಈ ಜನಗಳ ಮಾತನ್ನು ನಂಬ್ತಾರಲ್ಲಾ ಅಂಥವರಿಗೆ ಏನು ಹೇಳಬೇಕು? ಮನುಷ್ಯನಾದೋನು ಯಾರು ತಾನೇ ಇದನ್ನು ಸಹಿಸಿಕೊಳ್ಳೋಕೆ ಸಾಧ್ಯ?

ಟೋಣಪ ಪ್ರಿಲೇಟ್ : ಕೆಳದನಿಯಲ್ಲಿ ಅವರು ಇಲ್ಲೇ ಇದ್ದಾರೆ.

ಹಣ್ಣು ಹಣ್ಣು ಮುದುಕ : ಗೆಲಿಲಿಯೊ ಕಡೆ ತಿರುಗಿ ಓಹೋ! ನೀನೇನಾ ಆ ಮನುಷ್ಯ? ನನಗೆ ಈಚೆಗೆ ಕಣ್ಣು ಸರಿಯಾಗಿ ಕಾಣಿಸುತಿಲ್ಲ; ಸ್ವಲ್ಪ ಸ್ವಲ್ಪ ಕಾಣಿಸತ್ತೆ. ನೀನು ಬಹಳ ಮಟ್ಟಿಗೆ ಅವನ ಹಾಗೇ ಇದೀಯೆ... ಅವನ ಹೆಸರೇನು? ನಾವು ಅವನನ್ನ ಸುಟ್ಟೆವಲ್ಲಾ... ಅವನ ಹೆಸರು?

ಪಾದ್ರಿ : ಸ್ವಾಮಿಯವರು ಸ್ವಲ್ಪ ಸಮಾಧಾನ ತಗೊಳ್ಳಬೇಕು, ವೈದ್ಯರು....

ಹಣ್ಣು ಹಣ್ಣು ಮುದುಕ : ಅವನನ್ನು ನಿರ್ಲಕ್ಷಿಸಿ, ಗೆಲಿಲಿಯೊ ಕಡೆ ತಿರುಗಿ ನೀನು ಜೀವಿಸಿರೋದೇ ಈ ಭೂಮೀ ಮೇಲೆ. ಪ್ರತಿಯೊಂದಕ್ಕೂ ನಿನಗೆ ಇದೇ ಆಧಾರ! ಇಂಥಾ ಭೂಮೀನ ನಿಕೃಷ್ಟವಾಗಿ ಕಾಣ್ತಾ ಇದೀಯಲ್ಲಾ! ನಿನ್ನ ಬುಡಕ್ಕೆ ನೀನೇ ಕೊಡಲಿ ಹಾಕಿಕೊಳ್ತಾ ಇದೀಯೆ! ನಾನು ಮಾತ್ರ ಇದನ್ನು ಸಹಿಸೋದಿಲ್ಲ ಪಾದ್ರಿಯನ್ನು ಆಚೆಗೆ ತಳ್ಳಿ ಹೆಮ್ಮೆಯಿಂದ ಶತಪಥ ತಿರುಗುತ್ತಾ ಯಾವುದೋ ಮೂಲೇಲಿ ಒಂದು ಕ್ಷಣ ಕಾಲ ಸುತ್ತು ಹಾಕುತಾ ಇರೋ ಒಂದು ಕ್ಷುದ್ರಗ್ರಹದ ಮೇಲೆ ಕುಳಿತಿರೋ ಒಂದು ಕ್ಷುದ್ರ ಜಂತು ಅಂತ ಹೇಳಿಕೊಳ್ಳೋಕೆ ನಾನು ತಯಾರಾಗಿಲ್ಲ. ಭದ್ರವಾಗಿರೋ ಈ ಭೂಮೀ ಮೇಲೆ ಭದ್ರವಾಗಿ ನಿಂತಿದೀನಿ ನಾನು. ಈ ಭೂಮಿ ಅಚಲ! ಇದೇ ವಿಶ್ವದ ಕೇಂದ್ರ! ನಾನು ಆ ಕೇಂದ್ರದಲ್ಲೇ ಇದೀನಿ. ಸೃಷ್ಟಿಕರ್ತನ ಕಣ್ಣು ನನ್ನ ಮೇಲೆ ನೆಟ್ಟಿದೆ! ನನ್ನ ಮೇಲೆ ನೆಟ್ಟಿದೆ ಅಂದೆ! ಎಂಟನೇ ಪಾರದರ್ಶಕ ಗೋಳಗಳಿಗೆ ಭದ್ರವಾಗಿ ಬಂಧಿಸಿರೋ ಸ್ಥಿರ ನಕ್ಷತ್ರಗಳೂ. ನನ್ನ ಈ ವಾಸಸ್ಥಾನದ ಮೇಲೆ ಬೆಳಕು ಚೆಲ್ಲಲಿ ಅಂತಲೇ ಸೃಷ್ಟಿಯಾಗಿರೋ ಆ ಮಹಾಸೂರ್ಯ. ಇವೆಲ್ಲಾ ನನ್ನ ಸುತ್ತ ತಿರುಗುತ್ತಾ ಇವೆ. ಭಗವಂತನ ಕಣ್ಣಿಗೆ ನಾನು ಸ್ಪಷ್ಟವಾಗಿ ಕಾಣಿಸಲಿ ಅಂತ ಸೂರ್ಯ ನನ್ನ ಮೇಲೂ ಬೆಳಕು ಚೆಲ್ಲುತಾ ಇದಾನೆ! ಆದ್ದರಿಂದ ನಿಸ್ಸಂದೇಹವಾಗಿ ಸೃಷ್ಟಿಯ ಕೇಂದ್ರವಾಗಿರತಕ್ಕ, ಭಗವಂತನ ಪ್ರಧಾನ ಸೃಷ್ಟಿಯಾಗಿರತಕ್ಕ, ಭಗವಂತನ

ಶಾಶ್ವತವಾದ ಪ್ರತಿಬಿಂಬಿವೇ ಆಗಿರತಕ್ಕ ನನ್ನ ಮೇಲೆ, ಅಂದರೆ, ಈ ಮನುಷ್ಯನ ಮೇಲೆ ಎಲ್ಲವೂ ಅವಲಂಬಿಸಿದೆ. ನಾನು ಭಗವಂತನ ಶಾಶ್ವತವಾದ ಪ್ರತಿಬಿಂಬ!.... ಕುಸಿಯುತ್ತಾನೆ.

ಪಾದ್ರಿ : ಸ್ವಾಮಿಯವರು ಬಹಳ ಆಯಾಸ ಮಾಡಿಕೊಂಡುಬಿಟ್ಟರು. ಆ ಕ್ಷಣದಲ್ಲಿ ಹಿಂದಿನ ಬಾಗಿಲು ತೆರೆಯುತ್ತದೆ. ಕ್ಲೇವಿಯಸ್‌ನ ನೇತೃತ್ವದಲ್ಲಿ ಖಗೋಳವಿಜ್ಞಾನಿಗಳ ಒಂದು ತಂಡ ಪ್ರವೇಶಿಸುತ್ತದೆ. ಅವರು ಮಾತನಾಡದೆ, ಅತ್ತಿತ್ತ ನೋಡದೆ, ಕ್ಷಿಪ್ರಗತಿಯಲ್ಲಿ ಹಜಾರದ ಒಂದು ಕಡೆಯಿಂದ ಇನ್ನೊಂದು ಕಡೆಗೆ ನಡೆದುಹೋಗುತ್ತಾರೆ.

ಕ್ಲೇವಿಯಸ್ : ಹಜಾರದಿಂದ ಹೊರಗೆ ಹೋಗುವ ಮುನ್ನ ಒಬ್ಬ ಪಾದ್ರಿಯನ್ನು ಕುರಿತು ಗೆಲಿಲಿಯೋ ಹೇಳಿದ್ದು ಎಲ್ಲಾ ಸರಿಯಾಗಿಯೇ ಇದೆ. ಇತರ ಖಗೋಳವಿಜ್ಞಾನಿಗಳ ಜತೆ ಆತ ಹೊರಕ್ಕೆ ಹೋಗುತ್ತಾರೆ. ಹಿಂಬದಿಯಲ್ಲಿ ತೆರೆದ ಬಾಗಿಲು ಹಾಗೆಯೇ ಇದೆ. ಎಲ್ಲರೂ ನಿಶ್ಶಬ್ದ. ಹಣ್ಣು ಹಣ್ಣು ಮುದುಕ ಕಾರ್ಡಿನಲ್ ಚೇತರಿಸಿಕೊಳ್ಳುತ್ತಾನೆ.

ಹಣ್ಣು ಹಣ್ಣು ಮುದುಕ : ಏನಂತೆ? ಅವರೇನಾದರೂ ಒಂದು ತೀರ್ಮಾನಕ್ಕೆ ಬಂದರಂತೇನು? ವಿಷಯವನ್ನು ತಿಳಿಸಲು ಯಾರಿಗೂ ಧೈರ್ಯವಿಲ್ಲ.

ಪಾದ್ರಿ : ಸ್ವಾಮಿಯವರನ್ನ ಮನೆಗೆ ಕರಕೊಂಡು ಹೋಗಬೇಕು. ದಯಮಾಡಿಸಿ.

ಮುದುಕನನ್ನು ಹಿಡಿದು ಎಬ್ಬಿಸಿ ಕರೆದೊಯ್ಯುತ್ತಾರೆ. ಎಲ್ಲರೂ ದಿಗ್ಭ್ರಾಂತರಾಗಿ ಹೊರಟು ಹೋಗುತ್ತಾರೆ. ಕ್ಲೇವಿಯಸ್‌ನ ತಂಡದಲ್ಲಿದ್ದ ಒಬ್ಬ ಚಿಕ್ಕ ಪಾದ್ರಿ ಗೆಲಿಲಿಯೊ ಬಳಿಯಲ್ಲಿ ನಿಂತು.

ಚಿಕ್ಕಪಾದ್ರಿ : ಮೆಲುದನಿಯಲ್ಲಿ ಗೆಲೀಲಿ ಅವರೇ! ಫಾದರ್ ಕ್ಲೇವಿಯಸ್ ಅವರು ಹೊರಟು ಹೋಗೋಕೆ ಮುಂಚೆ ಏನಂದರು ಗೊತ್ತೆ? "ಈಗ, ಪಾರದರ್ಶಕ ಗೋಳಗಳನ್ನೆಲ್ಲಾ ಅವರು ರಿಪೇರಿ ಮಾಡಿ ಮತ್ತೆ ಜೋಡಿಸಿಕೋಬೇಕಾಗಿದೆ. ಅದನ್ನ ಹೇಗೆ ಮಾಡ್ತಾರೋ ಆ ದೇವತಾಶಾಸ್ತ್ರಜ್ಞರೇ ನೋಡಿಕೊಳ್ಳಲಿ" ಅಂದರು. ನೀವು ಗೆದ್ದುಬಿಟ್ಟರಿ! ಹೋಗುತ್ತಾನೆ.

ಗೆಲಿಲಿಯೊ : ಅವನನ್ನು ಹಿಡಿದು ನಿಲ್ಲಿಸಲು ಪ್ರಯತ್ನಿಸುತ್ತಾ ಅದು ಗೆದ್ದದ್ದು! ಗೆದ್ದೋನು ನಾನಲ್ಲ; ಸತ್ಯ ಗೆದ್ದಿತು!

ಚಿಕ್ಕ ಪಾದ್ರಿ ಆ ವೇಳೆಗೆ ಹೊರಟು ಹೋಗಿದ್ದಾನೆ. ಗೆಲಿಲಿಯೊ ಸಹ

ಹೊರಡುತ್ತಾನೆ. ಬಾಗಿಲ ಬಳಿ ಎತ್ತರವಾದ ಒಬ್ಬ ಪಾದ್ರಿ. ಕಾರ್ಡಿನಲ್ ಇನ್‌ಕ್ವಿಜಿಟರ್, ಗೆಲಿಲಿಯೋಗೆ ಎದುರಾಗುತ್ತಾನೆ. ಆತನೊಡನೆ ಒಬ್ಬ ಖಗೋಳಶಾಸ್ತ್ರಜ್ಞನಿದ್ದಾನೆ. ಗೆಲಿಲಿಯೊ ಬಾಗಿ ನಮಿಸುತ್ತಾನೆ. ಹೊರಕ್ಕೆ ಹೋಗುವ ಮುನ್ನ ಡವಾಲಿಯವನನ್ನು ಕುರಿತು ಮೆಲುದನಿಯಲ್ಲಿ ಪ್ರಶ್ನೆ ಮಾಡುತ್ತಾನೆ.

ಗೆಲಿಲಿಯೊ : ಯಾರವರು?

ವಾಲಿಯವ : ಮೆಲುದನಿಯಲ್ಲಿ ಮಹಾಸ್ವಾಮಿಯವರು: ಕಾರ್ಡಿನಲ್ ಇನ್‌ಕ್ವಿಜಿಟರ್! ಖಗೋಳಶಾಸ್ತ್ರಜ್ಞನು ಕಾರ್ಡಿನಲ್ ಇನ್‌ಕ್ವಿಜಿಟರ್‌ನನ್ನು ದೂರದರ್ಶಕದ ಬಳಿ ಕೊಂಡೊಯ್ಯುತ್ತಾನೆ.

# ದೃಶ್ಯ 7

ಆದರೆ ಇನ್‌ಕ್ವಿಜಿಷನ್‌ರವರು ಕೂಪರ್ನಿಕಸ್ ತತ್ವಗಳನ್ನು ಬಹಿಷ್ಕರಿಸುತ್ತಾರೆ. (ಮಾರ್ಚ್ 5, 1616)

ಬಂದಿರೆ ಗೆಲಿಲಿಯೊ ರೋಮ್ ಪಟ್ಟಣಕೆ<br>
ಕರೆದನೊಬ್ಬ ಮಠಪತಿ ಔತಣಕೆ<br>
ಸವಿಯುಣಬಡಿಸಿದ, ಕುಡಿಯಲು ಕೊಟ್ಟ<br>
ಕೊನೆಗವನು ಕೋರಿದ ಒಂದಿಷ್ಟ

**ರೋಮ್ : ಕಾರ್ಡಿನಲ್ ಬೆಲಾರ್ಮಿನ್ ಅವರ ಮನೆ**

ಒಂದು ಬಾಲ್ ನೃತ್ಯ ನಡೆಯುತ್ತಿದೆ. ಮೊಗಸಾಲೆಯಲ್ಲಿ ಪಾದ್ರಿ ಉಡುಪಿನ ಇಬ್ಬರು ಚರ್ಚ್ ಗುಮಾಸ್ತರು ಚದುರಂಗದಾಟವನ್ನಾಡುತ್ತಾ ಅತಿಥಿಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾ ಕುಳಿತಿದ್ದಾರೆ. ಗೆಲಿಲಿಯೊ, ವರ್ಜೀನಿಯಾ ಮತ್ತು ಆಕೆಯ ಭಾವೀ ಪತಿ ಲುಡೋವಿಕೋ ಮಾರ್ಸಿಲಿ ಪ್ರವೇಶಿಸುತ್ತಾರೆ. ಅರೆಮುಖವಾಡ ಧರಿಸಿರುವ ಕೆಲವು ಗಂಡಸರು, ಹೆಂಗಸರು ಗೆಲಿಲಿಯೋನನ್ನು ಉತ್ಸಾಹದಿಂದ ಸ್ವಾಗತಿಸುತ್ತಾರೆ.

ವರ್ಜೀನಿಯಾ : ಲುಡೋವಿಕೊ! ನಾನು ಇವತ್ತು ಬೇರೆ ಯಾರ ಜೊತೇಲೂ ನರ್ತನ ಮಾಡೋಲ್ಲ.

ಲುಡೋ : ನಿನ್ನ ಭುಜ ಪಟ್ಟಿ ಸಡಿಲ ಆಗಿದೆ, ನೋಡಿಕೊ.

ಗೆಲಿಲಿಯೊ : ಬೇಸರಿಸದಿರು ಮಗಳೇ ಒಂದು ವೇಳೆ
ಕಣ್ಣ ಹಾರಿಸಲೊಬ್ಬ ನಿನ್ನ ಮೇಲೆ
ಕುಪ್ಪಸದ ಹೂ ಪಟ್ಟಿಯದುರುವುದ ಕಂಡು
ಎದೆ ತುಡಿಯುತಿದೆ ಎಂದುಕೊಳ್ಳಬಹುದು ಗಂಡು
ಚೆಲುವೆಯರು ತಾವೆರಚುತ್ತಿದ್ದರೂ ಸೊಗವ
ಕೆಡಿಸಿಕೊಳದಿರಬಹುದು ಮನದ ಗೆಲವ

ವರ್ಜೀನಿಯಾ : ನನ್ನ ಎದೆ ಮುಟ್ಟಿ ನೋಡಿ./

ಗೆಲಿಲಿಯೊ : ತನ್ನ ಕೈಯನ್ನು ಅವಳ ಎದೆಯ ಮೇಲಿಟ್ಟು ನೋಡಿ ಹೃದಯ ಬಡೀತಾ ಇದೆ.

ವರ್ಜೀನಿಯಾ : ನಾನು ಚೆನ್ನಾಗಿ ಕಾಣಿಸಬೇಕಪ್ಪ.

ಗೆಲಿಲಿಯೊ : ಹೌದ್ಹೌದು, ಖಂಡಿತವಾಗಿಯೂ, ಇಲ್ಲದೆ ಹೋದರೆ ನನ್ನ ಮರ್ಯಾದೆಗೆ ಕಡಿಮೆಯಾಗುತ್ತೆ, ಭೂಮಿ ಸುತ್ತುತಾ ಇದೆ ಅನ್ನೋ ವಿಷಯಾನ ಜನ ಪುನಃ ಅನುಮಾನ ಮಾಡೋಕೆ ಪ್ರಾರಂಭಿಸುತ್ತಾರೆ.

ಲುಡೋ : ಆದರೆ, ನಿಜವಾಗಿ ಅದು ಸುತ್ತುತ್ತಾ ಇಲ್ಲ, ಗೆಲಿಲಿಯೊ ನಗುತ್ತಾನೆ. ರೋಮ್‌ನಲ್ಲಿ ಎಲ್ಲೆಲ್ಲೂ ನಿಮ್ಮ ಮಾತೇ. ನಾಳೆಯಿಂದ ಬಹುಶಃ ಎಲ್ಲರೂ ನಿಮ್ಮ ಮಗಳ ಮಾತೇ ಆಡ್ತಾರೆ.

ಗೆಲಿಲಿಯೊ : ಈ ವಸಂತಕಾಲದಲ್ಲಿ ರೋಮ್‌ನಲ್ಲಿ ಎಂಥವರಾದರೂ ಚೆನ್ನಾಗಿ ಕಾಣಿಸ್ತಾರಂತೆ. ನಾನೂ ಒಳ್ಳೆ ಧಡೂತಿಯಾಗಿ ಆ್ಯಡನಿಸ್‌ನ ಹಾಗೆ ಕಾಣಿಸುತಿರಬಹುದು. ಆ ಇಬ್ಬರು ಗುಮಾಸ್ತರನ್ನು ಕುರಿತು ಕಾರ್ಡಿನಲ್ ಇಲ್ಲಿಗೆ ಬರ್ತಾರಂತೆ. ಇಲ್ಲೇ ಇರು ಅಂತ ನನಗೆ ಹೇಳಿದಾರೆ. ವರ್ಜೀನಿಯಾ, ಲುಡೋವಿಕೋ ಅವರನ್ನು ಉದ್ದೇಶಿಸಿ ನೀವು ಹೋಗಿ. ಅಲ್ಲಿ ಸೇರಿಕೊಳ್ಳಿ... ಬಾಲ್ ನರ್ತನ ನಡೆಯುತ್ತಿರುವ ಕಡೆ ತೋರಿಸುತ್ತಾನೆ. ಅವರು ಹೋಗಿ ಬಾಲ್ ಸೇರಿಕೊಳ್ಳುವ ಮೊದಲು ವರ್ಜೀನಿಯಾ ಇನ್ನೊಮ್ಮೆ ಹಿಂದಕ್ಕೆ ಓಡಿಬಂದು.

ವರ್ಜೀನಿಯಾ : ಅಪ್ಪ, ವಿಯಾ ಡೆಲ್ ಟ್ರಿಯಲ್‌ಪೋದಲ್ಲಿ ಕೇಶಾಲಂಕಾರದ ಅಂಗಡಿಗೆ ಹೋಗಿದ್ದೆ. ಅಲ್ಲಿ ನಾಲ್ಕು ಜನ ಬೇರೇವರು ಕಾಯುತಾ ಕೂತಿದ್ದರೂ ಅವರನ್ನು ಬಿಟ್ಟು ನನಗೇ ಮೊದಲು ಅಲಂಕಾರ ಮಾಡಿದ ಅವನು. ನಿನ್ನ ಹೆಸರು ಹೇಳಿದ ಕೂಡಲೇ ತಕ್ಷಣ ಗುರುತು ಹಿಡಿದ ಹೋಗುತ್ತಾಳೆ.

ಗೆಲಿಲಿಯೊ : ಚದುರಂಗವಾಡುತ್ತಿರುವ ಗುಮಾಸ್ತರಿಗೆ ಚದುರಂಗ ನೀವಿನ್ನೂ ಈ ಹಳೇ ಥರಾನೇ ಆಡ್ತಾ ಇದೀರಲ್ಲಾ? ಕೈಕಾಲು ಆಡಿಸೋಕೆ ಆಸ್ಪದವೇ ಇರೋಲ್ಲ. ಹೀಗೆ ಆಡಿದರೆ.... ಈಗ ಜನ ಆಡೋ ರೀತೀನೇ ಬೇರೆ. ಮುಖ್ಯವಾದ ಕಾಯಿಗಳು ಕಾಸಿನ ತುಂಬಾ ಸಲೀಸಾಗಿ ಓಡಾಡುತ್ವೆ. ಆನೆ ಹೀಗೆ, ಒಂಟೆ ಹೀಗೆ ಅವುಗಳ ಚಲನೆಯನ್ನು ಕೈಯಿಂದ ತೋರಿಸುವನು. ಮಂತ್ರಿ ಈ ಥರಾ ಹೀಗೆ ಆಡಿದರೆ ಬೇಕಾದಷ್ಟು ಅವಕಾಶ ಇರುತ್ತೆ ನೋಡಿ, ಕಾಯಿಗಳ ಮುಂದಿನ ನಡೆ ಎಲ್ಲಾನೂ ಮೊದಲೇ ಸರಿಯಾಗಿ ಲೆಕ್ಕಹಾಕಬಹುದು.

ಒಬ್ಬ ಗುಮಾಸ್ತೆ : ಇಲ್ಲಪ್ಪ ನಮಗೆ ಬರೋ ಸಂಬಳಕ್ಕೆ ಇಷ್ಟೇ ನಮಗೆ ಆಗೋದು. ಒಂದು ಕಾಯನ್ನು ಸ್ವಲ್ಪ ಮಾತ್ರ ಜರುಗಿಸಿ ತೋರಿಸುತ್ತಾನೆ.

ಗೆಲಿಲಿಯೊ : ಹಾಗಲ್ಲ ಸ್ವಾಮಿ! ಮನಸ್ಸಿದ್ದಲ್ಲಿ ಮಾರ್ಗ. ಕಾಲಕ್ಕೆ ತಕ್ಕ ಹಾಗೆ ನಡೀಬೇಕು. ದಡಕ್ಕೆ ಅಂಟಿಕೊಂಡೇ ಕೂತಿರೋಕಾಗಲ್ಲ. ಕೆಲವು ಸಲ ಸಮುದ್ರದೊಳಕ್ಕೂ ನುಗ್ಗಬೇಕಾಗುತ್ತೆ.

ಹಿಂದಿನ ದೃಶ್ಯದಲ್ಲಿ ಬಂದ ಹಣ್ಣು ಹಣ್ಣು ಮುದುಕ ಕಾರ್ಡಿನಲ್ ಇನ್ನೊಬ್ಬ ಪಾದ್ರಿಯೊಡನೆ ರಂಗದ ಮೇಲೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತಾನೆ. ಗೆಲಿಲಿಯೋನನ್ನು ಗಮನಿಸುತ್ತಾನೆ. ಅವನನ್ನು ದಾಟಿ ಮುಂದೆ ಹೋದ ಮೇಲೆ ಸ್ವಲ್ಪ ಅನುಮಾನದಿಂದ ಹಿಂದಕ್ಕೆ ತಿರುಗಿ ಅವನಿಗೆ ತಲೆಬಾಗುತ್ತಾನೆ. ಗೆಲಿಲಿಯೊ ಕುಳಿತುಕೊಳ್ಳುತ್ತಾನೆ. ನರ್ತನ ನಡೆಯುತ್ತಿದ್ದ ಕೋಣೆಯಿಂದ ಹುಡುಗರು ಲೊರೆನ್ಜೊ ಡಿ ಮೆಡಿಜಿ ಪದ್ಯದ ಪ್ರಾರಂಭದ ಸಾಲುಗಳನ್ನು ಹಾಡುತ್ತಿರುವುದು ಕೇಳಿಬರುತ್ತದೆ.

ವಸಂತ ಕಾಲದ ಗುಲಾಬಿ ಹೂಗಳು ಸೊರಗುತ ಸಾಯುವುದ
ಕೊರೆಯುವ ನೆಲದೊಳು ದಳದಳವುದುರಿ ಕಂದುತ ಕಮರುವುದ
ಈ ಕಣ್ಣಿಂದಲೇ ಕಂಡವ ನಾನು, ನಿಜ ಹೇಳುವೆ ನಿಮಗೆ
ಹರೆಯದ ಹೂವು ಎನಿತು ನಶ್ವರ! ನಿಲ್ಲದು ಅರೆಗಳಿಗೆ

ಮೊದಲ ಗುಮಾಸ್ತೆ : ಪ್ಲೇಗು ಬಂದು ಹೋದ ಮೇಲೆ ಇದೇ ಮೊದಲನೇ ಉತ್ಸವ ನಡೀತಾ ಇರೋದು. ಇಟಲಿಯ ದೊಡ್ಡ ದೊಡ್ಡ ಮನೆತನದೋರೆಲ್ಲಾ ಬಂದಿದಾರೆ. ಆರ್ಸಿನಿ, ವಿಲ್ಲಾನಿ, ನುಕೋಲಿ, ಸೋಲ್ಡನೀರಿ, ಕೇನಿ, ಲೆಚ್ಚಿ, ಕೂಲೊಂಬಿನಿ ಎಲ್ಲರೂ ಬಂದಿದ್ದಾರೆ.

ಎರಡನೇ ಗುಮಾಸ್ತೆ : ನಡುವೆ ಬಾಯಿ ಹಾಕಿ ಕಾರ್ಡಿನಲ್ ಬೆಲಾರ್ಮಿನ್

ಅವರೂ ಬಾರ್ಬೆರಿನಿ ಅವರೂ ಬರುತಿದಾರೆ. ಕಾರ್ಡಿನಲ್ ಬೆಲಾರ್ಮಿನ್ ಮತ್ತು ಬಾರ್ಬೆರಿನಿಯವರ ಪ್ರವೇಶ. ಅವರ ಮುಖಗಳ ಮುಂದೆ ಇಬ್ಬರೂ ಕ್ರಮವಾಗಿ ಕುರಿಮರಿಯ ಮತ್ತು ಪಾರಿವಾಳದ ಮುಖವಾಡಗಳನ್ನು ಸಿಕ್ಕಿಸಿದ ಕೋಲುಗಳನ್ನು ಹಿಡಿದು ಬರುತ್ತಾರೆ.

ಬಾರ್ಬೆರಿನಿ : ಗೆಲಿಲಿಯೊ ಕಡೆ ತನ್ನ ತೋರುಬೆರಳನ್ನು ತೋರಿಸುತ್ತಾ "ಸೂರ್ಯನು ಉದಯಿಸುವವನು ಬಳಿಕ ಅಸ್ತಮಿಸುವನು. ತಾನು ಎಲ್ಲಿ ಉದಯಿಸಿದನೋ ಅಲ್ಲಿಗೇ ಧಾವಿಸುವನು" ಸಾಲಮನ್ ಹೀಗೆ ಹೇಳ್ತಾನೆ... ಗೆಲಿಲಿಯೊ ಏನು ಹೇಳ್ತಾನೆ?

ಗೆಲಿಲಿಯೊ : ನಾನಿಷ್ಟಿದ್ದಾಗ ಸ್ವಾಮಿ, ಒಬ್ಬ ಚಿಕ್ಕ ಹುಡುಗನ ಎತ್ತರವನ್ನು ತೋರಿಸುತ್ತಾ ಒಂದು ಸಲ ಹಡಗಿನ ಮೇಲೆ ನಿಂತುಕೊಂಡು ದಡದ ಕಡೆ ನೋಡ್ತಾ, "ದಡ ದೂರ ಹೋಗ್ತಾ ಇದೇ.... ದಡ ದೂರ ಹೋಗ್ತಾ ಇದೆ" ಅಂತ ಕೂಗಿಕೊಂಡೆ. ಈಗ ನನಗೆ ಗೊತ್ತಾಗ್ತಾ ಇದೆ: ದಡ ಇದ್ದಲ್ಲೇ ಇತ್ತು, ಹೋಗ್ತಾ ಇದ್ದದ್ದು ಹಡಗು ಅಂತ.

ಬಾರ್ಬೆರಿನಿ : ಭಲೆ! ತುಂಬಾ ಚೆನ್ನಾಗಿದೆ ಅದು! ಬೆಲಾರ್ಮಿನ್ ಅವರೇ, ಅವನು ಹೇಳೋದು ಆಗಲ್ಲ ಅಂತಾನೆ. ಉದಾಹರಣೆಗೆ. ನಕ್ಷತ್ರ ರಾಶಿಗಳು ಭೂಮಿ ಸುತ್ತಾ ತಿರುಗುತಾ ಇರೋ ಹಾಗೇ ಕಾಣಿಸುತ್ವಲ್ಲಾ ಅದನ್ನು ನಿಜ ಅಂತ ಹೇಳೋಕೆ ಆಗಲ್ಲಾ ಅಂತಾನೆ. ಚಲಿಸುತಾ ಇರೋ ಹಡಗು, ಸಮುದ್ರದ ದಡ – ಅವುಗಳ ಉಪಮಾನ ಕೊಟ್ಟನಲ್ಲಾ.... ಅದನ್ನು ಸ್ವಲ್ಪ ಯೋಚನೆ ಮಾಡಿ, ಗೊತ್ತಾಗುತ್ತೆ. ನಿಜವಾಗಿರೋ ವಿಷಯಾನ. ಅಂದರೆ ಭೂಮಿ ತಿರುಗುತಾ ಇರೋದನ್ನ ಪ್ರತ್ಯಕ್ಷವಾಗಿ ನೋಡೋಕೆ ಸಾಧ್ಯವಿಲ್ಲ. ಅದು. ಅವನು ಹೇಳೋದು. ಬಹಳ ಚೆನ್ನಾಗಿದೆ! ಆದರೆ, ಗುರುಗ್ರಹದ ಚಂದ್ರಗಳ ವಿಷಯ ಹೇಳ್ತಾನಲ್ಲಾ ಅವನು.... ಅದು ಖಗೋಳ ವಿಜ್ಞಾನಿಗಳಿಗೆ ಸ್ವಲ್ಪ ತಲೆ ತಿನ್ನೋ ವಿಷಯವೇ. ಏನು ಮಾಡೋದು ನೋಡಿ, ನಾನೂ ಒಂದು ಕಾಲದಲ್ಲಿ ಸ್ವಲ್ಪ ಖಗೋಳ ವಿಜ್ಞಾನ ಕಲಿತೋನು... ಅಂಟು ಪುರ್ಲೆ ಹಾಗೆ ಅಂಟಿಕೊಂಡು ಬಿಡುತ್ತೆ ಅದು. ಅಷ್ಟು ಸುಲಭವಾಗಿ ಹೋಗಲ್ಲ.

ಬೆಲಾರ್ಮಿನ್ : ಕಾಲಕ್ಕೆ ತಕ್ಕ ಹಾಗೆ ನಡೆಯೋಣ ಬಾರ್ಬೆರಿನಿ! ಒಂದು ಹೊಸ ಸಿದ್ಧಾಂತದ ಆಧಾರದ ಮೇಲೆ ತಯಾರಿಸಿರೋ ನಕ್ಷತ್ರ ನಕಾಶೆಗಳಿಂದ ಸಮುದ್ರಯಾನಕ್ಕೆ ಅನುಕೂಲವಾಗೋದಾದರೆ ಅವರು ಅದನ್ನ

ಉಪಯೋಗಿಸಿಕೊಳ್ಳಲಿ ಬಿಡಿ. ಬೈಬಲ್‌ಗೆ ವಿರುದ್ಧವಾದ ವಿಷಯಗಳನ್ನ ಬೋಧಿಸೋದು ಮಾತ್ರ ನಮಗೆ ಇಷ್ಟವಿಲ್ಲ. ಅಷ್ಟೆ ಬಾಲ್ ನಡೆಯುತ್ತಿರುವ ಕೊಠಡಿಯ ಕಡೆ ಕೈಯಾಡಿಸಿ ಪರಿಚಿತರನ್ನು ಗುರುತಿಸುತ್ತಾನೆ.

ಗೆಲಿಲಿಯೊ : 'ಕಾಳನೀಯದೆ ಕೂಡಿಟ್ಟು ಕೊಂಬವಗೆ ಲೋಕದ ಶಾಪ ತಟ್ಟುವುದಯ್ಯಾ" ಅಂತ ಹೇಳುತ್ತೆ ಬೈಬಲ್ ಗಾದೆ.

ಬಾರ್ಬೆರಿನಿ : ಬುದ್ಧಿಯೇ ನಾಲಗೆಗೆ ಕಡಿವಾಣಮಕ್ಕುಂ.

ಗೆಲಿಲಿಯೊ : ಎತ್ತು ಕಟ್ಟದಾ ಕೊಟ್ಟಿಗೆಯು ಚೊಕ್ಕಟಮ್, ದಿಟ. ಆದೊಡಂ ಎತ್ತು ಗೇಯದಿರೆ ಕಣಜವೇ ಬರಿದಲ್ತೇ.

ಬಾರ್ಬೆರಿನಿ : ದಶಕೋಶಂಗಳನು ಗೆದ್ದಾತನೆಲ್ಲಿ, ತನ್ನ ಚೇತನವ ಗೆದ್ದಾತನಿದಿರನಲ್ಲಿ?

ಗೆಲಿಲಿಯೊ : ಚೇತನ ಉಡುಗಲ್ ಕೆಡೆವುದೊಡಲ್. ನೀರವ. ನನ್ನಿಯುಲಿದೊಡೆ ರಣರಣಿಸವೇ ದಸೆಗಳ್?

ಬಾರ್ಬೆರಿನಿ : ಬೆಂಕಿ ಮೇಲೆ ನಡೆದು, ಕಾಲು ಸುಡಬಾರದು ಅಂದರೆ ಆಗುತ್ಯೆ? ರೋಮ್ ನಗರಕ್ಕೆ ನಿನಗೆ ಸುಸ್ವಾಗತ ಗೆಲಿಲಿಯೊ! ಈ ನಗರ ಹೇಗೆ ಹುಟ್ಟಿತು ಅನ್ನೋ ಕಥೆ ನಿನಗೆ ಗೊತ್ತು ತಾನೇ? ಇಬ್ಬರು ಪುಟ್ಟ ಹುಡುಗರನ್ನ ಒಂದು ತೋಳ ತಗೊಂಡು ಬಂದು ಇಟ್ಟುಕೊಂಡು, ಹಾಲು ಕೊಟ್ಟು ಸಾಕಿತಂತೆ. ಆವತ್ತಿನಿಂದ ನಾವೆಲ್ಲ ಈ ಹಾಲಿಗೆ ಚೆನ್ನಾಗಿ ತೆತ್ತಿದೀವಿ. ಆದರೆ ಅದಕ್ಕೆ ನಾವೇನೂ ಕೊರಗಬೇಕಾಗಿಲ್ಲ ಅನ್ನು. ಯಾಕೆ ಅಂದರೆ, ಅದಕ್ಕೆ ಬೇಕಾದಷ್ಟು ಪ್ರತಿಫಲ ಕೊಡ್ತಾ ಇದೆ ಈ ನಗರ. ಮೇಧಾವಿಗಳಾದ ಬೆಲಾರ್ಮಿನ್ ಅಂಥವರ ಜೊತೆಗೆ ಚರ್ಚೆ ನಡೆಸುತೀವಿ. ದೇಶವಿದೇಶಗಳಲ್ಲೆಲ್ಲಾ ಖ್ಯಾತಿ ಗಳಿಸಿರೋ ಮಹಿಳೆಯರ ಸಹವಾಸ ಸಿಕ್ಕುತ್ತೆ. ಹೀಗೆ ನಾನಾ ತರಹ ಸುಖ ಸಂತೋಷಗಳು ದೊರಕುತ್ತವೆ ಇಲ್ಲಿ. ನಾನು ಅವರನ್ನು ತೋರಿಸಲೇ ನಿನಗೆ?

ಬಾಲ್ ನಡೆಯುತ್ತಿರುವ ಕೋಣೆಯುತ್ತ ಗೆಲಿಲಿಯೋನನ್ನು ಕರೆದೊಯ್ಯುತ್ತಾನೆ. ಗೆಲಿಲಿಯೊ ಅಷ್ಟೇನೂ ಉತ್ಸಾಹ ತೋರದೆ ಅವನ ಜತೆ ಹೋಗುತ್ತಾನೆ.

ಬಾರ್ಬೆರಿನಿ : ಬೇಡವೇ? ಗಂಭೀರವಾದ ಚರ್ಚೆಯೇ ಆಗಬೇಕೇನೋ? ಸರಿ ಹಾಗಾದರೆ ಈಗ ನೀವೆಲ್ಲರೂ, ಅಂದರೆ ಖಗೋಳ ವಿಜ್ಞಾನಿಗಳು.... ಮಾಡುತಾ ಇರೋದು ಏನು ಗೆಲಿಲಿಯೊ? ಖಗೋಳ ವಿಜ್ಞಾನವನ್ನ

ಸಾಧ್ಯವಾದಷ್ಟೂ ಸರಳವಾಗಿ ಮಾಡೋದು ತಾನೇ ನಿಮ್ಮ ಉದ್ದೇಶ? ಅವನನ್ನು ಮುಂದಕ್ಕೆ ಕರೆದುಕೊಂಡು ಬರುವನು. ನಿಮ್ಮ ಮನಸ್ಸಿಗೆ ಸುಲಭವಾಗಿ ಹಿಡಿಯೋ ಅಂಥ ವೃತ್ತಾಕಾರದ ಪಥಗಳು. ಅಂಡಾಕಾರದ ಪಥಗಳು. ಸಮವೇಗಗಳು, ಸರಳ ಚಲನೆ ಇವುಗಳ ವಿಷಯವೇ ನೀವು ಯಾವಾಗಲೂ ಯೋಚನೆ ಮಾಡ್ತಾ ಇದೀರಿ. ಆದರೆ, ದೇವರ ಮನಸ್ಸಿನಲ್ಲಿ ಗ್ರಹಗಳು ಈ ರೀತಿ ಚಲಿಸಬೇಕು ಅಂತಲೇ ಇದ್ದರೆ? ತನ್ನ ಬೆರಳನ್ನು ಗಾಳಿಯಲ್ಲಿ ಬೇರೆ ಬೇರೆ ವೇಗದಲ್ಲಿ ಆಡಿಸುತ್ತಾ ಅತ್ಯಂತ ಜಟಿಲ ಪಥವನ್ನು ಸೂಚಿಸುತ್ತಾನೆ. ಆಗ ನಿಮ್ಮ ಲೆಕ್ಕಾಚಾರದ ಗತಿಯೇನು?

ಗೆಲಿಲಿಯೊ : ಅಲ್ಲ ಸ್ವಾಮಿ, ದೇವರು ನಮ್ಮ ವಿಶ್ವವನ್ನು ಈ ರೀತಿ ರಚಿಸಿದ್ದರೆ ಬಾರ್ಬೆರಿನಿ ಸೂಚಿಸಿದ ಜಟಿಲ ಪಥವನ್ನೇ ಸೂಚಿಸುತ್ತಾ ಆಗ ನಮ್ಮ ಮಿದುಳುಗಳನ್ನೂ ಅವನು ಇದೇ ರೀತಿ ರಚಿಸುತ್ತಿದ್ದ ಪುನಃ ಅದೇ ಪಥವನ್ನು ಸೂಚಿಸುವನು. ಆಗ ನಮ್ಮ ಮಿದುಳುಗಳು ಆ ಪಥಗಳನ್ನೇ ಬಹಳ ಸರಳವಾದ ಪಥಗಳು ಸೂಚಿಸುವನು. ಆಗ ನಮ್ಮ ಮಿದುಳುಗಳು ಆ ಪಥಗಳನ್ನೇ ಬಹಳ ಸರಳವಾದ ಪಥಗಳು ಅಂದುಕೊಳ್ತಾ ಇದ್ದವು. ನನಗೆ ತರ್ಕದಲ್ಲಿ ನಂಬಿಕೆ ಇದೆ, ಸ್ವಾಮಿ.

ಬಾರ್ಬೆರಿನಿ : ತರ್ಕ ಒಂದೇ ಸಾಲದು ಅಂತೀನಿ ನಾನು.... ಅದಕ್ಕೆ ಉತ್ತರವೇ ಇಲ್ಲವಲ್ಲಾ... ನನ್ನ ತರ್ಕ ಸಾಲದು ಅಂತ ಹೇಳೋದಕ್ಕೆ ಈತನಿಗೆ ಸಂಕೋಚ, ಪಾಪ. ನಕ್ಕು ಮಹಡಿ ಮೆಟ್ಟಿಲಿನ ಕಟಕಟೆಯ ಬಳಿಗೆ ಪುನಃ ಹೋಗುತ್ತಾನೆ.

ಬೆಲಾರ್ಮಿನ್ : ತರ್ಕದಿಂದಲೇ ಎಲ್ಲವೂ ಆಗೋದಿಲ್ಲಪ್ಪ. ನಮ್ಮ ಸುತ್ತಮುತ್ತಲೂ ನಾವು ನೋಡ್ತಾ ಇರೋದೇನು? ದುಷ್ಟತನ! ದುಷ್ಕೃತ್ಯ! ದೌರ್ಬಲ್ಯ! ಸತ್ಯ ಅನ್ನೋದು ಎಲ್ಲಿದೆ?

ಗೆಲಿಲಿಯೊ : ಕೋಪದಿಂದ ನನಗೆ ತರ್ಕದಲ್ಲೇ ನಂಬಿಕೆ!!

ಬಾರ್ಬೆರಿನಿ : ಗುಮಾಸ್ತರುಗಳಿಗೆ ಇದನ್ನೆಲ್ಲಾ ನೀವು ಬರಕೊಳ್ಳಬೇಕಾಗಿಲ್ಲ. ಸ್ನೇಹಿತರ ನಡುವೆ ನಡೀತಾ ಇರೋ ವೈಜ್ಞಾನಿಕ ಚರ್ಚೆ ಇದು.

ಬೆಲಾರ್ಮಿನ್ : ಹಿಂದೆ ಚರ್ಚಿನ ಪ್ರವರ್ತಕರು. ಅಲ್ಲಿಂದ ಈಚೆಗೆ ಇತರ ಎಷ್ಟೋ ಜನ, ಪ್ರಪಂಚದಲ್ಲಿ ನಡೀತಾ ಇರೋ ವಿಚಿತ್ರ ವಿದ್ಯಮಾನಗಳಿಗೆಲ್ಲಾ ಏನಾದರೂ ಸುಸಂಬದ್ಧವಾದ ಅರ್ಥ ಕಲ್ಪಿಸೋಣ ಅಂತ ಎಷ್ಟು ಹೆಣಗಾಡಿದಾರೆ

ಸ್ವಲ್ಪ ಯೋಚನೆ ಮಾಡಿ ನೋಡಿ! ಕಂಪಾನ್ಯಾದಲ್ಲಿ ಜಮೀನುದಾರರು ಬಡರೈತರನ್ನೆಲ್ಲಾ ಅರೆಬೆತ್ತಲೆ ನಿಲ್ಲಿಸಿ ಚಾವಟಿಯಿಂದ ಹೊಡೀತಾರಲ್ಲಾ, ಆ ರಾಕ್ಷಸತನ ಎಂಥದು ಅಂತ ಸ್ವಲ್ಪ ಯೋಚನೆ ಮಾಡಿ. ಅಷ್ಟಾದರೂ ಆ ಬಡಪಾಯಿಗಳು ಅವರ ಪಾದಗಳಿಗೇ ಮುತ್ತು ಇಡ್ತಾರಲ್ಲಾ ಅದಕ್ಕೇನು ಹೇಳ್ತೀರಿ?

ಗೆಲಿಲಿಯೊ : ಅಬ್ಬಾ! ನಿಜವಾಗಿಯೂ ಭಯಂಕರ!.... ನಾನಿಲ್ಲಿಗೆ ಬರುವಾಗ...

ಬೆಲಾರ್ಮಿನ್ : ಜೀವನದಲ್ಲಿ ಇಂಥ ಎಷ್ಟೋ ವಿಷಯಗಳಿವೆ.... ಇವುಗಳಿಗೆಲ್ಲ ಅರ್ಥ ಹುಡುಕೋದು ಕಷ್ಟ. ಅದಕ್ಕೆ ನಾವೇನು ಮಾಡ್ತೀವಿ ಅಂದರೆ. ಇವೆಲ್ಲದರ ಜವಾಬ್ದಾರೀನೂ. ನಮಗಿಂತ ದೊಡ್ಡದಾದ ಯಾವುದೋ ಮಹಾಶಕ್ತಿ ಇದೆ ಅಂತ ನಂಬಿಕೊಂಡು, ಅದರ ಮೇಲೆ ಹೊರಿಸುತೀವಿ. ಇವೆಲ್ಲದಕ್ಕೂ ಯಾವುದೋ ಒಂದು ಉದ್ದೇಶ ಇದೆ. ಒಂದು ಸಂಕಲ್ಪದ ಪ್ರಕಾರ ಇದೆಲ್ಲಾ ನಡೀತಾ ಇದೆ ಅಂತ ನಾವು ಅಂದುಕೊಂಡಿದೀವಿ. ಇದರಿಂದ ನಮಗೆ ಸಂಪೂರ್ಣ ತೃಪ್ತಿ ಸಿಕ್ಕಿತು ಅಂತ ಹೇಳ್ತಾ ಇಲ್ಲ.... ಆದರೆ ಇದನ್ನ ಬಿಟ್ಟು ಬೇರೆ ಮಾರ್ಗವೇ ಇಲ್ಲ ಅನ್ನೋದು ಇಲ್ಲಿ ಮುಖ್ಯ. ಅಂಥ ಆ ಮಹಾಶಕ್ತಿಗೆ ಗ್ರಹಗಳು ಹೇಗೆ ಚಲಿಸತ್ವೆ ಅಂತ ಗೊತ್ತಿಲ್ಲ. ನಿಮಗದು ಚೆನ್ನಾಗಿ ಗೊತ್ತು ಅಂತ ಹೇಳ್ತೀರಲ್ಲಾ ಇದರಲ್ಲಿ ಏನಾದರೂ ವಿವೇಕ ಇದೆಯೇ ಅಂತ ಕೇಳ್ತೀನಿ.

ಗೆಲಿಲಿಯೊ : ಇದಕ್ಕೆ ವಿವರಣೆ ಕೊಡಲು ಪ್ರಯತ್ನಿಸುತ್ತಾ ನಾನೂ ಚರ್ಚಿನ ನಿಷ್ಠಾವಂತ ಅನುಯಾಯಿ....

ಬಾರ್ಬೆರಿನಿ : ಅಯ್ಯೋ ಈತನ ಮುಂದೆ ಎಷ್ಟು ತಲೆ ಚಚ್ಚಿಕೊಂಡರೂ ಅಷ್ಟೆ. ಉದ್ದೇಶ ಪೂರ್ವಕವಾಗಿ ಅಲ್ಲದೇ ಹೋದರೂ, ಒಟ್ಟಿನಲ್ಲಿ ದೇವರಿಗೆ ಖಗೋಳ ವಿಜ್ಞಾನ ಏನೂ ಗೊತ್ತಿಲ್ಲ ಅಂತ ಸಾಧಿಸೋಕೆ ಹೊರಟಿದಾನೆ ಈತ! ನಮ್ಮ ಧರ್ಮಗ್ರಂಥಗಳನ್ನ ರಚಿಸೋಕೆ ಮುಂಚೆ ಭಗವಂತ ಸಾಕಷ್ಟು ಖಗೋಳ ವಿಜ್ಞಾನ ಅಭ್ಯಾಸ ಮಾಡಲಿಲ್ಲ ಅಂತ ಹೇಳ್ತೀ ಅಲ್ಲವೇನಪ್ಪ ನೀನು?

ಬೆಲಾರ್ಮಿನ್ : ಮನುಷ್ಯನನ್ನ ಸೃಷ್ಟಿಸಿದೋನೇ ದೇವರು. ಆತನ ಸೃಷ್ಟಿಯಾದ ಈ ಮನುಷ್ಯನಿಗೆ ಅರ್ಥವಾಗೋದಕ್ಕಿಂತ ಚೆನ್ನಾಗಿ, ದೇವರ ಸೃಷ್ಟಿ ದೇವರಿಗೇ ಅರ್ಥವಾಗೋ ಸಂಭವ ಹೆಚ್ಚು ಅಂತ ನಿಮಗೆ ಅನ್ನಿಸೋದಿಲ್ಲವೆ?

ಗೆಲಿಲಿಯೊ : ಆದರೆ ಸ್ವಾಮಿ! ಮನುಷ್ಯ ಗ್ರಹಗಳ ಚಲನೆಯತ್ತ ತಪ್ಪು ತಪ್ಪಾಗಿ

ಅರ್ಥ ಮಾಡ್ಕೊಳ್ಳೋ ಹಾಗೆ ಬೈಬಲ್‌ನೂ ತಪ್ಪು ತಪ್ಪಾಗಿ ಅರ್ಥ ಮಾಡಿಕೊಳ್ಳಬಹುದಲ್ಲಾ?

ಬೆಲಾರ್ಮಿನ್ : ಹೌದು. ಆದರೆ ಬೈಬಲ್‌ಗೆ ಅರ್ಥ ಹೇಳಬೇಕಾದೋರು ಯಾರು? ಚರ್ಚಿನ ದೇವತಾಶಾಸ್ತ್ರಜ್ಞರು ತಾನೇ? ಗೆಲಿಲಿಯೊ ಸುಮ್ಮನಿರುತ್ತಾನೆ.

ಬೆಲಾರ್ಮಿನ್ : ನೋಡಿದೆಯಾ ಅದಕ್ಕೆ ಉತ್ತರವೇ ಇಲ್ಲ! ಗುಮಾಸ್ತರುಗಳ ಕಡೆ ಸಂಜ್ಞೆ ಮಾಡಿ ಗೆಲೀಲಿಯವರೇ ಇವತ್ತು ಇನ್‌ಕ್ವಿಜಿಷನ್ನಿನವರು ಒಂದು ತೀರ್ಮಾನ ಮಾಡಿದ್ದಾರೆ. 'ಸೂರ್ಯ ವಿಶ್ವದ ಕೇಂದ್ರದಲ್ಲಿ ಅಚಲವಾಗಿ ನಿಂತಿದೆ. ಭೂಮಿ ವಿಶ್ವದ ಕೇಂದ್ರದಲ್ಲಿಲ್ಲ. ಅದು ಚಲಿಸುತಿದೆ, ಅಂತ ಸರೋ ಕೊಪರ್ನಿಕಸ್‌ನ ಬೋಧನೆ ಅರ್ಥವಿಲ್ಲದ್ದು. ವಿವೇಕವಿಲ್ಲದ್ದು. ಧರ್ಮಬಾಹಿರವಾದದ್ದು" ಅಂತ ಅವರು ತೀರ್ಮಾನಿಸಿದ್ದಾರೆ. ಇದನ್ನ ನಿಮಗೆ ತಿಳಿಸೋ ಕೆಲಸ ನನಗೆ ವಹಿಸಿದಾರೆ. ಮೊದನೆಯ ಗುಮಾಸ್ತೆಗೆ ಅದನ್ನ ಇನ್ನೊಂದು ಸಲ ಹೇಳು.

ಮೊದಲ ಗುಮಾಸ್ತೆ : ಪೂಜ್ಯ ಕಾರ್ಡಿನಲ್ ಬೆರ್ಲಾಮಿನ್ ಅವರಿಂದ, ಮೇಲೆ ಹೇಳಿದ ಗೆಲಿಲಿಯೊ ಗೇಲೀಲಿ ಅವರಿಗೆ : "ಸೂರ್ಯನು ವಿಶ್ವದ ಕೇಂದ್ರದಲ್ಲಿ ಅಚಲವಾಗಿ ನಿಂತಿದೆ. ಭೂಮಿಯು ವಿಶ್ವದ ಕೇಂದ್ರದಲ್ಲಿಲ್ಲ. ಅದು ಚಲಿಸುತ್ತಿದೆ – ಎಂಬ ಕೂಪರ್ನಿಕಸ್‌ನ ಬೋಧನೆ ಅರ್ಥವಿಲ್ಲದ್ದು, ವಿವೇಕವಿಲ್ಲದ್ದು ಮತ್ತು ಧರ್ಮ ಬಾಹಿರವಾದದ್ದು" ಎಂದು ಇನ್‌ಕ್ವಿಜಿಷನ್ನಿನವರು ತೀರ್ಮಾನಿಸಿದ್ದಾರೆ. ನಿಮಗೆ ಈ ತೀರ್ಮಾನವನ್ನು ತಿಳಿಸುವ ಕರ್ತವ್ಯವನ್ನು ನನಗೆ ವಹಿಸಿದ್ದಾರೆ.

ಗೆಲಿಲಿಯೊ : ಏನು ಇದರ ಅರ್ಥ?

ಬಾಲ್ ನಡೆಯುತ್ತಿರುವ ಕೋಣೆಯಿಂದ ಪದ್ಯದ ಇನ್ನು ಕೆಲವು ಸಾಲುಗಳನ್ನು ಹುಡುಗರು ಹಾಡುತ್ತಿರುವುದು ಕೇಳಿಬರುತ್ತಿದೆ.

ಹೇಳೀದೆ ನಾ ಅಗೊ, ಹಾರಿಹೋಗುತಿದೆ ಸುಂದರ ಸಮಯ

ಅದರಿಂ ಕಿತ್ತುಕೊ ಗುಲಾಬಿಯ ಇನ್ನೂ ವಸಂತ ಮುಗಿದಿಲ್ಲ.

ಹಾಡು ಮುಗಿಯುವವರೆಗೂ ಸುಮ್ಮನಿರುವಂತೆ ಬಾರ್ಬೆರಿನಿ ಗೆಲಿಲಿಯೋಗೆ ಸನ್ನೆ ಮಾಡುತ್ತಾನೆ. ಎಲ್ಲರೂ ಹಾಡನ್ನು ಕೇಳುತ್ತಾರೆ.

ಗೆಲಿಲಿಯೊ : ಹಾಗಾದರೆ ವಾಸ್ತವಾಂಶಗಳ ಗತಿ ಏನಾಯಿತು? ಕೊಲೀಜಿಯಮ್ ರೊಮಾನಮ್‌ನ ಖಗೋಳ ವಿಜ್ಞಾನಿಗಳು ನಾನು

ಕಂಡದ್ದನ್ನೆಲ್ಲಾ ಒಪ್ಪಿಕೊಂಡಿದ್ದಾರೆ ಅಂತ ತಿಳಿಕೊಂಡಿದ್ದೆನಲ್ಲಾ!

ಬೆಲಾರ್ಮಿನ್ : ಹೌದು, ಒಪ್ಪಿಕೊಂಡಿದ್ದಾರೆ. ಅವರಿಗೆ ತುಂಬಾ ಸಂತೋಷವಾಗಿದೆ. ನಿಮ್ಮ ವಿಷಯದಲ್ಲಿ ಬಹಳ ಗೌರವವಿದೆ.

ಗೆಲಿಲಿಯೊ ; ಆದರೆ ಗುರುಗ್ರಹದ ಚಂದ್ರಗಳು, ಶುಕ್ರಗ್ರಹದ ಏರಿಳಿತಗಳು ಅವೆಲ್ಲಾ....

ಬೆಲಾರ್ಮಿನ್ : ಇನ್‌ಕ್ವಿಜಿಷನ್ನಿನೋರು ಈ ವಿವರಗಳನ್ನ ಲೆಕ್ಕಕ್ಕೆ ತೆಗೆದುಕೊಳ್ಳದೆ ಈ ಡಿಕ್ರೀ ಮಾಡಿದರೆ.

ಗೆಲಿಲಿಯೊ : ಅಂದ ಮೇಲೆ, ಇನ್ನು ಮುಂದೆ ವೈಜ್ಞಾನಿಕ ಸಂಶೋಧನೆಗಳು...

ಬೆಲಾರ್ಮಿನ್ : ತಮ್ಮಪಾಡಿಗೆ ತಾವು ನಡಕೊಂಡು ಹೋಗೋದಕ್ಕೆ ಯಾರ ಅಡ್ಡಿಯೂ ಇಲ್ಲ. ಮನುಷ್ಯ ಮಾತ್ರನಾದೋನಿಗೆ ಸತ್ಯವನ್ನ ನಿರ್ಣಯಿಸೋ ಅಧಿಕಾರ ಇಲ್ಲ – ಸತ್ಯದ ಅನ್ವೇಷಣೆಗೆ ಮಾತ್ರ ಅವನಿಗೆ ಅಧಿಕಾರ. ಪುನಃ ಬಾಲ್ ಕೊಠಡಿಯಲ್ಲಿರುವ ಪರಿಚಿತನೊಬ್ಬನನ್ನ ಗುರುತಿಸಿ ಕೈಯಾಡಿಸುತ್ತಾ ನಮ್ಮ ಈ ತತ್ವವನ್ನೂ ಗಣಿತಶಾಸ್ತ್ರದ ಪ್ರಕಾರವೇ ನೀವು ಬೋಧಿಸಬಹುದು. ಅದಕ್ಕೆ ಯಾರ ಅಡ್ಡಿಯೂ ಇಲ್ಲ. ವಿಜ್ಞಾನ ಅನ್ನೋದು ಚರ್ಚಿನ ಅತ್ಯಂತ ಪ್ರಿಯವಾದ ಶಿಶು. ಚರ್ಚಿನ ಅಧಿಕಾರಕ್ಕೆ ಕೊಡಲಿ ಪೆಟ್ಟು ಹಾಕೋ ಉದ್ದೇಶ ನಿಮಗೆ ಇದೆ ಅಂತ ನಾವು ಖಂಡಿತ ನಂಬಿಲ್ಲ.

ಗೆಲಿಲಿಯೊ : ಕೋಪದಿಂದ ದುರುಪಯೋಗ ಮಾಡೋದರಿಂದ ಅಧಿಕಾರ ದುರ್ಬಲಾಗುತ್ತೆ!

ಬಾರ್ಬೆರಿನಿ : ಹಾಗಂತೀಯಾ? ಗಟ್ಟಿಯಾಗಿ ನಗುತ್ತಾ ಅವನ ಭುಜವನ್ನು ತಟ್ಟುತ್ತಾನೆ. ತರುವಾಯ ಅವನ ಕಡೆ ದಿಟ್ಟಿಸಿ ನೋಡುತ್ತಾ ಸ್ವಲ್ಪ ಮೃದುವಾಗಿಯೇ ಹೊಟ್ಟು ಬಿಸಾಡೋದಕ್ಕೆ ಹೋಗಿ ಅದರ ಜೊತೆಗೆ ಕಾಳನ್ನೂ ಬಿಸಾಟುಬಿಡಬೇಡ ಗೆಲಿಲಿಯೊ! ನಾವೂ ಆ ಕೆಲಸ ಮಾಡೋದಿಲ್ಲ. ನಿನಗೆ ನಾವು ಎಷ್ಟರಮಟ್ಟಿಗೆ ಬೇಕೋ ನಮಗೆ ನೀನು ಅದಕ್ಕಿಂತಲೂ ಹೆಚ್ಚಾಗಿ ಬೇಕು.

ಬೆಲಾರ್ಮಿನ್ : ಇಟಲಿಯ ಅತ್ಯಂತ ಶ್ರೇಷ್ಠ ಗಣಿತ ಶಾಸ್ತ್ರಜ್ಞನನ್ನ ಪವಿತ್ರವಾದ ಇನ್‌ಕ್ವಿಜಿಷನ್ನಿನ ಪ್ರಧಾನಾಧಿಕಾರಿಗೆ ಪರಿಚಯ ಮಾಡಿಸಬೇಕೂಂತ ನಾನು ಬಹಳ ಕಾತರನಾಗಿದ್ದೀನಿ. ನಿಮ್ಮಲ್ಲಿ ಅವರಿಗೂ ಅಪಾರವಾದ ಗೌರವವಿದೆ.

ಬಾರ್ಬೆರಿನಿ : ಗೆಲಿಲಿಯೋನ ಇನ್ನೊಂದು ಭುಜವನ್ನು ಹಿಡಿದುಕೊಂಡು

ನೀನು ಕೂಡಾ ಸಂಪ್ರದಾಯಸ್ಥ ವಿದ್ವಾಂಸರ ಹಾಗೇನೇ ಮುಖವಾಡ ಹಾಕಿಕೊಂಡಿದ್ದರೆ ಚೆನ್ನಾಗಿರ್ತಾ ಇತ್ತು. ನನ್ನ ಮುಖವಾಡದಿಂದಲೇ ನನಗೆ ತಕ್ಕಮಟ್ಟಿನ ಸ್ವಾತಂತ್ರ್ಯ ಇರೋದು. ಅದನ್ನು ಹಾಕಿಕೊಂಡಾಗ, "ದೇವರು ಇಲ್ಲದಿದ್ದರೂ ನಾವು ಅವನನ್ನ ಸೃಷ್ಟಿಸಿಕೊಳ್ಳಬೇಕಾಗುತ್ತೆ" ಅಂತ ಒಂದು ವೇಳೆ ಪಿಸುಗುಟ್ಟಿದರೂ ಪಿಸುಗುಟ್ಟ ಬಹುದು. ಸರಿ, ಈಗ ನಮ್ಮ ಮುಖವಾಡಗಳನ್ನ ಮತ್ತೆ ಹಾಕಿಕೊಳ್ಳೋಣ. ಪಾಪ! ಗೆಲಿಲಿಯೋಗೆ ಹಾಕಿಕೊಳ್ಳೋಕೆ ಮುಖವಾಡವೇ ಇಲ್ಲ. ಅವರಿಬ್ಬರೂ ಗೆಲಿಲಿಯೋನನ್ನು ಜೊತೆಯಲ್ಲಿ ಕರೆದುಕೊಂಡು ಬಾಲ್ ಕೊಠಡಿಯೊಳಕ್ಕೆ ಹೋಗುತ್ತಾರೆ.

ಮೊದಲನೆಯ ಗುಮಾಸ್ತ : ಕೊನೆಯ ವಾಕ್ಯ ಕೇಳಿಸಿತಾ?

ಎರಡನೆಯ ಗುಮಾಸ್ತ : ಕೇಳಿಸಿತು. ಬರಕೋತಿದೀನಿ. ಮುತುವರ್ಜಿಯಿಂದ ಬರೆದುಕೊಳ್ಳುತ್ತಾನೆ.

"ತರ್ಕದಲ್ಲಿ ನನಗೆ ನಂಬಿಕೆ ಇದೆ" ಅಂತ ಹೇಳಿದರಲ್ಲಾ – ಆ ಭಾಗ ಸರಿಯಾಗಿ ಬರೆದುಕೊಂಡೆಯಾ?

ಕಾರ್ಡಿನಲ್ ಇನ್‌ಕ್ವಿಜಿಟರ್‌ನ ಪ್ರವೇಶ.

ಇನ್‌ಕ್ವಿಜಿಟರ್ : ಮಾತುಕತೆ ನಡೀತಾ?

ಮೊದಲನೆಯ ಗುಮಾಸ್ತ : ಯಾಂತ್ರಿಕವಾಗಿ ಓದುವನು. ಮೊದಲು ಗೆಲೀಲಿ ಅವರು ಅವರ ಮಗಳ ಜೊತೆ ಬಂದರು... ಇವತ್ತು ಅವರ ಮಗಳ ಮದುವೆ ನಿಶ್ಚಯವಾಯಿತು. ಆ ಭಾಗವನ್ನು ಬಿಟ್ಟು ಮಾಂದಕ್ಕೆ ಓದುವಂತೆ ಇನ್‌ಕ್ವಿಜಿಟಲ್ ಬೇಸರದಿಂದ ಸಂಜ್ಞೆ ಮಾಡುವನು. ಆಮೇಲೆ ಗೆಲೀಲಿ ಅವರು ಹೊಸ ರೀತಿಯಲ್ಲಿ ಚದುರಂಗ ಆಡಬೇಕು ಅಂತ ಹೇಳಿದರು... ಚದುರಂಗದ ಕಾಯಿಗಳು ಹಾಸಿನ ತುಂಬಾ ಬಿಡುಬೀಸಾಗಿ ಓಡಾಡಬೇಕು ಅಂದರು.

ಇನ್‌ಕ್ವಿಜಿಟರ್ : ಪುನಃ ಅದನ್ನು ನಿಲ್ಲಿಸುವಂತೆ ಸಂಜ್ಞೆ ಮಾಡಿ ಬರಕೊಂಡಿರೋದು ಎಲ್ಲಿ ಕೊಡು ಇಲ್ಲಿ.

ಒಬ್ಬನು ಅದನ್ನು ಅವನ ಕೈಗೆ ನೀಡುತ್ತಾನೆ. ಇನ್‌ಕ್ವಿಜಿಟರ್ ಕುಳಿತುಕೊಂಡು ಅದರ ಮೇಲೆ ಕಣ್ಣು ಹಾಯಿಸುತ್ತಾನೆ. ಆ ವೇಳೆಗೆ ಇಬ್ಬರು ಯುತಿಯರು ಮುಖವಾಡ ಧರಿಸಿಕೊಂಡು ರಂಗಸ್ಥಳದ ಮೇಲೆ ಆ ಕಡೆಯಿಂದ ಈ ಕಡೆಗೆ ಹೋಗುತ್ತಾರೆ. ಅವರು ಕಾರ್ಡಿನಲ್‌ಗೆ ಬಾಗಿ ನಮಿಸುತ್ತಾರೆ.

ಮೊದಲನೆಯ ಯುವತಿ : ಅವರು ಯಾರು?

ಇನ್ನೊಬ್ಬಳು : ಕಾರ್ಡಿನಲ್ ಇನ್‌ಕ್ವಿಜಿಟರ್.

ಅವರು ಕಿಸಕಿಸನೆ ನಗುತ್ತಾ ಹೊರಟು ಹೋಗುತ್ತಾರೆ. ಆ ವೇಳೆಗೆ ವರ್ಜೀನಿಯಾ ಪ್ರವೇಶಿಸುತ್ತಾಳೆ. ಸುತ್ತಲೂ ನೋಡುತ್ತಾ ಏನನ್ನೋ ಹುಡುಕುತ್ತಿರುತ್ತಾಳೆ.

ಇನ್‌ಕ್ವಿಜಿಟರ್ : ಅವನು ಕುಳಿತ ಮೂಲೆಯಿಂದ ಏನು ಮಗು?

ವರ್ಜೀನಿಯಾ : ಆತನನ್ನು ಗಮನಿಸಿರಲಿಲ್ಲವಾದ್ದರಿಂದ ಬೆಚ್ಚಿ ಓ ಸ್ವಾಮಿಯವರು!

ಇನ್‌ಕ್ವಿಜಿಟರ್ ತಲೆಯೆತ್ತಿ ನೋಡದೆ ತನ್ನ ಬಲಗೈ ಮುಂದಕ್ಕೆ ಚಾಚುತ್ತಾನೆ. ಅವಳು ಬಂದು ಮೊಣಕಾಲೂರಿ ಅವನ ಉಂಗುರಕ್ಕೆ ಮುತ್ತಿಡುತ್ತಾಳೆ.

ಇನ್‌ಕ್ವಿಜಿಟರ್ : ಇವತ್ತು ತುಂಬಾ ಒಳ್ಳೇ ದಿನ. ನಿನ್ನ ಮದುವೆ ನಿಶ್ಚಯವಾಯಿತಂತೆ. ಅದಕ್ಕೆ ನನ್ನ ಅಭಿನಂದನೆ. ನಿನ್ನ ಗಂಡನಾಗೋವನು ಒಳ್ಳೇ ದೊಡ್ಡ ವಂಶಕ್ಕೆ ಸೇರಿದೋನು ಅಂತ ಕೇಳಿದೆ. ನೀನು ಇಲ್ಲೇ ರೋಮ್‌ನಲ್ಲೇ ಇರ್ತೀಯಾ?

ವರ್ಜೀನಿಯಾ : ಸದ್ಯದಲ್ಲಿ ಇಲ್ಲಾ ಸ್ವಾಮಿಯವರೇ! ಮದುವೆಗೆ ಏರ್ಪಾಟುಗಳೆಲ್ಲ ಆಗಬೇಕಾಗಿದೆ.

ಇನ್‌ಕ್ವಿಜಿಟರ್ : ಹಾಗಾದರೆ ನಿನ್ನ ತಂದೆ ಜೊತೆ ಫ್ಲಾರೆನ್ಸಿಗೆ ಹೊರಟು ಹೋಗ್ತೀಯಾ ಅನ್ನು. ಸಂತೋಷ, ನೀನು ಅವರ ಜೊತೇಲಿ ಇರೋದೇ ಒಳ್ಳೇದು. ಗಣಿತ ಶಾಸ್ತ್ರಾನೇ ಕಟ್ಟಿಕೊಂಡಿದ್ದರೆ ಜೀವನ ಸಪ್ಪೆಯಾಗಿ ಬಿಡುತ್ತೆ. ಲವಲವಿಕೆ ಇರೋ ನಿನ್ನಂಥ ಒಬ್ಬಳು ಹುಡುಗಿ ಮನೇಲಿ ಇದ್ದರೆ ಎಷ್ಟೋ ವಾಸಿ... ಗ್ರಹ ನಕ್ಷತ್ರಗಳ ಲೋಕ ಅನ್ನೋದು ಬಹಳ ಅಗಾಧವಾದದ್ದು. ನಿಮ್ಮ ತಂದೆ ಅದರಲ್ಲಿ ಕೈಗೆ ಸಿಕ್ಕದ ಹಾಗೆ ತಪ್ಪಿಸಿಕೊಂಡುಬಿಡ್ತಾರೆ.

ವರ್ಜೀನಿಯಾ: ಸಂತೋಷಭರಿತಳಾಗಿ ಬಹಳ ದೊಡ್ಡ ಮಾತು ಹೇಳ್ತಿದೀರಿ. ನಿಜವಾಗಿ ನನಗೆ ಆ ವಿಷಯದಲ್ಲಿ ಏನೂ ಗೊತ್ತಾಗೋದಿಲ್ಲ...

ಇನ್‌ಕ್ವಿಜಿಟರ್ : ಗೊತ್ತಾಗೋದಿಲ್ವೇ? ನಗುತ್ತಾನೆ. ಹೌದು, ಬೆಸ್ತರ ಮನೇಲಿ ಯಾರೂ ಮೀನನ್ನೇ ತಿನ್ನಲ್ವಂತೆ. ನಕ್ಷತ್ರಗಳು, ಗ್ರಹಗಳು ಇವುಗಳು ವಿಷಯ ನಿನಗೆ ಗೊತ್ತಿರೋ ಅಷ್ಟನ್ನ ನನ್ನಿಂದ ಕಲಿತುಕೊಂಡೆ ಅಂತ ಹೋಗಿ ನಿಮ್ಮ ತಂದೆಗೆ ಹೇಳು. ಅವರು ನಗ್ತಾರೆ. ಹಸ್ತಪ್ರತಿಯನ್ನು ತಿರುವಿಹಾಕುತ್ತಾ ಇದರಲ್ಲೇನಿದೆ ನೋಡು. ನಮ್ಮ ನವೀನರು, ಅಂದರೆ ಮುಖ್ಯವಾಗಿ ನಿಮ್ಮ ತಂದೆ.

ಅವರ ಸ್ನೇಹಿತರು, ಅವರೆಲ್ಲಾ ಏನು ಹೇಳ್ತಾರೆ ಅಂದರೆ... ಭೂಮಿಗೆ ನಾವು ಅತಿಯಾದ ಪ್ರಾಶಸ್ತ್ಯ ಕೊಟ್ಟಿದೀವಂತೆ. ಪುರಾತನ ಮಹಾಜ್ಞಾನಿ ಟಾಲೆಮಿಯ ಕಾಲದಿಂದ ಇವತ್ತಿನವರೆಗೂ ನಾವು ಕೆಲವು ವಿಷಯಗಳನ್ನ ನಂಬಿಕೊಂಡು ಬಂದಿದೀವಿ. ಉದಾಹರಣೆಗೆ, ಒಟ್ಟು ಈ ವಿಶ್ವ, ಅಂದರೆ ಯಾವುದರ ಕೇಂದ್ರದಲ್ಲಿ ನಮ್ಮ ಭೂಮಿ ಇದೆಯೋ ಅಂಥಾ ಈ ಇಡೀ ಪಾರದರ್ಶಕಗೋಳ, ಭೂಮಿಗಿಂತ ಸುಮಾರು ಇಪ್ಪತ್ತು ಸಾವಿರದಷ್ಟು ವಿಸ್ತಾರವಾಗಿದೆ ಅಂತ ನಾವೆಲ್ಲಾ ನಂಬಿಕೊಂಡಿದೀವಿ. ಇದೇ ಬಹಳ ಅಗಾಧವಾದದ್ದು ಅಂತಲೇ ನಮ್ಮ ನಂಬಿಕೆ. ಆದರೆ ಈ ನವೀನರ ದೃಷ್ಟೀಲಿ ಇದು ಬಹಳ ಕಡಿಮೆ. ಯಾತಯಾತಕ್ಕೂ ಸಾಲದು. ಅವರ ಪ್ರಕಾರ. ಈ ವಿಶ್ವ ಅನ್ನೋದು ನಂಬೋದಕ್ಕೆ ಅಸಾಧ್ಯವಾದಷ್ಟು ದೊಡ್ಡದು. ಭೂಮಿಯಿಂದ ಸೂರ್ಯನಿಗೆ ಇರೋ ದೂರ ಬಹಳ ಹೆಚ್ಚು ಅಂತ ನಮಗೆಲ್ಲಾ ಅನ್ನಿಸುತ್ತೆ. ಆದರೆ ಇವರ ಪ್ರಕಾರ. ಈ ಬಡಪಾಯಿ ಭೂಮಿಗೂ, ಎಲ್ಲದಕ್ಕಿಂತ ಹೊರಗಡೆ ಇರೋ ಪಾರದರ್ಶಕ ಗೋಳಕ್ಕೆ ಅಂಟಿಕೊಂಡಿರೋ ಸ್ಥಿರ ನಕ್ಷತ್ರಗಳಿಗೂ ಇರೋ ದೂರವನ್ನ ನೋಡಿದರೆ, ಭೂಮಿಗೂ ಸೂರ್ಯನಿಗೂ ಇರೋ ದೂರ ಲೆಕ್ಕಕ್ಕೆ ಸಿಕ್ಕದಷ್ಟು ಕಡಿಮೆಯಂತೆ. ನಮ್ಮ ಈ ನವೀನರು ಬಹಳ ದೊಡ್ಡ ತರಹ ಜೀವನವನ್ನೇ ನಡೆಸುತಾ ಇದಾರೆ ಅನ್ನಬಹುದು. ಅಲ್ಲವೇ? ವರ್ಜೀನಿಯಾ ಇನ್‌ಕ್ವಿಜಿಟರ್ ನಗುತ್ತಾರೆ.

ಇನ್‌ಕ್ವಿಜಿಟರ್ : ಈಗೇನಾಗಿದೇ ಅಂದರೆ, ನಮ್ಮ ಚರ್ಚಿನ ಅನೇಕರಿಗೆ ಈ ನವೀನರು ಕೊಡುತಾ ಇರೋ ವಿಶ್ವದ ಹೊಸ ಚಿತ್ರ ನೋಡಿ ದಿಗ್ಭ್ರಮೆಯಾಗಿದೆ. ಅದಕ್ಕೆ ಹೋಲಿಸಿದರೆ ನಾವು ಇದುವರೆಗೂ ನಂಬಿಕೊಂಡಿದ್ದು ಒಂದು ಪುಟ್ಟ ಪದಕದ ಮೇಲಿರೋ ಚಿತ್ರ. ಇದ್ದಾಗೆ. ಅದನ್ನ ನಿನ್ನಂಥ ಒಬ್ಬ ಹುಡುಗಿ ಕೊರಳಿಗೆ ನೇತುಹಾಕಿ ಬಿಡಬಹುದು. ನಮ್ಮವರು ಯಾಕೆ ಇದನ್ನ ಇಷ್ಟು ತಲೆಗೆ ಹಚ್ಚಿಕೊಂಡಿದಾರೆ ಅಂದರೆ, ಒಂದು ವೇಳೆ ವಿಶ್ವ ಅವರು ಹೇಳೋ ಅಷ್ಟು ವಿಸ್ತಾರವಾಗಿದ್ದ ಪಕ್ಷದಲ್ಲಿ, ಅದರಲ್ಲಿ ಒಬ್ಬ ಪ್ರಿಪೇಟು, ಅಷ್ಟೇಕೆ, ಒಬ್ಬ ಕಾರ್ಡಿನಲ್ ಕೂಡ ಒಂದು ಸಾಸವೆ ಕಾಳಿನ ಹಾಗೆ ಎಲ್ಲೋ ಕಣ್ಣುತಪ್ಪಿಸಿಕೊಂಡು ಹೋಗಿಬಿಡ್ತಾರೋ ಏನೋ? ಪೋಪ್ ಗುರುಗಳೂ ಕೂಡ ಭಗವಂತನ ಕಣ್ಣಿಗೆ ಕಾಣಿಸದೆ ಹೋಗಿಬಿಡಬಹುದು. ಇದೆಲ್ಲಾ ಯಾಕೋ ಬಹಳ ವಿಚಿತ್ರವಾಗಿದೆ. ಅದಿರಲಿ ಬಿಡು. ನೀನು ಇನ್ನು ಮೇಲೂ ನಿಮ್ಮ ತಂದೆ ಜೊತೇಲೇ ಇರ್ತೀಯಲ್ಲಾ ಅದು ಸಂತೋಷದ ವಿಷಯ. ಅವರನ್ನ ಕಂಡರೆ ನಮಗೆಲ್ಲಾ ಬಹಳ ಗೌರವ.

ಅದು ಸರಿ... ನೀನು ಪಾಪ ನಿವೇದನೆ ಮಾಡಿಕೋತೀಯಲ್ಲ. ಆ ಪಾದ್ರಿ ಯಾರು? ನನಗೆ ಗೊತ್ತೇ ಅವರು?

ವರ್ಜೀನಿಯಾ : ಸೇಂಟ್ ಉರ್ಸುಲಾದ ಫಾದರ್ ಕ್ರಿಸ್ಟಫರ್.

ಇನ್‌ಕ್ವಿಜಿಟರ್ : ಹುಂ. ಸರಿ, ಅಂತೂ ನೀನು ನಿನ್ನ ತಂದೆ ಜೊತೇಲೇ ಇರ್ತೀಯಲ್ಲಾ ಬಹಳ ಸಂತೋಷಬಿಡು. ಅವರಿಗೆ ನಿನ್ನ ಸಹಾಯ ಬೇಕಾಗುತ್ತೆ.... ಅದು ಯಾಕೇ ಅಂತ ನಿನಗೆ ಈಗ ಗೊತ್ತಾಗೋದಿಲ್ಲ... ಆದರೆ ಖಂಡಿತ ಬೇಕಾಗುತ್ತೆ. ನೀನಿನ್ನೂ ಹುಡುಗಿ. ನಿನಗೆ ಬಹಳ ಉತ್ಸಾಹ ಇದೆ. ಮಹಾಪುರುಷನಾದೋನಿಗೆ ಆ ಮಹತ್ತಿನ ಭಾರ ತಡೆದುಕೊಳ್ಳೋದು ಬಹಳ ಕಷ್ಟವಾಗುತ್ತೆ. ಅದೇನೊ ಅಷ್ಟು ಸುಲಭ ಅಲ್ಲ. ನೋಡು, ಎಂಥಾ ಮಹಾಪುರುಷನೇ ಆಗಲಿ, ಅವನಿಗೆ ಭಗವಂತನ ಕೃಪೆ ಬೇಕೇ ಬೇಕು. ಈಗ ಬಹಳ ಹೊತ್ತಾಗಿಹೋಯಿತು. ನಿನಗೆ. ಇನ್ನೂ ನಿನ್ನ ಇಲ್ಲೇ ನಿಲ್ಲಿಸಿಕೊಂಡಿದ್ದರೆ ನಿನ್ನ ಗಂಡನಾಗೋವನು ಹೊಟ್ಟೆಕಿಚ್ಚು ಪಟ್ಟುಕೊಂಡಾನು. ನಿಮ್ಮ ತಂದೆಗೂ ಬೇಸರ ಆಗಬಹುದು. ಯಾವುದೋ ಓಬೀರಾಯನ ಕಾಲದ ಖಗೋಳದ ವಿಷಯಗಳನ್ನೆಲ್ಲಾ ನಿನಗೆ ಹೇಳ್ತಾ ಇದೀನಿ ಇಲ್ಲಿ ಅಂತ. ಈಗ ಬಾಲ್ ನರ್ತನ ನಡೀತಿರೋ ಅಲ್ಲಿಗೆ ಹೋಗಿಬಿಡು. ಫಾದರ್ ಕ್ರಿಸ್ಟಫರ್ ಅವರಿಗೆ ನನ್ನ ನಮಸ್ಕಾರ ತಿಳಿಸು.

ವರ್ಜೀನಿಯಾ ಅತ್ಯಂತ ವಿನಯವಾಗಿ ಪೂರಾ ತಲೆಬಾಗಿ ಬೇಗನೆ ಹೊರಟು ಹೋಗುತ್ತಾಳೆ.

## ಓದು ಪತ್ಯ

# ಆಕಾಶವಾಣಿ

**–ಬಸವರಾಜ ಸಾದರ**

ಇಪ್ಪತ್ತನೆಯ ಶತಮಾನ ಸಮಾಚಾರ ಕ್ರಾಂತಿಯ ಯುಗ. ಈ ಕ್ರಾಂತಿಗೆ ಸಾಧನವಾಗಿ ನಿಂತ ಮಾದ್ಯಮಗಳು ಹಲವಾರು. ಪರಂಪರಾಗತ ಸಮೂಹ ಮಾಧ್ಯಮಗಳನ್ನೂ ಒಳಗೊಂಡಂತೆ ಅನೇಕ ಆಧುನಿಕ ದೃಶ್ಯ–ಶ್ರವ್ಯ ಮಾಧ್ಯಮಗಳು ಇಂದು ಮಾನವ ಪ್ರಗತಿಯ ಪ್ರಮುಖ ಸಾಧನಗಳಾಗಿ ಕೆಲಸ ಮಾಡುತ್ತಿವೆ. ವೈಜ್ಞಾನಿಕ ಕ್ರಾಂತಿಯ ಪರಿಣಾಮವಾದ ತಾಂತ್ರಿಕ ಬೆಳೆವಣಿಗೆ ಕೂಡ ಈ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ``The technological revolution during the past few decades had creatd an information-oriented society. Information has become a vital resource which plays a Crucial role in achieving progress in all human endeavours.'' ವೈಜ್ಞಾನಿಕ ಕ್ರಾಂತಿಯ ಕಾರಣದಿಂದಲೇ ಬದಲಾವಣೆ ಕಂಡ ಸಾಮಾಜಿಕ, ಆರ್ಥಿಕ, ರಾಜಕೀಯವೇ ಮೊದಲಾದ ರಂಗಗಳಲ್ಲಿ ಆದ ತೀವ್ರತರ ಪ್ರಗತಿಯನ್ನು, ಅದು ಆಗುತ್ತಿರುವಂತೆಯೇ ತತ್‌ಕ್ಷಣ ಜಗತ್ತಿಗೆಲ್ಲ ಪ್ರಚುರಪಡಿಸುವ ಆಧುನಿಕ ಮಾಧ್ಯಮಗಳು ನಮ್ಮ ಬದುಕಿನ ಅವಿಭಾಜ್ಯ ಅಂಗಗಳಾಗಿ ಹೋಗಿವೆ. ಆಕಸ್ಮಿಕವಾಗಿ ಒಂದು ದಿನ ಪತ್ರಿಕೆ ಬರದಿದ್ದರೆ, ವಿದ್ಯುತ್ ಪೂರೈಕೆ ಇಲ್ಲದ ಕಾರಣ ರೇಡಿಯೋ, ದೂರದರ್ಶನಗಳ ಪ್ರಸಾರ ಕಾರ್ಯ ಜನತೆಗೆ ತಲುಪದಿದ್ದರೆ ಅಥವಾ ಯಾವುದೋ ಕಾರಣಕ್ಕಾಗಿ ಚಿತ್ರಮಂದಿರಗಳು ಒಂದು ದಿನ ಕಾರ್ಯನಿರ್ವಹಿಸದಿದ್ದರೆ ಆಗುವ ಪರಿಣಾಮ ಹೇಗಿರುತ್ತದೆಂಬುದನ್ನು ಊಹಿಸಿದರೆ ಆಗ ಆಧುನಿಕ ಸಮಾಜದಲ್ಲಿ ಮಾಧ್ಯಮಗಳ ಪಾತ್ರ ಎಂಥದೆಂಬುದು ಅರ್ಥವಾಗುತ್ತದೆ.

ಆಧುನಿಕ ಹೊಸ ಹೊಸ ಮಾಧ್ಯಮೋಪಕರಣಗಳು ಸಮಾಜದಲ್ಲಿ ಮೊದಮೊದಲು ಬಂದದ್ದು ನಾಗರಿಕ ಸಾಧನಗಳಾಗಿ. ಅದೂ ಆರ್ಥಿಕವಾಗಿ ಮೇಲ್ವರ್ಗದ ಪ್ರತಿಷ್ಠೆಯ ಸಾಧನಗಳಾಗಿ. ಆದರೆ ಇದು ಬಹುಕಾಲ ಸತ್ಯವಾಗಿ ಉಳಿಯಲಿಲ್ಲ. ಮಾಧ್ಯಮಗಳು ಬೆಳೆಸಿಕೊಂಡ ಹೊಸ ಹೊಸ ಆಯಾಮಗಳಿಂದಾಗಿ ಅವು ಗುಡಿಸಿಲಿಂದ ಮಹಲಿನವರೆಗಿನ ಅಗತ್ಯಗಳನ್ನು

ಪೂರೈಸುವ ಅವಶ್ಯಕ ಸಾಧನಗಳಾದವು. ಅದೇ ಕ್ರಮದಲ್ಲಿ ಅವು ಸಮಾಜದ ಸಾಂಸ್ಕೃತಿಕ ಬದುಕಿನ ಚಿತ್ರ ತೋರಿಸುವ ದರ್ಪಣಗಳಾದವು. ಇದಕ್ಕೆ ಕಾರಣ ಅವು ಹುಟ್ಟಿ. ಬೆಳೆದು. ಬಾಳಿ ಬದುಕುವುದು ಮಾನವನ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಬುನಾದಿಯ ಮೇಲಿರುವುದೇ ಆಗಿವೆ. ಪ್ರಸಾರ ತಜ್ಞರು. ``...broadcasting must develop against the background of a society's social and cultural evolution and is affiected by this even more than it affects society'' ಎಂದು ಅಭಿಪ್ರಾಯಪಟ್ಟಿರುವುದನ್ನು ಗಮನಿಸಿದರೆ ಯಾವುದೇ ಸಮಾಜ-ಸಂಸ್ಕೃತಿ ಮತ್ತು ಅಲ್ಲಿ ಬೆಳೆಯುವ ಮಾಧ್ಯಮಗಳ ನಡುವೆ ಎಂಥ ಅವಿನಾಭಾವ ಸಂಬಂಧವಿರುತ್ತದೆಯೆಂಬುದು ಸ್ಪಷ್ಟವಾಗುತ್ತದೆ.

'ಮಾನವನ ಬದುಕಿನ ಒಟ್ಟು ರೀತಿಯೇ ಸಂಸ್ಕೃತಿ' ಎಂದು ಸಂಸ್ಕೃತಿಯನ್ನು ವ್ಯಾಖ್ಯಾನಿಸಬಹುದಾದರೆ, ಅದರಲ್ಲಿ ಸೇರ್ಪಡೆಯಾಗುವ ಸಾಹಿತ್ಯ, ಸಂಗೀತ, ಕಲೆ, ಮನರಂಜನೆ, ಕ್ರೀಡೆ, ಶಿಕ್ಷಣ, ಧರ್ಮ, ವಿಧಿ-ವಿಧಾನಗಳು, ಸಂಪ್ರದಾಯಗಳು ಮೊದಲಾದ ಅನೇಕ ಅಂಶಗಳ ಜೊತೆಗೆ ಆತ ಸಾಧಿಸಿದ ವೈಜ್ಞಾನಿಕ ಪ್ರಗತಿ. ತಾಂತ್ರಿಕ ಸಂಶೋಧನೆ, ದೊರಕಿಸಿಕೊಂಡ ನಾಗರಿಕ ಸೌಲಭ್ಯಗಳನ್ನೂ ಆ ವ್ಯಾಖ್ಯೆಯಲ್ಲಿಯೇ ಸೇರಿಸುವ ಅಗತ್ಯ ಇಂದು ಜರೂರಾಗುತ್ತದೆ. ಇವೆಲ್ಲವನ್ನೂ ಒಳಗೊಂಡಂತೆಯೇ ಇಂದಿನ ಸಮೂಹ ಮಾಧ್ಯಮಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿರುವುದರಿಂದ ಅವೆಲ್ಲ ಸಂಸ್ಕೃತಿಯ ಪ್ರವಾಹಕ ಸಾಧನಗಳಾಗಿವೆಂದು ಖಚಿತವಾಗಿ ಹೇಳಬಹುದು. ಹೊಸ ತಾಂತ್ರಿಕತೆ, ಹೊಸ ಜೀವನವನ್ನು ರೂಪಿಸಿ, ಹೊಸ ಸಂಸ್ಕೃತಿಯನ್ನು ಬೆಳೆಸುವಂತೆಯೇ, ಸಂಪರ್ಕ ಕ್ಷೇತ್ರದಲ್ಲಾಗಿರುವ ತಾಂತ್ರಿಕ ಪ್ರಗತಿ ಕೂಡಾ ಅದೇ ಕೆಲಸ ಮಾಡುತ್ತಿದೆ. ಹೀಗೆ ಹೊಸ ಜೀವನ ರೀತಿ ಹಾಗೂ ಹೊಸ ಮಾನವನ ನಿರ್ಮಾಣವಾಗುವುದು ಚಲನಶೀಲ ಸಂಸ್ಕೃತಿಯ ಪ್ರಮುಖ ಲಕ್ಷಣವಾಗುವುದರಿಂದ ಆ ಕೆಲಸ ಮಾಡುವ ಮಾಧ್ಯಮಗಳು ಖಂಡಿತವಾಗಿ ಸಾಂಸ್ಕೃತಿಕ ವಾಹಕಗಳಾಗಿವೆ. ಅಷ್ಟೇ ಅಲ್ಲ; ಸಾಂಸ್ಕೃತಿಕ ಬದುಕಿನ ಅಂಗವಾಗಿವೆ.

ಸಮೂಹ ಮಾಧ್ಯಮ ಯಾವುದೇ ಇರಲಿ. ಎಂಥ ಹೊಸ ತಾಂತ್ರಿಕತೆಯನ್ನೇ ಹೊಂದಿರಲಿ ಅದು ಮುಖ್ಯವಾಗಿ ಮೂರು ಉದ್ದೇಶಗಳನ್ನಿಟ್ಟುಕೊಂಡು ಕೆಲಸ

ಮಾಡುತ್ತದೆ. ಒಂದು ಸಮಾಚಾರ ತಲುಪಿಸುವುದು ಇನ್ನೊಂದು ಶಿಕ್ಷಣ ನೀಡುವುದು ಮತ್ತು ಮೂರನೆಯದು ಮನರಂಜನೆ ಒದಗಿಸುವುದು. ಸಮೂಹ ಮಾಧ್ಯಮಗಳು ಇಂದು ಮಾಡುತ್ತಿರುವ ಯಾವುದೇ ಕೆಲಸವನ್ನು ಈ ಮೂರರಲ್ಲಿ ಯಾವುದಾದರೂ ಒಂದರಲ್ಲಿ ಗುರುತಿಸಬಹುದು.

ಇಪ್ಪತ್ತನೆಯ ಶತಮಾನ ಸಮಾಚಾರ ಕ್ರಾಂತಿಯ ಯುಗವಾಗಿರುವ ಹಾಗೆಯೇ ಇದು ಮಾಧ್ಯಮಗಳ ಪೈಪೋಟಿಯ ಕಾಲವೂ ಹೌದು. ಆದಷ್ಟು ತೀವ್ರವಾಗಿ ವೈವಿಧ್ಯಪೂರ್ಣವಾಗಿ, ಎಲ್ಲಕ್ಕೂ ಮೊದಲು ತಾನು ಸಮಾಚಾರ, ಶಿಕ್ಷಣ ಮತ್ತು ಮನರಂಜನೆಯನ್ನು ತಲುಪಿಸಬೇಕೆಂಬ ಪೈಪೋಟಿಯಲ್ಲಿ ಎಲ್ಲ ಮಾಧ್ಯಮಗಳೂ ನಿರತವಾಗಿವೆ. ಇಂಥ ಪೈಪೋಟಿ ಇಂದು ಅನಿವಾರ್ಯವಿರಬಹುದು ಅಥವಾ ಅಗತ್ಯವೂ ಇರಬಹುದು. ಆದರೆ ಎಲ್ಲ ಸಮೂಹ ಮಾಧ್ಯಮಗಳಿಗೂ ಅವುಗಳದೇ ಆದ ಮಿತಿಯಿರುವುದು ನಿಜ. ತನ್ನ ಸಾಧ್ಯತೆಯ ಪರಿಮಿತಿಯಲ್ಲೇ ಕಾರ್ಯ ಮಾಡುವ ಯಾವ ಮಾಧ್ಯಮವಾದರೂ ತಾನೇ ಸ್ವಯಂ ಪೂರ್ಣವೆಂದು ಹೇಳುವುದಾಗಲಿ, ತನ್ನ ಕಾರ್ಯ ಸಾಮರ್ಥ್ಯದ ಪರಿಣಾಮವಾಗಿ ಇತರ ಮಾಧ್ಯಮಗಳ ಅವನತಿ ಹೊಂದುತ್ತಿವೆಯೆಂದು ಹೇಳುವುದಾಗಲಿ ಮೂರ್ಖತನವಾಗುತ್ತದೆ. ಭೌಗೋಳಿಕವಾಗಿ ತುಂಬ ವಿಸ್ತಾರವಾಗಿರುವ, ಪ್ರಾದೇಶಿಕ ಸಾಂಸ್ಕೃತಿಕ ಭಿನ್ನತೆ, ಹಲವಾರು ಭಾಷೆ, ವಿವಿಧ ಧರ್ಮ, ಅಸಂಖ್ಯ ಜಾತಿ–ಜನಾಂಗಗಳನ್ನು ಹೊಂದಿರುವ ಅಲ್ಲದೆ ಬಡತನ, ಅನಕ್ಷರತೆ, ನಿರುದ್ಯೋಗವೇ ಮೊದಲಾದ ಹಲವು ಹತ್ತು ದೊಡ್ಡ ಸಮಸ್ಯೆಗಳನ್ನು ಎದುರಿಸುತ್ತಿರುವ ಭಾರತದಂಥ ಬೃಹತ್ ದೇಶದಲ್ಲಿ ಇಲ್ಲಿನ ಎಲ್ಲ ಸಮಸ್ಯೆ, ಸಂಕೀರ್ಣತೆಗಳಿಗೆ ತಾನು ಮಾತ್ರ ಸ್ಪಂದಿಸಬಲ್ಲೆ ಹಾಗೂ ಇಡೀ ರಾಷ್ಟ್ರವನ್ನು ತಾನು ಮಾತ್ರ ತಲುಪಬಲ್ಲೆ ಎಂದು ಯಾವುದೊಂದು ಸಮೂಹ ಮಾಧ್ಯಮ ಹೇಳಿಕೊಂಡು ಬೀಗುವಂತಿಲ್ಲ. ಪಾರ್ಶ್ವಿಕವಾಗಿ ತನ್ನ ಸಾಧ್ಯತೆಯ ಮಿತಿಯಲ್ಲೇ ಒಂದು ಮಾಧ್ಯಮ ಹೆಚ್ಚು ಕಾರ್ಯ ಮಾಡಿರಬಹುದು ಅಥವಾ ಹೊಸದಾಗಿ ಪ್ರಚಾರಕ್ಕೆ ಬಂದ ಸಮೂಹ ಮಾಧ್ಯಮವೊಂದು ತನ್ನ ಹೊಸತರಲ್ಲಿ ಸಮಾಜದ ಮೇಲೆ ಹೆಚ್ಚು ಪರಿಣಾಮ ಬೀರಿರಬಹುದು. ಅಷ್ಟು ಮಾಡಿದಾಕ್ಷಣ ಅದೊಂದೇ ಸಾರ್ವಭೌಮ ಮಾಧ್ಯಮ ಎಂದು ಹೇಳಲಾಗದು. ಇಲ್ಲಿ ಎಲ್ಲ ಸಮೂಹ ಮಾಧ್ಯಮಗಳಿಗೂ ಅವುಗಳದೇ ಆದ ಮಹತ್ವವಿದೆ. ಹಾಗೆಯೇ ಅವುಗಳದೇ ಆದ ಮಿತಿಯಿದೆ. ಈ ಮಿತಿಯಲ್ಲೇ ಅವು ತಮ್ಮ ಸಾಧ್ಯತೆಯ ಗುರಿಯನ್ನು ತಲುಪಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಆಕಾಶವಾಣಿ ಹಾಗೂ ಅದರ ಸಾಧನ ರೇಡಿಯೊ ನಮ್ಮ ಸಮಾಜದಲ್ಲಿ ಹೇಗೆ ಕ್ರಿಯಾಶೀಲವಾಗಿದೆ ಎಂಬುದನ್ನು ಅದರ ಐತಿಹಾಸಿಕ ಬೆಳವಣಿಗೆಯೊಂದಿಗೆ ಗುರುತಿಸುವುದು ಇಲ್ಲಿ ಮುಖ್ಯ ಉದ್ದೇಶ.

## ರೇಡಿಯೊ: ಸಾಧ್ಯತೆ–ಸ್ಥಾನ

ರೇಡಿಯೊ ಸರಳ ಶ್ರವ್ಯ ಮಾಧ್ಯಮ. ಅಪ್ರಯತ್ನ ಪೂರ್ವಕ ಅಥವಾ ಅಲ್ಪಪ್ರಯತ್ನದ ಮೂಲಕ ಜನತೆ ಸಮಾಚಾರ, ಶಿಕ್ಷಣ ಮತ್ತು ಮನರಂಜನೆಯನ್ನು ಪಡೆಯಲು ಅತ್ಯಂತ ಸರಳ ಮಾಧ್ಯಮವಾಗಿ ಕೆಲಸ ನಿರ್ವಹಿಸುವ ಇದು ಆ ಕಾರಣಕ್ಕಾಗಿಯೇ ಹೆಚ್ಚು ಜನರಿಗೆ ತಲುಪುತ್ತಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಕೊಳ್ಳಬಹುದಾದ ರೇಡಿಯೊ ಸುಲಭದಲ್ಲಿ ಸ್ಥಳಾಂತರಿಸಬಹುದಾದ ಸಾಧನ. ಸಾಧ್ಯವಿದ್ದಷ್ಟೂ ತಕ್ಷಣ. ಅಂದರೆ ಇನ್ನಾವುದೇ ಮಾಧ್ಯಮಕ್ಕೂ ಮೊದಲು ಜಗತ್ತಿನ ಆಗು–ಹೋಗು, ವಿದ್ಯಮಾನಗಳಿಗೆಲ್ಲ ಸ್ಪಂದಿಸುವ ಆಕಾಶವಾಣಿಯು ನಿರಕ್ಷರಿಗಳೂ ಅರಿತುಕೊಳ್ಳಬಲ್ಲ ರೀತಿಯಲ್ಲಿ ಕೆಲಸ ಮಾಡುತ್ತದೆ. ಈ ಮಾಧ್ಯಮವನ್ನು ಅರ್ಥಮಾಡಿಕೊಳ್ಳಲು ವಿಶೇಷ ಅರ್ಹತೆಯೇನೂ ಬೇಕಿಲ್ಲ. ಕಿವುಡಲ್ಲದ ಕಿವಿ, ಭ್ರಮೆಯಾಗದಿರುವ ಬುದ್ಧಿ ಇವೆರಡಿದ್ದರೂ ಸಾಕು. ಇವೆಲ್ಲಕ್ಕೂ ಮುಖ್ಯವಾಗಿ ಪ್ರಾದೇಶಿಕ ಭಾಷೆಗಳಲ್ಲಿಯೇ ರೇಡಿಯೋ ಪ್ರಸಾರ ಕಾರ್ಯ ನಿರ್ವಹಿಸುವುದರಿಂದ ಆಯಾ ಪ್ರದೇಶದ ಶಿಕ್ಷಿತ ಹಾಗೂ ಅಶಿಕ್ಷಿತರಿಗೆಲ್ಲ ಅದು ನೇರವಾಗಿ ಹಾಗೂ ಏಕಪ್ರಕಾರವಾಗಿ ತಲುಪುತ್ತದೆ. ನಾಗರಿಕ ಮತ್ತು ಸಾಂಸ್ಕೃತಿಕ ಬದುಕಿನ ವಿವರ ವೈಶಿಷ್ಟ್ಯಗಳನ್ನು ಕೆರೆಯ ನೀರನ್ನು ಕೆರೆಗೆ ಚೆಲ್ಲುವ ರೀತಿಯಲ್ಲಿ ಸಮಾಜದಿಂದಲೇ ಪಡೆದು ಸಮಾಜಕ್ಕೆ ಕೊಡುವ. ಈ ಮೂಲಕ ಸಾಂಸ್ಕೃತಿಕ ಬದುಕಿನ ನಿರಂತರ ಚಲನೆಗೆ ಪೂರಕವಾಗುವ ರೇಡಿಯೋ ಈ ಎಲ್ಲ ಕಾರಣಗಳಿಂದಾಗಿ ನಗರ ನಾಗರಿಕತೆಗೆ ಹತ್ತಿರವಾಗುವಂತೆಯೇ ಗ್ರಾಮೀಣ ಪರಿಸರಕ್ಕೂ ಹತ್ತಿರವಾಯಿತು. ಶಿಕ್ಷಿತರಂತೆಯೇ ಅಶಿಕ್ಷಿತರಿಗೆ, ಬಲ್ಲಿದರಂತೆಯೇ ಬಡವರಿಗೆ ಸಮಾನವಾಗಿ ತಲುಪುವ ಆಕಾಶವಾಣಿಯು ಆ ಕಾರಣಕ್ಕಾಗಿಯೇ ಎಲ್ಲರ ಕೈಗೆ ಬಂತು. ಇಂದು ಬಡಬೋರೇಗೌಡನ ಗುಡಿಸಿಲಲ್ಲೂ ರೇಡಿಯೋ ಇದೆ. ಅದಿಲ್ಲದಿದ್ದರೆ ಆತನಿಗೆ ಜಗತ್ತಿನ ವಿದ್ಯಮಾನಗಳು ತಿಳಿಯಲಾರವು, ಅಗತ್ಯವಿದ್ದ ಶಿಕ್ಷಣ ಸಿಗಲಾರದು. ಮನರಂಜನೆಯೂ ದೊರೆಯಲಾರದು. ಈ ಎಲ್ಲ ಹಿನ್ನೆಲೆಯಲ್ಲಿ

ಪರಿಭಾವಿಸಿದಾಗ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಗೆ ಅತ್ಯಂತ ಸೂಕ್ತ ಹಾಗೂ ಸಮರ್ಥ ಮಾಧ್ಯಮ ಬಾನುಲಿಯಾಗಬಲ್ಲುದೆಂದು ಸ್ಪಷ್ಟವಾಗುತ್ತದೆ.

ಇಂಥ ಆಕಾಶವಾಣಿ, ಪ್ರಸಾರತಜ್ಞರ ಅಭಿಪ್ರಾಯದ ಪ್ರಕಾರ ಎಲ್ಲರಿಗೂ ಒಂದು 'ಆಪ್ತಮಾಧ್ಯಮ'. ಸುದ್ದಿ ಕ್ರೀಡಾ ವೀಕ್ಷಕ ವಿವರಣೆ, ಹಾಡು, ಮನರಂಜನೆ, ಶಿಕ್ಷಣ ಯಾವುದಕ್ಕೆಂದರೆ ಅದಕ್ಕೆ ಎಲ್ಲರೂ ನಂಬಿರುವ ರೇಡಿಯೋ ಇಂದು ನಮ್ಮ ಸಾಂಸ್ಕೃತಿಕ ಬದುಕಿನ ಅವಿಭಾಜ್ಯ ಅಂಗವಾಗಿ ಬಿಟ್ಟಿದೆ. ಹೀಗೆ ಅದ್ಭುತ ರೀತಿಯಲ್ಲಿ ಕೆಲಸ ಮಾಡಿದ ರೇಡಿಯೋ ಸಾಮಾಜಿಕ, ಆರ್ಥಿಕ ಪ್ರಗತಿಗೆ ಸಾಧನವಾಗಿ ರಾಜಕೀಯ ವಿದ್ಯಾರ್ಥಿಗಳಿಗೆ ಸ್ಪಂದಿಸುತ್ತ, ಜ್ಞಾನದ ಮಟ್ಟ ಸುಧಾರಣೆ. ಸಂಸ್ಕೃತಿಯ ರಕ್ಷಣೆ ಮತ್ತು ಅವರ ಶ್ರೀಮಂತಿಕೆ ಇನ್ನಾವ ಮಾಧ್ಯಮಕ್ಕೂ ಕಡಿಮೆಯಿಲ್ಲದ ಹಾಗೆ ಸುಲಭ ಕಾರ್ಯ ಮಾಡುತ್ತ ಬರುತ್ತಿದೆ.

ಇಷ್ಟೆಲ್ಲ ಸಾಧ್ಯತೆಗಳಿರುವುದರಿಂದಲೇ ರೇಡಿಯೋ ಇಂದಿನ ಮಾಧ್ಯಮಗಳ ಪೈಪೋಟಿಯ ಯುಗದಲ್ಲೂ ಇನ್ನಾವ ಮಾಧ್ಯಮಗಳೂ ತಲುಪದಷ್ಟು ಜನತೆಯನ್ನು ತಲುಪಿದೆ ಹಾಗೂ ವ್ಯಾಪ್ತಿಯನ್ನು ಪಡೆದಿದೆ. ಇತ್ತೀಚಿನ ಸಮೀಕ್ಷೆಯಿಂದ ಖಚಿತವಾಗಿರುವ ಅಂಕಿಅಂಶಗಳೇ ಇದಕ್ಕೆ ಸಾಕ್ಷಿ ಇಷ್ಟಾಗಿಯೂ ತನ್ನ ಸಾಮರ್ಥ್ಯದ ಮಿತಿಯ ಅರಿವಿನಿಂದ ಈ ಮಾಧ್ಯಮ ನೂರಕ್ಕೆ ನೂರು ಜನತೆಯನ್ನು ಮುಟ್ಟದಿರುವ ಸತ್ಯವನ್ನರಿತು 'ಬಹುಜನ ಹಿತಾಯ, ಬಹುಜನ ಸುಖಾಯ' ಎಂಬುದನ್ನೇ ತನ್ನ ಧ್ಯೇಯ ವಾಕ್ಯವನ್ನಾಗಿಟ್ಟುಕೊಂಡಿದೆ.

## ಆಕಾಶವಾಣಿಯ ಐತಿಹಾಸಿಕ ಬೆಳವಣಿಗೆ ಭಾರತದಲ್ಲಿ

ಭಾರತದಲ್ಲಿ ರೇಡಿಯೋ ಪ್ರಸಾರ ಕಾರ್ಯದ ಬೀಜಾಂಕುವಾದದ್ದು. 1924ರಲ್ಲಿ ರೇಡಿಯೋ ಪ್ರಸಾರದಲ್ಲಿ ಉತ್ಸಾಹಿತರಾಗಿದ್ದ ತರುಣರ ಗುಂಪೊಂದು ಮದ್ರಾಸಿನಲ್ಲಿ 'ರೇಡಿಯೋ ಕ್ಲಬ್'ನ್ನು 1924ರಲ್ಲಿ ಸ್ಥಾಪಿಸಿತು. ಖಾಸಗಿಯಾಗಿದ್ದ ಈ ಕ್ಲಬ್‌ಗೆ ಎಂಟು ವರ್ಷಗಳ ತರುವಾಯ ಅಂದರೆ 1926ರಲ್ಲಿ ಸಾಕಾರ ಭಾರತದಲ್ಲಿ ರೇಡಿಯೋ ಕೇಂದ್ರಗಳನ್ನು ಪ್ರಾರಂಭಿಸಲು ಲೈಸನ್ಸ್ ನೀಡಿತು. 'ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಕಂಪನಿ' ಎಂಬ ಹೆಸರಿನಲ್ಲಿ ಲೈಸನ್ಸ್ ಪಡೆದ ಈ ಸಂಸ್ಥೆ 1927ರ ಜುಲೈ 23ರಂದು ಮುಂಬೈಯಲ್ಲಿ ಮೊದಲನೆಯ ಹಾಗೂ 1927ರ ಆಗಸ್ಟ್ 26ರಂದು ಕಲ್ಕತ್ತಾದಲ್ಲಿ ಎರಡನೆಯ ಕೇಂದ್ರವನ್ನು

ಪ್ರಾರಂಭಿಸಿತು. ಹಾದಿಯಲ್ಲೇ ಸಾಗಿದ ಇದು 1930ರ ಹೊತ್ತಿಗೆ ಅನಿವಾರ್ಯವಾಗಿ ನಿಂತು ಹೋಯಿತು.

ರೇಡಿಯೋ ಸೆಟ್‌ಗಳನ್ನು ಈಗಾಗಲೇ ಕೋರಲಾಗಿ ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಈ ಕಾರಣಕ್ಕಾಗಿ 1930ರಲ್ಲಿಯೇ ಸರಕಾರ ಅದನ್ನು ತನ್ನ ಕೈಗೆತ್ತಿಕೊಳ್ಳಬೇಕಾಯ್ತು. 'ಇಂಡಿಯನ್ ಬ್ರಾಡ್‌ಕಾಸ್ಟಿಂಗ್ ಸರ್ವಿಸ್' ಎಂದು ಪ್ರಾರಂಭದಲ್ಲಿ ನಾನು ನಿರ್ದೇಶಕವನ್ನಿಟ್ಟು ಕೋರಿ ಈ ಸರಕಾರಿ ಸಂಸ್ಥೆ ಅನಂತರ 1930ರಲ್ಲಿ 'ಆಲ್ ಇಂಡಿಯಾ ರೇಡಿಯೊ' ಎಂಬ ಹೊಸ ರೂಪ ಪಡೆದು ಪ್ರಸಾರ ಕಾರ್ಯ ಪ್ರಾರಂಭಿಸಿತು. ಅಧಿಕೃತವಾಗಿ ಸರಕಾರಿ ಸಂಸ್ಥೆಯಾಗಿ ಭಾರತದಲ್ಲಿ ಬಾನುಲಿ ಪ್ರಸಾರ ಪ್ರಾರಂಭವಾದದ್ದು 1936ರಿಂದಲೇ ಎಂದು ಹೇಳಬಹುದು.

ಈ ಬೆಳವಣಿಗೆಗೂ ಮೊದಲು 1924ರ ಮೇ 16ರಂದು 'ಮದ್ರಾಸ್ ಪ್ರೆಸಿಡೆನ್ಸಿ ರೇಡಿಯೋ ಕ್ಲಬ್' ಎಂಬುದು ಸ್ಥಾಪಿತವಾಗಿ ಅದು 1924ರ ಜುಲೈ 31ರಂದು ತನ್ನ ಪ್ರಸಾರ ಕಾರ್ಯವನ್ನು ಆರಂಭಿಸಿತ್ತು. ಪ್ರತಿದಿನ ಸಂಜೆ ಎರಡೂವರೆಗೆ ಗಂಟೆಯ ಹಾಗೂ ರವಿವಾರ ಮತ್ತು ರಜೆ ದಿನಗಳಲ್ಲಿ ಮುಂಜಾನೆಯ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದ್ದ ಈ ಕ್ಲಬ್ 1927ರವರೆಗೂ ತನ್ನ ಕಾರ್ಯ ನಿರ್ವಹಿಸಿತು. ಆರ್ಥಿಕ ತೊಂದರೆಯ ಕಾರಣದಿಂದ 1927ರಲ್ಲಿ ಅದು ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು. ಅನಂತರ ಈ ಕ್ಲಬ್ ತನ್ನ ಟ್ರಾನ್ಸ್‌ಮೀಟರನ್ನು ಮದ್ರಾಸ್ ಕಾರ್ಪೋರೇಷನ್‌ಗೆ ಕೊಟ್ಟಿತು. ಸರ್ಕಾರದಿಂದ ಲೈಸೆನ್ಸ್ ಪಡೆದ ಮದ್ರಾಸ್ ಕಾರ್ಪೋರೇಷನ್ 1930ರ ಏಪ್ರಿಲ್ 1ರಂದು ಮತ್ತೆ ವ್ಯವಸ್ಥಿತ ಪ್ರಸಾರ ಕಾರ್ಯಪ್ರಾರಂಭಿಸಿತು. 1938ರ ಜೂನ್ 16ರವರೆಗೆ ತನ್ನ ಕಾರ್ಯಕ್ರಮವನ್ನು ಪ್ರಸಾರ ಮಾಡಿದ ಈ ಕ್ಲಬ್ ಅನಂತರ "ಆಲ್ ಇಂಡಿಯಾ ರೇಡಿಯೋ" ಸಂಸ್ಥೆಗೆ ಹಸ್ತಾಂತರವಾಯಿತು.

ಹೀಗೆ ಖಾಸಗಿ ಸಂಸ್ಥೆಗಳವರ ಪ್ರಯತ್ನವೇ ಭಾರತೀಯ ಬಾನುಲಿ ಪ್ರಸಾರದ ಇತಿಹಾಸದಲ್ಲಿ ಮೊದಲ ಹೆಜ್ಜೆಗಳನ್ನು ಮೂಡಿಸಿದ್ದು ಸ್ಪಷ್ಟ. 'ಇಂಡಿಯನ್ ಬ್ರಾಡ್ ಕಾಸ್ಟಿಂಗ್ ಸರ್ವೀಸ್'ನ ಕಂಟ್ರೋಲರ್ ಎಂದು ನೇಮಕಗೊಂಡು 1935ರಲ್ಲಿ ಭಾರತಕ್ಕೆ ಬಂದ ಲೈನಲ್ ಫೀಲ್ಡನ್ ಅವರ ನೇತೃತ್ವದಲ್ಲಿ ದೇಶದ ಪ್ರಸಾರ ವ್ಯವಸ್ಥೆ ಹಂತಹಂತವಾಗಿ ವಿಕಾಸವಾಯಿತು. ಲಂಡನ್‌ನ ಬಿ.ಬಿ.ಸಿ.ಯ ಮುಖ್ಯಾಧಿಕಾರಿಯಾಗಿದ್ದ ಫೀಲ್ಡನ್ ಭಾರತೀಯ ಪ್ರಸಾರ ಜಾಲವನ್ನು ವಿಸ್ತರಿಸುವಲ್ಲಿ ಮಾಡಿದ ಕಾರ್ಯ ಅಪೂರ್ವವಾದದ್ದು. 'ಆಲ್ ಇಂಡಿಯ

ರೇಡಿಯೊ' ಎಂದು ಭಾರತದ ಪ್ರಸಾರ ವ್ಯವಸ್ಥೆಗೆ ಹೆಸರು ಬಂದದ್ದು ಅವರ ಅಧಿಕಾರಾವಾಧಿಯಲ್ಲಿ.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ 'ಆಲ್ ಇಂಡಿಯಾ ರೇಡಿಯೋ' ಪ್ರಸಾರ ಕಾರ್ಯನಿರ್ವಹಿಸುತ್ತಿದ್ದ 6 ರೇಡಿಯೋ ಕೇಂದ್ರಗಳನ್ನು ಹೊಂದಿತ್ತು. ಅಂದು ಪ್ರತಿಶತ 2.5ರಷ್ಟು ಪ್ರದೇಶವನ್ನೂ ಹಾಗೂ ಪ್ರತಿಶತ 11ರಷ್ಟು ಜನತೆಯನ್ನೂ ತಲುಪುತ್ತಿದ್ದ ಬಾನುಲಿಯು ದೇಶದ ಇತರ ರಂಗಗಳಂತೆಯೇ ವಿಕಾಸ ಹೊಂದುತ್ತ ಬಂದಿದ್ದು, 7ನೆಯ ಪಂಚವಾರ್ಷಿಕ ಯೋಜನೆಯನ್ವಯ 205 ಕೇಂದ್ರಗಳನ್ನು ಪ್ರಸಾರಕ್ಕೆ ಅಣಿಗೊಳಿಸಲಿದೆ. ಈ ಗುರಿ ಸಾಧಿತವಾದಾಗ ಭಾರತದ ಬಾನುಲಿಯು ದೇಶದ ಪ್ರತಿಶತ 91ರಷ್ಟು ಭೂಪ್ರದೇಶವನ್ನು ಹಾಗೂ ಜನಸಂಖ್ಯೆಯ ಪ್ರತಿಶತ 97.5ರಷ್ಟು ಭಾಗವನ್ನೂ ತಲುಪುತ್ತದೆ. ಈ ಅಂಕಿ ಸಂಖ್ಯೆಯತ್ತ ದಾಪುಗಾಲು ಹಾಕುತ್ತಾ ಸಾಗುತ್ತಿರುವ ಪ್ರಸಾರ ವ್ಯವಸ್ಥೆ ಬರುವ ಕೆಲವೇ ವರ್ಷಗಳಲ್ಲಿ ನೂರಕ್ಕೆ ನೂರು ಗುರಿಯನ್ನು ಸಾಧಿಸಿದರೆ ಆಶ್ಚರ್ಯವಿಲ್ಲ. ಇದರ ಜೊತೆಗೆ ವಾಣಿಜ್ಯ ಪ್ರಸಾರ, ಯುವವಾಣಿಯ ಪ್ರತ್ಯೇಕ ಚಾನೆಲ್, ಎಫ್.ಎಂ. ಸೇವೆ. ರಾಷ್ಟ್ರೀಯ ಚಾನೆಲ್ ಸ್ಥಳೀಯ ರೇಡಿಯೋ ಕೇಂದ್ರಗಳು. ಇನ್ಸಾಟ್ ಮೂಲಕ ನೆಟ್‌ವರ್ಕ್ ಪ್ರಸಾರ. ಜಗತ್ತಿನ ವಿವಿಧ ರಾಷ್ಟ್ರಗಳಿಗಾಗಿ ವಿದೇಶಿ ಪ್ರಸಾರ ವ್ಯವಸ್ಥೆ, ವಿದೇಶಿ ಭಾಷಾ ಪ್ರಸಾರ. ಸುದ್ದಿ ಪ್ರಸಾರದ ವಿಸ್ತೃತ ಜಾಲ–ಹೀಗೆ ಹತ್ತಾರು ಮುಖಗಳಲ್ಲಿ ವಿಕಾಸ ಹೊಂದುತ್ತಿರುವ ಭಾರತೀಯ ಪ್ರಸಾರ ಜಾಲ ಹೊಸ ಹೊಸ ಸಾಧ್ಯತೆಗಳನ್ನು ಸಾಧಿಸುತ್ತ ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಸಾರ ವ್ಯವಸ್ಥೆಯೆಂದು ಹೆಸರು ಗಳಿಸಿದೆ.

## ಕರ್ನಾಟಕದಲ್ಲಿ ರೇಡಿಯೋದ ಐತಿಹಾಸಿಕ ಬೆಳವಣಿಗೆ

ಬ್ರಿಟಿಷ್ ಆಡಳಿತ ಕಾಲದಲ್ಲೇ ದೇಶೀಯ ಸಂಸ್ಥಾನಿಕರು ಆಳುತ್ತಿದ್ದ ಪ್ರಾಂತ್ಯಗಳಲ್ಲೂ ರೇಡಿಯೋ ಪ್ರಸಾರ ವ್ಯವಸ್ಥೆ ಪ್ರಾರಂಭವಾದದ್ದು ಅತ್ಯಂತ ಕುತೂಹಲಕಾರಿ ಸಂಗತಿ. ಇಂಥ ನಾಲ್ಕು ಪ್ರಮುಖ ಪ್ರಾಂತಗಳೆಂದರೆ ಮೈಸೂರು, ಹೈದ್ರಾಬಾದ್, ತಿರುವನಂತಪುರ ಮತ್ತು ಬರೋಡಾ, ಇವೆಲ್ಲವುಗಳಲ್ಲಿ ಮೊಟ್ಟ ಮೊದಲನೆಯ ಪ್ರಯತ್ನ ಮೈಸೂರಿನಲ್ಲಿ ನಡೆದದ್ದು ಕನ್ನಡಿಗರು ನಿಜಕ್ಕೂ ಹೆಚ್ಚು ಪಡಬೇಕಾದ ವಿಷಯ. ಭಾರತದ ಪ್ರಸಾರ ವ್ಯವಸ್ಥೆಗೆ ಕರ್ನಾಟಕದ ಕೊಡುಗೆ ಸ್ವಾತಂತ್ರ್ಯ ಪೂರ್ವದಲ್ಲೇ ಸಂದಾಯವಾಗಿದೆಯೆಂದರೆ

ಅತಿಶಯೋಕ್ತಿಯಲ್ಲ. ಇಂಥ ಅಪೂರ್ವ ಸಾಧನೆ ಮಾಡಿ ಕನ್ನಡ ನಾಡಿಗೆ ಕೀರ್ತಿ ತಂದ ಶ್ರೇಯಸ್ಸು ಡಾ. ಎಂ.ವಿ. ಗೋಪಾಲ ಸ್ವಾಮಿ ಅವರಿಗೆ ಸಲ್ಲುತ್ತದೆ.

ಡಾ. ಎಂ.ವಿ. ಗೋಪಾಲಸ್ವಾಮಿ ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಮನಃಶಾಸ್ತ್ರದ ಪ್ರಾಧ್ಯಾಪಕರಾಗಿದ್ದವರು. ಅವರು 30 ವ್ಯಾಟಿನ ಟ್ರಾನ್ ಮೀಟರೊಂದನ್ನು ತಮ್ಮ ಮನೆಯಲ್ಲೇ ಸ್ಥಾಪಿಸಿದರು. ಮೈಸೂರು ವಿಶ್ವವಿದ್ಯಾಲಯದ ಅಂದಿನ ಉಪಕುಲಪತಿಯಾಗಿದ್ದ ಡಾ. ಮೆಟ್‌ಕಾಫ್ ಅವರಿಂದ 1935ರ ಸೆಪ್ಟೆಂಬರ್ 10ರಂದು ಉದ್ಘಾಟನೆಗೊಂಡ ಡಾ. ಎಂ.ವಿ. ಗೋಪಾಲಸ್ವಾಮಿಯವರ ಟ್ರಾನ್ಸ್‌ಮೀಟರ್ 'ಆಕಾಶ ವಾಣಿ' ಎಂಬ ಅರ್ಥಪೂರ್ಣ ಹೆಸರಿನಲ್ಲಿ ಕಾರ್ಯಕ್ರಮ ಪ್ರಸಾರ ಪ್ರಾರಂಭಿಸಿತು. ಕರ್ನಾಟಕ ಸಂಗೀತ ಹಾಗೂ ಜನಪ್ರಿಯ ವಿಷಯ ಕುರಿತಾದ ಭಾಷಣಗಳು ಅಂದು ಪ್ರಸಾರವಾಗುತ್ತಿದ್ದ ಪ್ರಮುಖ ಕಾರ್ಯಕ್ರಮಗಳಾಗಿದ್ದವು. ಸಮೂಹ ಶಿಕ್ಷಣವನ್ನು ಉದ್ದೇಶವಾಗಿಟ್ಟುಕೊಂಡಿದ್ದ ಕಾರಣ ಜನತೆಗೆ ನೇರವಾಗಿ ತಲುಪಲೆಂಬ ಉದ್ದೇಶದಿಂದ ಸಾಧ್ಯವಾದಷ್ಟೂ ಭಾರತೀಯ ಭಾಷೆಗಳಲ್ಲೇ ಭಾಷಣಗಳನ್ನು ಪ್ರಸಾರ ಮಾಡಲಾಗುತ್ತಿತ್ತು. ರವಿವಾರವನ್ನು ಹೊರತುಪಡಿಸಿ ಪ್ರತಿದಿನ ಸಂಜೆ 6ರಿಂದ 8.30ರವರೆಗೆ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದ ಈ ರೇಡಿಯೋ ಕೇಂದ್ರ ಅನಂತರ 250 ವ್ಯಾಟ್‌ನ ಟ್ರಾನ್ಸ್‌ಮೀಟರನ್ನು ಆಮದು ಮಾಡಿಕೊಂಡು ಆ ಮೂಲಕ ಇನ್ನೂ ಹೆಚ್ಚಿನ ಸಂಖ್ಯೆಯ ಕೇಳುಗರಿಗೆ ರಸದೌತಣ ನೀಡತೊಡಗಿತು.

ಮೈಸೂರು ನಗರಸಭೆ ಹಾಗೂ ಖಾಸಗಿಯವರ ಆರ್ಥಿಕ ನೆರವಿನೊಂದಿಗೆ ಪ್ರಸಾರ ಕಾಯವನ್ನು ನಿರ್ವಹಿಸಿಕೊಂಡು ಬಂದ ಈ ರೇಡಿಯೋ ಕೇಂದ್ರ 1942ರಲ್ಲಿ ಮೈಸೂರು ಸರಕಾರ ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳುವವರೆಗೆ ನಿರಂತರವಾಗಿ ಸ್ವತಂತ್ರ ರೀತಿಯಲ್ಲಿ ಕೆಲಸ ಮಾಡಿತು.

ಕರ್ನಾಟಕದಲ್ಲಿ ರೇಡಿಯೋದ ಐತಿಹಾಸಿಕ ಬೆಳವಣಿಗೆಯನ್ನು ಗುರುತಿಸುವಾಗ ಅತ್ಯಂತ ಪ್ರಮುಖವಾಗಿ ಉಲ್ಲೇಖಿಸಬೇಕಾದ ಸಂಗತಿ ಎಂದರೆ 'ಆಕಾಶವಾಣಿ' ಎಂಬ ಶಬ್ದಕ್ಕೆ ಸಂಬಂಧಿಸಿದ್ದು. ಡಾ. ಎಂ.ವಿ. ಗೋಪಾಲಸ್ವಾಮಿಯವರು ತಮ್ಮ ಪುಟ್ಟ ಟ್ರಾನ್ಸ್ ಮೀಟರ್‌ಗೆ 'ಆಕಾಶವಾಣಿ' ಎಂದು ನಾಮಕರಣ ಮಾಡಿದ್ದರಷ್ಟೆ. ಈ ಹೆಸರನ್ನೇ 'ಆಲ್ ಇಂಡಿಯಾ ರೇಡಿಯೋ'ತನ್ನ ಮೂಲ ಹೆಸರಿಗೆ ಬದಲಾಗಿ 1958ರಲ್ಲಿ ಸ್ವೀಕರಿಸಿತು. ಮುಂದೆ

ಅದು 'ಆಕಾಶವಾಣಿ' ಎಂಬುದನ್ನೇ ತನ್ನ ಪ್ರಥಮ ನಾಮನಿರ್ದೇಶನವನ್ನಾಗಿ ಮಾಡಿಕೊಂಡು 'ಆಲ್ ಇಂಡಿಯಾ ರೇಡಿಯೋ' ಎಂಬುದನ್ನು ಎರಡನೆಯ ಹೆಸರನ್ನಾಗಿಸಿಕೊಂಡಿತು. ಡಾ. ಎಂ.ವಿ. ಗೋಪಾಲ ಸ್ವಾಮಿಯವರು ಟ್ರಾನ್ಸ್‌ಮಿಟರಿಗಿಟ್ಟ 'ಆಕಾಶವಾಣಿ' ಎಂಬ ಹೆಸರೇ ಭಾರತೀಯ ಪ್ರಸಾರ ವ್ಯವಸ್ಥೆಗೆ ಇಲ್ಲಿಯವರೆಗೂ ಮುಖ್ಯ ಹೆಸರಾಗಿ ಉಳಿದುಕೊಂಡು ಬಂದಿರುವುದು ಕನ್ನಡಿಗರಿಗೆ ಮತ್ತೂ ಒಂದು ಹೆಮ್ಮೆ ತರುವ ವಿಷಯ. ಇದು ಭಾರತೀಯ ಪ್ರಸಾರ ವ್ಯವಸ್ಥೆಗೆ ಕರ್ನಾಟಕ ಕೊಟ್ಟ ಇನ್ನೊಂದು ಮಹತ್ವದ ಕೊಡುಗೆಯೆಂದು ಖಂಡಿತವಾಗಿ ಹೇಳಬಹುದು.

ಸಂಗೀತದ ರಸದೌತಣ ಹಾಗೂ ಸಮೂಹ ಶಿಕ್ಷಣಕ್ಕಾಗಿ ಅಭಿರುಚಿ ಕುದುರಿಸುವ ಭಾಷಣಗಳನ್ನು ಪ್ರಸಾರ ಮಾಡಿ ಜನತೆಯ ಮನಸ್ಸನ್ನು ಸೆರೆಹಿಡಿದ ಡಾ. ಎಂ.ವಿ. ಗೋಪಾಲಸ್ವಾಮಿಯವರು 'ಆಕಾಶವಾಣಿ' ಕನ್ನಡಿಗರ ಸಾಂಸ್ಕೃತಿಕ ಬದುಕಿಗೆ ಕೊಟ್ಟ ಕಾಣಿಕೆ ಅನುಪಮವಾದದ್ದು. ಅವರು ಪ್ರಾರಂಭಿಸಿದ ಆ ಪರಂಪರೆ ಹಾಗೂ ಅವರ 'ಆಕಾಶವಾಣಿ'ಯನ್ನು ಅನುಸರಿಸಿಕೊಂಡು ಬಂದ ಕರ್ನಾಟಕದ ಆಕಾಶವಾಣಿ ಕೇಂದ್ರಗಳು ಕಾರ್ಯಕ್ರಮಗಳ ಹೊಸ ಹೊಸ ಸಾಧ್ಯತೆಗಳನ್ನು ಗುರುತಿಸುತ್ತ ಕನ್ನಡಿಗರ ಸಾಂಸ್ಕೃತಿಕ ಪರಂಪರೆಯ ನಿರಂತರ ಚಲನಶೀಲತೆಗೆ ತಮ್ಮದೇ ಆದ ಕೊಡುಗೆ ಕೊಡುತ್ತ ಸಾಗಿವೆ.

1950ರಲ್ಲಿ ಸಂಸ್ಥಾನಿಕ ರಾಜ ಮನೆತನಗಳು ಸರಕಾರದಲ್ಲಿ ವಿಲೀನವಾದಾಗ ಅಂದು ಮೈಸೂರು ಸರಕಾರದ ಅಧೀನದಲ್ಲಿದ್ದ ಆಕಾಶವಾಣಿಯು 'ಆಲ್ ಇಂಡಿಯ ರೇಡಿಯೋ'ದ ಸುಪರ್ದಿಗೆ ಬಂತು. 1950 ಏಪ್ರಿಲ್ 1ರಂದು ಅದು ಆಕಾಶವಾಣಿಯ ಅಖಿಲ ಭಾರತ ಜಾಲದಲ್ಲಿ ಒಂದಾಯಿತು. ಅನಂತರ ಆ ಮೈಸೂರು ಕೇಂದ್ರವು 1955 ನವೆಂಬರ್ 2ರವರೆಗೆ ಪ್ರಸಾರ ಕಾರ್ಯನಿರ್ವಹಿಸಿತು. 1955ರ ನವೆಂಬರ್ 2ರಂದು ಬೆಂಗಳೂರಿನಲ್ಲಿ ಹೆಚ್ಚು ಶಕ್ತಿಯ ಪ್ರಸಾರ ಕೇಂದ್ರ ಪ್ರಾರಂಭವಾದ ದಿನ ಮೈಸೂರು ಆಕಾಶವಾಣಿಯು ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು.

1955ರ ನವೆಂಬರ್ 2ರಂದು ಆಕಾಶವಾಣಿಯ ಬೆಂಗಳೂರು ಕೇಂದ್ರ ಅಸ್ತಿತ್ವಕ್ಕೆ ಬರುವ ಮೊದಲೇ ಅಂದರೆ 1950ರ ಜನವರಿ 8ರಂದು ಆಕಾಶವಾಣಿ ಧಾರವಾಡ ಕೇಂದ್ರವು ತನ್ನ ಪ್ರಸಾರ ಕಾರ್ಯವನ್ನು ಪ್ರಾರಂಭಿಸಿತ್ತು. ಇದು ಕನ್ನಡ ನಾಡಿನಲ್ಲಿ ಅಧಿಕೃತವಾಗಿ ಕಾರ್ಯನಿರ್ವಹಿಸಿದ 'ಆಲ್ ಇಂಡಿಯ

ರೇಡಿಯೋ'ದ ಮೊದಲ ಕೇಂದ್ರವೆಂದು ಹೇಳಬಹುದು.

ಹೀಗೆ ರಾಜ್ಯದ ಉತ್ತರ ಹಾಗೂ ದಕ್ಷಿಣ ಭಾಗದ ಎರಡು ಪ್ರಮುಖ ಸ್ಥಳಗಳಲ್ಲಿ ಬಾನುಲಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ವ್ಯವಸ್ಥಿತ ಪ್ರಸಾರ ಕಾರ್ಯವನ್ನಾರಂಭಿಸಿದ ಆಕಾಶವಾಣಿಯು ಮುಂದೆ 10 ವರ್ಷಗಳ ನಂತರ ಅಂದರೆ 1965ರ ನಂತರ ಮತ್ತೆ ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ತನ್ನ ಕೇಂದ್ರಗಳನ್ನು ಪ್ರಾರಂಭಿಸತೊಡಗಿತು. ಸ್ಥಳೀಯ ಆದ್ಯತೆಗಳಿಗನುಗುಣವಾಗಿ ಪ್ರಾದೇಶಿಕ ಭಾಷೆಯಲ್ಲಿ ಪ್ರಸಾರ ಮಾಡುವ, ಆಯಾ ಭಾಗದ ಕೃಷಿಕ್ಷೇತ್ರದ ಅಗತ್ಯಗಳಿಗೆ ಸ್ಪಂದಿಸುವ ಮತ್ತು ಹೆಚ್ಚು ಜನತೆಗೆ ತಲುಪುವ ಉದ್ದೇಶಗಳು ಇವೇ ಮೊದಲಾದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದ ವಿವಿಧ ಸ್ಥಳಗಳಲ್ಲಿ ಸ್ಥಾಪಿತವಾದ ಈ ಹೊಸ ಕೇಂದ್ರಗಳು ಆಯಾ ಪ್ರದೇಶದ ಸಂಸ್ಕೃತಿ, ಕೃಷಿಯೇ ಮೊದಲಾದ ವೈಶಿಷ್ಟ್ಯಗಳು ಮೇಳವಿಸಿಕೊಂಡು ಕಾರ್ಯಕ್ರಮ ಪ್ರಸಾರ ಮಾಡತೊಡಗಿದವು.

ಕಾಲಕ್ರಮದ ಆಧಾರದಲ್ಲೇ ಹೇಳುವುದಾದರೆ 1965ರ ಫೆಬ್ರವರಿ 2ರಂದು ಭದ್ರಾವತಿ ಕೇಂದ್ರ ಹಾಗೂ 1966ರ ನವೆಂಬರ್ 11ರಂದು ಗುಲಬರ್ಗಾ ಕೇಂದ್ರಗಳು ಕಾರ್ಯಾರಂಭ ಮಾಡಿದವು. ಪ್ರಾರಂಭವಾದ ದಿನಗಳಲ್ಲಿ ಇವೆರಡೂ ಕೇಂದ್ರಗಳು ಕ್ರಮವಾಗಿ ಬೆಂಗಳೂರು ಮತ್ತು ಧಾರವಾಡ ಕೇಂದ್ರಗಳ ಉಪಕೇಂದ್ರಗಳಾಗಿ ಪ್ರಸಾರ ಕಾರ್ಯನಿರ್ವಹಿಸಿದವು. ಕ್ರಮೇಣ ಅವೆರಡೂ ಹಂತಹಂತವಾಗಿ ತಮ್ಮದೇ ಆದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತ ಬಂದು ಈಗ ಸ್ವತಂತ್ರ ಕೇಂದ್ರಗಳಾಗಿ ಕೆಲಸ ನಿರ್ವಹಿಸುತ್ತಿದೆ.

ಈ ಮೊದಲು 1955ರ ನವೆಂಬರ್ 2ರಂದು ಸ್ಥಗಿತಗೊಂಡಿದ್ದ ಮೈಸೂರು ಕೇಂದ್ರವು ಮುಂದೆ 1974ರ ನವೆಂಬರ್ 4ರಂದು ಅಲ್ಪಶಕ್ತಿಯ ಕೇಂದ್ರವಾಗಿ ಪ್ರಾರಂಭಗೊಂಡು ಮತ್ತೆ ಕಾರ್ಯಕ್ರಮ ಪ್ರಸಾರ ಮಾಡತೊಡಗಿತು. ಇದಾದ ಸುಮಾರು ಎರಡು ವರ್ಷಗಳ ತರುವಾಯ 1976ರ ಡಿಸೆಂಬರ್ 11ರಂದು ಆಕಾಶವಾಣಿಯ ಮಂಗಳೂರು ಕೇಂದ್ರವು ಅಸ್ತಿತ್ವಕ್ಕೆ ಬಂತು.

ಹೀಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿಕಾಸಗೊಂಡ ಕನ್ನಡ ನಾಡಿನ ಬಾನುಲಿ ವ್ಯವಸ್ಥೆ 1991ರವರೆಗೆ 6 ಪ್ರಮುಖ ಕೇಂದ್ರಗಳ ಮೂಲಕ ಜನತೆಯ ಆಶೋತ್ತರಗಳನ್ನು ಪೂರೈಸಿತು. 1991ನೆಯ ವರ್ಷ ಕರ್ನಾಟಕದ ಆಕಾಶವಾಣಿಯ ಇತಿಹಾಸದಲ್ಲಿ ಸುಗ್ಗಿಕಾಲವೆಂದು ಗಣಿಸಬಹುದಾದಷ್ಟು

ಮಹತ್ವ ಪಡೆಯುತ್ತದೆ. ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯರೂಪಕ್ಕೆ ಬಂದ 'ಸ್ಥಳೀಯ ರೇಡಿಯೋ ಕೇಂದ್ರ'ದ ತತ್ವದಡಿಯಲ್ಲಿ ಕರ್ನಾಟಕ ಮತ್ತೆ ಹಲವು ಬಾನುಲಿ ಕೇಂದ್ರಗಳನ್ನು ಹೊಂದಿತು. ಆಕಾಶವಾಣಿ ಚಿತ್ರದುರ್ಗ (1991ರ ಮೇ 3) ಹಾಗೂ ಹಾಸನ ಕೇಂದ್ರ (1991ರ ಮೇ 4)ಗಳು ಈಗಾಗಲೇ ಕಾರ್ಯಾರಂಭ ಮಾಡಿವೆ. ಇವುಗಳಲ್ಲಿ ಆಕಾಶವಾಣಿ ಹಾಸನ ಕೇಂದ್ರವು ಬರುವ ವರ್ಷಗಳಲ್ಲಿ ಸ್ವತಂತ್ರ ಪೂರ್ಣಪ್ರಮಾಣದ ಕೇಂದ್ರವಾಗಿ ಮಾರ್ಪಡಲಿದೆ. ಸ್ಥಳೀಯ ರೇಡಿಯೋ ಕೇಂದ್ರಗಳ ಪಟ್ಟಿಯಲ್ಲೇ ಹೊಸಪೇಟೆ, ರಾಯಚೂರು ಮತ್ತು ಮಡಿಕೇರಿಗಳಲ್ಲಿ ಇನ್ನು ಕೆಲವೇ ದಿನಗಳಲ್ಲಿ ಹೊಸ ಆಕಾಶವಾಣಿ ಕೇಂದ್ರಗಳು ಕಾರ್ಯಾರಂಭ ಮಾಡಲಿವೆ. ಇದೇ ಯೋಜನೆಯ ಅಂಗವಾಗಿ ವಿಜಾಪುರ ಹಾಗೂ ಕಾರವಾರಗಳಲ್ಲೂ ಸ್ಥಳೀಯ ಕೇಂದ್ರಗಳು ಮುಂಬರುವ ವರ್ಷಗಳಲ್ಲಿ ಕಾರ್ಯಾರಂಭ ಮಾಡಲಿವೆ. ಜಿಲ್ಲೆಗೊಂದು 'ಸ್ಥಳೀಯ ಕೇಂದ್ರ' ಪ್ರಾರಂಭಿಸುವ ಪ್ರಸಾರ ಖಾತೆಯ ಯೋಜನೆಯನ್ವಯ ಕರ್ನಾಟಕದಲ್ಲಿ ಆಕಾಶವಾಣಿಯ ವಿಕಾಸಕಾರ್ಯ ನಡೆಯುತ್ತಿದ್ದು ರಾಜ್ಯದ ಪ್ರಸಾರ ಕೇಂದ್ರದಲ್ಲಿ ಈ ಕೇಂದ್ರಗಳು ಮಹತ್ವದ ಕ್ರಾಂತಿಯನ್ನೇ ಮಾಡಲಿವೆ.

ಭಾಷಾವಾರು ಪ್ರಾಂತ ರಚನೆಗನುಗುಣವಾಗಿಯೇ ವಿಕಾಸಗೊಂಡ ಭಾರತೀಯ ಪ್ರಸಾರ ವ್ಯವಸ್ಥೆ ಆಯಾ ರಾಜ್ಯಗಳ ಭಾಷೆಯ ಮೂಲಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಯೋಜನೆಯನ್ನು ರೂಪಿಸಿದ್ದು ಪ್ರಜಾಪ್ರಭುತ್ವದಲ್ಲಿ ಒಂದು ಮಹತ್ವದ ಅಂಶ. ಒಂದು ರಾಜ್ಯಭಾಷೆಗೆ ಮತ್ತೆ ಹಲವಾರು ಪ್ರಾದೇಶಿಕ ಉಪಭಾಷಾ ಪ್ರಭೇದಗಳಿರುವುದನ್ನು ಗಮನಿಸಿ. ಆಯಾ ಭಾಷಾ ಪ್ರಭೇದಗಳನ್ನು ಗಮನದಲ್ಲಿಟ್ಟುಕೊಂಡು. ಆಯಾ ಪ್ರದೇಶಗಳಲ್ಲಿ ಆಕಾಶವಾಣಿ ಕೇಂದ್ರಗಳನ್ನು ಪ್ರಾರಂಭಿಸಿ ಜನತೆಯ ಆಡುನುಡಿಯೊಂದಿಗೆ ಸಹಸ್ಪಂದಿಸಿದ್ದು ಇನ್ನೊಂದು ಮಹತ್ವದ ಅಂಶ. ಈ ರೀತಿ ಭಾಷೆಯ ಅನುವಿಡಿದೇ ಪ್ರಾದೇಶಿಕ ಸಂಸ್ಕೃತಿ, ಕೃಷಿ, ಶಿಕ್ಷಣ, ಧರ್ಮಾಚರಣೆ, ಜನಾಂಗೀಯ ಆಶೋತ್ತರಗಳು ಹಾಗೂ ಎಲ್ಲ ರೀತಿಯ ಅಗತ್ಯಗಳನ್ನೂ ಪ್ರತಿನಿಧಿಸುವಂತೆ ಕಾರ್ಯನಿರ್ವಹಿಸುತ್ತಿರುವ ಆಕಾಶವಾಣಿ ಕೇಂದ್ರಗಳು ಜನತೆಯ ಸಮಗ್ರ ಬದುಕಿನ ಸಾಂಸ್ಕೃತಿಕ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿವೆ.

ಇದರ ಜೊತೆಗೆ ಹೇಳಲೇಬೇಕಾದ ಇನ್ನೊಂದು ಅಂಶವೆಂದರೆ ನೆರೆರಾಜ್ಯಗಳ ಪ್ರಮುಖ ಕೇಂದ್ರಗಳಿಂದಲೂ ಕನ್ನಡ ಕಾರ್ಯಕ್ರಮಗಳು

ಪ್ರಸಾರವಾಗುತ್ತಿರುವುದು. ನೆರೆರಾಜ್ಯಗಳಲ್ಲಿ ವಾಸಿಸುವ ಕನ್ನಡಿಗರಿಗಾಗಿ ಈ ಕನ್ನಡ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದು ಸದ್ಯಕ್ಕೆ ಆಕಾಶವಾಣಿಯ ಮದ್ರಾಸ್, ಹೈದ್ರಾಬಾದ್, ಮುಂಬೈ ಕೇಂದ್ರಗಳಿಂದ ಅವು ಮೂಡಿಬರುತ್ತಿವೆ. ಅದೇ ರೀತಿ ನೆರೆರಾಜ್ಯಗಳ ಭಾಷಾ ಕಾರ್ಯಕ್ರಮಗಳು ಕರ್ನಾಟಕದ ಕೇಂದ್ರಗಳಿಂದಲೂ ಪ್ರಸಾರವಾಗುತ್ತಿದ್ದು ಭಾಷಾ ಸಮನ್ವಯಕ್ಕೆ ಇದು ಮಹತ್ವದ ಕೊಡುಗೆಯಾಗಿದೆ. ನೆರೆರಾಜ್ಯಗಳ ಸಾಂಸ್ಕೃತಿಕ ಕೊಡು–ಕೊಳ್ಳುವಿಕೆಯೂ ಇದರಿಂದ ಸಾಧ್ಯವಾಗುತ್ತಿದೆ.

**–ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ**
**ಪ್ರಧಾನ ಸಂಪಾದಕರು : ಪ್ರೊ. ಎಲ್.ಎಸ್. ಶೇಷಗಿರಿರಾವ್**
**ಉದಯಭಾನು ಕಲಾಸಂಘ.**